ಬುಧವಾರ, ಮೇ 31, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 150 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಮೋದಿ ಸರ್ಕಾರಕ್ಕೆ ಒಂಬತ್ತು ವರ್ಷ
'ಎಲ್ಲ ಮಹಿಳೆಯರಿಗೆ ಉಚಿತ ಪ್ರಯಾಣ: ಸಿ.ಎಂ.ಗೆ ವರದಿ ಸಲ್ಲಿಕೆ' 4B
ಮಣಿಪುರ: ಸಂಘರ್ಷ ಶಮನಕ್ಕೆ ಶಾ ಸಭೆ 4A

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,969	18,633	₹61,620 (ಬೆಂಗಳೂರು)	₹72,800 (ಬೆಂಗಳೂರು)	82.67

ಸರ್ಕಾರಿ ನೌಕರರ ತುಟ್ಟಿಭತ್ಯೆ ಶೇ 4ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರಿಗೆ ಇದೇ ವರ್ಷದ ಜನವರಿ 1ರಿಂದ ಪೂರ್ವಾನ್ವಯವಾಗುವಂತೆ ತುಟ್ಟಿಭತ್ಯೆಯನ್ನು ಶೇ 4ರಷ್ಟು ಹೆಚ್ಚಳ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಈ ಆದೇಶದಿಂದ ತುಟ್ಟಿಭತ್ಯೆ, ನೌಕರರ ಮೂಲವೇತನದ ಶೇ 31ರಿಂದ ಶೇ 35ಕ್ಕೆ ಹೆಚ್ಚಲಿದೆ. 5.20 ಲಕ್ಷ ಸರ್ಕಾರಿ ನೌಕರರು, ನಿಗಮ ಮಂಡಳಿ, ಅನುದಾನಿತ ಸಂಸ್ಥೆಗಳ ನೌಕರರು ಹಾಗೂ 4.50 ಲಕ್ಷ ಪಿಂಚಣಿದಾರರು ಪ್ರಯೋಜನ ಪಡೆಯಲಿದ್ದಾರೆ.

ಒಂದೂವರೆ ತಿಂಗಳ ಹಿಂದೆಯೇ ತುಟ್ಟಿಭತ್ಯೆ ಪರಿಷ್ಕರಣೆಗೆ ಸರ್ಕಾರ ಸಿದ್ಧತೆ ನಡೆಸಿತ್ತು. ಆದರೆ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ತಾತ್ಕಾಲಿಕ ತಡೆ ನೀಡಿತ್ತು. ವಾರದ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶೇ 4ರಷ್ಟು ತುಟ್ಟಿಭತ್ಯೆ ಹೆಚ್ಚಳದ ಕಡತಕ್ಕೆ ಸಹಿ ಹಾಕಿದ್ದರು.

ಒಳ ಪುಟ

ಉಕ್ರೇನ್ –ರಷ್ಯಾ: ಡ್ರೋನ್ ದಾಳಿ 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಇಂದು ರಾಜ್ಯದ ಎಲ್ಲೆಡೆ ಶಾಲೆಗಳ ಪ್ರಾರಂಭೋತ್ಸವ, ಮಕ್ಕಳ ಸ್ವಾಗತಕ್ಕೆ ಸಜ್ಜಾಗಿರುವ ಶಿಕ್ಷಕರು

ವಿವಾದಿತ ಪಾಠಗಳಿಗೆ ಕೊಕ್ ಖಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಸೇರಿಸಿದ್ದ ವಿವಾದಿತ ಪಾಠಗಳನ್ನು ಪಠ್ಯಪುಸ್ತಕದಿಂದ ಕೈಬಿಡಲು ದೃಢ ನಿರ್ಧಾರ ಮಾಡಿರುವ ನೂತನ ಸರ್ಕಾರ, ಪರಿಷ್ಕರಣೆಗಾಗಿ ತಜ್ಞರ ಸಮಿತಿಯನ್ನು ನೇಮಿಸಲೂ ತೀರ್ಮಾನಿಸಿದೆ.

ಯಾವ, ಯಾವ ಪಠ್ಯವನ್ನು ಕೈಬಿಡಲಾಗುತ್ತದೆ ಎಂಬ ವಿಷಯವಾಗಿ ಶೀಘ್ರವೇ ಸುತ್ತೋಲೆ ಹೊರಡಿಸಲೂ ಸರ್ಕಾರ ನಿರ್ಧರಿಸಿದೆ.

ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ನೀಡಿದ್ದ ಭರವಸೆಯಂತೆ ಹಿಂದಿನ ಸರ್ಕಾರದ ಅವಧಿಯಲ್ಲಿ ಶಾಲಾ ಪಠ್ಯಪುಸ್ತಕಗಳಲ್ಲಿ ತಂದಿರುವ ಬದಲಾವಣೆಗಳನ್ನು ಮರುಪರಿಶೀಲಿಸಲು ಶೀಘ್ರದಲ್ಲೇ ಸಮಿತಿ ರಚಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಪಠ್ಯಪುಸ್ತಕಗಳಲ್ಲಿ ವಿವಾದಿತ ಪಾಠಗಳನ್ನು ಕೈಬಿಡುವುದು ನಿಶ್ಚಿತ. ಅದಕ್ಕಾಗಿ ಶೀಘ್ರ ಪರಿಷ್ಕರಣಾ ಸಮಿತಿ ರಚಿಸಲಾಗುವುದು. ಮುಖ್ಯಮಂತ್ರಿ ಹಾಗೂ ತಜ್ಞರ ಜತೆ ಚರ್ಚಿಸಿದ ನಂತರ ಸಮಿತಿಯ ಅಧ್ಯಕ್ಷರ ಆಯ್ಕೆ ಅಂತಿಮಗೊಳಿಸಲಾಗುವುದು' ಎಂದರು.

5ನೇ ಪುಟ ನೋಡಿ

ಬೆಂಗಳೂರಿನ ನಾಗಶೆಟ್ಟಿಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಪ್ರಾರಂಭೋತ್ಸವದ ಅಂಗವಾಗಿ ಮಕ್ಕಳು ಮಂಗಳವಾರ ಸಿದ್ಧತೆಯಲ್ಲಿ ತೊಡಗಿದ್ದರು
–ಪ್ರಜಾವಾಣಿ ಚಿತ್ರ/ ಬಿ.ಕೆ. ಜನಾರ್ದನ

ಜೂನ್ 30ರವರೆಗೆ ಪ್ರವೇಶ

ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ ಶಾಲೆಗಳು ತಳಿರುತೋರಣಗಳಿಂದ ಸಿಂಗರಿಸಲಾಗಿದ್ದು, ಮೊದಲ ದಿನ ಮಕ್ಕಳ ಸ್ವಾಗತಕ್ಕಾಗಿ ಸಿದ್ಧಗೊಂಡಿವೆ. ಜೂನ್ 30ರ ಒಳಗೆ ಪ್ರವೇಶ ಪ್ರಕ್ರಿಯೆಗಳು ನಡೆಯಲಿವೆ.

ಶಾಲಾ ಹಂತದಲ್ಲಿ ಸ್ಥಳೀಯವಾಗಿ ನಾಲ್ಕು ರಜೆ ನೀಡಲು ಅವಕಾಶ ಕಲ್ಪಿಸಲಾಗಿದೆ. ರಾಜ್ಯದ ಎಲ್ಲ ಅನುದಾನಿತ, ಅನುದಾನ ರಹಿತ ಖಾಸಗಿ ಹಾಗೂ ಸರ್ಕಾರಿ ಶಾಲೆಗಳು ಏಕರೂಪದ ರಾಜ್ಯ ಪಠ್ಯಕ್ರಮವನ್ನು ಅನುಸರಿಸಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೂಚಿಸಿದೆ.

ಶೈಕ್ಷಣಿಕ ಅವಧಿ

- ಮೊದಲ ಅವಧಿ ಮೇ 31ರಿಂದ ಅ.7
- ದಸರೆ ರಜೆ ಅ.8 ರಿಂದ 24
- ಎರಡನೇ ಅವಧಿ ಅ.25ರಿಂದ ಏ.10 (2024)
- ಬೇಸಿಗೆ ರಜೆ ಏ.11ರಿಂದ ಮೇ 28

ಪ್ರಿಯ ಮಕ್ಕಳೇ, ಜ್ಞಾನದೇಗುಲಕ್ಕೆ ಬನ್ನಿ...

ನನ್ನ ಪ್ರೀತಿಯ ವಿದ್ಯಾರ್ಥಿ-ವಿದ್ಯಾರ್ಥಿನಿಯರೇ,

ರಜಾದಿನಗಳನ್ನು ತಂದೆ-ತಾಯಿ, ಗೆಳೆಯ-ಗೆಳತಿಯರ ಜೊತೆ ಆನಂದದಿಂದ ಕಳೆದ ನಿಮ್ಮನ್ನು ಶಾಲೆಗಳು ಕೈಬೀಸಿ ಕರೆಯುತ್ತಿವೆ. ಕಳೆದ ಎರಡು –ಮೂರು ವರ್ಷಗಳಲ್ಲಿ ಕೊರೊನಾ ವೈರಾಣುವಿನಿಂದಾಗಿ ನೀವೆಲ್ಲ ವಿದ್ಯಾರ್ಥಿ ಜೀವನವನ್ನು ಸಂಪೂರ್ಣ ಅನುಭವಿಸಲಾಗದೆ ಅನೇಕ ಬಗೆಯ ಸಂಕಟ-ಸಂಕಷ್ಟಗಳಿಗೆ ಈಡಾಗಿದ್ದೀರಿ. ಈಗ ನಾವು ಆ ಸವಾಲನ್ನು ಗೆದ್ದಿದ್ದೇವೆ, ಆರೋಗ್ಯದ ಪಾಠವನ್ನು ಕಲಿತಿದ್ದೇವೆ. ರಾಜ್ಯದ ಈ ಬಾರಿಯ ಶೈಕ್ಷಣಿಕ ವರ್ಷ ಇಂತಹ ಬದಲಾವಣೆಯ ತಂಗಾಳಿಯೊಂದಿಗೆ ಪ್ರಾರಂಭವಾಗಿದೆ. ಜ್ಞಾನ ದೇಗುಲಕ್ಕೆ ನಿಮಗೆಲ್ಲರಿಗೂ ಸ್ವಾಗತ. ಕೈಮುಗಿದು ಒಳಗೆ ಬನ್ನಿ.

ಶಾಲೆಯೆಂದರೆ ಬರೀ ಕಲ್ಲು ಕಟ್ಟಡವಲ್ಲ. ಅದೊಂದು ಜ್ಞಾನ ದೇಗುಲ. ಹೆತ್ತ ತಂದೆ-ತಾಯಿಗಳಂತೆ ಕಲಿಸುವ ಗುರುಗುಳು ಕೂಡಾ ವಿದ್ಯಾರ್ಥಿಗಳ ಪಾಲಿನ ದೇವರು. ಈ ಶ್ರದ್ಧೆ ಮತ್ತು ಗೌರವ ಸದಾ ನಿಮ್ಮಲ್ಲಿರಲಿ. 'ಪ್ರತಿಯೊಬ್ಬರು ಹುಟ್ಟಿದಾಗ ವಿಶ್ವಮಾನವ, ಬೆಳೆಯುತ್ತಾ ಅಲ್ಪ ಮಾನವನಾಗುತ್ತಾನೆ' ಎಂದು ರಾಷ್ಟ್ರ ಕವಿ ಕುವೆಂಪು ಎಚ್ಚರಿಸಿದ್ದರು. ಪರೀಕ್ಷೆ-ಫಲಿತಾಂಶ ಎಲ್ಲವೂ ಮುಖ್ಯವಾದರೂ ಶಿಕ್ಷಣ ಎಂದರೆ ಅಷ್ಟೇ ಅಲ್ಲ. ಶಿಕ್ಷಣ ಎನ್ನವುದು ನಮ್ಮಲ್ಲಿ ವೈಜ್ಞಾನಿಕ ಮತ್ತು ವೈಚಾರಿಕ ಅರಿವು ಮೂಡಿಸಬೇಕು, ಸತ್ಯ ಹೇಳುವ ಧೈರ್ಯವನ್ನು,ನ್ಯಾಯದ ಮಾರ್ಗದಲ್ಲಿ ಮುನ್ನಡೆಯುವ ಶಕ್ತಿಯನ್ನು ನೀಡಬೇಕು. ಅಂತಹ ಶಿಕ್ಷಣ ನಿಮ್ಮ ಪಾಲಿಗೆ ಒದಗಿಬಂದು ನೀವೆಲ್ಲರೂ ಮಹಾಮಾನವರಾಗಿ ಎಂದು ಹಾರೈಸುತ್ತೇನೆ.

ನಾನು ಹಳ್ಳಿಯ ಸಾಮಾನ್ಯ ರೈತ ಕುಟುಂಬದಿಂದ ಬಂದ ವ್ಯಕ್ತಿ. ಈಗ ನಿಮಗೆ ಇರುವ ಕಲಿಕೆಯ ಅವಕಾಶ ನನ್ನಂತಹವನಿಗೆ ಇರಲಿಲ್ಲ. ಕಠಿಣ ಶ್ರಮ ಮತ್ತು ಕಲಿಕೆಯ ಮೇಲೆ ಆಸಕ್ತಿ-ಶ್ರದ್ಧೆಗಳಿದ್ದರೆ ಸಾಮಾನ್ಯ ಕುಟುಂಬದಿಂದ ಬಂದ ಒಬ್ಬ ಬಾಲಕ ಕೂಡಾ ಮುಂದೊಂದು ದಿನ ರಾಜ್ಯದ ಮುಖ್ಯಮಂತ್ರಿಯೂ ಆಗಬಹುದು ಎನ್ನುವುದಕ್ಕೆ ನಾನೇ ಸಾಕ್ಷಿ. ಇದೇ ರೀತಿ ನಿಮ್ಮ ಆಸಕ್ತಿಯ ಕ್ಷೇತ್ರಗಳಲ್ಲಿ ಉನ್ನತ ಸ್ಥಾನಗಳಿಗೇರಬೇಕೆಂದು ನನ್ನ ಆಸೆ.

ಇದೇ ಉದ್ದೇಶದಿಂದ ಕಳೆದ ಬಾರಿ ನಾನು ಮುಖ್ಯಮಂತ್ರಿಯಾಗಿದ್ದಾಗ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಧ್ಯಾಹ್ನದ ಬಿಸಿ ಊಟ, ಕ್ಷೀರಭಾಗ್ಯ, ವಿದ್ಯಾಸಿರಿ,ವಿದ್ಯಾರ್ಥಿ ವೇತನ ಶೂ ಮತ್ತು ಸಾಕ್ಸ್ ಮೊದಲಾದ ಯೋಜನೆಗಳನ್ನು ಜಾರಿಗೊಳಿಸಿದ್ದೆ. ಇವುಗಳಿಗೆ ಎದುರಾಗಿರುವ ಸಣ್ಣಪುಟ್ಟ ಅಡ್ಡಿ-ಆತಂಕಗಳನ್ನು ನಿವಾರಿಸಿ ಪುನರ್ ಚಾಲನೆ ನೀಡುವೆ.

ನೀವು ಪಡೆಯುವ ಶಿಕ್ಷಣ ನಿಮ್ಮನ್ನು ತಂದೆ-ತಾಯಿ ಹೆಮ್ಮೆ ಪಡುವಂತಹ ಮಕ್ಕಳನ್ನಾಗಿ ಮತ್ತು ಸಮಾಜ ಪ್ರೀತಿಸುವ ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸಲಿ. ಮುಂದಿನ ಜನಾಂಗವಾಗಿರುವ ನಿಮ್ಮಿಂದ ರಾಜ್ಯದ ಸರ್ವಜನಾಂಗದ ಶಾಂತಿಯ ತೋಟ ಸದಾ ನಳನಳಿಸುತ್ತಾ ಇರಲಿ. ಪಠ್ಯಪುಸ್ತಕಗಳಿಗಷ್ಟೇ ನಿಮ್ಮ ಓದನ್ನು ಸೀಮಿತಗೊಳಿಸಬೇಡಿ.

ನಿಮಗೆಲ್ಲರಿಗೂ ಹೊಸ ಶೈಕ್ಷಣಿಕ ವರ್ಷಕ್ಕೆ ಮತ್ತೊಮ್ಮೆ ಸ್ವಾಗತ ಮತ್ತು ಶುಭಾಶಯಗಳು

ನಿಮ್ಮೆಲ್ಲರ ಪ್ರೀತಿಯ ಮುಖ್ಯಮಂತ್ರಿ

ಸಿದ್ದರಾಮಯ್ಯ

ಮಕ್ಕಳೇ ಶಾಲೆಗೆ ಖುಷಿಯಿಂದ ಬನ್ನಿ. ಪ್ರತಿಭಾವಂತ ಶಿಕ್ಷಕರು ಸರ್ಕಾರಿ ಶಾಲೆಯ ಆಸ್ತಿ. ದೇಶದಲ್ಲಿ ಉನ್ನತ ಸ್ಥಾನಕ್ಕೇರಿದವರು, ಬಹುತೇಕ ಸಾಧಕರು ಸರ್ಕಾರಿ ಶಾಲೆಯಲ್ಲೇ ಓದಿದವರು. ನಿಮ್ಮಿಂದಲೂ ಅಂತಹ ಸಾಧನೆ ಸಾಧ್ಯ
ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ

ಕೇಂದ್ರ ಸರ್ಕಾರ ರೂಪಿಸಿರುವ ನೂತನ ಶಿಕ್ಷಣ ನೀತಿಯನ್ನು ನಾವು ಹಿಂದೆಯೂ ಒಪ್ಪಿರಲಿಲ್ಲ. ಈಗಲೂ ಒಪ್ಪುವುದಿಲ್ಲ. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕೇಸರೀಕರಣ ಇರಬಾರದು. ತಜ್ಞರ ಹೊಸ ಸಮಿತಿ ರಚಿಸಿ, ಪರಾಮರ್ಶೆ ಮಾಡಲಾಗುವುದು
ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

ಹಲವೆಡೆ ಧಾರಾಕಾರ ಮಳೆ: ಮೂವರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮಡಿಕೇರಿ, ಮೈಸೂರು, ಹಾಸನ, ಕೊಪ್ಪಳ, ಬೆಳಗಾವಿ, ಬೆಂಗಳೂರು ನಗರ, ಉಡುಪಿ ಜಿಲ್ಲೆ ಸೇರಿದಂತೆ ಹಲವೆಡೆ ಮಂಗಳವಾರವೂ ಮಳೆಯ ಆರ್ಭಟ ಮುಂದುವರಿಯಿತು.

ಸಿಡಿಲಿಗೆ ಮಹಿಳೆ ಸೇರಿದಂತೆ ಇಬ್ಬರು ಹಾಗೂ ಗೋಡೆ ಕುಸಿದು ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. 14 ಜಾನುವಾರುಗಳು ಅಸುನೀಗಿವೆ. ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕಕಮರಿಯ ಗ್ರಾಮದ ಅಮೂಲ್ ಜೈಸಿಂಗ್ (24) ಹಾಗೂ ದೇಸರಹಟ್ಟಿಯ ವಿಠ್ಠಾಬಾಯಿ ಕಮಕಾರ (50) ಸಿಡಿಲು ಬಡಿದು ಮೃತಪಟ್ಟಿದ್ದಾರೆ. ಅಮೂಲ್ ಅವರು ಎಂದಿನಂತೆ ಕುರಿ ಕಾಯುತ್ತಿದ್ದರು. ಏಕಾಏಕಿ ಬಿರುಗಾಳಿ ಸಹಿತ ಮಳೆ ಆರಂಭವಾಯಿತು. ರಕ್ಷಣೆಗಾಗಿ ಅವರು ಮರದಡಿ ಹೋಗಿ ನಿಂತಾಗ ಸಿಡಿಲು ಬಡಿದಿದೆ. ವಿಠ್ಠಾಬಾಯಿ ಕೂಡ ತಮ್ಮ ಹೊಲದಲ್ಲಿ ಅರಿಸಿನ ಫಸಲು ಸಂಸ್ಕರಣೆ ಮಾಡುತ್ತಿದ್ದ ವೇಳೆ ಸಿಡಿಲಿಗೆ ತುತ್ತಾಗಿದ್ದಾರೆ.

ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ ತಾಲ್ಲೂಕಿನ ಹಿಪ್ಪರಗಿ ಗ್ರಾಮದಲ್ಲಿ ಮನೆಯ ಗೋಡೆ ಕುಸಿದು ಪಾರ್ವತಿ ನೇಸರೂ (45) ಎಂಬುವವರು ಮೃತಪಟ್ಟಿದ್ದಾರೆ.

ರಾಜ್ಯದಲ್ಲಿ ಬುಧವಾರ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಹಲವೆಡೆ ಗುಡುಗು ಸಹಿತ ಮಳೆಯಾಗಲಿದೆ. ಉತ್ತರ ಒಳನಾಡಿನ ಕೆಲವೆಡೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಇನ್ನಷ್ಟು ಸುದ್ದಿಗಳು 5

ಚಾಮರಾಜನಗರದಲ್ಲಿ ಮಂಗಳವಾರ ಮಧ್ಯಾಹ್ನ ಸುರಿದ ಮಳೆಗೆ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿ ರಾಜಕಾಲುವೆಯ ನೀರು ಉಕ್ಕಿ ಹರಿಯಿತು. ರಸ್ತೆಯಲ್ಲಿ ನೀರು ಕಟ್ಟಿಕೊಂಡಿದ್ದರಿಂದ ಬೈಕ್ ಸವಾರರು ಪರದಾಡಿದರು
–ಪ್ರಜಾವಾಣಿ ಚಿತ್ರ: ಸಿ.ಆರ್. ವೆಂಕಟರಾಮು

ಶೇ 6ರಷ್ಟು ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ (2023–24) ರಾಜ್ಯ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ಜೂನ್ 1ರಿಂದ 15ರವರೆಗೆ ಅವಕಾಶ ಕಲ್ಪಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಗ್ರೂಪ್ ಎ, ಬಿ, ಸಿ ಮತ್ತು ಡಿ ವರ್ಗದ ನೌಕರರಿಗೆ ಅನ್ವಯವಾಗುವಂತೆ ಒಂದು ಜ್ಯೇಷ್ಠತಾ ಘಟಕದಲ್ಲಿ ಕಾರ್ಯನಿರತ ವೃಂದ ಬಲದ ಶೇ 6ರಷ್ಟನ್ನು ಮೀರದಂತೆ ವರ್ಗಾವಣೆ ಮಾಡಲು ಸಚಿವರಿಗೆ ಅಧಿಕಾರ ನೀಡಲಾಗಿದೆ.

2013ರ ಸಾರ್ವತ್ರಿಕ ವರ್ಗಾವಣೆ ಮಾರ್ಗಸೂಚಿ ಅನುಸರಿಸಿ ಪ್ರತಿವರ್ಷ ಮೇ ಮತ್ತು ಜೂನ್ ತಿಂಗಳಲ್ಲಿ ವರ್ಗಾವಣೆಗೆ ಅವಕಾಶ ನೀಡಲಾಗುತ್ತಿದೆ. ಈ ಮಾರ್ಗಸೂಚಿ ಪ್ರಕಾರ ನಿರ್ದಿಷ್ಟ ಸೇವಾ ಅವಧಿ ಪೂರ್ಣಗೊಳಿಸದ ಯಾವುದೇ ಅಧಿಕಾರಿ ಮತ್ತು ನೌಕರರನ್ನು ವರ್ಗಾವಣೆ ಮಾಡುವಂತಿಲ್ಲ. ಕೆಲವು ವರ್ಷಗಳ ಕಾಲ ವರ್ಗಾವಣೆಯ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರಗಳಿಗೆ ನೀಡಲಾಗಿತ್ತು. ಪ್ರಾಧಿಕಾರಗಳು ಆಯಾ ಇಲಾಖೆಯ ಉಸ್ತುವಾರಿ ಹೊಂದಿರುವ ಸಚಿವರ ಅನುಮೋದನೆ ಪಡೆದು ವರ್ಗಾವಣೆ ಆದೇಶ ಹೊರಡಿಸುತ್ತಿದ್ದವು. 2019ರಲ್ಲಿ ವರ್ಗಾವಣೆಯ ಅಧಿಕಾರವನ್ನು ಸಚಿವರಿಗೆ ನೀಡಲಾಗಿತ್ತು.

ಶಿಕ್ಷಕರ ವರ್ಗಾವಣೆಗೆ ಸಮ್ಮತಿ: ಚುನಾವಣಾ ಕಾರಣಕ್ಕೆ ಸ್ಥಗಿತಗೊಂಡಿದ್ದ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗೆ ಸರ್ಕಾರ ಮಂಗಳವಾರ ಚಾಲನೆ ನೀಡಿದೆ.

ಸಚಿವ ಮಧು ಬಂಗಾರಪ್ಪ ಅವರು ವರ್ಗಾವಣೆಗೆ ಸಮ್ಮತಿ ಸೂಚಿಸಿದ್ದು ಒಂದೆರಡು ದಿನಗಳಲ್ಲಿ ವೇಳಾಪಟ್ಟಿ ಪ್ರಕಟವಾಗಲಿದೆ. 87 ಸಾವಿರ ಶಿಕ್ಷಕರು ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿದ್ದಾರೆ. 25 ಸಾವಿರಕ್ಕೂ ಹೆಚ್ಚು ಶಿಕ್ಷಕರಿಗೆ ವರ್ಗಾವಣೆ ಭಾಗ್ಯ ದೊರಕುವ ಸಂಭವವಿದೆ.

ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಗಂಗಾ ನದಿಗೆ ಪದಕಗಳನ್ನು ಹಾಕಲು ಮಂಗಳವಾರ ಹರಿದ್ವಾರಕ್ಕೆ ಬಂದಿದ್ದ ಕುಸ್ತಿಪಟುಗಳಾದ ಬಜರಂಗ್ ಪೂನಿಯಾ, ಸಂಗೀತಾ ಫೋಗಟ್, ವಿನೇಶಾ ಫೋಗಟ್ ಮತ್ತು ಸಾಕ್ಷಿ ಮಲಿಕ್ ಅವರನ್ನು ನದಿ ತಟದಿಂದ ಮನವೊಲಿಸಿ ಕರೆತರಲಾಯಿತು –ಎಎಫ್‌ಪಿ ಚಿತ್ರ

ಬ್ರಿಜ್‌ಭೂಷಣ್ ವಿರುದ್ಧ ಕ್ರಮಕ್ಕೆ 5 ದಿನ ಗಡುವು

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ಹರಿದ್ವಾರ: ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಕುಸ್ತಿಪಟುಗಳು ಮಂಗಳವಾರ ಐದು ದಿನಗಳ ಗಡುವು ನೀಡಿದರು.

ಸಿಂಗ್ ಬಂಧನಕ್ಕೆ ಒತ್ತಾಯಿಸಿ ನಡೆಸುತ್ತಿರುವ ಪ್ರತಿಭಟನೆಯ ಭಾಗವಾಗಿ, ಒಲಿಂಪಿಕ್ ಹಾಗೂ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ತಾವು ಗೆದ್ದಿರುವ ಪದಕಗಳನ್ನು ಗಂಗಾ ನದಿಯಲ್ಲಿ ಹಾಕಲು ಹರಿದ್ವಾರಕ್ಕೆ ಬಂದಿದ್ದ ಕುಸ್ತಿಪಟುಗಳು, ಭಾರತೀಯ ಕಿಸಾನ್ ಯೂನಿಯನ್ ಮುಖಂಡ ನರೇಶ್ ಟಿಕಾಯತ್ ಅವರು ಮನವೊಲಿಸಿದ ನಂತರ ಈ ನಿರ್ಧಾರ ಪ್ರಕಟಿಸಿದರು.

ನಂತರ, ಕುಸ್ತಿಪಟುಗಳಿಂದ ಪದಕಗಳನ್ನು ಟಿಕಾಯತ್ ಸಂಗ್ರಹಿಸಿದರು.

ಖ್ಯಾತ ಕುಸ್ತಿಪಟುಗಳಾದ ಸಾಕ್ಷಿ ಮಲಿಕ್, ವಿನೇಶಾ ಫೋಗಟ್, ಬಜರಂಗ್ ಪೂನಿಯಾ ಹಾಗೂ ಅವರ ನೂರಾರು ಬೆಂಬಲಿಗರು ದೆಹಲಿಯಿಂದ ಹೊರಟು, ಹರಿದ್ವಾರದ 'ಹರ್ ಕಿ ಪೌರಿ' ಘಾಟ್ ತಲುಪಿದರು. ಈ ಸ್ಥಳದಲ್ಲಿ ಭಾರಿ ಪೊಲೀಸ್ ಬಂದೋಬಸ್ತ್ ಹಾಕಲಾಗಿತ್ತು.

ಕಣ್ಣೀರು ಹಾಕುತ್ತಿದ್ದ ಸಾಕ್ಷಿ ಮಲಿಕ್, ವಿನೇಶಾ ಹಾಗೂ ಅವರ ಸಂಬಂಧಿ ಸಂಗೀತಾ ಅವರನ್ನು ಸಮಾಧಾನಪಡಿಸಲಾಗುತ್ತಿತ್ತು. ಮತ್ತೊಂದೆಡೆ, ಅವರು ಕುಳಿತಿದ್ದ ಸ್ಥಳವನ್ನು ಬೆಂಬಲಿಗರು ಸುತ್ತುವರಿದಿದ್ದಕ್ಕೆ 'ಹರ್ ಕಿ ಪೌರಿ' ಘಾಟ್ ಸಾಕ್ಷಿಯಾಗಿತ್ತು.

ನಂತರ, ಕುಸ್ತಿಪಟುಗಳು 20 ನಿಮಿಷಗಳಷ್ಟು ಮೌನಕ್ಕೆ ಮೊರೆ ಹೋದರು. ಬಳಿಕ ತಮ್ಮ ಪ್ರಶಸ್ತಿ ಫಲಕಗಳನ್ನು ಹಿಡಿದುಕೊಂಡು ನದಿ ತೀರದಲ್ಲಿ ಕುಳಿತು ಬಿಕ್ಕಳಿಸಿದ ಅವರು, ಭಾವೋದ್ವೇಗದಿಂದ ಬಳಲಿದಂತೆ ಕಂಡುಬಂದರು.

5ನೇ ಪುಟ ನೋಡಿ

ಸರ್ಕಾರಕ್ಕೆ ವರ್ಷ ಒಂಬತ್ತು ಭಾರಿ ಪ್ರಚಾರಕ್ಕೆ ಒತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 9 ವರ್ಷಗಳ ಆಡಳಿತಾವಧಿ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ, ಲೋಕಸಭಾ ಚುನಾವಣೆಯನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಒಂದು ತಿಂಗಳು ವಿವಿಧ ಕಾರ್ಯಕ್ರಮ ಏರ್ಪಡಿಸಲು ಬಿಜೆಪಿ ನಿರ್ಧರಿಸಿದೆ.

ಕಳೆದ ಚುನಾವಣೆಯಲ್ಲಿ ಪಕ್ಷ ಸೋತಿದ್ದ 144 ಕ್ಷೇತ್ರಗಳಲ್ಲಿ ಈ ಅಭಿಯಾನದಲ್ಲಿ ಹೆಚ್ಚಿನ ಗಮನಹರಿಸಲಿದೆ. ರಾಜಸ್ಥಾನದ ಅಜ್ಮೇರ್‌ನಲ್ಲಿ ಬುಧವಾರ ರ‍್ಯಾಲಿ ಉದ್ದೇಶಿಸಿ ಮಾತನಾಡುವ ಮೂಲಕ ಸ್ವತಃ ಪ್ರಧಾನಿ ಈ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ.

ನಾವು ಕೈಗೊಂಡ ನಿರ್ಧಾರ, ಕಾರ್ಯಗತಗೊಳಿಸಿದ ಪ್ರತೀ ಕ್ರಿಯೆಯ ಹಿಂದೆ ಜನರ ಜೀವನಮಟ್ಟ ಸುಧಾರಿಸುವ ಉದ್ದೇಶವಿತ್ತು. ದೇಶದ ಅಭಿವೃದ್ಧಿಗೆ ನಮ್ಮ ಶ್ರಮ ಮುಂದುವರಿಯಲಿದೆ
ನರೇಂದ್ರ ಮೋದಿ, ಪ್ರಧಾನಿ

ಮೇ 31 ರಿಂದ ಜೂನ್ 30ರವರೆಗೆ ಕಾರ್ಯಕ್ರಮಗಳು ನಡೆಯಲಿವೆ. ಲೋಕಸಭೆಯ ಎಲ್ಲ ಕ್ಷೇತ್ರಗಳ ವ್ಯಾಪ್ತಿಯಲ್ಲಿ 500ಕ್ಕೂ ಹೆಚ್ಚು ಸಭೆಗಳು, 600ಕ್ಕೂ ಹೆಚ್ಚು ಕಡೆ ಮುಖಂಡರಿಂದ ಪತ್ರಿಕಾಗೋಷ್ಠಿ ಆಯೋಜಿಸಲಿದ್ದೇವೆ ಎಂದು ಮುಖಂಡರು ತಿಳಿಸಿದರು.

ಅಭಿಯಾನಕ್ಕೆ ಪೂರಕವಾಗಿ ಲೋಕಸಭೆ ಕ್ಷೇತ್ರಗಳನ್ನು 144 ಕ್ಲಸ್ಟರ್‌ಗಳಾಗಿ ವಿಂಗಡಿಸಲಾಗಿದೆ. ಈ ಕ್ಲಸ್ಟರ್‌ಗಳ ವ್ಯಾಪ್ತಿಯಲ್ಲಿ 288 ಸಂಸದರು, ಹಿರಿಯ ಮುಖಂಡರು ಎಂಟು ದಿನ ಕಾಲ ಕಾರ್ಯಕ್ರಮಗಳನ್ನು ನಡೆಸಲಿದ್ದಾರೆ.

'9 ವರ್ಷಗಳಲ್ಲಿ ನಾವು ಏನು ಮಾಡಿದ್ದೇವೆ ಎಂಬ ಬಗ್ಗೆ ಜನರ ಗಮನ ಸೆಳೆಯುವುದು ಉದ್ದೇಶ. ಪ್ರಚಾರದ ವೇಗ ಹೆಚ್ಚಿಸುವುದು ಗುರಿ' ಎಂದು ಹಿರಿಯ ಮುಖಂಡರೊಬ್ಬರು ತಿಳಿಸಿದರು.

ದಯಾನಂದ್ ಬೆಂಗಳೂರು ಪೊಲೀಸ್ ಪಡೆಯ ಮುಖ್ಯಸ್ಥ

ರಾಜಧಾನಿಗೆ ಹೊಸ ಕಮಿಷನರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ನೂತನ ಕಮಿಷನರ್ ಆಗಿ ಬಿ. ದಯಾನಂದ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ದಯಾನಂದ್

ಪ್ರಸ್ತುತ ಕಮಿಷನರ್ ಆಗಿದ್ದ ಪ್ರತಾಪ್ ರೆಡ್ಡಿ ಅವರಿಗೆ ಡಿಜಿಪಿ ಹುದ್ದೆಗೆ ಬಡ್ತಿ ನೀಡಲಾಗಿದೆ. ಜೊತೆಗೆ, ಆಂತರಿಕ ಭದ್ರತಾ ವಿಭಾಗಕ್ಕೆ (ಐಎಸ್‌ಡಿ) ವರ್ಗಾಯಿಸಲಾಗಿದೆ.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬೆನ್ನಿಕಲ್ಲು ಗ್ರಾಮದ ದಯಾನಂದ್, 1994ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ. ಪುತ್ತೂರು ಉಪವಿಭಾಗದ ಸಹಾಯಕ ಎಸ್ಪಿ ಆಗಿ ವೃತ್ತಿ ಆರಂಭಿಸಿದ್ದರು. ವಿಜಯಪುರ, ಬೆಳಗಾವಿ, ಚಿತ್ರದುರ್ಗ, ದಕ್ಷಿಣ ಕನ್ನಡ, ಕೋಲಾರ ಜಿಲ್ಲಾ ಎಸ್ಪಿ ಆಗಿ ಕೆಲಸ ಮಾಡಿದ್ದರು.

ಮೈಸೂರು ನಗರ ಕಮಿಷನರ್, ಬೆಂಗಳೂರು ಸಿಸಿಬಿಯ ಜಂಟಿ ಕಮಿಷನರ್, ಸಂಚಾರ ವಿಭಾಗದ ಕಮಿಷನರ್ ಆಗಿ ಕೆಲಸ ಮಾಡಿದ್ದ ದಯಾನಂದ್, ಸದ್ಯ ರಾಜ್ಯ ಗುಪ್ತಚರ ಇಲಾಖೆಯ ಎಡಿಜಿಪಿ ಆಗಿದ್ದರು. ಬೆಂಗಳೂರಿನ 38ನೇ ಕಮಿಷನರ್ ಆಗಲಿರುವ ದಯಾನಂದ್ ಬುಧವಾರ ಅಧಿಕಾರ ವಹಿಸಿಕೊಳ್ಳುವ ಸಾಧ್ಯತೆ ಇದೆ.

ಸಿಐಡಿ ಡಿಜಿಪಿ ಸಲೀಂ: ಬೆಂಗಳೂರು ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ ಅವರಿಗೆ ಡಿಜಿಪಿ ಹುದ್ದೆಗೆ ಬಡ್ತಿ ನೀಡಲಾಗಿದ್ದು, ಸಿಐಡಿ ಡಿಜಿಪಿ ಆಗಿ ವರ್ಗಾವಣೆ ಮಾಡಲಾಗಿದೆ. ಸಿಐಡಿಯ ಎಡಿಜಿಪಿ ಕೆ.ವಿ. ಶರತ್‌ಚಂದ್ರ ಅವರನ್ನು ಗುಪ್ತದಳದ ಎಡಿಜಿಪಿ ಆಗಿ ವರ್ಗಾಯಿಸಲಾಗಿದೆ.

ವಿಶೇಷ ಕಮಿಷನರ್ ಹುದ್ದೆ ಖಾಲಿ

ನಗರದ ಸಂಚಾರ ವ್ಯವಸ್ಥೆ ನಿರ್ವಹಣೆಗಾಗಿ ಬಿಜೆಪಿ ನೇತೃತ್ವದ ಸರ್ಕಾರ, ವಿಶೇಷ ಕಮಿಷನರ್ ಹುದ್ದೆ ಸೃಷ್ಟಿಸಲಾಗಿತ್ತು. ಇದರ ಮೊದಲ ವಿಶೇಷ ಕಮಿಷನರ್ ಆಗಿ ಎಂ.ಎ. ಸಲೀಂ ಅಧಿಕಾರ ವಹಿಸಿಕೊಂಡಿದ್ದರು. ಇದೀಗ, ಸಲೀಂ ಅವರನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿದೆ.

ಆದರೆ, ವಿಶೇಷ ಕಮಿಷನರ್ ಹುದ್ದೆಗೆ ಯಾರನ್ನೂ ವರ್ಗಾವಣೆ ಮಾಡಿಲ್ಲ. ಕಾಂಗ್ರೆಸ್ ಸರ್ಕಾರ, ಹುದ್ದೆಯನ್ನೂ ರದ್ದುಪಡಿಸುವ ಸಾಧ್ಯತೆ ಬಗ್ಗೆ ಚರ್ಚೆಗಳು ನಡೆಯುತ್ತಿವೆ.

ಎಂ.ಎ. ಸಲೀಂ

1. ಮೇ 19ರಂದು ಯುವತಿ ಸಾವಿಗೆ ಕಾರಣವಾಗಿದ್ದ ಕೆ.ಆರ್ ವೃತ್ತದ ಅಂಡರ್‌ಪಾಸ್ ಬಳಿ ಸ್ವಚ್ಛತಾ ಕಾಮಗಾರಿ ನಡೆಯುತ್ತಿದ್ದು, ಸಂಚಾರ ನಿರ್ಬಂಧಿಸಲಾಗಿತ್ತು 2.ಲಿಂಗರಾಜಪುರದ ಅಂಡರ್‌ಪಾಸ್‌ನಲ್ಲಿ ಮಳೆ ನೀರಿನಲ್ಲೇ ಸಂಚರಿಸಿದ ವಾಹನ ಸವಾರರು 3. ಮಳೆಯಿಂದಾಗಿ ಮಿನ್ಸ್ ಸ್ಕ್ವೇರ್ ಬಳಿ ಚರಂಡಿ ನೀರು ಮ್ಯಾನ್ ಹೋಲ್‌ನಿಂದ ಉಕ್ಕಿತು

ಧರೆಗೆ ಉರುಳಿದ ಮರಗಳು: ವಾಹನ ಸವಾರರ ಪರದಾಟ

ನಗರದಲ್ಲಿ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುಡುಗು-ಮಿಂಚು ಸಹಿತ ಮಂಗಳವಾರ ಧಾರಾಕಾರ ಮಳೆ ಸುರಿಯಿತು. ಬೆಳಿಗ್ಗೆಯಿಂದಲೇ ಮೋಡಕವಿದ ವಾತಾವರಣವಿದ್ದು, ಮಧ್ಯಾಹ್ನ ಮಳೆ ಆರಂಭವಾಯಿತು. ಸಂಜೆಯ ನಂತರ ಮಳೆ ಬಿರುಸುಗೊಂಡಿತು.

ಧಾರಾಕಾರ ಮಳೆಯಿಂದಾಗಿ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು. ಹಲವು ರಸ್ತೆಗಳಲ್ಲಿ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು. ದಟ್ಟಣೆ ಸಹ ಉಂಟಾಗಿತ್ತು. ಮಧ್ಯಾಹ್ನದಿಂದ ರಾತ್ರಿಯವರೆಗೆ ಮಳೆ ಆಗಾಗ ನಿಂತು, ಅಬ್ಬರಿಸಿತು.

ಸಂಪಂಗಿರಾಮನಗರ, ರಾಜಮಹಲ್ ಗುಟ್ಟಹಳ್ಳಿ, ವಿಶ್ವೇಶ್ವರಪುರ, ಬೆಳ್ಳಂದೂರು, ರಾಜರಾಜೇಶ್ವರಿನಗರ, ನಾಗರಬಾವಿ, ನಂದಿನಿ ಲೇಔಟ್, ವಿಜಯನಗರ, ಕೆಂಗೇರಿ, ಜಯನಗರದ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ, ನಾಯಂಡಹಳ್ಳಿ, ರಾಜಾಜಿನಗರ, ಹೊರಮಾವು, ಹೆಬ್ಬಾಳ, ಬನಶಂಕರಿ, ಶಿವಾಜಿನಗರ, ಹಲಸೂರು, ವಸಂತನಗರ, ವಿದ್ಯಾರಣ್ಯಪುರ, ಮಹಾಲಕ್ಷ್ಮಿ ಲೇಔಟ್, ಕೋರಮಂಗಲ, ಶಾಂತಿನಗರ, ಬಸವನಗುಡಿ, ಯಶವಂತಪುರ, ಪೀಣ್ಯ, ಮಲ್ಲೇಶ್ವರ, ಶೇಷಾದ್ರಿಪುರ, ವಿಲ್ಸನ್ ಗಾರ್ಡನ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಜೋರಾಗಿತ್ತು.

ಕೆತ್ತನೂರು, ಹುಳಿಮಾವು, ಗೊಟ್ಟಿಗೆರೆ ಹಾಗೂ ನಗರದ ಹೊರವಲಯದಲ್ಲೂ ಮಳೆ ಅಬ್ಬರಿಸಿತು. ಒಳಸೇತುವೆಗಳಲ್ಲಿ ಧಾರಾಕಾರವಾಗಿ ನೀರು ಹರಿದಿದ್ದರಿಂದ, ಅಲ್ಲಿನ ವಾಹನಗಳ ಸಂಚಾರ ಬಂದ್ ಆಗಿತ್ತು. ಕೆ.ಆರ್. ಮಾರ್ಕೆಟ್, ಚಿಕ್ಕಪೇಟೆ, ಕಲಾಸಿಪಾಳ್ಯ, ಕಾಟನ್‌ಪೇಟೆ, ಮೆಜೆಸ್ಟಿಕ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಆಯಿತು. ಮಾರುಕಟ್ಟೆ ಪ್ರದೇಶಗಳ ರಸ್ತೆಗಳಲ್ಲಿ ಎರಡು ಅಡಿಯಷ್ಟು ನೀರು ಹರಿಯಿತು

ಕಮಲಾನಗರದಲ್ಲಿ ಮರವೊಂದು ಉರುಳಿಬಿದ್ದು, ಆಟೊ ಜಖಂಗೊಂಡಿತು. ಮರದ ಕೊಂಬೆಗಳನ್ನು ಸರಿಸಲು ನಾಗರಿಕರು ಶ್ರಮಪಟ್ಟರು. ನಂತರ, ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು.

ಕಟ್ಟೆಚ್ಚರ ವಹಿಸಲು ಡಿಸಿಎಂ ಸೂಚನೆ

ಬೆಂಗಳೂರಿನಲ್ಲಿ ತೀವ್ರ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಟ್ಟೆಚ್ಚರ ವಹಿಸಬೇಕು ಎಂದು ಬಿಬಿಎಂಪಿ ಅಧಿಕಾರಿಗಳು, ಎಂಜಿನಿಯರ್‌ಗಳಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದರು.

ಮಳೆ ಅನಾಹುತ ಆಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಒಂದೊಮ್ಮೆ ಅನಾಹುತಗಳ ಬಗ್ಗೆ ವರದಿಯಾದರೆ ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಇದಕ್ಕಾಗಿ 'ವಾರ್ ರೂಮ್' ಮೂಲಕ ಕಟ್ಟೆಚ್ಚರ ವಹಿಸಬೇಕು. ಸಂಭವನೀಯ ಮಳೆ ಅನಾಹುತಗಳ ಬಗ್ಗೆಯೂ ನಿಗಾ ವಹಿಸಬೇಕು ಎಂದರು.

ನಾಗರಿಕರಿಗೆ ತೊಂದರೆ ಆಗದಂತೆ ಪೊಲೀಸ್, ಬೆಸ್ಕಾಂ, ಜಲ ಮಂಡಳಿ ಮತ್ತಿತರ ಇಲಾಖೆಗಳ ಜತೆ ಪರಸ್ಪರ ಸಮನ್ವಯ, ಸಹಕಾರ ಸಾಧಿಸಬೇಕು ಎಂದು ಆದೇಶಿಸಿದ್ದಾರೆ.

ಕಮಲಾನಗರದ ಮುಖ್ಯರಸ್ತೆಯ ವಾಟರ್ ಟ್ಯಾಂಕ್ ಬಳಿ ಆಟೊ ಮೇಲೆ ಮರ ಉರುಳಿಬಿದ್ದಿತು

ಎಲ್ಲಿ ಹೆಚ್ಚು ಮಳೆ?

ಪ್ರದೇಶ	ಮಿ.ಮೀ	ಪ್ರದೇಶ	ಮಿ.ಮೀ
ರಾಜಮಹಲ್ ಗುಟ್ಟಹಳ್ಳಿ	81	ಕಾಟನ್‌ಪೇಟೆ	45
ಸಂಪಂಗಿರಾಮನಗರ	76.5	ಬಾಣಸವಾಡಿ	44.50
ವಿಶ್ವೇಶ್ವರಪುರ	64.5	ವಿದ್ಯಾಪೀಠ	43.50
ಗಾಳಿ ಆಂಜನೇಯ ದೇವಸ್ಥಾನ	61.50	ಪುಲಕೇಶಿನಗರ	43
ಹೆಮ್ಮಿಗೆಪುರ	59.5	ಬೆನ್ನಿಗಾನಹಳ್ಳಿ	37.50
ಹಂಪಿನಗರ	53.5	ವನ್ನಾರ್‌ಪೇಟೆ	37.50
ಬೆಳ್ಳಂದೂರು	52	ಕೊಟ್ಟಿಗೆಪಾಳ್ಯ	34.50
ಚಾಮರಾಜಪೇಟೆ	51	ನಂದಿನಿಲೇಔಟ್	33.50
ನಾಗಪುರ	49.50	ರಾಜರಾಜೇಶ್ವರಿನಗರ	33.50
ದಯಾನಂದನಗರ	48.50	ನಾಯಂಡಹಳ್ಳಿ	31.50
		ಎಚ್‌ಎಎಲ್ ವಿಮಾನನಿಲ್ದಾಣ	31

ಬೆಳ್ಳಂದೂರು ಇಕೋಸ್ಪೇಸ್ ಬಳಿ ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ನಿರಂತರ ಸುರಿದ ಮಳೆಯಿಂದಾಗಿ ಮಂಗಳವಾರ ಸಾಯಂಕಾಲ ಬೆಳ್ಳಂದೂರಿನ ಹೊರ ವರ್ತುಲ ರಸ್ತೆಯ ಇಕೋಸ್ಪೇಸ್ ಬಳಿ ಸಂಚಾರ ಅಸ್ತವ್ಯಸ್ತಗೊಂಡಿತು.

ಮುಂಗಾರು ಮಳೆ ಆರಂಭದಲ್ಲೇ ಈ ಸಮಸ್ಯೆ ಮರುಕಳಿಸಿದೆ. ಮಂಗಳವಾರ ಸುರಿದ ಮಳೆಯಿಂದಾಗಿ ಜನರು ತಾಸು ಗಟ್ಟಲೆ ಟ್ರಾಫಿಕ್‌ನಲ್ಲಿ ಸಿಲುಕಿ ಪರದಾಡಿದರು. ವಾಹನಗಳು ಮಳೆ ನೀರಿನಲ್ಲಿ ಸಿಲುಕಿದವು. ಅತಿ ಹೆಚ್ಚು ಐಟಿಬಿಟಿ ಕ್ಷೇತ್ರ ಹೊಂದಿರುವ ಮಹದೇವಪುರ ಕ್ಷೇತ್ರ ಪ್ರತಿ ಸಾರಿ ಮಳೆ ಬಂದಾಗೆಲ್ಲ ಈ ಸಮಸ್ಯೆ ಮಾಮೂಲಿ ಎನ್ನುವಂತಾಗಿದೆ.

ಕಳೆದ ಸಾರಿ ಎದುರಾದ ಸಮಸ್ಯೆಗೆ ಪರಿಹಾರವಾಗಿ ಬಿಬಿಎಂಪಿ ಅಲ್ಲಲ್ಲಿ ರಾಜ ಕಾಲುವೆ ಕಾಮಗಾರಿ ಕೈಗೆತ್ತಿಕೊಂಡಿದೆ. ಮಳೆ ನೀರು ಸರಾಗವಾಗಿ ಹರಿಯಲು ಕಾಲುವೆಗಳನ್ನು ನಿರ್ಮಾಣ ಮಾಡಲಾಗಿದೆ. ನಿರೀಕ್ಷಿತ ಮಟ್ಟದಲ್ಲಿ ಕೆಲಸ ಆಗದೆ ಇರುವುದರಿಂದ ಮತ್ತೆ ಸಮಸ್ಯೆ ಬಿಗಾಡಾಯಿಸಿದೆ.

ಕಳೆದ ವರ್ಷ ಮಳೆಯಿಂದಾಗಿ ರಾಜ ಕಾಲುವೆ ನೀರು ಬೆಳ್ಳಂದೂರು ಇಕೋಸ್ಪೇಸ್ ರಸ್ತೆ ಮೇಲೆ ನೀರು ಹರಿದು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿತ್ತು.

ಬೆಳ್ಳಂದೂರು ಇಕೋಸ್ಪೇಸ್ ಬಳಿ ರಸ್ತೆ ಸಂಪೂರ್ಣ ಜಲಾವೃತಗೊಂಡಿದ್ದು, ಬಸ್ಸೊಂದು ಮಳೆ ನೀರಿನಲ್ಲೇ ಸಂಚರಿಸಿತು

ಮಳೆ ನಿಂತರೂ ಸಂಚಾರಕ್ಕೆ ಸಂಕಷ್ಟ

ನಗರದಲ್ಲಿ ಮಂಗಳವಾರ ಮಧ್ಯಾಹ್ನದಿಂದ ಬಿಟ್ಟು ಬಿಟ್ಟು ಸುರಿದ ಮಳೆಯಿಂದಾಗಿ ಅಂಡರ್‌ಪಾಸ್ ಜೊತೆಗೆ ಮೇಲ್ಸೇತುವೆಯಲ್ಲೂ ನಿಂತ ನೀರಿನಿಂದ ವಾಹನ ಸಂಚಾರರು ಪರದಾಡಿದರು. ಹಲವು ಅಂಡರ್ ಪಾಸ್‌ಗಳಲ್ಲಿ ಸಂಚಾರವನ್ನು ನಿರ್ಬಂಧಿಸಿ ಬ್ಯಾರಿಕೇಡ್ ಅಳವಡಿಸಲಾಗಿತ್ತು. ನಾಯಂಡಹಳ್ಳಿ ಜಂಕ್ಷನ್ ಮೇಲ್ಸೇತುವೆ, ಸಿರ್ಸಿ ಮೇಲ್ಸೇತುವೆ ಸೇರಿದಂತೆ ನಗರದ ಹಲವು ಮೇಲ್ಸೇತುವೆಗಳಲ್ಲಿ ಮಳೆ ನೀರು ನಿಂತು ವಾಹನ ಸಂಚಾರಕ್ಕೆ ಸಾಕಷ್ಟು ಅಡಚಣೆ ಉಂಟುಮಾಡಿತು. ಮಳೆ ನೀರು ಹರಿಯುವ ಪೈಪ್‌ಗಳನ್ನು ಸ್ವಚ್ಛಗೊಳಿಸದಿರುವುದರಿಂದ ನೀರು ಮೇಲ್ಸೇತುವೆ ಮೇಲೆ ನಿಂತುಕೊಂಡಿತ್ತು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎನ್/02/2023 ದಿನಾಂಕ : 26-05-2023

ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಸಹಿದಾರರು, ಕೆಳಗಿನ ಐಟಂಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮೂಲಕ ಮಾತ್ರ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **ಟೆಂಡರ್ ಮುಕ್ತಾಯದ ಸಮಯ : 14.00 ಗಂಟೆಗಳು**

ಕ್ರ.	ಟೆಂಡರ್ ಸಂಖ್ಯೆ	ಸಂಕ್ಷಿಪ್ತ ವಿವರಣೆ	ಟೆಂಡರ್ ಮುಕ್ತಾಯದ ದಿನಾಂಕ
1	95235236	ಸ್ಟ್ರಾಂಡೆಡ್ ಕಾಂಪ್ಯಾಕ್ಟೆಡ್ ಸರ್ಕ್ಯುಲರ್ ಅಲ್ಯುಮಿನಿಯಂ ಕಂಡಕ್ಟರ್ ಶೀಲ್ಡೆಡ್ ಇತ್ಯಾದಿಯೊಂದಿಗೆ 3 ಕೋರ್ x 400 ಚ.ಮಿ.ಮೀ 6.35/11 ಕೆವಿ ಗ್ರೇಡ್ 90 ಡಿಇಜಿ. ಸಿ ರೇಟಿಂಗ್ ಹೆವಿ ಡ್ಯೂಟಿ ಪವರ್ ಕೇಬಲ್ ಪ್ರಮಾಣ : 5100 ಮೀ.ಗಳು	14-06-2023
2ಎ	95235266	ಆರ್‌ಡಿಎಸ್‌ಓ/ಎಸ್‌ಪಿಎನ್/165/2012/ಆವೃತ್ತಿ 3.0 ಇತ್ಯಾದಿ ಅನುಸಾರವಾಗಿ ಆರ್‌ಇ ಪ್ರದೇಶದಲ್ಲಿ 6 ಲೈನ್‌ಗಳವರೆಗೆ ಎಸ್‌ಎಂಪಿಎಸ್ ಆಧಾರಿತ ಸಂಯೋಜಿತ ವಿದ್ಯುತ್ ಸರಬರಾಜು ಪ್ರಮಾಣ – 6 ಸಂಖ್ಯೆಗಳು	26-06-2023
2ಬಿ	95235266	ಟೆಂಡರ್ ಸಂ. 95235266ಗೆ ತಿದ್ದುಪಡಿ ಕ್ರ.ಸಂ. 6ಗಾಗಿ (ಟೆಂಡರ್‌ನೊಂದಿಗೆ ದಾಖಲೆಗಳನ್ನು ಲಗತ್ತಿಸಿದೆ) ಕ್ರ. ಸಂ. 4 3ನೇ ಪಾರ್ಟಿ ತನಿಖೆಗಾಗಿ ವಿಶೇಷ ಷರತ್ತುಗಳು	26-06-2023
3	95235091	ಐಎಸ್ : 7098 ಪಾರ್ಟ್ 1 ಇತ್ಯಾದಿಗೆ ಅನುಸಾರವಾಗಿ 4 ಕೋರ್ x 35 ಚ.ಮಿ.ಮೀ. 1100 V ಗ್ರೇಡ್ ಸ್ಟ್ರಾಂಡೆಡ್ ಅಲ್ಯುಮಿನಿಯಂ ಕಂಡಕ್ಟರ್ ಗ್ಯಾಲ್ವನೈಸ್ಡ್ ಸ್ಟೀಲ್ ಸ್ಟ್ರಿಪ್ ಆರ್ಮರ್ಡ್ ಎಕ್ಸ್‌ಎಲ್‌ಪಿಇ ಕೇಬಲ್ ಪ್ರಮಾಣ : 9650 ಮೀ.ಗಳು	20-06-2023
4	95225725ಎ	ಐಎಸ್ : 7098 ಪಾರ್ಟ್ 1 ಇತ್ಯಾದಿಗೆ ಅನುಸಾರವಾಗಿ 4 ಕೋರ್ x 400 ಚ.ಮಿ.ಮೀ. 1100 V ಗ್ರೇಡ್ ಸ್ಟ್ರಾಂಡೆಡ್ ಅಲ್ಯುಮಿನಿಯಂ ಕಂಡಕ್ಟರ್ ಗ್ಯಾಲ್ವನೈಸ್ಡ್ ಸ್ಟೀಲ್ ಸ್ಟ್ರಿಪ್ ಆರ್ಮರ್ಡ್ ಎಕ್ಸ್‌ಎಲ್‌ಪಿಇ ಕೇಬಲ್ ಪ್ರಮಾಣ : 1000 ಮೀ.ಗಳು	30-06-2023

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/129/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24 ಮುಖ್ಯ ಸಾಮಗ್ರಿ ವ್ಯವಸ್ಥಾಪಕರು/ನಿರ್ಮಾಣ/ಬೆಂಗಳೂರು ದಂಡು

S.W.Railways | southwesternrailway_swr | SWRRLY | southwesternrailway | SWRRLY

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/17/2023 ದಿನಾಂಕ : 25-05-2023

ಕೆಲಸದ ಹೆಸರು	ಅಂದಾಜು ಮೌಲ್ಯ
ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ನಿರ್ವಹಣಾ ಮೂಲಸೌಕರ್ಯದ ಉದ್ದೇಶಿತ ಉನ್ನತೀಕರಣ / ಅಭಿವೃದ್ಧಿ ವಂದೇ ಭಾರತ್ ಛೇರ್ ಕಾರ್ ರೈಲುಗಳ ನಿರ್ವಹಣೆ – ಮೆಮು ಶೆಡ್‌ನ ವಿಸ್ತರಣೆ (ಟೆಂಡರ್ ಉಲ್ಲೇಖ ಸಂ. : ಬಿವೈಪಿಎಲ್-3ಸಿಟಿ-18)	ರೂ. 3,86,78,099/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 16-06-2023 ರಂದು 16:00 ಗಂಟೆಯವರೆಗೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/18/2023 ದಿನಾಂಕ : 25-05-2023

ಕೆಲಸದ ಹೆಸರು	ಅಂದಾಜು ಮೌಲ್ಯ
ಮಾರಿಕುಪ್ಪಂ – ಕುಪ್ಪಂ ಹೊಸ ಮಾರ್ಗ ಯೋಜನೆಯ ಮಿಡ್ ಸೆಕ್ಷನ್ (ಕಿಮೀ:5.72) ಮತ್ತು ಕುಪ್ಪಂ (ಕಿಮೀ:23.7) ನಡುವೆ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್, ವಿದ್ಯುದೀಕರಣ ಮತ್ತು ವಿದ್ಯುತ್ ಸಾಮಾನ್ಯ ಸೇವಾ ಕಾಮಗಾರಿಗಳನ್ನು ಒಳಗೊಂಡಂತೆ ಹೊಸ ಬ್ರಾಡ್ ಗೇಜ್ ಮಾರ್ಗದ ನಿರ್ಮಾಣ. (ಟೆಂಡರ್ ಉಲ್ಲೇಖ ಸಂ.: ಎಂಕೆಎಂ-ಕೆಪಿಎನ್-ಇಪಿಸಿ-ಫೇಸ್-2)	ರೂ. 3,79,56,00,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 09-08-2023 ರಂದು 11:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/125/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24

S.W.Railways | SWRRLY | SWRRLY

ಎಂ.ಪಿ.ಎಂ ಬಡಾವಣೆ ಬಳಿ ಉರುಳಿ ಬಿದ್ದಿರುವ ದೊಡ್ಡ ಗಾತ್ರದ ಕೊಂಬೆ

ಹಲವೆಡೆ ಉರುಳಿದ ಮರಗಳು

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಮಾಗಡಿ ರಸ್ತೆಯ ಗೊಲ್ಲರಹಟ್ಟಿ, ಭರತ್‌ನಗರ, ಎಂಪಿಎಂ ಬಡಾವಣೆ, ನಾಗರಭಾವಿ, ಮಲ್ಲತಹಳ್ಳಿ, ಉಲ್ಲಾಳು, ಡಿ.ಗ್ರೂಪ್ ಬಡಾವಣೆ ಸೇರಿದಂತೆ ಹಲವೆಡೆ ಮಳೆ ಮತ್ತು ಗಾಳಿ ಅಬ್ಬರಕ್ಕೆ ಹಲವಾರು ಮರಗಳು ಉರುಳಿ ಬಿದ್ದಿವೆ.

ಇದರಿಂದಾಗಿ ಸಂಚಾರಕ್ಕೆ ಅಡ್ಡಿಯಾಗಿ ನಾಗರಿಕರು ತೊಂದರೆ ಅನುಭವಿಸಿದರು. 12 ಮರಗಳು, 32ಕ್ಕೂ ಹೆಚ್ಚು ಬೃಹತ್ ಮರದ ಕೊಂಬೆಗಳು ಮಳೆ ಗಾಳಿಗೆ ಬಿದ್ದಿವೆ. ನಾಲ್ಕೈದು ವಿದ್ಯುತ್ ಕಂಬಗಳು ಮುರಿದಿವೆ.

ಮನೆಯ ಕಾಂಪೌಂಡ್ ಮತ್ತು ಕೆಲವು ಮನೆಯ ಮೇಲೆ ಕೊಂಬೆಗಳು ಬಿದ್ದಿರುವುದರಿಂದ ಸಣ್ಣ ಪುಟ್ಟ ಹಾನಿಯಾಗಿದೆ. ಯಾವುದೇ ಪ್ರಾಣ ಹಾನಿ, ನಷ್ಟವುಂಟಾಗಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಕೆಲವು ಬಡಾವಣೆಗಳಲ್ಲಿ ಮನೆ ಮತ್ತು ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿರುವ ಮಾಲೀಕರು ಮರದ ಬುಡಗಳಿಗೆ ಕಾಂಕ್ರೀಟ್ ಹಾಕುವುದು ಮತ್ತು ರಸ್ತೆ ನಿರ್ಮಾಣದ ಸಮಯದಲ್ಲಿ ಡಾಂಬರ್ ಅನ್ನು ಮರದ ಸುತ್ತಲು ಹಾಕುವುದರಿಂದ ಬೇರುಗಳಿಗೆ ನೀರು ಹೋಗುವುದಿಲ್ಲ. ಬೇರುಗಳು ಆಳವಾಗಿ ಭೂಮಿಗೆ ಹೋಗದ ಕಾರಣ ಮೇಲ್ಭಾಗದಲ್ಲಿರುವುದರಿಂದ ಮಳೆ ಬಂದಾಗ ಸಣ್ಣ ಗಾಳಿಗೂ ಉರುಳಿ ಬೀಳುತ್ತಿವೆ ಎಂದು ನಾಗರಿಕರು ಆಕ್ರೋಶ ವ್ಯಕ್ತಪಡಿಸಿದರು.

ರಾಜರಾಜೇಶ್ವರಿನಗರ ವಲಯದ ಉಪವಲಯ ಅರಣ್ಯಾಧಿಕಾರಿ ವಿ.ಜಗದೀಶ್, ವಲಯ ಅರಣ್ಯಾಧಿಕಾರಿ ಮುತ್ತುರಾಜು ಮತ್ತು ಸಿಬ್ಬಂದಿ ರಸ್ತೆಯಲ್ಲಿ ಬಿದ್ದಿರುವ ಮರ ಕೊಂಬೆಗಳನ್ನು ತೆರವುಗೊಳಿಸಿದರು.

Venues in Bangalore

Jayanagar: Premchandra Kalyana Mahal, 2nd Block, (Near Ashoka Pillar) - 11

Infantry Road: Safina Plaza, No.84/85 - 01

(Infantry Road: 31st May - Last Day)

Org. by: Surya Agency Pvt. Ltd.

ಹೈಕೋರ್ಟ್‌ಗೆ ಮಾಹಿತಿ ನೀಡಿದ ಬಿಬಿಎಂಪಿ

35 ಸಾವಿರ ಅನಧಿಕೃತ ಜಾಹೀರಾತು ಫಲಕ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಕಳೆದ ಮಾರ್ಚ್‌ನಿಂದ ಮೇ 25ರವರೆಗೆ ಅಳವಡಿಸಲಾಗಿದ್ದ ಒಟ್ಟು 35,137 ಅನಧಿಕೃತ ಜಾಹಿರಾತು ಫಲಕಗಳನ್ನು ಗುರುತಿಸಲಾಗಿದ್ದು, ಅವುಗಳ ಪೈಕಿ 34,541ಫಲಕಗಳನ್ನು ತೆರವುಗೊಳಿಸಲಾಗಿದೆ' ಎಂದು ಬಿಬಿಎಂಪಿ ಹೈಕೋರ್ಟ್‌ಗೆ ತಿಳಿಸಿದೆ.

'ಅನಧಿಕೃತ ಜಾಹಿರಾತುಗಳನ್ನು ತೆರವುಗೊಳಿಸಲು ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಮಾಯಿಗೆ ಗೌಡ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಬಿಬಿಎಂಪಿ ಪರ ವಕೀಲರು, ಈ ಹಿಂದೆ ಹೈಕೋರ್ಟ್ ನೀಡಿದ್ದ ನಿರ್ದೇಶನದನ್ವಯ ಅನಧಿಕೃತ ಜಾಹೀರಾತು ತೆರವು ಮತ್ತು ಅವುಗಳನ್ನು ತಡೆಗಟ್ಟುವ ಸಂಬಂಧ ಕೈಗೊಂಡ ಕ್ರಮಗಳ ಕುರಿತಾದ ಅನುಪಾಲನಾ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

'ನಗರದ ಎಂಟು ವಲಯಗಳಲ್ಲಿ 2023ರ ಮಾರ್ಚ್ ನಿಂದ ಮೇ 25ರವರೆಗೆ ಅಳವಡಿಸಲಾಗಿದ್ದ ಒಟ್ಟು 35,137 ಅನಧಿಕೃತ ಫ್ಲೆಕ್ಸ್, ಬ್ಯಾನರ್ ಮತ್ತು ಇತರೆ ಜಾಹೀರಾತುಗಳನ್ನು ಗುರುತಿಸಲಾಗಿದೆ. ಅವುಗಳ ಪೈಕಿ 34,541 ಫಲಕಗಳನ್ನು ತೆರವುಗೊಳಿಸಲಾಗಿದೆ. ಅನಧಿಕೃತ ಜಾಹೀರಾತು ಅಳವಡಿಕೆ ಸಂಬಂಧ ಒಟ್ಟು 37 ದೂರುಗಳು ಸಲ್ಲಿಕೆಯಾಗಿದ್ದವು. ಈ ಸಂಬಂಧ 40 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ' ಎಂದು ಅನುಪಾಲನಾ ವರದಿಯಲ್ಲಿ ತಿಳಿಸಲಾಗಿದೆ.

'ತೆರವುಗೊಳಿಸಲಾಗಿರುವ ಹೋರ್ಡಿಂಗ್ಸ್, ಫ್ಲೆಕ್ಸ್ ಅಥವಾ ಬ್ಯಾನರ್‌ಗಳನ್ನು ವಾರ್ಡ್ ಕಚೇರಿಗಳಲ್ಲಿ ಸಂಗ್ರಹಿಸಿ ಇಡಲಾಗಿದೆ. ಅನಧಿಕೃತ ಜಾಹಿರಾತು ಅಳವಡಿಕೆ ಸಂಬಂಧ ಸಾರ್ವಜನಿಕರು ದೂರು ಸಲ್ಲಿಸಲು ಅನುಕೂಲವಾಗುವಂತೆ ವಾರ್ಡ್‌ವಾರು ಸಂಬಂಧಪಟ್ಟ ಅಧಿಕಾರಿ ಹೆಸರು ಹಾಗೂ ಫೋನ್ ನಂಬರ್ ಅನ್ನು ಪಾಲಿಕೆಯ ವೆಬ್‌ಸೈಟ್ ಮತ್ತು ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ' ಎಂದು ವರದಿಯಲ್ಲಿ ವಿವರಿಸಲಾಗಿದೆ.

'ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಾಹಿರಾತು ಹೋರ್ಡಿಂಗ್, ಫ್ಲೆಕ್ಸ್ ಅಥವಾ ಬ್ಯಾನರ್ ಅಳವಡಿಸುವುದನ್ನು ಕೇಂದ್ರ ಚುನಾವಣಾ ಆಯೋಗವು ನಿಷೇಧ ಮಾಡಿದ್ದರ ಹೊರತಾಗಿಯೂ ರಾಜಕೀಯ ಪಕ್ಷಗಳು ಮತ್ತು ಅವುಗಳ ಬೆಂಬಲಿಗರು ಜಾಹಿರಾತು ಫಲಕಗಳನ್ನು ಅನಧಿಕೃತವಾಗಿ ಅಳವಡಿಕೆ ಮಾಡಲಾಗಿತ್ತು. ಈಗ ಬಹುತೇಕ ಎಲ್ಲಾ ಅನಧಿಕೃತ ಜಾಹಿರಾತು ಫಲಕಗಳನ್ನು ತೆರವುಗೊಳಿಸಲಾಗಿದೆ' ಎಂದು ವರದಿಯಲ್ಲಿ ವಿವರಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ವಿಭಾಗ, ಪಶ್ಚಿಮ ವಲಯ
ಜಂಟಿ ಆಯುಕ್ತರು (ಪಶ್ಚಿಮ) ಕಚೇರಿ ಆವರಣ,
2ನೇ ಮಹಡಿ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020.

ಸಂಖ್ಯೆ: ಕಾಪಾಅ/ಯೋ-ಪಶ್ಚಿಮ/ಟೆಂಡರ್/16/2023-24 ದಿನಾಂಕ: 29.05.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
ಗುಣಮಟ್ಟ ಮತ್ತು ವೆಚ್ಚದ ಆಧಾರದಲ್ಲಿ ಆಯ್ಕೆ (ದ್ವಿಲಕೋಟೆ ಪದ್ದತಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಯೋಜನೆ – ಪಶ್ಚಿಮ) ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರು ಅರ್ಹ ಹೆಸರಾಂತ ಸಮಾಲೋಚಕರಿಂದ ಈ ಕೆಳಕಂಡ ಕಾಮಗಾರಿ-ಗಳಿಗೆ ಯೋಜನೆ ನಿರ್ವಹಣೆ ಸಲಹೆಸೇವೆಗಳು (ಪಿಎಂಸಿ) ಒದಗಿಸಲು ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ಕೋಟಿಗಳಲ್ಲಿ)	ಟೆಂಡರಿಗಿಟ್ಟ ಮೊತ್ತ (ರೂಪಾಯಿ-ಗಳು) 1% ಪಿಎಂಸಿಗಾಗಿ (₹.ಲಕ್ಷಗಳಲ್ಲಿ)	ಇಎಂಡಿ ಮೊತ್ತ (₹.ಗಳಲ್ಲಿ)
ರಾಜಾಜಿನಗರ ಕ್ಷೇತ್ರ, ವಾರ್ಡ್ ಸಂಖ್ಯೆ-101ರಲ್ಲಿ ಸಮಗ್ರ ಅಭಿವೃದ್ಧಿ ಹಾಗೂ ವಿವಿಧೋದ್ದೇಶ ಕಟ್ಟಡ ಮತ್ತು ಸಾರ್ವಜನಿಕ ಶೌಚಾಲಯ ನಿರ್ಮಾಣ ಮತ್ತು ಇತರೆ ಸುಧಾರಣೆ ಕಾಮಗಾರಿಗಳಿಗಾಗಿ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು ಒದಗಿಸುವುದು. ಪ್ಯಾಕೇಜ್-03, ಅನುಬಂಧ-6, ಜಿಒಕೆ ಕ್ರ.ಸಂ. 233	5.00	5.00	12,500/-

ಟೆಂಡರ್ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ 07.06.2023ರ ಮಧ್ಯಾಹ್ನ 3:00 ಗಂಟೆಗೆ. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 12.06.2023ರ ಸಂಜೆ 4:00 ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 14.06.2023ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (4) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ www.bbmp.gov.in. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ, ಪಶ್ಚಿಮ ವಲಯ

ಗುಜರಾತ್ ಪೆಟ್ರೋಸಿಂಥಿಸ್ ಅಮಿಟೆಡ್

ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, 1ನೇ ಹಂತ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, ಮಹದೇವಪುರ ಅಂಚೆ, ಬೆಂಗಳೂರು - 560 048. CIN : L23209KA1977PLC043357

E-mail : info@gpl.in, secretarial@gujaratpetrosynthese.com Website: www.gpl.in

ಮಾರ್ಚ್ 31, 2023ರ ತ್ರೈಮಾಸಿಕ ಹಾಗೂ ವರ್ಷದ ಅವಧಿಗೆ ಅಂತ್ಯಗೊಂಡ ಪರಿಶೋಧಿತ ಆರ್ಥಿಕ ಫಲಿತಾಂಶಗಳ ಸ್ಟೇಟ್‌ಮೆಂಟ್

(ರೂ. ಸಾವಿರಗಳಲ್ಲಿ)

ಕ್ರ. ಸಂ.	ವಿವರಗಳು	ಮಾರ್ಚ್ 2023 ತ್ರೈಮಾಸಿಕಕ್ಕೆ ಅಂತ್ಯಗೊಂಡ	ಮಾರ್ಚ್ 2023 ವರ್ಷಕ್ಕೆ ಅಂತ್ಯಗೊಂಡ	ಮಾರ್ಚ್ 2023 ತ್ರೈಮಾಸಿಕಕ್ಕೆ ಅಂತ್ಯಗೊಂಡ	ಮಾರ್ಚ್ 2023 ವರ್ಷಕ್ಕೆ ಅಂತ್ಯಗೊಂಡ
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	54,362	2,20,929	58,630	3,19,007
2	ನಿವ್ವಳ ಲಾಭ/ (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ/ಮತ್ತು ವಿಶೇಷ ವಸ್ತುಗಳು)	4,864	20,927	(990)	24,452
3	ನಿವ್ವಳ ಲಾಭ/ (ನಷ್ಟ) ತೆರಿಗೆಯ ಅವಧಿಯ ಮುಂಚೆ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	4,864	19,685	(1,006)	24,452
4	ನಿವ್ವಳ ಲಾಭ / (ನಷ್ಟ) ತೆರಿಗೆಯ ಅವಧಿಯ ನಂತರ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	3,217	13,854	2,799	19,375
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ/(ನಷ್ಟ) ಅವಧಿಗೆ(ತೆರಿಗೆಯನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯನಂತರ)	3,217	13,854	2,799	19,375
6	ಈಕ್ವಿಟಿ ಷೇರುಬಂಡವಾಳ (ಮುಖಬೆಲೆ ರೂ.10 ಪ್ರತಿಷೇರಿಗೆ)	5969	5969	5969	5969
7	ಮೀಸಲು(ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಲೆಕ್ಕ ಪರಿಶೋಧನೆಯ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ				3,94,477
8	ಪ್ರತಿ ಷೇರಿನಗಳಿಕೆ (ಪ್ರತಿ ರೂ.10ಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರಿಸುವುದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ) 1. ಮೂಲಭೂತ: 2. ಡೈಲ್ಯೂಟೆಡ್:	0.54	2.32	0.47	3.25

ಸೂಚನೆಗಳು:

A) ಈ ಮೇಲಿನವು 31ನೇ ಮಾರ್ಚ್ 2023ರ ತ್ರೈಮಾಸಿಕ ಹಾಗೂ ವರ್ಷದ ಕೊನೆಗೊಂಡ ಆರ್ಥಿಕ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿರುತ್ತದೆ ಹಾಗೂ ಮೇ 30, 2023 ರಂದು ಲೆಕ್ಕ ಪರಿಶೋಧನಾ ಸಮಿತಿಯಿಂದ ಈ ಮೇಲ್ಕಂಡ ಫಲಿತಾಂಶಗಳು ಪುನಾರಾವಲೋಕನಗೊಂಡಿದ್ದು, ಕಂಪನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪರಿಗಣಿಸಿ, ದಾಖಲಿಸಿ, 2015ರ ಸೆಬಿಯ ನಿಯಂತ್ರಣಗಳ(ಲಿಸ್ಟಿಂಗ್ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇಯ ನಿಯಂತ್ರಣದಡಿ ಸ್ಟಾಕ್‌ಎಕ್ಸ್ಚೇಂಜ್‌ನಲ್ಲಿ ಸಲ್ಲಿಸಲಾಗಿದೆ. ಈ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತು ಕಂಪನಿಯ ವೆಬ್‌ಸೈಟ್ www.gpl.in ನಲ್ಲೂ ಲಭ್ಯವಿದೆ. B) ಕಂಪನಿಯು ಒಂದು ಸೆಗ್ಮೆಂಟ್‌ನಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತದೆ. C) ಸಂಪೂರ್ಣ ಸ್ವಾಮ್ಯದ ಅಂಗಸಂಸ್ಥೆಯಾದ ಗುಜರಾತ್ ಪಾಲಿಬ್ಯುಟೆನ್ಸ್ ಪ್ರೈವೇಟ್ ಲಿಮಿಟೆಡ್ ('GPPL') ಜೊತೆಗೆ ಗುಜರಾತ್ ಪೆಟ್ರೋಸಿಂಥೀಸ್ ಲಿಮಿಟೆಡ್ (ಕಂಪನಿ) 1ನೇ ಜುಲೈ, 2020 ರಂತೆ ನಿಗದಿತ ದಿನಾಂಕದೊಂದಿಗೆ ವಿಲೀನದ ಯೋಜನೆಯನ್ನು NCLTಯು ಸೆಪ್ಟೆಂಬರ್ 29 2022 ರಂದು ಅಂತಿಮ ಆದೇಶವನ್ನು ರವಾನಿಸುವ ಮೂಲಕ ಅನುಮೋದಿಸಿದೆ. ('ಅಂತಿಮ ಆದೇಶ'). ಇದರ ಪರಿಣಾಮವಾಗಿ, ಕಂಪನಿಯು ಈ ಲೆಕ್ಕಪರಿಶೋಧಕ ಹಣಕಾಸು ಫಲಿತಾಂಶಗಳಲ್ಲಿ GPPL ನ ಹಣಕಾಸುಗಳನ್ನು ವಿಲೀನಗೊಳಿಸಿದೆ. ನಿಗದಿತ ದಿನಾಂಕವು ಜುಲೈ 1, 2020 ಆಗಿದ್ದು, 31ನೇ ಮಾರ್ಚ್, 2022ಕ್ಕೆ ಕೊನೆಗೊಂಡ ತ್ರೈಮಾಸಿಕದ ಹಿಂದಿನ ಅವಧಿಯ ಹೋಲಿಕೆಗಳು ಮತ್ತು ವರ್ಷ 31ನೇ ಮಾರ್ಚ್, 2022ಕ್ಕೆ ಕೊನೆಗೊಂಡ ಈ ಲೆಕ್ಕಪರಿಶೋಧನೆಯ ಹಣಕಾಸು ಫಲಿತಾಂಶಗಳಲ್ಲಿ ಹೋಲಿಕೆಯ ಉದ್ದೇಶಕ್ಕಾಗಿ ಮರುಪ್ರದರ್ಶಿಸಲಾಗಿದೆ. D) ಅಗತ್ಯವಿದ್ದಲ್ಲಿ ಹೋಲಿಕೆ ಮಾಡಲು, ಹಿಂದಿನ ತ್ರೈಮಾಸಿಕ/ ಅವಧಿಯ ಅಂಕಿ ಅಂಶಗಳನ್ನು ಮರು ಸಂಗ್ರಹಿಸಲಾಗಿದೆ/ ಮರು ಜೋಡಿಸಲಾಗಿದೆ.

ಗುಜರಾತ್ ಪೆಟ್ರೋಸಿಥಿಂಸ್ ಲಿಮಿಟೆಡ್‌ನ ಪರವಾಗಿ
ಊರ್ಮಿ. ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕ
ಡಿ.ಐ.ಎನ್ : 00319482

ಸ್ಥಳ : ಬೆಂಗಳೂರು
ದಿನಾಂಕ : 30/05/2023

ನಗರದಲ್ಲಿ ಇಂದು

ಕದಳಿ ಮಹಿಳಾ ವೇದಿಕೆ ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ಪ್ರಮೀಳಾ ಗರಡಿ, ಸಿಂ.ರಾ. ಹೊನ್ನಲಿಂಗಯ್ಯ, ಅಧ್ಯಕ್ಷತೆ: ಎಂ.ಆರ್. ಪರಮೇಶ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಗೋವಿಂದರಾಜನಗರ ಘಟಕ, ಸ್ಥಳ: ಶಿವಕುಮಾರ ಸ್ವಾಮೀಜಿ ಜ್ಞಾನಸೌಧ, ಕಲ್ಯಾಣನಗರ, ಮೂಡಲಪಾಳ್ಯ, ಬೆಳಿಗ್ಗೆ 10.30

ವಿಶ್ವ ತಂಬಾಕುರಹಿತ ದಿನಾಚರಣೆ: ಉದ್ಘಾಟನೆ: ಸಿದ್ದರಾಮಯ್ಯ, ಆಯೋಜನೆ: ಕರ್ನಾಟಕ ನೋ ಫಾರ್ ಟೊಬ್ಯಾಕೊ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10.30

'ಬೆಂಗಳೂರು ಅರ್ಬನ್ ಫ್ಲಡ್' ವರದಿ ಬಿಡುಗಡೆ: ಅತಿಥಿಗಳು: ರಾಜೀವ್ ವಿಜಯ್, ಶಾಂತನು ಮಜುಂದಾರ್, ಶಿಲ್ಪಾ ಶ್ರೀ, ಸ್ಥಳ: ನೈಟ್ ಫ್ರಾಂಕ್ ಇಂಡಿಯಾ, ಎಂಬೆಸಿ ಸ್ಕ್ವೇರ್, ಇನ್‌ಫ್ಯಾಂಟ್ರಿ ರಸ್ತೆ, ಮಧ್ಯಾಹ್ನ 12

ರಂಗ ಸಂಭ್ರಮ: ಅತಿಥಿ: ಚಂದ್ರಶೇಖರ ಕಂಬಾರ, ಆಯೋಜನೆ: ಸ್ಪಂದನ, ಸ್ಥಳ: ನ್ಯಾಷನಲ್ ಹೈಸ್ಕೂಲ್ ಬಸವನಗುಡಿ, ಸಂಜೆ 5ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ನಿಧನ ವಾರ್ತೆ

ಬಸವರಾಜು

ದಾಬಸ್ ಪೇಟೆ: ಅಪಘಾತದಲ್ಲಿ ಗಾಯಗೊಂಡು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಶಿಕ್ಷಕ ಬಸವರಾಜು (47) ಮಂಗಳವಾರ ನಿಧನರಾಗಿದ್ದಾರೆ. ತಟ್ಟೇಕೆರೆ ಗ್ರಾಮದ ಇವರು, ಬಾಪೂಜಿ ನಗರ ಗ್ರಾಮದ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದರು. ಅವರಿಗೆ ತಾಯಿ, ಪತ್ನಿ ಹಾಗೂ ಸಹೋದರರು ಇದ್ದಾರೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಕಳವಳ • ನಗರದಲ್ಲಿ 38 ಪುರುಷರು, 20 ಮಹಿಳೆಯರಲ್ಲಿ ದೃಢ

ತಂಬಾಕು ಸಂಬಂಧಿತ ಕ್ಯಾನ್ಸರ್ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಂಬಾಕು ಉತ್ಪನ್ನಗಳ ಸೇವನೆಯಿಂದ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ದೃಢಪಡುತ್ತಿರುವ ಒಟ್ಟು ಕ್ಯಾನ್ಸರ್ ಪ್ರಕರಣಗಳಲ್ಲಿ ಶೇ 24ರಷ್ಟು ಪ್ರಕರಣಗಳು ತಂಬಾಕು ಸಂಬಂಧಿತ ಕ್ಯಾನ್ಸರ್ ಪ್ರಕರಣ ಆಗಿವೆ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಕಳವಳ ವ್ಯಕ್ತಪಡಿಸಿದೆ.

ಕ್ಯಾನ್ಸರ್ ಚಿಕಿತ್ಸೆಗಾಗಿ ಸಂಸ್ಥೆಗೆ ಇಲ್ಲಿನ ರೋಗಿಗಳ ಜತೆಗೆ ನೆರೆಯ ರಾಷ್ಟ್ರಗಳಾದ ಶ್ರೀಲಂಕಾ, ಬಾಂಗ್ಲಾದೇಶ, ನೇಪಾಳ ಹಾಗೂ ಪಾಕಿಸ್ತಾನದಿಂದಲೂ ರೋಗಿಗಳು ಬರುತ್ತಿದ್ದಾರೆ. ವಿಶ್ವ ತಂಬಾಕು ರಹಿತ ದಿನದ ಪ್ರಯುಕ್ತ ಸಂಸ್ಥೆಯು ತಂಬಾಕು ಸಂಬಂಧಿತ ಕ್ಯಾನ್ಸರ್ ಬಗ್ಗೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ತಂಬಾಕು ಉತ್ಪನ್ನ ಬಳಕೆಯ ಅಪಾಯದ ಬಗ್ಗೆ ಪ್ರಕಟಣೆ ಹೊರಡಿಸಿದೆ.

ಚಿಕಿತ್ಸೆಗೆ ಬರುವ ಪುರುಷರಲ್ಲಿ ಹೆಚ್ಚಿನವರು ತಂಬಾಕು ಸಂಬಂಧಿತ ಕ್ಯಾನ್ಸರ್‌ಗಳಿಗೆ ಒಳಗಾದವರಾಗಿದ್ದಾರೆ. ರಾಜ್ಯದಲ್ಲಿ ಪ್ರತಿ ವರ್ಷ ಸರಾಸರಿ 21,009 ತಂಬಾಕು ಸಂಬಂಧಿತ ಕ್ಯಾನ್ಸರ್ ಪ್ರಕರಣಗಳು ವರದಿಯಾಗುತ್ತಿವೆ ಎಂದು ಸಂಸ್ಥೆ ಹೇಳಿದೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ಬೆಂಗಳೂರು ನಗರದಲ್ಲಿ ಪ್ರತಿ ಲಕ್ಷ ಪುರುಷರಲ್ಲಿ 40 ಮಂದಿ ಹಾಗೂ ಪ್ರತಿ ಲಕ್ಷ ಮಹಿಳೆಯರಲ್ಲಿ 20 ಮಂದಿ ತಂಬಾಕು ಸಂಬಂಧಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ. ತಂಬಾಕು ಉತ್ಪನ್ನಗಳ ಸೇವನೆಯು ಬಾಯಿ, ಗಂಟಲು, ಧ್ವನಿ ಪಟ್ಟಿಗೆ, ಮಿದುಳು, ಅನ್ನನಾಳ, ಶ್ವಾಸಕೋಶ, ಪಿತ್ತಕೋಶ, ಮೂತ್ರಪಿಂಡ, ಸ್ತನ ಸೇರಿ ದೇಹದ ವಿವಿಧ ಅಂಗಗಳ ಕ್ಯಾನ್ಸರ್‌ಗೆ ಕಾರಣವಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದೆ.

ತಂಬಾಕು ಉತ್ಪನ್ನಗಳ ಸೇವನೆಯಿಂದ ಹೃದಯ ಕಾಯಿಲೆ, ಶ್ವಾಸಕೋಶದ ಸಮಸ್ಯೆ, ಪಾರ್ಶ್ವವಾಯು, ಕುರುಡುತನ, ಹಲ್ಲು ಮತ್ತು ಒಸಡಿನ ಸಮಸ್ಯೆ ಸೇರಿ ವಿವಿಧ ಕಾಯಿಲೆಗಳು ಬರುವ ಸಾಧ್ಯತೆಗಳಿವೆ ಎಂದು ಸಂಸ್ಥೆ ಹೇಳಿದೆ.

ಸಂಸ್ಥೆಯಲ್ಲಿನ ತಂಬಾಕು ಸಂಬಂಧಿತ ಕ್ಯಾನ್ಸರ್ ಪ್ರಕರಣ (2022)

ಪ್ರಕಾರ	ಪುರುಷರು	ಪ್ರಮಾಣ (%)	ಮಹಿಳೆಯರು	ಪ್ರಮಾಣ (%)
ಬಾಯಿ ಕ್ಯಾನ್ಸರ್	760	31.3	626	56.3
ಗಂಟಲು ಕ್ಯಾನ್ಸರ್	710	29.2	92	8.3
ಅನ್ನನಾಳ ಕ್ಯಾನ್ಸರ್	287	6.1	219	19.7
ಶ್ವಾಸಕೋಶ ಕ್ಯಾನ್ಸರ್	380	15.6	129	11.6
ಧ್ವನಿಪಟ್ಟಿಗೆ ಕ್ಯಾನ್ಸರ್	226	9.3	24	2.2
ಮೂತ್ರಪಿಂಡ ಕ್ಯಾನ್ಸರ್	69	2.8	22	2.0

ಬಾಯಿ ಕ್ಯಾನ್ಸರ್ ಪ್ರಕರಣ ಅಧಿಕ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ 2022ರಲ್ಲಿ 10,496 ಕ್ಯಾನ್ಸರ್ ಪ್ರಕರಣಗಳು ವರದಿಯಾಗಿವೆ. ಇವುಗಳಲ್ಲಿ 3,544 ಪ್ರಕರಣಗಳು ತಂಬಾಕು ಸಂಬಂಧಿತ ಕ್ಯಾನ್ಸರ್ ಪ್ರಕರಣಗಳಾಗಿವೆ. ಇವುಗಳಲ್ಲಿ 2,432 ಪುರುಷರು ಹಾಗೂ 1,112 ಮಹಿಳೆಯರಾಗಿದ್ದಾರೆ. ಹೆಚ್ಚಿನವರು ಬಾಯಿಯ ಕ್ಯಾನ್ಸರ್‌ಗೆ ಒಳಗಾಗಿದ್ದಾರೆ.

2022ರಲ್ಲಿ ಸಂಸ್ಥೆಯಲ್ಲಿ ವರದಿಯಾದ ಪ್ರಕರಣಗಳ ಪ್ರಕಾರ ಪುರಷರಲ್ಲಿ ಕಾಣಿಸಿಕೊಂಡ ವಿವಿಧ ಕ್ಯಾನ್ಸರ್ ಪ್ರಕರಣಗಳಲ್ಲಿ ಶೇ 51.4ರಷ್ಟು ಪ್ರಕರಣಗಳು ತಂಬಾಕು ಸಂಬಂಧಿತ ಕ್ಯಾನ್ಸರ್ ಪ್ರಕರಣಗಳಾಗಿವೆ. ಮಹಿಳೆಯರಲ್ಲಿ ಈ ಪ್ರಮಾಣ ಶೇ 19.2ರಷ್ಟಿದೆ.

2022ರಲ್ಲಿ ಬೆಂಗಳೂರಿನ ವಿವಿಧ ಆಸ್ಪತ್ರೆಗಳಿಂದ 15,827 ಕ್ಯಾನ್ಸರ್ ಪ್ರಕರಣಗಳು ದೃಢಪಟ್ಟಿವೆ. ಇವುಗಳಲ್ಲಿ 3,821 ಪ್ರಕರಣಗಳು ತಂಬಾಕು ಸಂಬಂಧಿತ ಕ್ಯಾನ್ಸರ್ ಪ್ರಕರಣಗಳಾಗಿವೆ ಎಂದು ಸಂಸ್ಥೆ ತಿಳಿಸಿದೆ.

ಶಾಸ್ತ್ರೀಯ ಕನ್ನಡ ಡಿಪ್ಲೊಮಾಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದಯಭಾನು ಉನ್ನತ ಅಧ್ಯಯನ ಕೇಂದ್ರದಿಂದ 'ಶಾಸ್ತ್ರೀಯ ಕನ್ನಡ ಡಿಪ್ಲೊಮಾ' ತರಗತಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

9 ತಿಂಗಳ ಕನ್ನಡ ಡಿಪ್ಲೊಮಾ ಕೋರ್ಸ್‌ಗೆ ಎಸ್ಸೆಸ್ಸೆಲ್ಸಿ ತೇರ್ಗಡೆಯಾದ ಆಸಕ್ತರು ಅರ್ಜಿ ಸಲ್ಲಿಸಬಹುದು. ಈ ಕೋರ್ಸ್‌ನಲ್ಲಿ ಹಳೆಗನ್ನಡ ಸಾಹಿತ್ಯ, ಮಧ್ಯಕಾಲಿನ ಸಾಹಿತ್ಯ, ಶಾಸ್ತ್ರೀಯ ಕನ್ನಡ ಚರಿತ್ರೆ, ವ್ಯಾಕರಣ ಮತ್ತು ಛಂದಸ್ಸು ವಿಷಯಗಳನ್ನು ಬೋಧಿಸಲಾಗುತ್ತದೆ. ಜುಲೈ ಮೊದಲ ವಾರದಿಂದ ಆನ್‌ಲೈನ್ ಮತ್ತು ಆಫ್‌ಲೈನ್ ತರಗತಿಗಳು ಪ್ರಾರಂಭವಾಗಲಿವೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 080-26609343/26601831, 9448671049



ಹೊಸ ಸಂಸತ್ ಭವನ!

ವಿದ್ಯಾರ್ಥಿನಿಲಯ ಪ್ರವೇಶಕ್ಕೆ ಆನ್‌ಲೈನ್ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023-24ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಬಾಲಕರ ಹಾಗೂ ಬಾಲಕಿಯರ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುವ ವಿದ್ಯಾರ್ಥಿನಿಲಯಗಳಿಗೆ ಆಸಕ್ತ ವಿದ್ಯಾರ್ಥಿಗಳು ಜೂನ್ 15ರೊಳಗೆ https://shp.karnataka.gov.in/ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅಶ್ವತ್ಥನಾರಾಯಣ ವಿರುದ್ಧದ ಎಫ್‌ಐಆರ್‌ಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉರಿಗೌಡ, ನಂಜೇಗೌಡರು ಟಿಪ್ಪುವನ್ನು ಮುಗಿಸಿದಂತೆ ಸಿದ್ದರಾಮಯ್ಯ ಅವರನ್ನೂ ಮುಗಿಸಬೇಕು' ಎಂಬ ಹೇಳಿಕೆಗೆ ಸಂಬಂಧಿಸಿದಂತೆ ಮಾಜಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗೆ ಹೈಕೋರ್ಟ್ ನಾಲ್ಕು ವಾರಗಳ ತಡೆ ನೀಡಿದೆ.

ಈ ಸಂಬಂಧ ಅಶ್ವತ್ಥನಾರಾಯಣ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಪ್ರಭುಲಿಂಗ ಕೆ. ನಾವದಗಿ, 'ಪ್ರಕರಣಕ್ಕೆ ಸಂಬಂಧಿಸಿದಂತೆ 2023 ರ ಫೆಬ್ರುವರಿ 17ರಂದು ಡಾ. ಬಿ. ಜಿ. ವಿಜಯಕುಮಾರ್ ಮತ್ತು ಆರ್. ಮೂರ್ತಿ ಎಂಬುವರು ದೂರು ನೀಡಿದ್ದು, ಪೊಲೀಸರು ಎನ್‌ಸಿಆರ್ ನೀಡಿದ್ದಾರೆ. ಏಪ್ರಿಲ್ 24 ರಂದು ಕವಿತಾ ಕಾಳೆ ಎಂಬುವರೂ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಮತ್ತೊಂದು ದೂರು ನೀಡಿದ್ದಾರೆ. ಪೊಲೀಸರು ಈ ದೂರಿಗೂ ಎನ್ ಸಿ ಆರ್ ನೀಡಿದ್ದಾರೆ. ಆದರೆ, ಪುನಃ ಇದೇ ದೂರನ್ನು ಪ್ರಸ್ತಾಪಿಸಿ ಮೇ 24 ರಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ನೀಡಿರುವ ದೂರು ಆಧರಿಸಿ ಮೈಸೂರಿನ ದೇವರಾಜ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ' ಎಂದರು.

'ಅಶ್ವತ್ಥನಾರಾಯಣ ಹೇಳಿಕೆ ನೀಡಿದ್ದಾರೆ ಎನ್ನಲಾದ ಸಭೆಯಲ್ಲಿ ಲಕ್ಷ್ಮಣ್ ಭಾಗಿಯಾಗಿಲ್ಲ. ಸಭೆಗೆ ಸಂಬಂಧಿಸಿದ ಆಡಿಯೊ, ವಿಡಿಯೊ ಅಥವಾ ಸುದ್ದಿ ತುಣುಕುಗಳನ್ನೂ ಅವರು ಹಾಜರುಪಡಿಸಲಾಗಿಲ್ಲ. ಏತನ್ಮಧ್ಯೆ, ಹೇಳಿಕೆಗೆ ಸಂಬಂಧಿಸಿದಂತೆ ಸದನದಲ್ಲಿ ಚರ್ಚೆಯಾಗಿ, ಸ್ಪಷ್ಟನೆ ನೀಡಲಾಗಿದೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

'ಸರ್ಕಾರ ಬದಲಾದ ಮಾತ್ರಕ್ಕೆ ಪೊಲೀಸರು ಈ ರೀತಿ ನಡೆದುಕೊಳ್ಳಲು ಆಗದು. ಮೊದಲ ಎರಡು ಎನ್‌ಸಿಆರ್ ಮುಕ್ತಾಯಗೊಳಿಸಿರುವುದಕ್ಕೆ ಸಂಬಂಧಿಸಿದಂತೆ ಪೊಲೀಸರು ಮಾಹಿತಿ ಒದಗಿಸಬೇಕು. ತನಿಖೆಗೆ ತಡೆ ನೀಡಬೇಕು' ಎಂದು ಮನವಿ ಮಾಡಿದರು. ಇದಕ್ಕೆ ರಾಜ್ಯ ಸರ್ಕಾರದ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿದರಾದರೂ, ನ್ಯಾಯಪೀಠ ತನಿಖೆಗೆ ನಾಲ್ಕು ವಾರಗಳ ತಡೆ ನೀಡಿತು. ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಚಿತ್ರಾವಳಿ

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರ ಆಶೀರ್ವಾದವನ್ನು ಮಂಗಳವಾರ ಪಡೆದುಕೊಂಡರು

ನಗರಾಭಿವೃದ್ಧಿ ಸಚಿವರಾಗಿ ಅಧಿಕಾರ ವಹಿಸಿಕೊಂಡ ಬೆನ್ನಲ್ಲೇ ಬೈರತಿ ಸುರೇಶ್ ಅವರು ಭುವನೇಶ್ವರಿ ನಗರ ಮುಖ್ಯರಸ್ತೆಯಿಂದ ಬಾಬುರೆಡ್ಡಿ ಲೇಔಟ್‌ವರೆಗೆ ಕಾಂಕ್ರೀಟ್ ಒಳಚರಂಡಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗೆ ಮಂಗಳವಾರ ಭೂಮಿ ಪೂಜೆ ನೆರವೇರಿಸಿದರು. ಪಾಲಿಕೆ ಮಾಜಿ ಸದಸ್ಯ ಅಬ್ದುಲ್ ವಾಜೀದ್ ಇದ್ದರು

ವೇದಾಧ್ಯಾಯಿ ಸುಧಾಕರ ಶರ್ಮಾ ಅವರ ಸ್ಮರಣಾರ್ಥ ಇತ್ತೀಚೆಗೆ ನಡೆದ ಜ್ಞಾನ ಸಂಗೋಷ್ಠಿ ಕಾರ್ಯಕ್ರಮದಲ್ಲಿ 'ವೇದಗಳು ಆಧಾರಿತ 100 ಹಿತನುಡಿಗಳು' ಎನ್ನುವ 3 ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಮೈತ್ರಿ ಪ್ರತಿಷ್ಠಾನದ ಅಮೃತವರ್ಷಿಣಿ, ಉಮೇಶ್, ವಿಶ್ವನಾಥ ಶರ್ಮಾ, ರೋಹಿತ್ ಚಕ್ರತೀರ್ಥ, ಸುರೇಶ ಇದ್ದಾರೆ

ಕಿರುನಾಟಕೋತ್ಸವ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವರ ಥಿಯೇಟರ್ ಮತ್ತು ಅಶ್ವಘೋಷ ಥಿಯೇಟರ್ ಟ್ರಸ್ಟ್ ಜಂಟಿಯಾಗಿ 'ಬೆಂಗಳೂರು ಕಿರುನಾಟಕೋತ್ಸವ' ಹಮ್ಮಿಕೊಂಡಿದ್ದು, ತಂಡಗಳ ನೋಂದಣಿಗೆ ಜೂನ್ 17 ಕೊನೆಯ ದಿನವಾಗಿದೆ.

'ಕನ್ನಡವೆಂದರೆ' ನಾಟಕೋತ್ಸವದ ವಿಷಯವಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ತಂಡಗಳು ಈ ವಿಷಯದ ಮೇಲೆ ನಾಟಕಗಳನ್ನು ಪ್ರದರ್ಶಿಸಬೇಕಿದೆ. ಪ್ರಾಥಮಿಕ ಸ್ಪರ್ಧೆ ಜೂನ್ 25 ಹಾಗೂ ಅಂತಿಮ ಹಂತದ ಸ್ಪರ್ಧೆ ಜುಲೈ 2ರಂದು ನಡೆಯಲಿದೆ.

ಅತ್ಯುತ್ತಮ ನಾಟಕ ಪ್ರಶಸ್ತಿ ತೀರ್ಪುಗಾರರ ಹಾಗೂ ಪ್ರೇಕ್ಷಕರ ಆಯ್ಕೆ ಪ್ರತ್ಯೇಕ ಇರಲಿದ್ದು, ಫಲಕ ಹಾಗೂ ತಲಾ ₹ 10 ಸಾವಿರ ನಗದು ಒಳಗೊಂಡಿದೆ. ಅತ್ಯುತ್ತಮ ನಿರ್ದೇಶನ, ಸಂಚಾರಿ ವಿಜಯ್ ಗೌರವಾರ್ಥ ಅತ್ಯುತ್ತಮ ನಟ, ಅತ್ಯುತ್ತಮ ನಟಿ ಪ್ರಶಸ್ತಿಗಳು ಫಲಕಗಳನ್ನು ಒಳಗೊಂಡಿವೆ. ಅತ್ಯುತ್ತಮ ಕಥೆ, ಅತ್ಯುತ್ತಮ ಪ್ರಚಾರ ವಿನ್ಯಾಸ ಹಾಗೂ ಅತ್ಯುತ್ತಮ ಭಿತ್ತಿಚಿತ್ರ ವಿನ್ಯಾಸ ಪ್ರಶಸ್ತಿಗಳು ಫಲಕದ ಜತೆಗೆ ತಲಾ ₹ 2,500 ನಗದು ಹೊಂದಿವೆ.

ಭಾಗವಹಿಸುವ ಪ್ರತಿ ತಂಡಕ್ಕೂ ರಂಗಸಜ್ಜಿಕೆಯ ಸಮಯ ಸೇರಿ 15 ನಿಮಿಷ ನೀಡಲಾಗುತ್ತದೆ. ನಾಟಕ ಪ್ರದರ್ಶನ ಕನಿಷ್ಠ 10 ನಿಮಿಷವಿರಬೇಕು. ಭಾಗವಹಿಸುವ ಪ್ರತಿ ತಂಡದಲ್ಲೂ ರಂಗದಮೇಲೆ ಕನಿಷ್ಠ ಇಬ್ಬರು ಹಾಗೂ ಗರಿಷ್ಠ 8 ಕಲಾವಿದರು ಇರಬೇಕು. ರಂಗತಂಡಗಳು ಮತ್ತು ರಂಗಕರ್ಮಿಗಳು ನೋಂದಾಯಿಸಿಕೊಳ್ಳಬಹುದು. ಬೆಂಗಳೂರು ಹೊರತುಪಡಿಸಿ ಬೇರೆ ಜಿಲ್ಲೆಗಳಿಂದ ಸ್ಪರ್ಧಿಸುವ ತಂಡಗಳಿಗೆ ಪ್ರಾಥಮಿಕ ಹಂತದ ಸ್ಪರ್ಧೆ ಆನ್‌ಲೈನ್‌ನಲ್ಲಿ ನಡೆಯಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಪ್ರತಿ ತಂಡ ₹ 1 ಸಾವಿರ ಪ್ರವೇಶ ದರವನ್ನು ಪಾವತಿಸಬೇಕು. ಅಂತಿಮ ಸುತ್ತಿಗೆ ಆಯ್ಕೆಯಾಗದ ತಂಡಗಳಿಗೆ ಪ್ರವೇಶ ದರವನ್ನು ಹಿಂತಿರುಗಿಸಲಾಗುತ್ತದೆ. ಅಂತಿಮ ಹಂತದ ಸ್ಪರ್ಧೆಗೆ 6 ತಂಡಗಳನ್ನು ಮಾತ್ರ ಆಯ್ಕೆ ಮಾಡಲಾಗುತ್ತದೆ. ಮೊದಲ ಹಂತದ ಆಯ್ಕೆ ಪ್ರಕ್ರಿಯೆ ಹಾಗೂ ಅಂತಿಮ ಹಂತದ ಸ್ಪರ್ಧೆ ಬೆಂಗಳೂರಿನ ಕೆ.ಎಚ್. ಕಲಾಸೌಧದಲ್ಲಿ ನಡೆಯಲಿದೆ ಎಂದು ಹೇಳಿದ್ದಾರೆ.

ವಿವರಕ್ಕೆ: 9902590303 ಅಥವಾ 9686869676

ಕಸಾಪದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಯಶವಂತಪುರ ವಿಧಾನಸಭೆ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2022-23ನೇ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕ ಪಡೆದ ವಿದ್ಯಾರ್ಥಿಗಳು, ಪಿಯುಸಿ ಪರೀಕ್ಷೆಯ ಕನ್ನಡ ವಿಷಯದಲ್ಲಿ ಹೆಚ್ಚು ಅಂಕ ಪಡೆದ ಯಶವಂತಪುರ ವಿಧಾನಸಭೆ ವ್ಯಾಪ್ತಿಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಹ ವಿದ್ಯಾರ್ಥಿಗಳು ಅಂಕಪಟ್ಟಿಯ ನಕಲು ಪ್ರತಿಯೊಂದಿಗೆ ಸ್ವತಃ ಅರ್ಜಿ ಬರೆದು ಪೂರ್ಣ ವಿಳಾಸ ಹಾಗೂ ದೂರವಾಣಿ ಸಂಖ್ಯೆಯೊಂದಿಗೆ ಜೂನ್ 20ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಸಲ್ಲಿಸುವ ವಿಳಾಸ: ಎಚ್. ಎಸ್. ಸುಧೀಂದ್ರ ಕುಮಾರ್ ಅಧ್ಯಕ್ಷರು; ಯಶವಂತಪುರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಎಲ್. ಐ. ಜಿ. 91, 9ನೇ ಅಡ್ಡರಸ್ತೆ. ಹೊಯ್ಸಳ ವೃತ್ತದ ಸಮೀಪ. ಕೆಂಗೇರಿ ಉಪನಗರ. ಬೆಂಗಳೂರು-560060.

ಮಂಗಳಾ ಸಮೂಹ ಸಂಸ್ಥೆ: ದಾಖಲಾತಿ ಆರಂಭ

ಮಂಗಳೂರು: ಕಳೆದ ಶೈಕ್ಷಣಿಕ ವರ್ಷದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದಿಂದ 24 ರ್‍ಯಾಂಕ್‌ಗಳನ್ನು ಪಡೆದಿರುವ, ಕರ್ನಾಟಕ ರಾಜ್ಯದ ಪ್ಯಾರ ಮೆಡಿಕಲ್ ಮತ್ತು ಅಲೈಡ್ ಹೆಲ್ತ್ ಸೈನ್ಸ್‌ನ ಅತ್ಯುತ್ತಮ ಕಾಲೇಜುಗಳಲ್ಲಿ ಒಂದು ಎಂದು ಪ್ರಸಿದ್ಧಿ ಪಡೆದ ಮಂಗಳಾ ಸಮೂಹ ವಿದ್ಯಾ ಸಂಸ್ಥೆಗಳಲ್ಲಿ 2023-24ನೇ ಸಾಲಿನ ದಾಖಲಾತಿ ಆರಂಭವಾಗಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಪ್ಯಾರ ಮೆಡಿಕಲ್ ಕೋರ್ಸ್‌ಗಳ ಬಹುತೇಕ ಎಲ್ಲಾ ವಿಭಾಗದ ಡಿಪ್ಲೊಮಾಗಳು, ಅಲೈಡ್ ಹೆಲ್ತ್ ಸೈನ್ಸ್ ವಿಭಾಗದ ಲ್ಯಾಬ್ ಟೆಕ್ನಾಲಜಿ, ಇಮೆಜಿಂಗ್ ಟೆಕ್ನಾಲಜಿ, ಅನಸ್ಥೆಸಿಯ ಮತ್ತು ಅಪರೇಶನ್ ಥಿಯೇಟರ್ ಟೆಕ್ನಾಲಜಿ, ರೀನಲ್ ಡಯಾಲಿಸಿಸ್ ಟೆಕ್ನಾಲಜಿ, ಓಪ್ಟೊಮೆಟ್ರಿ, ಎಮರ್ಜೆನ್ಸಿ ಮತ್ತು ಟ್ರೋಮಾ ಕೇರ್ ಟೆಕ್ನಾಲಜಿ, ರೆಸ್ಪಿರೇಟರ್ ಕೇರ್ ಟೆಕ್ನಾಲಜಿ ಮತ್ತು ಹಾಸ್ಪಿಟಲ್ ಅಡ್ಮಿನಿಸ್ಟ್ರೇಷನ್ ಅಲ್ಲದೆ ನರ್ಸಿಂಗ್ ಕೋರ್ಸ್‌ಗಳಾದ ಜಿಎನ್‌ಎಂ, ಬಿಎಸ್‌ಸಿ, ಎಂಎಸ್‌ಸಿ ಪದವಿಗಳಿಗೆ ದಾಖಲಾತಿ ಪಡೆಯಬಹುದು.

ಫಿಸಿಯೋಥೆರಪಿ ಮತ್ತು ಸ್ಪೀಚ್ ಆ್ಯಂಡ್ ಹಿಯರಿಂಗ್ ಕೋರ್ಸುಗಳು ಅಲ್ಲದೆ ಅಲೈಡ್ ಹೆಲ್ತ್ ಸೈನ್ಸ್ ಸ್ನಾತಕೋತ್ತರ ಕೋರ್ಸುಗಳಾದ ಎಂಎಸ್‌ಸಿ ಹೆಮಟಾಲಜಿ ಆ್ಯಂಡ್ ಬ್ಲಡ್ ಟ್ರಾನ್ಸ್‌ಫ್ಯೂಶನ್, ಮೈಕ್ರೋಬಯಾಲಜಿ, ಬಯೋಕೆಮಿಸ್ಟ್ರಿ, ಎಂಎಸ್‌ಸಿ ರೀನಲ್ ಡಯಾಲಿಸಿಸ್, ಎಂಎಸ್‌ಸಿ ಒಪ್ಟೊಮೆಟ್ರಿ ಕೋರ್ಸ್‌ಗಳಿಗೆ ದಾಖಲಾತಿ ಆರಂಭವಾಗಿದೆ ಎಂದು ಸಂಸ್ಥೆಯ ಸ್ಥಾಪಕಾಧ್ಯಕ್ಷ ಡಾ. ಗಣಪತಿ ಪಿ. ಮತ್ತು ಉಪಾಧ್ಯಕ್ಷರಾದ ಡಾ. ಅನಿತಾ ಜಿ. ಭಟ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದೇಶದಿಂದಲೂ ವಿದ್ಯಾರ್ಥಿಗಳು: 2004ರಲ್ಲಿ ಆರಂಭವಾದ ಈ ಸಂಸ್ಥೆಯಲ್ಲಿ ಕಲಿತ ಸಾವಿರಾರು ವಿದ್ಯಾರ್ಥಿಗಳು ವಿವಿಧ ದೇಶಗಳಲ್ಲಿ ಜೀವನ ರೂಪಿಸಿಕೊಂಡು ತೃಪ್ತರಾಗಿ ಬದುಕುತ್ತಿದ್ದಾರೆ. ಜೊತೆಗೆ ದೇಶವಿದೇಶಗಳಿಂದ ವಿದ್ಯಾರ್ಥಿಗಳು ಬಂದು ಇಲ್ಲಿ ವಿದ್ಯಾರ್ಜನೆ ಮಾಡುತ್ತಾರೆ. ಅತ್ಯುತ್ತಮ ಲ್ಯಾಬ್‌ಗಳು, ವಿವಿಧ ವಿಭಾಗಗಳಿಗೆ ಬೇಕಾಗುವ ಸಕಲ ಸೌಲಭ್ಯಗಳು, ಅನುಭವಿ ಶಿಕ್ಷಕ ವರ್ಗ, ಬದ್ಧತೆಯುಳ್ಳ ಸಿಬ್ಬಂದಿಯ ಅವಿರತ ಶ್ರಮದಿಂದ ಸಂಸ್ಥೆ ಈ ಎತ್ತರಕ್ಕೆ ಏರಲು ಸಾಧ್ಯವಾಗಿದೆ.

ಭಾರತದ ಶಿಖರ ರಾಜ್ಯಗಳಾದ ಲೇಹ್ ಲಡಾಕ್, ಜಮ್ಮು ಕಾಶ್ಮೀರ ಹಾಗೂ ಅಂಡಮಾನ್ ಮತ್ತು ಲಕ್ಷದ್ವೀಪ ಸಮೂಹ ಸೇರಿದಂತೆ ದೇಶದ ವಿವಿಧ ಭಾಗಗಳ ಸುಮಾರು 700ರಷ್ಟು ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಅಲ್ಲದೆ ನೆರೆಯ ಭೂತಾನ್, ನೇಪಾಳ, ಶ್ರೀಲಂಕಾದಿಂದ ಬಂದಿರುವ ವಿದ್ಯಾರ್ಥಿಗಳು ವಿದ್ಯಾಭ್ಯಾಸ ನಿರತರಾಗಿದ್ದಾರೆ. ಕಳೆದ ಹಲವು ವರ್ಷಗಳಿಂದ ಸಂಸ್ಥೆಯ ವಿದ್ಯಾರ್ಥಿಗಳು ಸತತವಾಗಿ ರಾಜೀವ್ ಗಾಂಧಿ ಆರೋಗ್ಯ ವಿ.ವಿ.ಯಿಂದ ರ್‍ಯಾಂಕ್‌ಗಳನ್ನು ಪಡೆಯುತ್ತಿದ್ದಾರೆ.

ಪ್ರವೇಶದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮೊಬೈಲ್: 9449599233, 9632124717 ಅಥವಾ ಕಾಲೇಜಿನ ವೆಬ್ ಸೈಟ್ www.mangalacollege.org ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



JOIN INDIAN NAVY

Indian Navy invites online applications from unmarried male and unmarried female candidates (who fulfil eligibility conditions as laid down by the Government of India) for Agniveer 02/2023 (Nov 23) Batch

Entry	Educational Qualification	Vacancies	Born Between (Both Date Inclusive)
AGNIVEER (Senior Secondary Recruit)	Qualified in 10+2 examination with Maths & Physics and at least one of these subjects:- Chemistry/ Biology/ Computer Science from the Boards of School Education recognised by Ministry of Education, Govt. of India	1365 (including a maximum of 273 female)	01 Nov 2002 to 30 Apr 2006
AGNIVEER (Matric Recruit)	Passed Matriculation Examination from the Boards of School Education recognised by Ministry of Education, Govt. of India	100 (including a maximum of 20 female)	

Last Date for submission of online application is 15 Jun 23

For eligibility criteria and details for the batch, visit www.joinindiannavy.gov.in and Employment News dated 27 May 23.

For queries contact Help Desk: Email - support-in@cdac.in
Telephone - +91 9363322818, 011 21410669

Scan this QR Code to apply online

CBC10701/13/0005/2324

‘ಲೈಂಗಿಕ ಅಲ್ಪಸಂಖ್ಯಾತರಿಗೆ ರಾಜಕೀಯ ಪ್ರಾತಿನಿಧ್ಯ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ಅಲ್ಪಸಂಖ್ಯಾತರಿಗೆ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂದು ಲಿಂಗತ್ವ ಅಲ್ಪಸಂಖ್ಯಾತರ ಪರ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಹಾಗೂ ನಯನ ಜೆ. ಸೂಡ, ರಾಜಗುರು ಹೊಸಕೋಟೆ ಸೇರಿದಂತೆ ಹಲವರು ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಅವರು, 'ಅಂತರಲಿಂಗಿ, ಲಿಂಗತ್ವ ಹಾಗೂ ಲೈಂಗಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಪಾರಂಪರಿಕ ನೆಲೆಗಟ್ಟುಗಳನ್ನು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಅಡಿಯಲ್ಲಿ ನೀಡಿರುವ ಆಶೋತ್ತರಗಳನ್ನು ಈಡೇರಿಸಲು ರಾಜಕೀಯ ಪ್ರಾತಿನಿಧ್ಯ ಒದಗಿಸಬೇಕು' ಎಂದು ತಿಳಿಸಿದ್ದಾರೆ.

'ವಿಧಾನಸಭೆ, ವಿಧಾನ ಪರಿಷತ್ತು, ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಜನಪ್ರತಿನಿಧಿಗಳು ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಬಗ್ಗೆ ಜ್ಞಾನವಿಲ್ಲದೇ ಮಾತನಾಡುತ್ತಿದ್ದಾರೆ. ಈ ಸಮುದಾಯದ ಬಗ್ಗೆ ಪೂರ್ವಾಗ್ರಹ ಪೀಡಿತರಾಗಿದ್ದಾರೆ' ಎಂದು ದೂರಿದರು.

'ಈ ಸಮುದಾಯದವು ಲಿಂಗತ್ವದ ಆಧಾರದ ಮೇಲೆ ಸಾಮಾಜಿಕ ಬಹಿಷ್ಕಾರ ಹಾಗೂ ತಾರತಮ್ಯ, ಶೋಷಣೆಗಳಿಗೆ ಗುರಿಯಾಗಿದೆ. ಆದರೆ, 2018ರಲ್ಲಿ ಸುಪ್ರೀಂ ಕೋರ್ಟ್ ಲೈಂಗಿಕ ಅಲ್ಪಸಂಖ್ಯಾತರು ಸೇರಿದಂತೆ ಎಲ್ಲರೂ ಸಂವಿಧಾನದ ಮುಂದೆ ಸಮಾನರಾಗಿದ್ದಾರೆ ಎಂದು ನೀಡಿದ ತೀರ್ಪು ಆಶಾದಾಯಕವಾಗಿದೆ. ಆದ್ದರಿಂದ, ಈ ಸಮುದಾಯದ ಅಭಿವೃದ್ಧಿಗೆ ರಾಜಕೀಯ ಪ್ರಾತಿನಿಧ್ಯ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

ಶ್ರೀ ಶಂಭುಲಿಂಗೇಶ್ವರ ರೆಸಿಡೆನ್ಸಿಯಲ್ ಸ್ಕೂಲ್ & ಪಿಯು ಕಾಲೇಜು

ದಾಖಲಾತಿ ಪ್ರಾರಂಭ 2023-24

5th-PUC | ಹಾಸ್ಟೆಲ್ ಸೌಲಭ್ಯ ಬಾಲಕ & ಬಾಲಕಿಯರಿಗೆ

SCIENCE JEE, NEET, CET & CA
COMMERCE ಸಂಯೋಜಿತ ಕಲಿಕ ತರಗತಿಗಳು..

OUR ACHIEVERS
2020-21 Kusuma B P 619-99%
2021-22 Rakshashree Y M 614-98%
2022-23 Deekshita K M 585-94%

ಎಸ್.ಎಸ್.ಎಲ್.ಸಿ ಟಾಪರ್‌ಗಳಿಗೆ ಶುಲ್ಕ ರಿಯಾಯಿತಿ

ಕನಿಷ್ಠ ಫಲಿತಾಂಶ	97%	96%	95%	90%
ಶುಲ್ಕ ರಿಯಾಯಿತಿ	ಉಚಿತ	50%	40%	30%

ಜಯಂತಿನಗರ, ಪಾಂಡವಪುರ ತಾ, ಮಂಡ್ಯ ಜಿಲ್ಲೆ

ದೂ:+91 7338138083

Academic Partner EXTRAMARKS

www.ssetrust.org.in Follow us on:



‘ಎನ್.ವಿ.ಎಸ್-01’ ಉಪಗ್ರಹವನ್ನು ಹೊತ್ತು ಗಗನಕ್ಕೇರುತ್ತಿರುವ ಜಿ.ಎಸ್.ಎಲ್.ವಿ

ಚಿತ್ರಕೃಪೆ: ಇಸ್ರೊ

ಜೈವಿಕ ವಿಜ್ಞಾನದ ಇಂದು ನಾಳೆಗಳು

ಜೈವಿಕತಂತ್ರಜ್ಞಾನದ ಅನ್ವಯಗಳಲ್ಲಿ, ಈಗ ಸುದ್ದಿಯಲ್ಲಿರುವುದು ಸಂಶ್ಲೇಷಿತ ಜೀವವಿಜ್ಞಾನ, ಹೊಸ ಬಗೆಯ ಕೋಶೀಯ ಹಾಗೂ ವಂಶವಾಹಿ ಚಿಕಿತ್ಸೆಗಳು, ಇತರ ಪ್ರಾಣಿಗಳಿಂದ ತೆಗೆದ ಅಂಗಾಂಗಗಳನ್ನು, ಯಾವುದೇ ಸಮಸ್ಯೆಯಾಗದಂತೆ ಮಾನವನೊಳಗೆ ಕಸಿಮಾಡಲು ಬೇಕಾದ ತಂತ್ರಜ್ಞಾನದ ತಯಾರಿ ಇವೇ ಮೊದಲಾದವು.



ಕ್ಷಮಾ ವಿ. ಭಾನುಪ್ರಕಾಶ್

ಪ್ರಕೃತಿಯಿಂದ ಕಲಿಯಬೇಕಾದ ಪಾಠಗಳಿಗೆಂದಾದರೂ ಕೊನೆ ಉಂಟೆ? ಅದರಲ್ಲೂ, ಈಗಿನ ದಿನಮಾನದಲ್ಲಿ ಎಲ್ಲವೂ ದ್ವಿಮಾನವೇ ಆಗಿರಬೇಕು ಎಂಬಂತಹ ಮನಃಸ್ಥಿತಿ. ಸರಿ ಅಥವಾ ತಪ್ಪು, ಎಡ ಅಥವಾ ಬಲ ಹೀಗೆ. ಆದರೆ, ನಿಸರ್ಗವು ಮನುಷ್ಯ ಉತ್ಪಾದಿತ ದ್ವಿಮಾನ ಪದ್ಧತಿಯಂತೆ 1 ಅಥವಾ 0 ಎಂಬಂತಹ ಸಿದ್ಧಾಂತಕ್ಕೆ ಬದ್ಧವಾಗಿಲ್ಲ. ನೈಸರ್ಗಿಕವಾಗಿಯೇ ಹೆಣ್ಣು, ಗಂಡು ಮತ್ತು ತೃತೀಯ ಲಿಂಗಿಯ ಸೃಷ್ಟಿ ಸಾಧ್ಯ, ಹಳದಿಹೂವು, ಕೆಂಪುಹೂವು ಬಿಡುವ ಜಾತಿಯ ಸಸ್ಯದಲ್ಲಿ ಹಳದಿ-ಕೆಂಪು ಮಿಶ್ರಿತ ಹೂವುಗಳು ಬಿಡುವುದೂ ಸಾಧ್ಯ. ಇದು ಮಾತ್ರ ಸರಿ, ಅದು ತಪ್ಪೇ ತಪ್ಪು ಎಂದು ಭೇದ ಮಾಡುತ್ತಾ ಕೂಡುವ ಜಾಯಮಾನವಲ್ಲ ಪ್ರಕೃತಿಮಾತೆಯದ್ದು. ಪ್ರತಿನಿತ್ಯದ ಜೀವನದಲ್ಲೂ ಸಮಸ್ಯೆಗಳನ್ನು ಪರಿಹರಿಸಲು ಒಂದೇ ನಿಟ್ಟಿನಲ್ಲಿ ಯೋಚಿಸಿದರೆ ಸಾಧ್ಯವಾಗದಿರಬಹುದು. ಹಲವು ಬಗೆಯ ಯೋಚನೆ-ಯೋಜನೆಗಳು ಒಟ್ಟಾಗಿ ಕಾರ್ಯನಿರ್ವಹಿಸಿದಾಗ, ಪರಿಹಾರ ಸಾಧ್ಯ. ವಿಜ್ಞಾನ-ತಂತ್ರಜ್ಞಾನದ ಕ್ಷೇತ್ರಗಳಲ್ಲೂ, ಒಂದೇ ಶಾಖೆಯ ಜ್ಞಾನವನ್ನು ಅನ್ವಯಿಸುವುದರಿಂದ ಸಾಧ್ಯವಾಗದ ನೂರಾರು ಸಂಗತಿಗಳು, ಅಂತರಶಾಖೀಯ ಜ್ಞಾನದ ಅನ್ವಯಿಕೆಯಿಂದ ಸಾಧ್ಯವಾದದ್ದು ನಮ್ಮ ಕಣ್ಣ ಮುಂದಿದೆ. ಜೀವವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಮೇಳೈಕೆಯಾದ ‘ಬಯೋಟೆಕ್ನಾಲಜಿ’, ಅಂದರೆ ಜೈವಿಕ ತಂತ್ರಜ್ಞಾನವು ಈಗೊಂದು ಶತಮಾನದಿಂದಲೂ ಅಪಾರ ಪ್ರಗತಿಯನ್ನು ಕಂಡಿದೆ.

ಸರ್ಕಾರಗಳ ಐಟಿ-ಬಿಟಿ ಇಲಾಖೆಯ ಸುದ್ದಿಯ ರೂಪದಲ್ಲೋ, ಕೋವಿಡ್ ವೈರಾಣುವನ್ನು ತಯಾರಿಸಿದ್ದು ಒಂದು ದೇಶದ ಜೈವಿಕತಂತ್ರಜ್ಞಾನ ಪ್ರಯೋಗಾಲಯವೆಂದೋ, ಕೋವಿಡ್ ವಿರುದ್ಧ ತಯಾರಿಸಿದ ಲಸಿಕೆಗಳ ಹಿಂದೆ ಜೈವಿಕತಂತ್ರಜ್ಞಾನಿಗಳ ಅಪಾರ ಪರಿಶ್ರಮವಿದೆ ಎಂದೋ ವಿಜ್ಞಾನದ ಈ ಶಾಖೆಯ ಹೆಸರನ್ನು ಕೇಳಿರಬಹುದು.1919ರಲ್ಲಿ ಮೊದಲ ಬಾರಿಗೆ ತಂತ್ರಜ್ಞಾನ ಮತ್ತು ಜೀವವಿಜ್ಞಾನದ ಸಮ್ಮಿಲನಕ್ಕೆ ‘ಬಯೋಟೆಕ್ನಾಲಜಿ’ ಎಂಬ ಹೆಸರು ನೀಡಿದ್ದು ಕರೋಲಿ ಎರಿಕಿ ಎಂಬ ಹಂಗೇರಿ ದೇಶದ ಕೃಷಿ ಎಂಜಿನಿಯರ್. ಎರಡು ಪ್ರಬಲ ಶಾಖೆಗಳ ಒಟ್ಟಂದವಾದ ಈ ಅಂತರ್‌ಶಾಖೆಗೆ ಇರುವ ಶಕ್ತಿ ಊಹಿಸಲೂ ಸಾಧ್ಯವಿಲ್ಲದಷ್ಟು. ಆದರೆ, ಅದನ್ನು ಪ್ರತಿ ಜೈವಿಕತಂತ್ರಜ್ಞಾನಿಯೂ ಅಷ್ಟೇ ಜವಾಬ್ದಾರಿಯಿಂದ ನಿರ್ವಹಿಸಬೇಕು. ಇಲ್ಲದಿದ್ದರೆ, ಒಂದು ಸಣ್ಣ ತಪ್ಪು ಕೂಡ, ಭವಿಷ್ಯದ ತಲೆಮಾರುಗಳು ಕ್ಷಮಿಸದಂತಹ ಪ್ರಮಾದವಾಗಿ ಮಾರ್ಪಾಡಾಗಬಹುದು. ಆಹಾರಬೆಳೆಗಳಲ್ಲಿ ಬೇಡದ ಗುಣಗಳನ್ನು ತೆಗೆದು ಬೇಕಾದದ್ದನ್ನೇ ಉಳಿಸಿ ಹೊಸ ತಳಿ ಸೃಷ್ಟಿಸುವುದು, ಜಾನುವಾರುಗಳ ಮಾರಣಹೋಮಕ್ಕೆ ಕಾರಣವಾಗುತ್ತಿದ್ದ ಇನ್ಸುಲಿನ್‌ನಂತಹ ಹಾರ್ಮೋನುಗಳ ಉತ್ಪಾದನೆಯನ್ನು, ಅಂತಹ ಅನೇಕ ಹಾರ್ಮೋನುಗಳ ಹಾಗೂ ಕಿಣ್ವಗಳ ಉತ್ಪಾದನೆಯನ್ನು ಸೂಕ್ಷ್ಮಾಣುಗಳಿಂದ ಸಾಧ್ಯವಾಗಿಸಿದ್ದು, ಉತ್ತಮ ಗುಣಮಟ್ಟದ ಜೈವಿಕಗೊಬ್ಬರಗಳ ತಯಾರಿ, ಸಾಮಾನ್ಯವಾಗಿ ಜನರನ್ನು ಕಂಗೆಡಿಸುವ ಎಲ್ಲಾ ಆರೋಗ್ಯಸಮಸ್ಯೆಗಳಿಗೂ ಒಂದಿಲ್ಲೊಂದು ಲಸಿಕೆ, ಚುಚ್ಚುಮದ್ದುಗಳ ತ್ವರಿತ ತಯಾರಿ – ಇವೆಲ್ಲಾ ಜೈವಿಕತಂತ್ರಜ್ಞಾನದ ಕೆಲವು ಸಾಧನೆಗಳಷ್ಟೇ. ಈಗಂತೂ, ಆರ್ಟಿಫೀಶಿಯಲ್ ಇಂಟೆಲಿಜೆನ್ಸ್‌ನ ಬಳಕೆಯನ್ನೂ ಜೊತೆಗೂಡಿಸಿಕೊಂಡು ಜೈವಿಕತಂತ್ರಜ್ಞಾನವು ಮತ್ತಷ್ಟು ಬಲಪಡೆದುಕೊಂಡಿದೆ. ಕಳೆದ ಒಂದು ದಶಕದಲ್ಲಂತೂ ಹೊಸ ಔಷಧಗಳ, ಹೊಸ ಔಷಧ-ವಿಲೇವಾರಿ-ವ್ಯವಸ್ಥೆಗಳ, ಹೊಸ ಔಷಧ ಸಂಬಂಧೀ ಯಾಂತ್ರಿಕ ವ್ಯವಸ್ಥೆಗಳ ಸೃಷ್ಟಿ, ಸುಧಾರಣೆ ಮತ್ತು ವಿನ್ಯಾಸ ಸಾಧ್ಯವಾಗಿದೆ. CRISPR ತಂತ್ರಜ್ಞಾನದ ಉಗಮವಾದಾಗಿನಿಂದಲೂ ಜೈವಿಕತಂತ್ರಜ್ಞಾನಕ್ಕೆ ಮಜಬೂತಾದ ಸಾಧನವೊಂದು ಸಿಕ್ಕಂತಾಗಿ, ಸಮಸ್ಯೆಗಳನ್ನು ಹೊಸಬಗೆಯಲ್ಲಿ, ಸುಲಭವಾಗಿ ಪರಿಹರಿಸುತ್ತದೆ. ಇಷ್ಟೆಲ್ಲಾ ಅನನ್ಯತೆಗಳ ಮೊತ್ತವಾದ ಜೈವಿಕತಂತ್ರಜ್ಞಾನದ ಅನ್ವಯಗಳಲ್ಲಿ, ಈಗ ಸುದ್ದಿಯಲ್ಲಿರುವುದು ಯಾವುವು ಗೊತ್ತೇ?

ಸಂಶ್ಲೇಷಿತ ಜೀವವಿಜ್ಞಾನ, ಹೊಸ ಬಗೆಯ ಕೋಶೀಯ ಹಾಗೂ ವಂಶವಾಹಿ ಚಿಕಿತ್ಸೆಗಳು, ಹವಾಗುಣ ಬದಲಾವಣೆಯನ್ನು ಸರಿದೂಗಿಸಿಕೊಂಡು, ಹೊಂದಾಣಿಕೆ ಮಾಡಿಕೊಂಡು ಮುನ್ನಡೆಯಬಲ್ಲ ಕೃಷಿವ್ಯವಸ್ಥೆ, ಮಾನವನಲ್ಲದ ಇತರ ಪ್ರಾಣಿಗಳಿಂದ ತೆಗೆದ ಅಂಗಾಂಗಗಳನ್ನು, ಯಾವುದೇ ಸಮಸ್ಯೆಯಾಗದಂತೆ ಮಾನವನೊಳಗೆ ಕಸಿಮಾಡಲು ಬೇಕಾದ ತಂತ್ರಜ್ಞಾನದ ತಯಾರಿ, ಆರ್ಟಿಫೀಶಿಯಲ್ ಇಂಟೆಲಿಜೆನ್ಸ್‌ನ ಸಹಾಯ ಪಡೆದು ನಿಖರವಾದ ಕೋಶಕ್ಕೇ ನಿಖರವಾದ ಔಷಧಿಯ ವಿಲೇವಾರಿ – ಇವೇ ಆ ಕೆಲವು ಅತ್ಯಂತ ಉಪಯುಕ್ತ ಅನ್ವಯಿಕೆಗಳು. ಸಂಶ್ಲೇಷಿತ ಜೀವವಿಜ್ಞಾನದಲ್ಲಿ, ಜೀವಿಗಳನ್ನು, ಭೂಮಿಯ ಪರಿಸ್ಥಿತಿ ಹಾಗೂ ಮನುಷ್ಯನ ಜೀವನವನ್ನು ಮತ್ತಷ್ಟು ಉತ್ತಮಗೊಳಿಸಲು, ಸಂಪೂರ್ಣವಾಗಿ ಬದಲಾಯಿಸಲಾಗುತ್ತದೆ. ಇದನ್ನು ಇಲ್ಲಿಯವರೆಗೂ ಸೂಕ್ಷ್ಮಾಣುಗಳ ವಿಷಯದಲ್ಲಿ ಮಾತ್ರ ಸಾಧ್ಯಮಾಡಿದ್ದು, ಅನೇಕ ಕೋಶಗಳಿರುವ ದೊಡ್ಡ ಪ್ರಾಣಿಗಳಿಗೂ, ಸಸ್ಯಗಳಿಗೂ ಮುಂದಿನ ದಿನಗಳಲ್ಲಿ ಅನ್ವಯಿಸಲಾಗುತ್ತದೆ. ಇನ್ಸುಲಿನ್ ತಯಾರಿಸಿ ಕೊಡುವ ಹೊಸ ಬಗೆಯ ಇ-ಕೊಲೈ ಬ್ಯಾಕ್ಟೀರಿಯ ಇಂತಹ ಸಂಶ್ಲೇಷಿತ ಜೀವವಿಜ್ಞಾನದ ಕೊಡುಗೆಯೇ.

ವಿವಿಧ ಕ್ಯಾನ್ಸರ್‌ಗಳೂ ಸೇರಿದಂತೆ ಅನೇಕ ಆರೋಗ್ಯಸಮಸ್ಯೆಗಳಿಗೆ ಪರಿಹಾರವನ್ನು ‘ಕೋಶೀಯ ಚಿಕಿತ್ಸೆ’ಯಲ್ಲಿ ವಿಜ್ಞಾನಿಗಳು ಕಂಡುಕೊಂಡಿದ್ದಾರೆ, ವಂಶವಾಹಿಗಳಲ್ಲಿ, ಜೀವಕೋಶಗಳಲ್ಲಿ ಸಣ್ಣ ಬದಲಾವಣೆಗಳನ್ನು ಮಾಡುವ ಮೂಲಕ ಆರೋಗ್ಯದ ದೊಡ್ಡ ಸಮಸ್ಯೆಯನ್ನು ಸಂಪೂರ್ಣವಾಗಿ ಇಲ್ಲವಾಗಿಸುವುದು ಇಲ್ಲಿ ಸಾಧ್ಯ. 7-8ವರ್ಷಗಳಿಂದಲೂ ಇಂತಹ ಪ್ರಯೋಗಗಳು ಯಶಸ್ವಿಯಾಗಲು ಪ್ರಾರಂಭವಾಗಿವೆ.

ಬರ, ಅತಿವೃಷ್ಟಿ, ಮಣ್ಣಿನ ಸವಕಳಿ, ಸದಾ ಕಾಡುವ ಬ್ಯಾಕ್ಟೀರಿಯಾ/ವೈರಸ್/ಶಿಲೀಂಧ್ರ ರೋಗಗಳನ್ನು ಎದುರಿಸಲು ವಂಶವಾಹಿಗಳಲ್ಲಿ ಬದಲಾವಣೆ ಮಾಡಿ, ಹೊಸ ತಳಿಯ ತರಕಾರಿ-ಹಣ್ಣುಗಳ ಬೆಳೆಗಳೂ ಈಗಾಗಲೇ ರೈತರನ್ನು ತಲುಪಿವೆ. ಅವುಗಳ ಅನಾನುಕೂಲಗಳು ಒಂದೊಂದಾಗಿ ಅರಿವಾಗುತ್ತಾ, ಹೊಸ ಸಂಶೋಧನೆಗಳನ್ನು ನಡೆಸುತ್ತಿದ್ದಾರೆ ಕೃಷಿತಜ್ಞರು. ಇವರೊಂದಿಗೆ ಕೈಜೋಡಿಸಿರುವ ಜೈವಿಕತಂತ್ರಜ್ಞಾನ ತಜ್ಞರು, ತಳೀಯ ಸುಧಾರಣೆಗಳನ್ನು ತರುವಲ್ಲಿ ಯಶಸ್ವಿಯಾಗಿದ್ದಾರೆ ಕೂಡ.

ಇನ್ನು, ಅಂಗಾಂಗ ದಾನದ ಶ್ರೇಷ್ಠತೆಯ ಬಗ್ಗೆ ಅದೆಷ್ಟೇ ತಿಳಿಸಿ ಹೇಳಿದರೂ, ಪ್ರತಿದಿನವೂ ಅನೇಕ ಮೃತದೇಹಗಳ ಜೊತೆಗೆ ಅತ್ಯಮೂಲ್ಯ ಅಂಗಾಂಗಗಳೂ ಮಣ್ಣಾಗುತ್ತವೆ, ಸುಟ್ಟು ಬೂದಿಯಾಗುತ್ತವೆ. ಅಂಗಾಂಗ ಕಸಿಗಾಗಿ ಸೂಕ್ತ ದಾನಿಯನ್ನು ಎದುರು ನೋಡುತ್ತಿರುವವರ ಪಟ್ಟಿ, ನಮ್ಮ ಎಣಿಕೆಗಿಂತಲೂ ಉದ್ದವಿದೆ. ಇಂತಹ ಸಮಸ್ಯೆಯನ್ನು ಇಲ್ಲವಾಗಿಸುವುದು ಹಂದಿ, ಇಲಿಗಳಂತಹ ಸಸ್ತನಿಗಳಲ್ಲಿ ಮಾನವನಿಗೆ ಸೂಕ್ತವೆನಿಸುವ, ಮಾನವನ ದೇಹವು ಕೋಶೀಯವಾಗಿ ವಿರೋಧ ವ್ಯಕ್ತಪಡಿಸದೇ ತನ್ನದಾಗಿಸಿಕೊಳ್ಳುವ ಅಂಗಾಂಗಗಳನ್ನು ಜೈವಿಕತಂತ್ರಜ್ಞಾನವು ಬೆಳೆಸುತ್ತಿದೆ. ಇಂತಹ ಅನೇಕ ಅನ್ವಯಗಳ ಮೂಲಕ ಜಗತ್ತನ್ನು, ಜನರ ಜೀವಿತಗಳನ್ನು ಉತ್ತಮವಾಗಿಸುವ ನಿಟ್ಟಿನಲ್ಲಿ ಜೈವಿಕ ತಂತ್ರಜ್ಞಾನವು ಮುನ್ನಡೆಯುತ್ತಿದೆ.

❖

ಜಿ.ಎಸ್.ಎಲ್.ವಿ.

ಯಾನ ನಿರ್ವಹಣೆಯಲ್ಲಿ ಹೊಸ ಅಧ್ಯಾಯ

ಬಿ. ಆರ್. ಗುರುಪ್ರಸಾದ್

ಜಿ. ಎಸ್. ಎಲ್. ವಿ. ಎಂಬುದು ಭಾರತ ನಿರ್ಮಿಸಿರುವ ರಾಕೆಟ್ ವಾಹನಗಳಲ್ಲೇ ಅತಿ ಎತ್ತರವಾದುದು. ಒಂದಲ್ಲ, ಎರಡಲ್ಲ, ಹದಿನೇಳು ಮಹಡಿ (170 ಅಡಿ) ಎತ್ತರದ ಈ ದೈತ್ಯ ವಾಹನ ತನ್ನ ಹದಿನೈದನೇ ಯಾನದ (ಜಿ. ಎಸ್. ಎಲ್. ವಿ.-ಎಫ್12) ಅಂಗವಾಗಿ ಭೋರ್ಗರೆಯುತ್ತಾ ಶ್ರೀಹರಿಕೋಟಾದಲ್ಲಿನ ಎರಡನೇ ಉಡಾವಣಾ ವೇದಿಕೆಯ ಮೇಲಿಂದ ಈ ಸೋಮವಾರ (ಮೇ 29, 2023)ದಂದು 10:42ಕ್ಕೆ ಮೇಲೇರಿದ ದೃಶ್ಯ ಅದ್ಭುತವಾಗಿತ್ತು. ಉಡಾವಣೆಯಾದ ಸುಮಾರು 18 ನಿಮಿಷಗಳಲ್ಲೇ ಜಿ.ಎಸ್.ಎಲ್.ವಿ. ತಾನು ಹೊತ್ತ 2232 ಕಿಲೋಗ್ರಾಂ ತೂಕದ ‘ಎನ್ ವಿ ಎಸ್-01’ ಉಪಗ್ರಹವನ್ನು ಕೋಳಿಮೊಟ್ಟೆಯಾಕಾರದ ಭೂಕಕ್ಷೆಯೊಂದಕ್ಕೆ ಕರಾರುವಾಕ್ಕಾಗಿ ಸೇರಿಸಿತು. ಭಾರತದ ಯಾನ ನಿರ್ವಹಣಾ ಉಪಗ್ರಹಗಳ ಕ್ಷೇತ್ರದಲ್ಲಿ ಹೊಸದೊಂದು ಅಧ್ಯಾಯ ಆರಂಭವಾಯಿತು.

ಜಿ. ಎಸ್. ಎಲ್. ವಿ.ಯ ಈ ಯಶಸ್ಸು ಭಾರತೀಯ ಅಂತರಿಕ್ಷ ವಿಜ್ಞಾನಿಗಳಿಗೆ ಹರ್ಷ ನೆಮ್ಮದಿಗಳೆರಡನ್ನೂ ತಂದುಕೊಟ್ಟಿತು. ಕಾರಣ ಈ ಯಶಸ್ವೀಯಾನದ ಹಿಂದಿನ ಯಾನದಲ್ಲಿ ಇದೇ ವಾಹನವೈಫಲ್ಯವನ್ನು ಕಂಡಿತ್ತು. ಹೀಗಾಗಿ ಜಿ. ಎಸ್. ಎಲ್. ವಿ.ಯ ಇತ್ತೀಚಿನ ಯಾನ ಭಾರತದ ತಾಂತ್ರಿಕ ಸಾಮರ್ಥ್ಯವನ್ನು ಮತ್ತೊಮ್ಮೆ ಜಗತ್ತಿಗೆ ಸಾಬೀತುಮಾಡಿದೆ. ಮೂರು ರಾಕೆಟ್ ಹಂತಗಳುಳ್ಳ ಜಿ. ಎಸ್. ಎಲ್. ವಿ. ಅತ್ಯಂತ ಸಂಕೀರ್ಣವಾದ, ಆದರೆ ದಕ್ಷವಾದ ಒಂದು ಬಗೆಯ ‘ಕ್ರಯೋಜನಿಕ್ ರಾಕೆಟ್ ತಂತ್ರಜ್ಞಾನ’ವನ್ನು ಉಳ್ಳದ್ದಾಗಿದೆ ಎಂಬುದು ಇಲ್ಲಿ ಮುಖ್ಯ. ಇಂತಹ ತಂತ್ರಜ್ಞಾನವನ್ನು ಕರಗತಮಾಡಿಕೊಂಡಿರುವ ಇತರ ರಾಷ್ಟ್ರಗಳೆಂದರೆ ಅಮೆರಿಕ, ರಷ್ಯಾ, ಜಪಾನ್, ಫ್ರಾನ್ಸ್ ಮತ್ತು ಚೀನಾ, ಅಷ್ಟೆ.

ಜಿ. ಎಸ್. ಎಲ್. ವಿ.ಯ ಯಶಸ್ಸಿನ ಮಾತು ಹಾಗಿರಲಿ, ಈಗ ಅದು ಉಡಾಯಿಸಿದ ಉಪಗ್ರಹದ ವಿಷಯಕ್ಕೆ ಬರೋಣ. ‘ಎನ್.ವಿ.ಎಸ್.-01’ ಎಂಬ ಹೆಸರಿನ ಆ ಉಪಗ್ರಹ ಒಂದು ಯಾನ ನಿರ್ವಹಣಾ (ನ್ಯಾವಿಗೇಶನ್) ಉಪಗ್ರಹ. ಇದು ನಮ್ಮ ಸ್ವದೇಶಿ ‘ನಾವಿಕ್’ ಕಾರ್ಯಕ್ರಮದಲ್ಲಿನ ಎರಡನೇ ಪೀಳಿಗೆಯ ಮೊದಲ ಉಪಗ್ರಹ. ಇದಕ್ಕೆ ಮೊದಲು ನಾವಿಕ್ ಕಾರ್ಯಕ್ರಮದ ಮೊದಲ ಪೀಳಿಗೆಯ ಉಪಗ್ರಹಗಳು ನಮ್ಮ ಪಿ. ಎಸ್. ಎಲ್. ವಿ. ರಾಕೆಟ್ ವಾಹನದಲ್ಲಿ ಕಕ್ಷೆಗೆ ತೆರಳಿದ್ದವು. ಈ ‘ಸ್ಮಾರ್ಟ್ ಮೊಬೈಲ್ ಫೋನ್’ ಯುಗದಲ್ಲಿ ಜಿ. ಪಿ. ಎಸ್. ಎಂಬ ಪದ ಬಹುಮಟ್ಟಿಗೆ ಚಿರಪರಿಚಿತವಾಗಿದೆ. ನಾವ್ ಸ್ಟಾರ್ ಉಪಗ್ರಹಗಳನ್ನು ಉಳ್ಳ ‘ಜಿ. ಪಿ. ಎಸ್.’ ವ್ಯವಸ್ಥೆಯ ನೆರವಿನೊಡನೆ ಇಂದು ಜಗತ್ತಿನಾದ್ಯಂತ ಕೋಟ್ಯಂತರ ಜನರು ದಕ್ಷವಾಗಿ ನ್ಯಾವಿಗೇಟ್ ಮಾಡುತ್ತಾ ತಮ್ಮ ಹತ್ತಿರದ ಇಲ್ಲವೇ ದೂರದ ಉದ್ದೇಶಿತ ಸ್ಥಳಗಳನ್ನು ತಲುಪುತ್ತಿದ್ದಾರೆ. ಈ ಕಾರಣದಿಂದಾಗಿ ಅಮೆರಿಕದ ಒಡೆತನದ ಜಿ. ಪಿ. ಎಸ್. ವ್ಯವಸ್ಥೆ ಜಗತ್ತಿನಾದ್ಯಂತ ಜನಪ್ರಿಯತೆಯನ್ನು ಪಡೆದಿದೆ. ಇದರೊಂದಿಗೇ ರಷ್ಯಾದ ಗ್ಲೋನಾಸ್, ಚೀನಾದ ಬೈಡೋ, ಯೂರೋಪ್‌ನ ಗೆಲಿಲಿಯೋ, ಈ ಉಪಗ್ರಹಯಾನ ನಿರ್ವಹಣಾ ವ್ಯವಸ್ಥೆಗಳೂ ಇಂದು ಅಸ್ತಿತ್ವದಲ್ಲಿವೆ.

1999ರ ಕಾರ್ಗಿಲ್ ಯುದ್ಧದ ನಡುವೆ ನಿಖರವಾದ ಯಾನನಿರ್ವಹಣೆ ಹಾಗೂ ಗುರಿಯಾಗುವ ವೈರಿ ಪ್ರದೇಶಗಳ ಸ್ಥಾನ – ಇವುಗಳನ್ನು ಕುರಿತ ಮಾಹಿತಿಯನ್ನು ಹೊರದೇಶದಿಂದ ಪಡೆಯುವ ಸಂಬಂಧದಲ್ಲಿ ಆದ ಕಹಿ ಅನುಭವ ತನ್ನದೇ ಆದ ಯಾನ ನಿರ್ವಹಣಾ ಉಪಗ್ರಹ ವ್ಯವಸ್ಥೆಯನ್ನು ಭಾರತ ರೂಪಿಸುವುದಕ್ಕೆ ನಾಂದಿಯಾಯಿತು. ಅದರ ಅಂಗವಾಗಿ ಸಾಕಷ್ಟು ಅಧ್ಯಯನ ಹಾಗೂ ವಿಶ್ಲೇಷಣೆ ನಡೆದ ನಂತರ ‘ಭಾರತದ ಪ್ರಾದೇಶಿಕ ಯಾನ ನಿರ್ವಹಣಾ ಉಪಗ್ರಹ ವ್ಯವಸ್ಥೆ (ಐ. ಆರ್. ಎನ್. ಎಸ್. ಎಸ್.)’ಯನ್ನು ಹಮ್ಮಿಕೊಳ್ಳಲಾಯಿತು. ಇದರ ಮೊದಲ ಉಪಗ್ರಹವನ್ನು 2013ರಲ್ಲಿ ಉಡಾಯಿಸಲಾಯಿತು. ನಂತರ ಈ ಕಾರ್ಯವಾಹಿ (ಆಪರೇಷನಲ್) ವ್ಯವಸ್ಥೆಗೆ ‘ನಾವಿಕ್’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು 2016ರಲ್ಲಿ ನಾಮಕರಣ ಮಾಡಿದರು.

ಇತ್ತೀಚೆಗೆ ಉಡಾಯಿಸಲಾದ ‘ಎನ್.ವಿ.ಎಸ್.-01’ನ್ನು ಬಿಟ್ಟು ನಾವಿಕ್ ವ್ಯವಸ್ಥೆಯಲ್ಲಿ ಇಂದು ಇನ್ನೂ ಎಂಟು ಉಪಗ್ರಹಗಳಿವೆ. ಉಡಾವಣೆಯ ವೇಳೆಯಲ್ಲಿ 1425 ಕಿಲೋಗ್ರಾಂ ತೂಗುತ್ತಿದ್ದ ಈ ಉಪಗ್ರಹಗಳು ಮೂವತ್ತಾರು ಸಾವಿರ ಕಿಲೋಮೀಟರ್ ಎತ್ತರದ ‘ಭೂ ಮೇಳಯಕ ಕಕ್ಷೆ’ (ಜಿಯೋಸಿಂಕ್ರೊನಸ್ ಆರ್ಬಿಟ್)ಯಲ್ಲಿ ಭೂಮಿಯ ಸುತ್ತ 24 ಗಂಟೆಗಳಿಗೊಮ್ಮೆ ವಿಹರಿಸುತ್ತಿವೆ. ಆ ಪೈಕಿ ಕೆಲವುದರ ಕಕ್ಷೆ ಭೂಮಧ್ಯರೇಖೆಗೆ (ಈಕ್ವೆಟರ್) ಒಂದು ಕೋನದಲ್ಲಿ ವಾಲಿಕೊಂಡಿದ್ದರೆ ಮತ್ತೆ ಕೆಲವುದರ ಕಕ್ಷೆ ಭೂಮಧ್ಯರೇಖೆಯ ಮೇಲೇ ಇರುತ್ತದೆ.

‘ನಾವಿಕ್’ ಉಪಗ್ರಹಗಳು ಭಾರತ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಸದಾ ಕಾಲ ಗೋಚರಿಸುವುದರಿಂದ ಅವುಗಳು ಕಳುಹಿಸುವ ಎಲೆಕ್ಟ್ರಾನಿಕ್ ಸಂಕೇತಗಳನ್ನು ಗ್ರಹಿಸಿ ಸಂಸ್ಕರಿಸುವ ಮೂಲಕ ಇಲ್ಲಿನ ಗ್ರಾಹಕ ಸಾಧನಗಳು (ರಿಸೀವರ್ಸ್) ತಮ್ಮ ಸ್ಥಾನವನ್ನು, ವೇಗವನ್ನು ಹಾಗೂ ಭೂಮಿಯ ಮೇಲಿಂದ ತಾವಿರುವ ಎತ್ತರವನ್ನು ನಿಖರವಾಗಿ ಲೆಕ್ಕ ಹಾಕಬಹುದು.

ನಾವಿಕ್ ವ್ಯವಸ್ಥೆಯ ವ್ಯಾಪ್ತಿ ಭಾರತ ಹಾಗೂ ಅದರ ಗಡಿಯಾಚೆ 1500 ಕಿ.ಮೀ. ಆಚೀಚೆ ಇರುವ ಪ್ರದೇಶಗಳವರೆಗೂ ಇರುತ್ತದೆ. ಅದರ ನೆರವಿನೊಡನೆ ನಮ್ಮ ಸ್ಥಾನವನ್ನು ನಾವು ಸುಮಾರು 60ಅಡಿಗಳಷ್ಟು ಸಮೀಪದಲ್ಲಿ ನಿಖರವಾಗಿ ಗ್ರಹಿಸಬಹುದು.

ನಾವಿಕ್ ಉಪಗ್ರಹಗಳ ಕಾರ್ಯನಿರ್ವಹಣೆಯ ಸಂಬಂಧದಲ್ಲಿ ಕಂಡುಬಂದ ಪ್ರಮುಖವಾದ ಸಮಸ್ಯೆ ಅದರ ‘ಗಡಿಯಾರ’ಗಳಿಗೆ ಸಂಬಂಧಿಸಿದುದಾಗಿತ್ತು. ಭೂ, ಜಲ ಹಾಗೂ ವಾಯುಮಂಡಲಗಳಲ್ಲಿ ಸಾಗುವ ವಾಹನಗಳು ತಮ್ಮ ಸ್ಥಾನ, ವೇಗ ಹಾಗೂ ಎತ್ತರ, ಇವುಗಳನ್ನು ಗ್ರಹಿಸುವುದಕ್ಕೆ ಅನುವಾಗಲು ಯಾನ ನಿರ್ವಹಣಾ ಉಪಗ್ರಹಗಳು ಅತ್ಯಂತ ಸ್ಥಿರತೆಯನ್ನು ಹೊಂದಿರುವ ‘ಪರಮಾಣು ಗಡಿಯಾರ’(ಅಟಾಮಿಕ್ ಕ್ಲಾಕ್)ಗಳನ್ನು ಹೊಂದಿರಬೇಕಾಗುತ್ತದೆ. ನಾವಿಕ್ ಸರಣಿಯ ಮೊದಲ ಪೀಳಿಗೆಯ ಉಪಗ್ರಹಗಳಲ್ಲಿ ಹೊರದೇಶದಿಂದ ಕೊಳ್ಳಲಾದ ಅಂತಹ ಗಡಿಯಾರಗಳನ್ನು ಬಳಸಲಾಗಿತ್ತು. ಅವುಗಳಲ್ಲಿ ಕೆಲವು ಸರಿಯಾಗಿ ಕಾರ್ಯನಿರ್ವಹಿಸದೇ ನಾವಿಕ್ ಕಾರ್ಯಕ್ರಮಕ್ಕೆ ಕೆಲಮಟ್ಟಿಗೆ ಹಿನ್ನಡೆ ಉಂಟಾಗಿತ್ತು.

ಆದರೆ ಮೇ 29ರಂದು ಉಡಾಯಿಸಲಾದ ನಾವಿಕ್ ‘ಎನ್.ವಿ.ಎಸ್.-01’ ಉಪಗ್ರಹದಲ್ಲಿ ಅಹಮದಾಬಾದಿನಲ್ಲಿರುವ ಇಸ್ರೊ ಅಂತರಿಕ್ಷ ಅನ್ವಯಿಕ ಕೇಂದ್ರ ಅಭಿವೃದ್ಧಿಪಡಿಸಿರುವ ‘ರುಬಿಡಿಯಂ ಪರಮಾಣು ಗಡಿಯಾರ’ವನ್ನು ಅಳವಡಿಸಲಾಗಿದೆ. ಇಷ್ಟೇ ಅಲ್ಲದೇ ಆ ನಾವಿಕ್ ಉಪಗ್ರಹ ‘ಎಲ್-1’ ಎಂಬ ಹೆಚ್ಚುವರಿ ‘ರೇಡಿಯೋ ಆವರ್ತನಾಂಕ ಪಟ್ಟಿಯಲ್ಲೂ’ (ಬ್ಯಾಂಡ್) ಯಾನ ನಿರ್ವಹಣಾ ಸಂಕೇತಗಳನ್ನು ಕಳುಹಿಸುವ ಸಾಮರ್ಥ್ಯವಿರುವಂತೆ ಅದನ್ನು ರೂಪಿಸಲಾಗಿದ್ದು, ಇದರಿಂದಾಗಿ ಆ ಉಪಗ್ರಹದ ಸಾಮರ್ಥ್ಯ ಮತ್ತಷ್ಟು ಹೆಚ್ಚಿದೆ. ಉಪಗ್ರಹದ ಇತರ ಉಪವ್ಯವಸ್ಥೆಗಳಲ್ಲೂ ಸಾಕಷ್ಟು ಸುಧಾರಣೆಯನ್ನು ತರಲಾಗಿದೆ. ಮೊದಲ ಪೀಳಿಗೆಯ ನಾವಿಕ್ ಉಪಗ್ರಹಗಳಿಗೆ ಹೋಲಿಸಿದಲ್ಲಿ ಈ ಎರಡನೇ ಪೀಳಿಗೆಯ ಮೊದಲ ಉಪಗ್ರಹದ ತೂಕವೂ ಗಮನಾರ್ಹವಾಗಿ ಹೆಚ್ಚಿ ಇದರಿಂದ ಅದರ ಉಡಾವಣೆಯನ್ನು ಜಿ. ಎಸ್. ಎಲ್. ವಿ. ವಾಹನದಲ್ಲಿ ಮಾಡಲಾಗಿದೆ.

ಇದೀಗ ನಾವಿಕ್ ಉಪಗ್ರಹ ತನ್ನ ಅಂತಿಮ ಕಕ್ಷಾಗೃಹದತ್ತ ಸಾಗುವ ಕಾರ್ಯದಲ್ಲಿ ನಿರತವಾಗಿದೆ. ಹಾಸನದಲ್ಲಿರುವ ಮುಖ್ಯ ನಿಯಂತ್ರಣಾ ಕೇಂದ್ರದಿಂದ ವಿಜ್ಞಾನಿಗಳು ಅದರ ನಿಯಂತ್ರಣ ಹಾಗೂ ನಿರ್ವಹಣೆಯತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ.

❖

ಪವನವಿದ್ಯುತ್ ಪರಿಸರಸ್ನೇಹಿಯೆ?

ಉದಯ ಶಂಕರ ಪುರಾಣಿಕ

ಪವನಶಕ್ತಿಯನ್ನು ಬಳಸಿ ವಿದ್ಯುತ್ ಉತ್ಪಾದನೆ ಮಾಡುವುದು ಪರಿಸರಸ್ನೇಹಿ ಎಂದು ಹೇಳಲಾಗುತ್ತಿದೆ. ಯುರೋಪ್ ಮೂಲದ ಜಾಗತಿಕ ಪವನ ವಿದ್ಯುತ್ ಕೌನ್ಸಿಲ್ (ಜಿವ್ಯುಇಸಿ) ಸಂಸ್ಥೆ 2023ರಲ್ಲಿ ಪ್ರಕಟಿಸಿರುವ ವರದಿಯ ಪ್ರಕಾರ ವಿಶ್ವದಾದ್ಯಂತ 901 ಗಿಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಸಾಮರ್ಥ್ಯವಿರುವಷ್ಟು ಘಟಕಗಳು ಸ್ಥಾಪನೆಯಾಗಿವೆ. 2023–30ರ ಅವಧಿಯಲ್ಲಿ ವಿಶ್ವದಾದ್ಯಂತ 143ಗಿಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಸಾಮರ್ಥ್ಯವಿರುವ ಹೊಸ ಘಟಕಗಳು ಸ್ಥಾಪನೆಯಾಗಲಿವೆ.

ಒಂದು ಸಮೀಕ್ಷೆಯ ಪ್ರಕಾರ ಈಗ ಜಗತ್ತಿನಲ್ಲಿ ಸುಮಾರು ನಾಲ್ಕು ಲಕ್ಷ ಪವನ ವಿದ್ಯುತ್ ಉತ್ಪಾದನೆ ಯಂತ್ರಗಳು ಕೆಲಸ ಮಾಡುತ್ತಿವೆ. ಮುಂಬರುವ ವರ್ಷಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಹೊಸ ಪವನ ವಿದ್ಯುತ್ ಉತ್ಪಾದನೆ ಯಂತ್ರಗಳು ಸ್ಥಾಪನೆಯಾಗಲಿವೆ.
ಆದರೆ ಈ ಪವನ ವಿದ್ಯುತ್ ಉತ್ಪಾದನೆ ಯಂತ್ರಗಳು ಎಷ್ಟು ಪರಿಸರ ಸ್ನೇಹಿಯಾಗಿವೆ ಎಂದು ವಿಜ್ಞಾನಿಗಳು ಅಧ್ಯಯನ ನಡೆಸಿದ್ದಾರೆ. ಚೀನಾ, ಇಟಲಿ, ಅಮೆರಿಕ, ಮೆಕ್ಸಿಕೋ ಮೊದಲಾದ ದೇಶಗಳಲ್ಲಿ ಕೆಲಸ ಮಾಡುತ್ತಿರುವ ಪವನ ವಿದ್ಯುತ್ ಉತ್ಪಾದನೆ ಯಂತ್ರಗಳನ್ನು ಕುರಿತು ಮಾಹಿತಿ ಪಡೆದಿರುವ ವಿಜ್ಞಾನಿಗಳು, ಈ ಯಂತ್ರಗಳನ್ನು ತಯಾರಿಸುವ ವಿಧಾನ ಮತ್ತು ಬಳಸಲಾಗುತ್ತಿರುವ ಕಚ್ಚಾ ವಸ್ತುಗಳನ್ನು ಗಮನಿಸಿದಾಗ, ಈ ಯಂತ್ರಗಳ ತಯಾರಿಕೆ ಹಂತದಲ್ಲಿ ಅತ್ಯಂತ ಹೆಚ್ಚಿನ ಪರಿಸರ ಹಾನಿಯಾಗುತ್ತಿದೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಉದಾಹರಣೆಗೆ, 15 ಕಿಲೋವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವ ಸಾಮರ್ಥ್ಯ ಹೊಂದಿರುವ ಯಂತ್ರವೊಂದನ್ನು ತಯಾರಿಸಲು ಸುಮಾರು 11,468 ಕಿ.ಗ್ರಾಂ. ಉಕ್ಕು, 76 ಕಿ.ಗ್ರಾಂ. ಅಲ್ಯೂಮಿನಿಯಂ, 53 ಕಿ.ಗ್ರಾಂ. ತಾಮ್ರ, 14 ಕಿ.ಗ್ರಾಂ. ಪ್ಲಾಸ್ಟಿಕ್, 36 ಕಿ.ಗ್ರಾಂ. ಅಪರೂಪದ ಲೋಹ ಮತ್ತು 2 ಕಿ.ಗ್ರಾಂ. ಯಷ್ಟು ಇತರೆ ವಸ್ತುಗಳು ಬೇಕಾಗುತ್ತದೆ ಎಂದು ವಿಜ್ಞಾನಿಗಳು ವಿವರಿಸುತ್ತಾರೆ. ಯಂತ್ರಗಳನ್ನು ತಯಾರಿಸಲು ಬಳಸಲಾಗುವ ವಸ್ತುಗಳ ಉತ್ಪಾದನೆಯಲ್ಲಿ ಬಳಕೆಯಾಗುವ ವಿದ್ಯುತ್ ಮತ್ತು ಇತರೆ ಸಂಪನ್ಮೂಲಗಳು ಹಾಗೂ ಉಂಟಾಗುವ ತ್ಯಾಜ್ಯದಿಂದ ಪರಿಸರದ ಮೇಲಾಗುವ ಪರಿಣಾಮವನ್ನು ಕೂಡ ವಿಜ್ಞಾನಿಗಳು ಪರಿಗಣಿಸಿದ್ದಾರೆ.

ಇನ್ನು ಪವನ ವಿದ್ಯುತ್ ಉತ್ಪಾದನೆ ಕೇಂದ್ರದಲ್ಲಿ ಸಾಮಾನ್ಯವಾಗಿ ಸ್ಥಾಪಿಸುವ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಯಂತ್ರಕ್ಕೆ 212ಅಡಿಗಳಷ್ಟು ಎತ್ತರದ ಟವರ್ ನಿರ್ಮಿಸಬೇಕಾಗುತ್ತದೆ. ಈ ಯಂತ್ರಕ್ಕೆ ಬಳಸಲಾಗುವ ಟರ್ಬೈನ್ ಬ್ಲೇಡ್‌ಗಳು ತಲಾ 116 ಅಡಿಗಳಷ್ಟು ಉದ್ದವಿರುತ್ತವೆ. ಇಂತಹ ಬೃಹತ್ ಯಂತ್ರವನ್ನು ಸ್ಥಾಪಿಸಲು ಸರಾಸರಿ ಒಂದು ಸಾವಿರ ಟನ್ ಕಾಂಕ್ರೀಟ್ ಹಾಗೂ ಉಕ್ಕಿನ ಪ್ರಮಾಣವನ್ನು ಬೇಕಾಗುತ್ತದೆ. ಪ್ರತಿಯೊಂದು ಯಂತ್ರಕ್ಕೆ ಬಳಸಲಾಗುವ ಉಕ್ಕು ಮತ್ತು ಕಾಂಕ್ರಿಟ್ ಹಾಗೂ ಜೋಡಿಸುವ ಬೃಹತ್ ಗಾತ್ರದ ಟರ್ಬೈನ್ ಬ್ಲೇಡ್‌ಗಳ ಉತ್ಪಾದನೆ, ಸಾಗಾಣಿಕೆ ಮತ್ತು ಅಳವಡಿಸುವಲ್ಲಿ ವ್ಯಯವಾಗುವ ವಿದ್ಯುತ್, ಇಂಧನ ಮತ್ತು ಇತರೆ ಸಂಪನ್ಮೂಲಗಳನ್ನು ಕುರಿತು ವಿಜ್ಞಾನಿಗಳು ವಿಶ್ಲೇಷಣೆ ನಡೆಸಿದ್ದಾರೆ.

ಪವನ ಶಕ್ತಿಯಿಂದ ವಿದ್ಯುತ್ ಉತ್ಪಾದನೆ ಮಾಡುವ ಯಂತ್ರಗಳು ಉಂಟು ಮಾಡುವ ಶಬ್ದ ಮಾಲಿನ್ಯದಿಂದ ಪರಿಸರ ಮತ್ತು ಜನರ ಆರೋಗ್ಯದ ಮೇಲಾಗುವ ಪರಿಣಾಮ ಕುರಿತು ವಿಸ್ತೃತ ಅಧ್ಯಯನದ ಅಗತ್ಯವಿದೆ. ಪ್ರತಿಯೊಂದು ವಿದ್ಯುತ್ ಉತ್ಪಾದನೆ ಯಂತ್ರ ಸುಮಾರು 25 ವರ್ಷಗಳವರೆಗೆ ಕೆಲಸ ಮಾಡುತ್ತದೆ ಎಂದು ಪರಿಗಣಿಸಿದರೆ, ಅವಧಿ ಮುಗಿದ ನಂತರ ಈ ಯಂತ್ರದಿಂದ ಉಳಿಯುವ ತ್ಯಾಜ್ಯದಿಂದ ಪರಿಸರಕ್ಕೆ ಆಗುವ ಹಾನಿಯನ್ನು ಕೂಡ ಪರಿಗಣಿಸ ಬೇಕಾಗುತ್ತದೆ. ಯಂತ್ರಗಳನ್ನು ತಯಾರಿಸಲು ಬಳಸಲಾಗಿರುವ ಉಕ್ಕು, ತಾಮ್ರ, ಇತ್ಯಾದಿಗಳನ್ನು ಪುನರ್ ಬಳಕೆ ಮಾಡಿಕೊಳ್ಳಬಹುದಾದರೂ, ಪ್ಲಾಸ್ಟಿಕ್ ತ್ಯಾಜ್ಯದ ನಿರ್ವಹಣೆ ದೊಡ್ಡ ಸಮಸ್ಯೆಯಾಗಿದೆ. ಬೃಹತ್ ಗಾತ್ರದ ಟರ್ಬೈನ್ ಬ್ಲೇಡ್‌ಗಳನ್ನು ಫೈಬರ್ ಬಳಸಿ ತಯಾರಿಸಿರುವುದರಿಂದ, ಅವಧಿ ಮುಗಿದ ನಂತರ ಅವುಗಳನ್ನು ಖಾಲಿ ಜಾಗದಲ್ಲಿ ತ್ಯಾಜ್ಯವಾಗಿ ಎಸೆಯುವ ಕೆಲಸವನ್ನು ಕೆಲವು ದೇಶಗಳಲ್ಲಿ ಮಾಡಲಾಗುತ್ತಿದೆ. ಇದರಿಂದ ಪರಿಸರ ಮಾಲಿನ್ಯ ಉಂಟಾಗುತ್ತದೆ.

ಫೈಬರ್ ಆಧಾರಿತ ಬ್ಲೇಡ್‌ಗಳನ್ನು ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಲು ವಿಶೇಷ ತ್ಯಾಜ್ಯ ನಿರ್ವಹಣೆ ಘಟಕಗಳನ್ನು ಸ್ಥಾಪಿಸಬೇಕಾಗುತ್ತದೆ. ಇನ್ನು ಯಂತ್ರದ ಸ್ಥಾಪನೆಗೆ ಬಳಸಲಾಗುವ ಸಾವಿರಾರು ಟನ್ ಕಾಂಕ್ರಿಟ್ ಮತ್ತು ಉಕ್ಕು ಸಂಸ್ಕರಣೆ ಮಾಡಬೇಕಾದರೆ ಕಟ್ಟಡ ತ್ಯಾಜ್ಯ ಸಂಸ್ಕರಣೆ ಮಾಡುವ ವಿಶೇಷ ಘಟಕಗಳ ಸ್ಥಾಪನೆ ಅಗತ್ಯವಾಗುತ್ತದೆ.

ಪವನ ಶಕ್ತಿ ಆಧಾರಿತ ವಿದ್ಯುತ್ ಉತ್ಪಾದನೆಯಲ್ಲಿ ಕೋಟ್ಯಂತರ ಡಾಲರ್ ಬಂಡವಾಳ ಹೂಡಿಕೆ ಮಾಡಲು ಉತ್ಸಾಹ ತೋರಿಸುವ ದೇಶಗಳು, ತ್ಯಾಜ್ಯದ ವೈಜ್ಞಾನಿಕ ನಿರ್ವಹಣೆ ಮತ್ತು ಸಂಸ್ಕರಣೆಯ ವಿಷಯದಲ್ಲಿ ನಿರ್ಲಕ್ಷ್ಯ ತೋರಿಸುತ್ತಿರುವುದರ ವಿರುದ್ಧ ವಿಜ್ಞಾನಿಗಳು ಎಚ್ಚರಿಸಿದ್ದಾರೆ.

ಮಣಿಪುರ: ಮೃತರ ಕುಟುಂಬಗಳಿಗೆ ತಲಾ ₹ 10 ಲಕ್ಷ ಪರಿಹಾರ ಘೋಷಣೆ

ಸಂಘರ್ಷ ಶಮನಕ್ಕೆ ಶಾ ಸಭೆ

ಪ್ರಜಾವಾಣಿ ವಾರ್ತೆ/ಪಿಟಿಐ

ಇಂಫಾಲ್ (ಮಣಿಪುರ): ಬುಡಕಟ್ಟು ಸಮುದಾಯಗಳ ನಡುವಣ ಸಂಘರ್ಷದಿಂದ ನಲುಗಿರುವ ಮಣಿಪುರಕ್ಕೆ ಭೇಟಿ ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ವಿವಿಧ ನಾಗರಿಕ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಮಂಗಳವಾರ ಸಮಾಲೋಚನೆ ನಡೆಸಿದರು.

ಹಿಂಸಾಚಾರದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹10 ಲಕ್ಷ ಪರಿಹಾರ ಹಾಗೂ ಕುಟುಂಬದ ಒಬ್ಬರಿಗೆ ಉದ್ಯೋಗ ನೀಡುವುದಾಗಿ ಘೋಷಿಸಲಾಗಿದೆ. ಸಚಿವ ಅಮಿತ್ ಶಾ ಹಾಗೂ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ನೇತೃತ್ವದಲ್ಲಿ ಸೋಮವಾರ ತಡರಾತ್ರಿ ನಡೆದ ಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿದೆ.

ಸಭೆ: ಹಿಂಸಾಚಾರ ಪೀಡಿತ ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡುವ ಉದ್ದೇಶದ ಭಾಗವಾಗಿ ಸಚಿವ ಶಾ ಅವರು ವ್ಯಾಪಕ ಸಮಾಲೋಚನೆ, ಸಭೆಗಳನ್ನು ನಡೆಸಿದರು.

'ಮಣಿಪುರದ ಮಹಿಳಾ ಸಂಘಟನೆ 'ಮೀರಾ ಪೈಬಿ' ನಾಯಕಿಯರೊಂದಿಗೆ ಸಭೆ ನಡೆಸಲಾಯಿತು. ರಾಜ್ಯದಲ್ಲಿ ಶಾಂತಿ ನೆಲೆಸಲು ಹಾಗೂ ರಾಜ್ಯದ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ ಮಹತ್ವದ್ದು ಎಂಬುದನ್ನು ಸಭೆ ಪುನರುಚ್ಚರಿಸಿತು. ಈ ಗುರಿ ಸಾಧನೆಗೆ ಶ್ರಮಿಸಬೇಕು ಎಂಬ ದೃಢ ನಿಶ್ಚಯ ಮಾಡಲಾಯಿತು' ಎಂದು ಸಭೆ ನಂತರ ಶಾ ಅವರು ಟ್ವೀಟ್ ಮಾಡಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಣಿಪುರದ ಚುರ್ಚಾಂದಪುರಕ್ಕೆ ಮಂಗಳವಾರ ಭೇಟಿ ನೀಡಿದ ಸಂದರ್ಭದಲ್ಲಿ ಕುಕಿ ಬುಡಕಟ್ಟು ಜನರು ರ್‍ಯಾಲಿ ನಡೆಸಿದರು —ಪಿಟಿಐ ಚಿತ್ರ

> **ವಾಜಪೇಯಿ ಪ್ರಧಾನಿ ಯಾಗಿದ್ದಾಗ 2001ರಲ್ಲಿ ಮಣಿಪುರದಲ್ಲಿ ಹಿಂಸಾಚಾರ ನಡೆದಿತ್ತು. 22 ವರ್ಷಗಳ ನಂತರ ಈಗ ಮರುಕಳಿಸಿದೆ**
>
> **ಜೈರಾಮ್ ರಮೇಶ್**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಅವರು ಸೋಮವಾರದಿಂದ ನಾಲ್ಕು ದಿನಗಳ ಮಣಿಪುರ ಪ್ರವಾಸ ಕೈಗೊಂಡಿದ್ದಾರೆ. ಮಣಿಪುರದಲ್ಲಿ ಮೈತೇಯಿ ಹಾಗೂ ಕುಕಿ ಸಮುದಾಯಗಳ ನಡುವೆ ಒಂದು ತಿಂಗಳಿನಿಂದ ಸಂಘರ್ಷ ನಡೆಯುತ್ತಿದ್ದು, ಹಿಂಸಾಚಾರದಲ್ಲಿ 80ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ.

ಭೇಟಿ: ಹೆಚ್ಚು ಹಿಂಸಾಚಾರಕ್ಕೆ ಸಾಕ್ಷಿಯಾಗಿರುವ ಚುರ್ಚಾಂದಪುರ ಪಟ್ಟಣಕ್ಕೆ ಗೃಹ ಸಚಿವ ಶಾ ಭೇಟಿ ನೀಡಿದರು.

ಕುಕಿ ಸಮುದಾಯದ ಬುದ್ಧಿಜೀವಿಗಳು ಮತ್ತು ವಿವಿಧ ಚರ್ಚ್‌ಗಳ ಮುಖಂಡರೊಂದಿಗೆ ಸಭೆ ನಡೆಸಿ, ಅವರ ಸಮಸ್ಯೆಗಳ ಕುರಿತು ಚರ್ಚಿಸಿದರು. ಕುಕಿ ಸಮುದಾಯದವರ ಸಂಘಟನೆಗಳಾದ ಐಟಿಎಲ್ಎಫ್, ಕೆಎಸ್‌ಒ ಹಾಗೂ ಬಿಜೆಪಿಯ ಐವರು ಶಾಸಕರೊಂದಿಗೆ ಮಾತುಕತೆ ನಡೆಸಿದರು.

ಗೃಹ ಕಾರ್ಯದರ್ಶಿ ಅಜಯಕುಮಾರ್ ಭಲ್ಲಾ, ಗುಪ್ತಚರ ಸಂಸ್ಥೆ ನಿರ್ದೇಶಕ ತಪನ್ ಕುಮಾರ್ ಡೇಕಾ ಉಪಸ್ಥಿತರಿದ್ದರು.

ಪದಕ ವಾಪಸ್ ಅಥ್ಲೀಟ್‌ಗಳ ಎಚ್ಚರಿಕೆ

ಮಣಿಪುರದಲ್ಲಿ ತ್ವರಿತವಾಗಿ ಶಾಂತಿ ಮತ್ತು ಸಹಜಸ್ಥಿತಿ ಮರುಸ್ಥಾಪನೆಯಾಗದಿದ್ದಲ್ಲಿ ತಮ್ಮ ಪದಕಗಳನ್ನು ಮರಳಿಸುವುದಾಗಿ ಒಲಿಂಪಿಕ್ ಪದಕ ವಿಜೇತೆ ಮೀರಾಬಾಯಿ ಚಾನು ಸೇರಿದಂತೆ ಹತ್ತು ಜನ ಅಥ್ಲೀಟ್‌ಗಳು ಮಂಗಳವಾರ ಎಚ್ಚರಿಸಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಸಲ್ಲಿಸಿರುವ ಮನವಿಪತ್ರದಲ್ಲಿ ಅವರು ಈ ವಿಷಯ ತಿಳಿಸಿದ್ದಾರೆ.

ಇಂಫಾಲ–ದಿಮಾಪುರ ರಾಷ್ಟ್ರೀಯ ಹೆದ್ದಾರಿ–2 ಅನ್ನು ಸಂಚಾರಕ್ಕೆ ಮುಕ್ತಗೊಳಿಸುವಂತೆಯೂ ಅವರು ಮನವಿ ಮಾಡಿದ್ದಾರೆ.

ಬಾಕ್ಸರ್ ಎಲ್.ಸರಿತಾದೇವಿ, ವೇಟ್‌ಲಿಫ್ಟರ್ ಕುಂಜುರಾಣಿ ದೇವಿ, ಫುಟ್ಬಾಲ್ ತಂಡದ ಮಾಜಿ ನಾಯಕಿ ಬೆಮ್‌ಬೆಮ್ ದೇವಿ ಹಾಗೂ ಇತರರು ಈ ಮನವಿ ಪತ್ರಕ್ಕೆ ಸಹಿ ಹಾಕಿದ್ದಾರೆ.

ಕಾಂಗ್ರೆಸ್ ನಿಯೋಗದಿಂದ ರಾಷ್ಟ್ರಪತಿ ಭೇಟಿ

ನವದೆಹಲಿ (ಪಿಟಿಐ): ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದ ನಿಯೋಗವು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಮಂಗಳವಾರ ಭೇಟಿ ಮಾಡಿ, ಮಣಿಪುರ ವಿದ್ಯಮಾನ ಕುರಿತು ಚರ್ಚಿಸಿತು.

ರಾಜ್ಯದಲ್ಲಿ ಶಾಂತಿ ನೆಲೆಸಿ, ಜನಜೀವನ ಸಹಜ ಸ್ಥಿತಿಗೆ ಬರಲು ಕೂಡಲೇ ಮಧ್ಯಪ್ರವೇಶಿಸಬೇಕು. ಸುಪ್ರೀಂ ಕೋರ್ಟ್‌ನ ಹಾಲಿ ಅಥವಾ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಉನ್ನತ ಮಟ್ಟದ ತನಿಖಾ ಆಯೋಗ ರಚಿಸಬೇಕು ಎಂದು ನಿಯೋಗವು ಮುರ್ಮು ಅವರಿಗೆ ಮನವಿ ಮಾಡಿತು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಣಿಪುರ ಮಾಜಿ ಮುಖ್ಯಮಂತ್ರಿ ಇಬೋಬಿ ಸಿಂಗ್, 'ರಾಜ್ಯದಲ್ಲಿನ ಸಂಘರ್ಷದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಯಾಕೆ ಮೌನವಾಗಿದ್ದಾರೆ' ಎಂದು ಪ್ರಶ್ನಿಸಿದರು.

'ಮೊದಲ ದಿನವೇ ಹಿಂಸಾಚಾರವನ್ನು ತಡೆಯಬಹುದಿತ್ತು. ಆದರೆ, ಅದು ಮುಂದುವರಿಯಲು ಬಿಡಲಾಯಿತು. ಈ ಬೆಳವಣಿಗೆಗಳ ಹಿಂದೆ ಪಿತೂರಿ ಇದೆ ಎಂಬುದನ್ನು ಪ್ರಧಾನಿಯವರ ಮೌನವೇ ಹೇಳುತ್ತಿದೆ' ಎಂದು ಆರೋಪಿಸಿದರು.

'ಮಣಿಪುರದಲ್ಲಿ ಶಾಂತಿ, ಸೌಹಾರ್ದ ನೆಲೆಸುವಂತೆ ಮಾಡಲು ಕೈಗೊಳ್ಳುವ ಕ್ರಮಗಳಿಗೆ ಕಾಂಗ್ರೆಸ್ ಬೆಂಬಲ ನೀಡುತ್ತದೆ. ತುರ್ತು ಕ್ರಮದಿಂದ ಮಾತ್ರ ರಾಜ್ಯದಲ್ಲಿ ಶಾಂತಿ ಮರುಸ್ಥಾಪನೆ ಸಾಧ್ಯ' ಎಂದು ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿದರು.

ಮಣಿಪುರ ಮಾಜಿ ಉಪಮುಖ್ಯಮಂತ್ರಿ ಗೈಖಂಗಮ್, ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೀಶಮ್ ಮೇಘಚಂದ್ರ ಸಿಂಗ್, ಮುಖಂಡರಾದ ಮುಕುಲ್ ವಾಸ್ನಿಕ್, ಎಐಸಿಸಿಯ ಮಣಿಪುರ ಉಸ್ತುವಾರಿ ಭಕ್ತಚರಣ ದಾಸ ನಿಯೋಗದಲ್ಲಿದ್ದರು.

ಬಿಕ್ಕಟ್ಟು ಬಗೆಹರಿಯಲು ಸಮಯ ಬೇಕು: ಸಿಡಿಎಸ್ ಚೌಹಾಣ್

ಪುಣೆ (ಪಿಟಿಐ): ಮಣಿಪುರದಲ್ಲಿ ಸದ್ಯ ಉದ್ಭವಿಸಿರುವ ಬಿಕ್ಕಟ್ಟಿಗೂ ದಂಗೆಗೂ ಸಂಬಂಧವಿಲ್ಲ. ರಾಜ್ಯದ ಬಿಕ್ಕಟ್ಟು ಶಮನವಾಗಿ ಸಹಜಸ್ಥಿತಿ ಮರಳಲು ಸಾಕಷ್ಟು ಸಮಯ ಬೇಕು ಎಂದು ಮೂರೂ ಸೇನೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಮಂಗಳವಾರ ಹೇಳಿದರು.

ಇಲ್ಲಿನ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ ಹಮ್ಮಿಕೊಂಡಿದ್ದ ನಿರ್ಗಮನ ಪಥಸಂಚಲನದ ಸಂದರ್ಭದಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಎರಡು ಸಮುದಾಯಗಳ ನಡುವಣ ಸಂಘರ್ಷವೇ ಈ ಸ್ಥಿತಿಗೆ ಕಾರಣ. ಈಶಾನ್ಯದಲ್ಲಿ ಈ ಹಿಂದೆ ಕಂಡುಬಂದಿದ್ದ ಬಂಡಾಯಕ್ಕೂ ಇದಕ್ಕೂ ಸಂಬಂಧವಿಲ್ಲ. ಸಂಘರ್ಷ ನಿಯಂತ್ರಿಸುವಲ್ಲಿ ಅಸ್ಸಾಂ ರೈಫಲ್ಸ್ ಹಾಗೂ ಸಶಸ್ತ್ರ ಸೇನಾ ಪಡೆಗಳು ಅದ್ಭುತ ಕಾರ್ಯ ಮಾಡಿವೆ' ಎಂದರು.

ಸಿಆರ್‌ಪಿಎಫ್ ಐಜಿ ರಾಜೀವ್‌ಸಿಂಗ್‌ಗೆ ಹೊಣೆ? (ನವದೆಹಲಿ ವರದಿ): ಮಣಿಪುರದಲ್ಲಿನ ಪರಿಸ್ಥಿತಿಯನ್ನು ನಿಭಾಯಿಸುವ ಹೊಣೆಯನ್ನು ಸಿಆರ್‌ಪಿಎಫ್‌ನ ಪೊಲೀಸ್ ಮಹಾ ನಿರ್ದೇಶಕ ರಾಜೀವ್ ಸಿಂಗ್ ಅವರಿಗೆ ವಹಿಸುವ ಸಾಧ್ಯತೆ ಇದೆ.

1993ರ ಬ್ಯಾಚ್‌ನ ತ್ರಿಪುರಾ ಕೇಡರ್ ಐಪಿಎಸ್ ಅಧಿಕಾರಿಯಾಗಿರುವ ರಾಜೀವ್ ಅವರನ್ನು ಮೂರು ವರ್ಷಗಳ ಅವಧಿಗಾಗಿ ಮಣಿಪುರಕ್ಕೆ ನಿಯೋಜಿಸಲಾಗಿದೆ ಎಂದು ಗೃಹ ಸಚಿವಾಲಯ ಮೂಲಗಳು ಹೇಳಿವೆ.

'15 ದಿನದ ಹಿಂದೆಯೇ ಚಾಕು ಖರೀದಿಸಿದ್ದ'

ಶಹಬಾದ್‌ನಲ್ಲಿ ಬಾಲಕಿ ಹತ್ಯೆ: ಪದೇ ಪದೇ ಹೇಳಿಕೆ ಬದಲಿಸುತ್ತಿರುವ ಸಾಹಿಲ್

ಸಾಹಿಲ್

ನವದೆಹಲಿ (ಪಿಟಿಐ): 'ಬಾಲಕಿಯನ್ನು ಹತ್ಯೆ ಮಾಡಲು 15 ದಿನಗಳ ಹಿಂದೆಯೇ ಚಾಕು ಖರೀದಿಸಿದ್ದೆ' ಎಂದು ಆರೋಪಿ ಸಾಹಿಲ್, ತನಿಖೆ ವೇಳೆ ಹೇಳಿಕೆ ನೀಡಿದ್ದಾರೆ. ಶಹಬಾದ್ ಡೈರಿಯ ಜನನಿಬಿಡ ಪ್ರದೇಶದಲ್ಲಿ ನಡುರಸ್ತೆಯಲ್ಲಿಯೇ 16 ವರ್ಷದ ಬಾಲಕಿಯನ್ನು ಬರ್ಬರವಾಗಿ ಹತ್ಯೆಗೈದ ಸಾಹಿಲ್‌ನನ್ನು ಪೊಲೀಸರು ರಾತ್ರಿ ಇಡೀ ತನಿಖೆ ನಡೆಸಿದರು.

'ತನಿಖೆಯ ಹಾದಿ ತಪ್ಪಿಸಲು ಸಾಹಿಲ್ ತಮ್ಮ ಹೇಳಿಕೆಯನ್ನು ಪದೇ ಪದೇ ಬದಲಿಸುತ್ತಿದ್ದಾರೆ. 15 ದಿನಗಳ ಹಿಂದೆಯೇ ಚಾಕು ಖರೀದಿಸಿದ್ದೆ ಎಂದು ಅವರು ಹೇಳುತ್ತಿದ್ದಾರೆ. ಹತ್ಯೆ ಮಾಡುವುದಕ್ಕಾಗಿಯೇ ಅವರು ಚಾಕು ತಂದಿದ್ದರು ಎನ್ನಲಾಗುವುದಿಲ್ಲ. ಆಕೆಯ ಮೇಲಿನ ಆಕ್ರೋಶಕ್ಕೆ ನಾನು ಆಕೆಯನ್ನು ಹತ್ಯೆ ಮಾಡಿದ್ದೇನೆ ಎಂದಿದ್ದಾರೆ. ಆದ್ದರಿಂದ ಅವರ ಹೇಳಿಕೆಯ ಸತ್ಯಾಸತ್ಯತೆ ತಿಳಿಯಬೇಕು' ಎಂದು ಪೊಲೀಸರು ಹೇಳಿದ್ದಾರೆ.

'ಆರೋಪಿ ಸಾಹಿಲ್ ಅವರನ್ನು ದೆಹಲಿ ನ್ಯಾಯಾಲಯ ಎರಡು ದಿನ ಪೊಲೀಸ್ ವಶಕ್ಕೆ ನೀಡಿದೆ' ಎಂದಿದ್ದಾರೆ.

'ಕೃತ್ಯ ನಡೆದ 25 ನಿಮಿಷದವರೆಗೂ ಆ ಪ್ರದೇಶದ ಯಾವೊಬ್ಬರೂ ಪೊಲೀಸ್ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಲಿಲ್ಲ. ಪೊಲೀಸ್ ಮಾಹಿತಿದಾರನೇ ಈ ಕುರಿತು ಮಾಹಿತಿ ನೀಡಿದರು. ನಂತರ ನಾವು ರಾತ್ರಿ ಸುಮಾರು 9.30ರ ವೇಳೆಗೆ ಕೃತ್ಯ ನಡೆದ ಸ್ಥಳಕ್ಕೆ ಹೋದೆವು' ಎಂದರು.

'ದೆಹಲಿ ಸರ್ಕಾರವು ಮೃತ ಬಾಲಕಿಯ ಕುಟುಂಬಕ್ಕೆ ₹10 ಲಕ್ಷ ಪರಿಹಾರ ನೀಡಲಿದೆ' ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಘೋಷಿಸಿದ್ದಾರೆ.

'ನನಗೆ ಪಶ್ಚಾತಾಪ ಇಲ್ಲ': 'ನಾನು ಮೂರು ವರ್ಷದಿಂದ ಆಕೆಯನ್ನು ಪ್ರೀತಿಸುತ್ತಿದ್ದೇನೆ. ಆದರೆ ಆಕೆ ನನ್ನೊಂದಿಗೆ ಸಂಬಂಧ ಕಡಿದುಕೊಂಡಳು. ತನ್ನ ಮಾಜಿ ಪ್ರಿಯಕರನ ಜೊತೆ ಸೇರಿಕೊಂಡಳು. ಅದಕ್ಕೆ ನಾನು ಆಕೆಯನ್ನು ಕೊಲೆ ಮಾಡಿದೆ. ಈ ಬಗ್ಗೆ ನನಗೆ ಯಾವುದೇ ಪಶ್ಚಾತ್ತಾಪ ಇಲ್ಲ' ಎಂದು ತನಿಖೆ ವೇಳೆ ಸಾಹಿಲ್ ಹೇಳಿದ್ದಾರೆ.

ಸ್ಫೋಟಕ ಅಕ್ರಮ ದಾಸ್ತಾನು: ಆರೋಪಿ ಬಂಧನ

ಕಾಸರಗೋಡು (ಕೇರಳ) (ಪಿಟಿಐ): ಅಪಾರ ಸ್ಫೋಟಕಗಳನ್ನು ಅಕ್ರಮವಾಗಿ ಹೊಂದಿದ್ದ ಕಾಸರಗೋಡಿನ ವ್ಯಕ್ತಿಯನ್ನು ಕೇರಳ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ. ಆರೋಪಿಯು ತನ್ನ ಮನೆಯಲ್ಲಿ ದಾಸ್ತಾನು ಮಾಡಿದ್ದ 2,800 ಜಿಲೆಟಿನ್ ಕಡ್ಡಿಗಳು ಮತ್ತು 6,800 ಡಿಟೊನೇಟರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಅಧೂರ್ ಗ್ರಾಮದ ಮುಹಮ್ಮದ್ ಮುಸ್ತಾಫಾ (42) ಬಂಧಿತ ಆರೋಪಿ. ಜಿಲ್ಲಾ ಅಬಕಾರಿ ಇಲಾಖೆ ನೀಡಿದ ಮಾಹಿತಿ ಆಧರಿಸಿ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಅಬಕಾರಿ ತಂಡವು, ಆರೋಪಿಯು ಕಳ್ಳಭಟ್ಟಿ ದಾಸ್ತಾನು ಇಟ್ಟಿರುವ ಶಂಕೆಯ ಮೇಲೆ ದಾಳಿ ನಡೆಸಿತ್ತು. ಈ ವೇಳೆ ಆರೋಪಿಯ ಮನೆ ಮತ್ತು ಕಾರಿನಲ್ಲಿ ಸ್ಫೋಟಕಗಳು ಪತ್ತೆಯಾಗಿದ್ದರಿಂದ ಅವರು ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಸ್ಫೋಟಕಗಳನ್ನು ವಶಪಡಿಸಿಕೊಂಡಾಗ, ಮುಸ್ತಫಾ ತನ್ನ ಮಣಿಕಟ್ಟು ಕತ್ತರಿಸಿಕೊಳ್ಳಲು ಯತ್ನಿಸಿದ್ದು, ಪೊಲೀಸರು ತಕ್ಷಣ ಆತನನ್ನು ತಡೆದು, ಹತ್ತಿರದ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಬಾಡಿಗೆ ತಾಯ್ತನ: ಮಕ್ಕಳನ್ನು ಬಯಸುವ ದಂಪತಿಯ 'ಗ್ಯಾಮಿಟ್' ಬಳಕೆ ನಿಯಮ ಪ್ರಶ್ನಿಸಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ಬಾಡಿಗೆ ತಾಯ್ತನದ ಮೂಲಕ ಮಕ್ಕಳನ್ನು ಪಡೆದುಕೊಳ್ಳಲು ಮುಂದಾಗುವ ದಂಪತಿಯು ದಾನಿಗಳ ವೀರ್ಯಾಣು ಮತ್ತು ಅಂಡಾಣುಗಳನ್ನು (ಗ್ಯಾಮಿಟ್) ಬಳಸಿಕೊಳ್ಳಬಾರದು ಎಂಬ ಕೇಂದ್ರ ಆರೋಗ್ಯ ಸಚಿವಾಲಯದ ನಿಯಮವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ತಿರಸ್ಕರಿಸಿದೆ.

ಈ ನಿಯಮದ ಕುರಿತು ಈಗಾಗಲೇ ವಿಚಾರಣೆ ನಡೆಯುತ್ತಿದೆ ಎಂದು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರಿದ್ದ ರಜಾಕಾಲದ ಪೀಠವು ಹೇಳಿದೆ. 'ನಾವು ಯಾಕಾಗಿ ಇಂಥ ಅರ್ಜಿಯನ್ನು ಸ್ವೀಕರಿಸಬೇಕು? ಪ್ರಚಾರ ಸಿಗುತ್ತದೆ ಎಂಬ ಕಾರಣಕ್ಕೆ ನೀವು ಈ ಅರ್ಜಿ ಸಲ್ಲಿಸಿದ್ದೀರಾ ಎಂದು ಪ್ರಶ್ನಿಸಿದೆ.

ಅರ್ಜಿದಾರರ ಪರ ಹಾಜರಿದ್ದ ವಕೀಲರು ಅರ್ಜಿಯನ್ನು ಹಿಂಪಡೆದರು.

ನಿಯಮ ಏನಿದೆ?: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು 2023ರ ಮಾರ್ಚ್ 14ರಂದು ಈ ನಿಯಮ ಹೊರಡಿಸಿತ್ತು.

- ಬಾಡಿಗೆ ತಾಯ್ತನದ ಮೂಲಕ ಮಕ್ಕಳನ್ನು ಪಡೆದುಕೊಳ್ಳಲು ಬಯಸುವ ದಂಪತಿಯು, ತಮ್ಮ ವೀರ್ಯಾಣು ಮತ್ತು ಅಂಡಾಣು ನೀಡಬೇಕು ಎಂದು ನಿಯಮ ರೂಪಿಸಲಾಗಿತ್ತು
- ವಿಧವೆ ಅಥವಾ ವಿಚ್ಛೇದನ ಪಡೆದಿರುವ ಮಹಿಳೆಯು ಮಕ್ಕಳನ್ನು ಬಯಸಿದರೆ, ತನ್ನ ಅಂಡಾಣುವನ್ನು ಮತ್ತು ದಾನಿಯ ವೀರ್ಯಾಣುವನ್ನು ಬಳಸಬೇಕು

ಮಧ್ಯಪ್ರದೇಶ ಹೈಕೋರ್ಟ್ ತೀರ್ಪು ಎತ್ತಿಹಿಡಿದ 'ಸುಪ್ರೀಂ'

'ನ್ಯಾಯಾಧೀಶರನ್ನು ದೂಷಿಸುವಂತಿಲ್ಲ'



ನವದೆಹಲಿ (ಪಿಟಿಐ): ಜಿಲ್ಲಾ ನ್ಯಾಯಾಧೀಶರ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸಿದ್ದಕ್ಕಾಗಿ ಮಧ್ಯಪ್ರದೇಶ ಹೈಕೋರ್ಟ್ ವ್ಯಕ್ತಿಯೊಬ್ಬರಿಗೆ 10 ದಿನಗಳ ಜೈಲು ಶಿಕ್ಷೆ ವಿಧಿಸಿರುವುದನ್ನು ಸುಪ್ರೀಂ ಕೋರ್ಟ್ ಮಂಗಳವಾರ ಎತ್ತಿಹಿಡಿದಿದೆ.

ಈ ಸಂಬಂಧ ಕೃಷ್ಣ ಕುಮಾರ್ ರಘುವಂಶಿ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರಿದ್ದ ರಜಾಕಾಲದ ಪೀಠವು, ಈ ವಿಚಾರದಲ್ಲಿ ಹೈಕೋರ್ಟ್ ತೀರ್ಪಿನಲ್ಲಿ ಮಧ್ಯಪ್ರವೇಶಿಸಲು ಇಷ್ಟಪಡುವುದಿಲ್ಲ ಎಂದು ಹೇಳಿ, ಮನವಿಯನ್ನು ತಿರಸ್ಕರಿಸಿತು.

'ಸಾಮಾಜಿಕ ಮಾಧ್ಯಮಗಳ ಮೂಲಕ ಯಾರೊಬ್ಬರೂ ನ್ಯಾಯಾಧೀಶರನ್ನು ದೂಷಣೆ ಮಾಡುವಂತಿಲ್ಲ ಅಥವಾ ಅಪವಾದ ಹೊರಿಸುವಂತಿಲ್ಲ' ಎಂದೂ ಪೀಠ ಹೇಳಿದೆ.

'ನಿಮ್ಮ ಪರ ತೀರ್ಪು ಬಾರದಿದ್ದಾಗ ನೀವು ನ್ಯಾಯಾಧೀಶರನ್ನು ದೂಷಿಸಬಹುದು ಎಂದರ್ಥವಲ್ಲ. ನ್ಯಾಯಾಂಗದ ಸ್ವಾತಂತ್ರ್ಯವೆಂದರೆ ಕೇವಲ ಕಾರ್ಯಾಂಗದಿಂದ ಸ್ವತಂತ್ರವಾಗಿರುವುದಲ್ಲ. ಹೊರಗಿನ ಶಕ್ತಿಗಳಿಂದಲೂ ಸ್ವತಂತ್ರವಾಗಿರುವುದಾಗಿದೆ. ಇದು ಇತರರಿಗೆ ಪಾಠವಾಗಬೇಕು' ಎಂದು ಪೀಠ ಎಚ್ಚರಿಸಿದೆ.

'ಅರ್ಜಿದಾರರು ನ್ಯಾಯಾಧೀಶರನ್ನು ದೂಷಿಸಿದ್ದಾರೆ. ನ್ಯಾಯಾಧೀಶರ ಮೇಲೆ ಆರೋಪ ಹೊರಿಸುವ ಮೊದಲು ಅವರು ಎರಡು ಬಾರಿ ಯೋಚಿಸಬೇಕಿತ್ತು. ನ್ಯಾಯಾಧೀಶರ ವ್ಯಕ್ತಿತ್ವಕ್ಕೆ ಆದ ಹಾನಿ ಬಗ್ಗೆಯೂ ಅವರು ಯೋಚಿಸಬೇಕಿತ್ತು' ಎಂದು ನ್ಯಾಯಮೂರ್ತಿ ಬೇಲಾ ಎಂ. ತ್ರಿವೇದಿ ಮೌಖಿಕವಾಗಿ ಹೇಳಿದರು.

ಅರ್ಜಿದಾರರ ಪರ ವಕೀಲರು, 'ಅರ್ಜಿದಾರರು ಮೇ 27ರಿಂದ ಜೈಲು ಶಿಕ್ಷೆ ಅನುಭವಿಸುತ್ತಿದ್ದಾರೆ. ಇದು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ವಿಷಯ. ಶಿಕ್ಷೆ ಅವಧಿ ವಿಪರೀತವಾಯಿತು' ಎಂದು ವಾದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, 'ನಾವು ಇಲ್ಲಿರುವುದು ಸರಿ ತಪ್ಪುಗಳನ್ನು ನಿರ್ಧರಿಸುವುದಕ್ಕೇ ಹೊರತು ಇಂತಹ ವ್ಯಕ್ತಿಗಳಿಗೆ ಕರುಣೆ ತೋರುವುದಕ್ಕಲ್ಲ' ಎಂದು ಪೀಠ ಖಾರವಾಗಿ ಹೇಳಿದೆ.

ಸಿ.ಎಂ.ಗೆ ವರದಿ ಸಲ್ಲಿಕೆ; ಸಾರಿಗೆ ನಿಗಮ ಅಧಿಕಾರಿಗಳ ಸಭೆ ನಡೆಸಿದ ಸಚಿವ

ಸ್ತ್ರೀಯರಿಗೆಲ್ಲ ಉಚಿತ ಪ್ರಯಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಎಲ್ಲ ಮಹಿಳೆಯರಿಗೆ ಉಚಿತ ಪ್ರಯಾಣದ ಗ್ಯಾರಂಟಿಯನ್ನು ಈಡೇರಿಸುತ್ತೇವೆ. ರಾಜ್ಯದ ನಾಲ್ಕೂ ನಿಗಮಗಳ ವ್ಯಾಪ್ತಿಯಲ್ಲಿ ಉಚಿತ ಪ್ರಯಾಣಕ್ಕೆ ತಗಲುವ ವೆಚ್ಚ ಮತ್ತು ಇತರೆ ಮಾಹಿತಿಯ ವರದಿಯನ್ನು ಸಿದ್ಧಪಡಿಸಲಾಗಿದ್ದು, ಮುಖ್ಯಮಂತ್ರಿಗೆ ಬುಧವಾರ ಸಲ್ಲಿಸಲಾಗುವುದು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಕೆಎಸ್‌ಆರ್‌ಟಿಸಿ ಮುಖ್ಯ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಅವರು ಮಾಧ್ಯಮ-ಗೋಷ್ಠಿಯಲ್ಲಿ ಮಾತನಾಡಿದರು.

'ಚುನಾವಣೆ ಸಂದರ್ಭದಲ್ಲಿ, ಎಲ್ಲ ಮಹಿಳೆಯರಿಗೆ ಉಚಿತ ಪ್ರಯಾಣದ ಗ್ಯಾರಂಟಿ ನೀಡಲಾಗಿತ್ತು. ಈ ಕುರಿತ ವರದಿ ಮುಖ್ಯಮಂತ್ರಿಗೆ ಸಲ್ಲಿಕೆಯಾದ ನಂತರ, ಗುರುವಾರದ ಸಚಿವ ಸಂಪುಟ ಸಭೆಯಲ್ಲಿ ವಿಷಯ ಪ್ರಸ್ತಾಪವಾಗಲಿದೆ' ಎಂದು ಹೇಳಿದರು.

'ಉಚಿತ ಪ್ರಯಾಣಕ್ಕೆ ನಿರ್ಬಂಧ ವಿಧಿಸಲಾಗುವುದೇ' ಎಂಬ ಪ್ರಶ್ನೆಗೆ, 'ಎಲ್ಲ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸುವುದು ನಮ್ಮ ಉದ್ದೇಶ. ಹೆಚ್ಚಿನ ತೀರ್ಮಾನವನ್ನು ಸಚಿವ ಸಂಪುಟ ತೆಗೆದುಕೊಳ್ಳಲಿದೆ' ಎಂದರು.

₹12,750 ಕೋಟಿ ವಾರ್ಷಿಕ ವೆಚ್ಚ: ಸಾರಿಗೆ ನಿಗಮಗಳ ಅಂಕಿ-ಅಂಶ ಬಿಡುಗಡೆ ಮಾಡಿದ ರಾಮಲಿಂಗಾರೆಡ್ಡಿ, 'ಕರ್ನಾಟಕ ರಾಜ್ಯ ರಸ್ತೆ ಸಾರಿಗೆ (ಕೆಎಸ್‌ಆರ್‌ಟಿಸಿ), ಬೆಂಗಳೂರು ಮಹಾನಗರ ಸಾರಿಗೆ (ಬಿಎಂಟಿಸಿ), ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ (ಎನ್‌ಡಬ್ಲ್ಯುಕೆಆರ್‌ಟಿಸಿ) ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ (ಕೆಕೆಆರ್‌ಟಿಸಿ) ನಿಗಮಗಳು 2022-23ನೇ ಸಾಲಿನಲ್ಲಿ ಬಸ್‌ಗಳ ಕಾರ್ಯಾಚರಣೆಗೆ ₹12,750.49 ಕೋಟಿ ವೆಚ್ಚ ಮಾಡಿವೆ. ಜೊತೆಗೆ, ₹8,946.85 ಕೋಟಿ ಆದಾಯ ಗಳಿಸಿವೆ' ಎಂದರು.

ಸಾರಿಗೆ ನಿಗಮಗಳ ಅಂಕಿ-ಅಂಶ

ನಿಗಮ	ವಾಹನ ಸಂಖ್ಯೆ	ಸಿಬ್ಬಂದಿ
ಕೆಎಸ್‌ಆರ್‌ಟಿಸಿ	8116	37,741
ಬಿಎಂಟಿಸಿ	6688	29,457
ಎನ್‌ಡಬ್ಲ್ಯು ಕೆಆರ್‌ಟಿಸಿ	4,858	21,449
ಕೆಕೆಆರ್‌ಟಿಸಿ	4327	18,803

ನಿಗಮಗಳ 2022–23ನೇ ಸಾಲಿನ ಅಂಕಿ–ಅಂಶ

ನಿಗಮ	ಸಾರಿಗೆ ಆದಾಯ (ಕೋಟಿಗಳಲ್ಲಿ)	ಇತರೆ ಆದಾಯ (₹ಕೋಟಿಗಳಲ್ಲಿ)	ಕಾರ್ಯಾಚರಣೆ ವೆಚ್ಚ (₹ಕೋಟಿಗಳಲ್ಲಿ)
ಕೆಎಸ್‌ಆರ್‌ಟಿಸಿ	₹3349.18	₹234.30	₹4644.39
ಬಿಎಂಟಿಸಿ	₹1620.79	₹172.13	₹2957.87
ಎನ್‌ಡಬ್ಲ್ಯುಕೆಆರ್‌ಟಿಸಿ	₹1726.63	₹95.08	₹2892.12
ಕೆಕೆಆರ್‌ಟಿಸಿ	₹1663.62	₹85.12	₹2256.11

ನಿಗಮಗಳ ಒಂದು ದಿನದ ಅಂಕಿ–ಅಂಶ

ನಿಗಮ	ಕಾರ್ಯಾಚರಣೆ ದೂರ (ನಿತ್ಯ ಕಿ.ಮೀ.ಗಳಲ್ಲಿ)	ಪ್ರಯಾಣಿಕರ ಸಂಖ್ಯೆ	ಆದಾಯ (ಲಕ್ಷಗಳಲ್ಲಿ)
ಕೆಎಸ್‌ಆರ್‌ಟಿಸಿ	26.30 ಲಕ್ಷ	23.59 ಲಕ್ಷ	979.47
ಬಿಎಂಟಿಸಿ	10.09 ಲಕ್ಷ	27.34 ಲಕ್ಷ	444.05
ಎನ್‌ಡಬ್ಲ್ಯುಕೆಆರ್‌ಟಿಸಿ	15.05 ಲಕ್ಷ	16.94 ಲಕ್ಷ	473.08
ಕೆಕೆಆರ್‌ಟಿಸಿ	13.58 ಲಕ್ಷ	14.64 ಲಕ್ಷ	416.72

ಗಂಗಾ ಉತ್ಸವ...

ಹರಿದ್ವಾರದ ಹರ್ ಕಿ ಪೌರಿ ಘಾಟ್‌ನಲ್ಲಿ ಗಂಗಾ ಉತ್ಸವದಲ್ಲಿ ಮಂಗಳವಾರ ಅಸಂಖ್ಯ ಭಕ್ತರು ಭಾಗವಹಿಸಿದ್ದು, ಕೆಲವರು ಗಂಗಾ ನದಿಯಲ್ಲಿ ಪವಿತ್ರ ಸ್ನಾನ ಮಾಡಿದರು – ಪಿಟಿಐ ಚಿತ್ರ

ಹೆಚ್ಚುವರಿ ಅಕ್ಕಿ; ಕೇಂದ್ರಕ್ಕೆ ರಾಜ್ಯ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಮುನಿಯಪ್ಪ

ಬೆಂಗಳೂರು: 'ಆರ್ಥಿಕ ಹೊರೆಯಾದರೂ ಅನ್ನಭಾಗ್ಯ ಯೋಜನೆಯಲ್ಲಿ ಪ್ರತಿ ವ್ಯಕ್ತಿಗೆ 10 ಕೆ.ಜಿ ಅಕ್ಕಿ ನೀಡಲು ಸರ್ಕಾರ ಬದ್ಧವಾಗಿದೆ' ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಇಲಾಖೆಯ ಅಧಿಕಾರಿಗಳ ಸಭೆಯ ನಂತರ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಈಗ ನೀಡುತ್ತಿರುವಂತೆ ಪ್ರತಿ ಕೆ.ಜಿ. ಅಕ್ಕಿಗೆ ₹ 34 ದರದಲ್ಲಿ ವಿತರಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದರು.

'ಮುಖ್ಯಮಂತ್ರಿ ಜತೆ ಚರ್ಚಿಸಿದ ಬಳಿಕ ಅನ್ನಭಾಗ್ಯ ಯೋಜನೆಗೆ ಅಂತಿಮ ರೂಪ ನೀಡಲಾಗುವುದು. ಹೆಚ್ಚುವರಿ ಆರ್ಥಿಕ ಹೊರೆಯನ್ನು ಸಮರ್ಪಕವಾಗಿ ನಿಭಾಯಿಸಲಾಗುವುದು. ಕೇಂದ್ರ ಸರ್ಕಾರ ಹೆಚ್ಚುವರಿ ಅಕ್ಕಿ ಕೊಡುವ ವಿಶ್ವಾಸವಿದೆ' ಎಂದರು.

'ಈಗ ನೀಡುತ್ತಿರುವ ದರದಲ್ಲಿ ಕೇಂದ್ರ ಸರ್ಕಾರ ಅಕ್ಕಿ ನೀಡಲು ಒಪ್ಪದೇ ಹೋದರೆ ಟೆಂಡರ್ ಕರೆಯಲಾಗುವುದು. ಪ್ರತಿ ತಿಂಗಳು 2.18 ಲಕ್ಷ ಟನ್ ಅಕ್ಕಿಯ ಅಗತ್ಯವಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಜಲಾಶಯದ 41 ಲಕ್ಷ ಲೀಟರ್ ನೀರು ಖಾಲಿ ಪ್ರಕರಣ

ಅಧಿಕಾರಿಗೆ ₹53 ಸಾವಿರ ದಂಡ

ರಾಯಪುರ (ಪಿಟಿಐ): ಜಲಾಶಯದಲ್ಲಿ ಬಿದ್ದ ದುಬಾರಿ ಬೆಲೆಯ ಮೊಬೈಲ್ ಫೋನ್ ಪಡೆಯಲು ಆಹಾರ ನಿರೀಕ್ಷಕ ರಾಜೇಶ್ ವಿಶ್ವಾಸ್ 41 ಲಕ್ಷ ಲೀಟರ್ ನೀರನ್ನು ಖಾಲಿ ಮಾಡಿದ ಪ್ರಕರಣಕ್ಕೆ ಸಂಬಂಧಿಸಿ, ಜಲ ಸಂಪನ್ಮೂಲ ಇಲಾಖೆ ₹53 ಸಾವಿರ ದಂಡ ವಿಧಿಸಿದೆ.

ರಾಜೇಶ್ ಅವರು 4,104 ಕ್ಯೂಬಿಕ್ ಮೀಟರ್ (41 ಲಕ್ಷ ಲೀಟರ್) ನೀರನ್ನು ಪೋಲು ಮಾಡಿದ್ದಾರೆ. ಹೀಗಾಗಿ ಒಂದು ಕ್ಯೂಬಿಕ್ ಮೀಟರ್‌ಗೆ ₹10.50ರಂತೆ ₹43,092 ಹಾಗೂ ದಂಡವಾಗಿ ₹10 ಸಾವಿರ ಸೇರಿ ಒಟ್ಟು ₹53,092 ಅನ್ನು ಹತ್ತು ದಿನಗಳ ಒಳಗೆ ಇಲಾಖೆಗೆ ಪಾವತಿಸಬೇಕು ಎಂದು ಆದೇಶ ಹೊರಡಿಸಿದೆ.

ಅನುಮತಿ ಇಲ್ಲದೆ ನೀರು ಖಾಲಿ ಮಾಡಲು ಮೌಖಿಕ ಒಪ್ಪಿಗೆ ನೀಡಿದ್ದಕ್ಕೆ ಜಲಸಂಪನ್ಮೂಲ ಇಲಾಖೆಯ ಉಪ ವಿಭಾಗಾಧಿಕಾರಿ ಆರ್.ಕೆ ಧಿವಾರ್‌ಗೆ ಜಿಲ್ಲಾಧಿಕಾರಿ ಶೋಕಾಸ್ ನೋಟೀಸ್ ನೀಡಿದ್ದಾರೆ.

ಪರಲ್‌ಕೋಟ್ ಜಲಾಶಯಕ್ಕೆ ರಾಜೇಶ್ ವಿಶ್ವಾಸ್ ಅವರು ಸ್ನೇಹಿತರೊಂದಿಗೆ ರಜೆಯ ಸಮಯ ಕಳೆಯಲು ತೆರಳಿದ್ದಾಗ ಸೆಲ್ಫಿ ತೆಗೆಯುವ ವೇಳೆ ಒಂದು ಲಕ್ಷ ರೂಪಾಯಿ ಬೆಲೆಯ ಮೊಬೈಲ್ ಫೋನ್ ಕೈಯಿಂದ ಜಾರಿ ನೀರಿಗೆ ಬಿದ್ದಿತ್ತು. ಅದನ್ನು ಮರಳಿ ಪಡೆಯಲು ಡೀಸೆಲ್ ಪಂಪ್‌ಗಳ ಮೂಲಕ ನಾಲ್ಕು ದಿನಗಳಲ್ಲಿ 41 ಲಕ್ಷ ಲೀಟರ್ ನೀರನ್ನು ಜಲಾಶಯದಿಂದ ಹೊರ ಹಾಕಲಾಗಿತ್ತು.

ಶಿಂದೆ ಬಣದಲ್ಲಿ ಅಸಮಾಧಾನದ ಹೊಗೆ

ಮುಂಬೈ (ಪಿಟಿಐ): ಬಿಜೆಪಿಯ ಮಲತಾಯಿ ಧೋರಣೆಯಿಂದ ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ ಬಣದಲ್ಲಿರುವ 22 ಶಾಸಕರು ಮತ್ತು ಒಂಬತ್ತು ಸಂಸದರು ಉಸಿರುಗಟ್ಟುವ ಸ್ಥಿತಿಯಲ್ಲಿದ್ದು, ಶೀಘ್ರವೇ ಆ ಬಣವನ್ನು ತೊರೆಯಲಿದ್ದಾರೆ ಎಂದು ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಬಣ (ಯುಬಿಟಿ) ಹೇಳಿದೆ.

ಕಳೆದ ವಾರ ಬಿಜೆಪಿಯ ಧೋರಣೆ ಬಗ್ಗೆ ಬಹಿರಂಗವಾಗಿ ಪ್ರತಿಕ್ರಿಯಿಸಿದ್ದ ಶಿವಸೇನಾ ಸಂಸದ ಗಜಾನನ್ ಕೀರ್ತಿಕರ್ ಅವರ ಹೇಳಿಕೆಯನ್ನು ಉಲ್ಲೇಖಿಸಿ ಮಂಗಳವಾರ ಶಿವಸೇನಾದ ಮುಖವಾಣಿ 'ಸಾಮ್ನಾ' ಪತ್ರಿಕೆಯಲ್ಲಿ ಈ ಬಗ್ಗೆ ಸಂಪಾದಕೀಯ ಬರೆಯಲಾಗಿದೆ.

'ಸಂಸದರು ಮತ್ತು ಶಾಸಕರು ಬಿಜೆಪಿಯ ಪಂಜರದೊಳಗೆ ಬಂದಿಯಾಗಿರುವ ಹೆಣ್ಣು ಕೋಳಿಗಳು ಮತ್ತು ಹುಂಜಗಳಂತಾಗಿದ್ದಾರೆ. ಅವರನ್ನು ಯಾವಾಗ ಬಲಿ ಕೊಡಲಾಗುತ್ತದೆ ಎಂಬುದು ಗೊತ್ತಿಲ್ಲ' ಎಂದಿದೆ.

'ಸಂಸದ ಕೀರ್ತಿಕರ್ ಅವರು ನಾವು ಎನ್‌ಡಿಎ ಭಾಗವಾಗಿದ್ದೇವೆ. ಹಾಗಾಗಿಯೇ, ಮೈತ್ರಿಕೂಟದ ಪ್ರಕಾರವಾಗಿಯೇ ನಮ್ಮ ಕೆಲಸಗಳು ನಡೆಯುತ್ತಿವೆ. ನಮಗೆ ಮಲತಾಯಿ ಧೋರಣೆಯ ಅನುಭವವಾಗುತ್ತಿದೆ ಎಂದು ಹೇಳಿದ್ದಾರೆ. ಹಾಗಾಗಿ, ಶಿಂಧೆ ಬಣದಲ್ಲಿ ಇರುವವರು ಅಲ್ಲಿಂದ ಹೊರಬರುವ ಮನಸ್ಥಿತಿಯಲ್ಲಿದ್ದಾರೆ' ಎಂದಿದೆ.

ಸಂಸದರು ಮತ್ತು ಶಾಸಕರು ಠಾಕ್ರೆ ಅವರಿಗೆ ದ್ರೋಹ ಬಗೆದು ಕಳೆದ ವರ್ಷ ಬಿಜೆಪಿ ಜತೆ ಸ್ನೇಹ ಬೆಳೆಸಿದ್ದರು. ಅವರ ಪ್ರೇಮ ವಿವಾಹ ಹಳಸಿದ್ದು ವಿಚ್ಛೇದನದ ಮಾತುಕತೆಗಳು ನಡೆಯುತ್ತಿವೆ ಎಂದು ವ್ಯಂಗ್ಯವಾಡಿದೆ.

ಸಿಸೋಡಿಯಾ ಜಾಮೀನು ಅರ್ಜಿ ವಜಾ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದಲ್ಲಿ ಬಂಧನಕ್ಕೊಳಗಾಗಿರುವ ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ, ಎಎಪಿ ನಾಯಕ ಮನೀಷ್ ಸಿಸೋಡಿಯಾ ಅವರಿಗೆ ದೆಹಲಿಯ ನ್ಯಾಯಾಲಯವು ಮಂಗಳವಾರ ಜಾಮೀನು ನೀಡಲು ನಿರಾಕರಿಸಿ, ಅರ್ಜಿ ವಜಾಗೊಳಿಸಿದೆ.

'ಆರೋಪಿಯು ಪ್ರಭಾವಿ ವ್ಯಕ್ತಿ, ಅಧಿಕಾರ ಸ್ಥಾನದಲ್ಲಿದ್ದಾರೆ. ರಾಜಕೀಯ ಪ್ರಭಾವ ಹೊಂದಿದ್ದಾರೆ. ಇವರ ಮೇಲೆ ಗಂಭೀರ ಸ್ವರೂಪದ ಆರೋಪಗಳಿವೆ. ಹೀಗಾಗಿ ಜಾಮೀನು ನೀಡಬಾರದು' ಎಂದು ಸಿಬಿಐ ಪರ ವಕೀಲರು ಮಂಡಿಸಿದ ವಾದವನ್ನು ನ್ಯಾಯಮೂರ್ತಿ ದಿನೇಶ್ ಕುಮಾರ್ ಶರ್ಮಾ ಮಾನ್ಯ ಮಾಡಿದರು.

ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಸಿಸೋಡಿಯಾ ಅವರನ್ನು ಸಿಬಿಐ ಫೆ.26ರಂದು ಬಂಧಿಸಿತ್ತು. ಈ ಪ್ರಕರಣದಲ್ಲಿ ಅವರಿಗೆ ಜಾಮೀನು ನೀಡಲು ವಿಚಾರಣಾ ನ್ಯಾಯಾಲಯ ನಿರಾಕರಿಸಿ, ಮಾರ್ಚ್ 31ರಂದು ಆದೇಶ ನೀಡಿತ್ತು. ಇದನ್ನು ಪ್ರಶ್ನಿಸಿ ಸಿಸೋಡಿಯಾ ಹೈಕೋರ್ಟ್ ಮೊರೆ ಹೋಗಿದ್ದರು. ಅಲ್ಲದೆ, ಈ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸಿಸೋಡಿಯಾ ಅವರನ್ನು ಇ.ಡಿ ಮಾರ್ಚ್ 9ರಂದು ಬಂಧಿಸಿದೆ. ಸದ್ಯ ಅವರನ್ನು ತಿಹಾರ್ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿರಿಸಿದೆ. ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕೋರಿದ್ದ ಜಾಮೀನು ಅರ್ಜಿಯನ್ನೂ ವಿಚಾರಣಾ ನ್ಯಾಯಾಲಯ ವಜಾಗೊಳಿಸಿದೆ. ಇದನ್ನು ಪ್ರಶ್ನಿಸಿರುವ ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ.

ಏರ್ ಇಂಡಿಯಾ ಸಿಬ್ಬಂದಿ ಮೇಲೆ ಪ್ರಯಾಣಿಕ ಹಲ್ಲೆ

ನವದೆಹಲಿ (ಪಿಟಿಐ): ಗೋವಾದಿಂದ ನವದೆಹಲಿಗೆ ಸಂಚರಿಸುತ್ತಿದ್ದ ವೇಳೆ ಏರ್ ಇಂಡಿಯಾ ವಿಮಾನದಲ್ಲಿ ಪ್ರಯಾಣಿಕರೊಬ್ಬರು ಅಶಿಸ್ತಿನ ವರ್ತನೆ ತೋರಿ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ದೆಹಲಿಗೆ ತೆರಳುತ್ತಿದ್ದ ವ್ಯಕ್ತಿಯು ಸಿಬ್ಬಂದಿ ನಿಂದಿಸಿದ ಬಳಿಕ ದೈಹಿಕ ಹಲ್ಲೆ ನಡೆಸಿದ್ದಾರೆ. ವಿಮಾನವು ದೆಹಲಿ ತಲುಪಿದ ಕೂಡಲೇ, ಅವರನ್ನು ಭದ್ರತಾ ಸಿಬ್ಬಂದಿಯ ವಶಕ್ಕೆ ನೀಡಲಾಗಿದೆ. ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯಕ್ಕೂ ವರದಿ ನೀಡಲಾಗಿದೆ' ಎಂದು ಏರ್ ಇಂಡಿಯಾ ವಕ್ತಾರರು ತಿಳಿಸಿದ್ದಾರೆ. 'ಪ್ರಯಾಣಿಕರೊಬ್ಬರು ತೋರಿರುವ ಅಶಿಸ್ತಿನ ವರ್ತನೆ ಖಂಡಿಸುತ್ತೇವೆ. ಹಲ್ಲೆಗೊಳಗಾದ ಸಿಬ್ಬಂದಿಗೆ ಎಲ್ಲಾ ರೀತಿ ಸಹಕಾರ ನೀಡಲಾಗುವುದು' ಎಂದೂ ಹೇಳಿದ್ದಾರೆ.

ಮಹಾರಾಷ್ಟ್ರ ಸಂಸದ ಬಾಲು ಧನೋರ್‌ಕರ್ ನಿಧನ



ನವದೆಹಲಿ (ಪಿಟಿಐ): ಮಹಾರಾಷ್ಟ್ರದಿಂದ ಕಳೆದ ಲೋಕಸಭಾ ಚುನಾವಣೆಯಲ್ಲಿ ಆಯ್ಕೆಯಾದ ಕಾಂಗ್ರೆಸ್‌ನ ಏಕೈಕ ಸಂಸದ ಬಾಲು ಧನೋರ್‌ಕರ್ (47) ಅವರು ಮಂಗಳವಾರ ಬೆಳಿಗ್ಗೆ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟರು ಎಂದು ಪಕ್ಷದ ನಾಯಕ ಬಾಳಾಸಾಹೇಬ್ ಥೋರಟ್ ತಿಳಿಸಿದರು.

ಚಂದ್ರಾಪುರ ಕ್ಷೇತ್ರದ ಸಂಸದ ಧನೋರ್‌ಕರ್ ಅವರ ಮೂತ್ರಪಿಂಡದಲ್ಲಿ ಕಲ್ಲು ಇದ್ದ ಕಾರಣ ಕಳೆದ ವಾರ ಅವರನ್ನು ನಾಗ್ಪುರ ಮೂಲದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ ಭಾನುವಾರ ಅವರನ್ನು ದೆಹಲಿಯ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು ಎಂದು ಅವರು ಹೇಳಿದರು.

ಧನೋರ್‌ಕರ್ ಅವರ ಪಾರ್ಥಿವ ಶರೀರವನ್ನು ಮಂಗಳವಾರ ಮಧ್ಯಾಹ್ನ ತವರೂರು ವರೋರಾಗೆ ಕಳುಹಿಸಿಕೊಡಲಾಗಿದೆ. ಬುಧವಾರ ಬೆಳಿಗ್ಗೆ ಅಂತ್ಯಸಂಸ್ಕಾರ ನೆರವೇರಲಿದೆ.

ಶನಿವಾರವಷ್ಟೇ ಧನೋರ್‌ಕರ್ ಅವರ ತಂದೆ ನಾರಾಯಣ ಧನೋರ್‌ಕರ್ ವಯೋಸಹಜ ಕಾಯಿಲೆಯಿಂದ ಮೃತಪಟ್ಟಿದ್ದರು.

ಬಾಳಾ ಸಾಹೇಬ್ ಠಾಕ್ರೆ ನೇತೃತ್ವದ ಶಿವಸೇನಾ ಮೂಲಕ ರಾಜಕಾರಣ ಆರಂಭಿಸಿದ್ದ ಧನೋರ್‌ಕರ್ 2014ರ ವಿಧಾನಸಭಾ ಚುನಾವಣೆಯಲ್ಲಿ ಚಂದ್ರಾಪುರ ಜಿಲ್ಲೆಯಿಂದ ಗೆಲುವು ಸಾಧಿಸಿದ್ದರು. ನಂತರ 2019ರಲ್ಲಿ ಕಾಂಗ್ರೆಸ್ ಪಕ್ಷ ಸೇರಿ, ಲೋಕಸಭಾ ಚುನಾವಣೆಯಲ್ಲಿ ಚಂದ್ರಾಪುರ ಕ್ಷೇತ್ರದಲ್ಲಿ ಬಿಜೆಪಿಯ ಹಂಸರಾಜ್ ಅಹೀರ್ ಅವರನ್ನು ಪರಾಭವಗೊಳಿಸಿದ್ದರು.

ಏಮ್ಸ್ ಸಂಶೋಧನೆಯಲ್ಲಿ ಬಹಿರಂಗ; ಲ್ಯಾನ್ಸೆಟ್‌ನಲ್ಲಿ ಪ್ರಕಟ

'ಹೃದಯಾಘಾತ ಸಾವಿಗೆ ಚಿಕಿತ್ಸೆ ವಿಳಂಬ ಕಾರಣ'

ನವದೆಹಲಿ (ಪಿಟಿಐ): ಹೃದಯಾಘಾತ ಮತ್ತು ಪಾರ್ಶ್ವವಾಯು ಸಂಭವಿಸಿದಾಗ ಸೂಕ್ತ ಚಿಕಿತ್ಸೆಯ ಹುಡುಕಾಟದಲ್ಲಿ ಆಗುವ ವಿಳಂಬವೇ ಹೆಚ್ಚಿನ ಜನರು ಮೃತಪಡಲು ಕಾರಣ ಎಂದು ಲ್ಯಾನ್ಸೆಟ್ ನಿಯಕಾಲಿಕವು ಪ್ರಕಟಿಸಿರುವ ಸಂಶೋಧನೆಯೊಂದು ತಿಳಿಸಿದೆ.

ಇಲ್ಲಿನ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಏಮ್ಸ್) ಈ ಸಂಶೋಧನೆ ನಡೆಸಲಾಗಿದೆ. ಹೃದಯಾಘಾತ ಅಥವಾ ಪಾರ್ಶ್ವವಾಯುಗೆ ಒಳಗಾದ ರೋಗಿಗಳ ಪೈಕಿ

ಅತಿ ಕಡಿಮೆ ಜನರು ಮಾತ್ರ ತುರ್ತಾಗಿ ಆಸ್ಪತ್ರೆಗೆ ದಾಖಲಾಗುತ್ತಾರೆ. ಇಂಥ ಸಂದರ್ಭದಲ್ಲಿ ವಿವಿಧ ಹಂತಗಳಲ್ಲಿ ವಿಳಂಬವಾಗುವುದು ಮತ್ತು ಸಮಯಕ್ಕೆ ಸರಿಯಾಗಿ ಸೂಕ್ತ ಚಿಕಿತ್ಸೆ ದೊರೆಯದಿರುವುದು ಸಾವಿಗೆ ಕಾರಣವಾಗುತ್ತದೆ ಎಂದು ಅದು ತಿಳಿಸಿದೆ.

ಯಾವ ಆಸ್ಪತ್ರೆಗೆ ತೆರಳುವುದು ಎಂಬ ನಿರ್ಧಾರ ತೆಗೆದುಕೊಳ್ಳುವಾಗ, ಸೂಕ್ತ ಆಸ್ಪತ್ರೆಗೆ ತಲುಪುವಾಗ ಮತ್ತು ಚಿಕಿತ್ಸೆ ನೀಡುವಾಗ –ಈ ಮೂರು ಹಂತಗಳಲ್ಲಿಯೂ ವಿಳಂಬವಾಗುತ್ತಿದೆ.

ಶೇ 10.8ರಷ್ಟು ರೋಗಿಗಳು ಮಾತ್ರ ಹೃದಯಾಘಾತ ಸಂಭವಿಸಿದ ಗಂಟೆಯ ಒಳಗಾಗಿ ಸೂಕ್ತ ಆಸ್ಪತ್ರೆ ತಲುಪುತ್ತಾರೆ. ಕಾಯಿಲೆಯ ಲಕ್ಷಣ ಮತ್ತು ಗಂಭೀರತೆಯನ್ನು ಗುರುತಿಸುವಲ್ಲಿ ವಿಫಲವಾಗುವುದೂ, ಆಸ್ಪತ್ರೆಗೆ ತೆರಳಲು ವಿಳಂಬವಾಗುವುದಕ್ಕೆ ಪ್ರಮುಖ ಕಾರಣ ಎಂದು ತಿಳಿಸಿದೆ.

ಥ್ರಂಬೋಲಿಸಿಸ್‌ನಂಥ (ರಕ್ತ ಹೆಪ್ಪುಗಟ್ಟುವುದನ್ನು ತಡೆಯುವ) ಚಿಕಿತ್ಸೆ ನೀಡಲು ವಿಫಲವಾಗುವುದೂ ರೋಗಿಗಳ ಸಾವಿಗೆ ಕಾರಣ. ಚಿಕಿತ್ಸೆ ವಿಳಂಬ ತಗ್ಗಿದರೆ ಮರಣದರವು ಶೇ 30ರಷ್ಟು ಇಳಿಕೆಯಾಗಲಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ತಿಳಿಸಿದೆ.

ಬೆಂಗಳೂರಿನಲ್ಲಿ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ಸಂಜೆ ಹಾಗೂ ರಾತ್ರಿ ಗುಡುಗು– ಮಿಂಚು ಸಹಿತ ಧಾರಾಕಾರ ಮಳೆ ಸುರಿದಿದೆ. ಬೆಳ್ಳಂದೂರಿನ ಹೊರ ವರ್ತುಲ ರಸ್ತೆಯ ಇಕೋಸ್ಪೇಸ್ ಬಳಿ ಸಂಚಾರ ಅಸ್ತವ್ಯಸ್ತಗೊಂಡಿತು.

ಗಾಳಿ ಮಳೆಗೆ ಹಲವೆಡೆ ಮರಗಳು ಧರೆಗೆ ಉರುಳಿವೆ. ಕಮಲಾನಗರದಲ್ಲಿ ಆಟೊ ಜಖಂಗೊಂಡಿದೆ. ಬೆಳಿಗ್ಗೆಯಿಂದಲೇ ಮೋಡಕವಿದ ವಾತಾವರಣವಿದ್ದು, ಮಧ್ಯಾಹ್ನ ಆರಂಭವಾದ ಮಳೆ, ಸಂಜೆ ಬಿರುಸುಗೊಂಡಿತು. ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು. ಹಲವೆಡೆ ಸಂಚಾರ ನಿಧಾನಗತಿಯಲ್ಲಿತ್ತು. ದಟ್ಟಣೆ ಉಂಟಾಗಿತ್ತು. ಮಧ್ಯಾಹ್ನದಿಂದ ರಾತ್ರಿಯವರೆಗೆ ಮಳೆ ಆಗಾಗ ನಿಂತು, ಅಬ್ಬರಿಸಿತು.

ಸಂಕ್ಷಿಪ್ತ ಸುದ್ದಿ

ಡಿಸಿಎಂ, ಸಚಿವರ ಜೊತೆ ಸಿ.ಎಂ ಸಭೆ ಇಂದು

ಬೆಂಗಳೂರು: ಜೂನ್ 1ರಂದು ನಡೆಯುವ ಸಚಿವ ಸಂಪುಟ ಸಭೆಗೆ ಪೂರ್ವಭಾವಿಯಾಗಿ, ವಿವಿಧ ವಿಷಯಗಳ ಕುರಿತ ಚರ್ಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಪ ಮುಖ್ಯಮಂತ್ರಿ, ಎಲ್ಲ ಸಚಿವರ ಸಭೆಯನ್ನು ಬುಧವಾರ (ಮೇ 31) ಆಯೋಜಿಸಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬೆಳಿಗ್ಗೆ 12 ಗಂಟೆಗೆ ಈ ಸಭೆ ನಡೆಯಲಿದೆ. ಈಗಾಗಲೇ ಘೋಷಿಸಿದ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತು ಸಭೆಯಲ್ಲಿ ಚರ್ಚೆ ನಡೆಯುವ ಸಾಧ್ಯತೆಯಿದೆ.

‘ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಇಂಧನ, ಆಹಾರ, ಸಾರಿಗೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕೌಶಲ ಅಭಿವೃದ್ಧಿ ಇಲಾಖೆಗಳ ಹಿರಿಯ ಅಧಿಕಾರಿಗಳಿಂದ ಈಗಾಗಲೇ ಮುಖ್ಯಮಂತ್ರಿ ಮಾಹಿತಿ ಪಡೆದಿದ್ದಾರೆ. ಅಲ್ಲದೆ, ಈ ಕುರಿತ ವರದಿಯನ್ನು ಆಯಾ ಇಲಾಖೆಗಳ ಸಚಿವರು ಸಭೆಯ ಮುಂದಿಡಲಿದ್ದಾರೆ. ಬಳಿಕ ಯೋಜನೆಗಳ ಅನುಷ್ಠಾನದ ಕುರಿತು ಚರ್ಚೆ ನಡೆಯಲಿದೆ’ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಗೃಹ ಲಕ್ಷ್ಮೀ: ಅತ್ತೆಗೇ ಮೊದಲ ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಗೃಹ ಲಕ್ಷ್ಮೀ’ ಯೋಜನೆಯಡಿ ₹ 2,000 ನೆರವನ್ನು ಒಂದು ಮನೆಯಲ್ಲಿ ಅತ್ತೆಗೆ ಕೊಡಬೇಕೋ, ಸೊಸೆಗೆ ಕೊಡಬೇಕೋ ಎಂಬ ಬಗ್ಗೆ ಹಲವರು ಪ್ರಶ್ನೆ ಮಾಡುತ್ತಿದ್ದಾರೆ. ಆದರೆ, ಮನೆಯಲ್ಲಿ ಹಿರಿಯರಾದ ಅತ್ತೆಗೆ ಪ್ರಾಧಾನ್ಯ ಕೊಡಬೇಕಾಗುತ್ತದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನಮ್ಮ ಸಂಸ್ಕೃತಿಯಲ್ಲಿ ಅತ್ತೆಯೇ ಮನೆಯ ಯಜಮಾನಿ. ಹಾಗಾಗಿ, ಅತ್ತೆಗೆ ಈ ನೆರವು ಸಿಗಲಿದೆ’ ಎಂದರು.ಇದಕ್ಕೆ ಧ್ವನಿಗೂಡಿಸಿದ ಸಚಿವ ಸತೀಶ ಜಾರಕಿಹೊಳಿ, ‘ಸ್ವತಃ ಅತ್ತೆಯೇ ಮುಂದೆ ಬಂದು ಸೊಸೆಗೆ ನೆರವು ಕೊಡಲು ಬಯಸಿದರೆ ಮಾತ್ರ ಸೊಸೆಗೆ ಕೊಡುತ್ತೇವೆ’ ಎಂದು ಹೇಳಿದರು.

ರಾಮನಗರ ಜಿಲ್ಲೆಯಲ್ಲಿ ಸಿಡಿಲು ಬಡಿದು ಮೂವರಿಗೆ ಗಾಯ: ಮಂಡ್ಯದಲ್ಲಿ 100 ಹೆಕ್ಟೇರ್ ಭತ್ತಕ್ಕೆ ಹಾನಿ

ವಿವಿಧೆಡೆ ಮಳೆ: ಜನಜೀವನ ಅಸ್ತವ್ಯಸ್ತ

ವಿರಾಜಪೇಟೆಯ ಸುಂಕದ ಕಟ್ಟೆಯಲ್ಲಿ ಬಿರುಗಾಳಿ ಮಳೆಗೆ ನೆಲಕ್ಕುರುಳಿರುವ ವಿದ್ಯುತ್ ಕಂಬಗಳು (ಎಡಚಿತ್ರ) ಉಡುಪಿಯ ಕಾಪುವಿನ ವಿದ್ಯಾನಿಕೇತನ್ ಶಾಲೆಯ ಬಳಿ ರಾಷ್ಟ್ರೀಯ ಹೆದ್ದಾರಿ ಜಲಾವೃತವಾಗಿರುವುದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಗಾರು ಪ್ರವೇಶಕ್ಕೆ ಮುನ್ನವೇ ರಾಜ್ಯದ ಹಲವೆಡೆ ಮಂಗಳವಾರವೂ ಧಾರಾಕಾರ ಮಳೆ ಸುರಿದಿದ್ದು, ಜನಜೀವನ ಅಸ್ತವ್ಯಸ್ತಗೊಂಡಿತು. ಕೆಲವೆಡೆ ಆಲಿಕಲ್ಲು ಮಳೆ ಸುರಿದಿದೆ.

ರಾಮನಗರ ಜಿಲ್ಲೆಯ ಅಣ್ಣಹಳ್ಳಿಯ ಪರೇಗೌಡನಪಾಳ್ಯದಲ್ಲಿ ಸಿಡಿಲು ಬಡಿದು ಮೂವರು ಗಾಯಗೊಂಡಿದ್ದಾರೆ. ಮಳೆಯಿಂದ ತಪ್ಪಿಸಿಕೊಳ್ಳಲು ಮರದ ಕೆಳಗೆ ಆಶ್ರಯ ಪಡೆದಿದ್ದ ನಾಗೇಂದ್ರ (34) ಎಂಬುವರು ತೀವ್ರವಾಗಿ ಗಾಯಗೊಂಡಿದ್ದಾರೆ. ಅವರನ್ನು ಬಿಡದಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅವರೊಂದಿಗೆ ನಿಂತಿದ್ದ ನಿಂಗಯ್ಯ (60) ನರಸಿಂಗಯ್ಯ (55) ಎಂಬುವರು ಗಾಯಗೊಂಡಿದ್ದಾರೆ. ಸಿಡಿಲಿಗೆ ನಾಲ್ಕು ಮೇಕೆಗಳು ಸಾವನ್ನಪ್ಪಿವೆ. ಗ್ರಾಮದ ನಾಲ್ಕು ಮನೆಗಳ ಮೇಲ್ಛಾವಣಿಗಳು ಹಾರಿ ಹೋಗಿವೆ. ಹಲವಾರು ಮರಗಳು ಬೇರು ಸಮೇತ ಉರುಳಿ ಬಿದ್ದಿವೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಸುತ್ತಮುತ್ತ ಬಿರುಸಿನ ಮಳೆ ಸುರಿದಿದೆ. ತಗ್ಗು ಪ್ರದೇಶದ ಮನೆಗಳಿಗೆ ಮಳೆ ನೀರು ನುಗ್ಗಿದೆ. ರಸ್ತೆಗಳಲ್ಲಿ ನೀರು ಹರಿದು ಸಂಚಾರ ಅಸ್ತವ್ಯಸ್ತಗೊಂಡಿತು. ಕೆಲವೆಡೆ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ.

100 ಹೆಕ್ಟೇರ್ ಭತ್ತಕ್ಕೆ ಹಾನಿ: ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ಸೋಮವಾರ ರಾತ್ರಿ ಬಿರುಗಾಳಿ ಸಹಿತ ಮಳೆಗೆ ಮನೆಗಳ ಚಾವಣಿ ಹಾರಿ ಹೋಗಿದೆ. ಒಂದು ಎಕರೆ ಬಾಳೆ ಬೆಳೆ, 100 ಹೆಕ್ಟೇರ್‌ಗೂ ಹೆಚ್ಚು ಭತ್ತದ ಫಸಲು ಹಾನಿಗೀಡಾಗಿದೆ. ಕೆ.ಆರ್.ಎಸ್. ಸಮೀಪದ ಚಿಕ್ಕಾಯರಹಳ್ಳಿಯ ಸೋಮಶೇಖರ್ ಅವರ 35 ತೆಂಗಿನ ಮರಗಳು ನೆಲಕಚ್ಚಿವೆ.

ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನಲ್ಲಿ 25 ಹೆಕ್ಟೇರ್ ಪ್ರದೇಶದಲ್ಲಿನ ಲಿಂಬೆ, ಪಪ್ಪಾಯಿ ಸೇರಿದಂತೆ ಹಲವಾರು ತೋಟಗಾರಿಕೆ ಬೆಳೆಗಳು ಹಾನಿಗೀಡಾಗಿವೆ. ಗೋಲಗೇರಿ ಗ್ರಾಮದಲ್ಲಿ ಪಪ್ಪಾಯಿ ಗಿಡಗಳು ನೆಲಕ್ಕುರುಳಿವೆ. ಇದೇ ಭಾಗದ ಡಂಬಳ, ಸಾಸಾಬಾಳ ಗ್ರಾಮದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಲಿಂಬೆ ಬೆಳೆ ನಾಶವಾಗಿದೆ.

ಬೆಳಗಾವಿ ನಗರವೂ ಸೇರಿದಂತೆ ಜಿಲ್ಲೆಯ ಹಲವೆಡೆ ಮಳೆಯಾಗಿದೆ. ಕಾಗವಾಡ ತಾಲ್ಲೂಕಿನ ಐನಾಪುರ, ಮೋಳೆ, ಮಂಗಸೂಳಿ ಮತ್ತಿತರ ಕಡೆ ಆಲಿಕಲ್ಲು ಸಹಿತ ಮಳೆಯಾಗಿದೆ. ಚನ್ನಮ್ಮನ ಕಿತ್ತೂರು, ಎಂ.ಕೆ. ಹುಬ್ಬಳ್ಳಿ ಬೈಲಹೊಂಗಲದಲ್ಲಿ ಮಳೆ ಬಿದ್ದಿದೆ.

ಹೆದ್ದಾರಿಯಲ್ಲಿ ಕೃತಕ ನೆರೆ: ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಮಳೆಯ ನೀರು ತುಂಬಿಕೊಂಡು ವಾಹನಗಳ ಸಂಚಾರಕ್ಕೆ ಅಡ್ಡಿಯುಂಟಾಯಿತು. ಕಾಪು, ಕೊಪ್ಪಲಂಗಡಿ, ಮೂಳೂರು, ಉಚ್ಚಿಲ ಪಡುಬಿದ್ರಿಯ ಹಲವು ಕಡೆಗಳಲ್ಲಿ ಹೆದ್ದಾರಿ ನೀರಿನಿಂದ ಆವೃತವಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಮಳೆ ಸುರಿಯಿತು.

ಹಾಸನ ಜಿಲ್ಲೆಯ ಹಲವೆಡೆ ವಿದ್ಯುತ್ ಕಂಬಗಳು ಹಾಗೂ ಮರಗಳು ನೆಲಕ್ಕೆ ಉರುಳಿವೆ. ನಗರದಲ್ಲಿ ಮನೆಯ ಗೋಡೆಯೊಂದು ಆಟೊ ರಿಕ್ಷಾದ ಮೇಲೆ ಬಿದ್ದು ಹಾನಿಯಾಗಿದೆ.

ಬೇಲೂರು ತಾಲ್ಲೂಕಿನ ಬೇಲೂರು-ಚೀಕನಹಳ್ಳಿ,- ಮೂಡಿಗೆರೆ ರಸ್ತೆಯಲ್ಲಿ ಇಪ್ಪತ್ತಕ್ಕೂ ಹೆಚ್ಚು ಬೃಹತ್ ಮರಗಳು, 17 ವಿದ್ಯುತ್ ಕಂಬಗಳು, ಮೂರು ಪರಿವರ್ತಕಗಳು ನೆಲಕ್ಕೆ ಉರುಳಿವೆ. ಹಲವು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಿದ್ದು, ನೆಲಕ್ಕುರುಳಿರುವ ಮರಗಳನ್ನು ಸಾರ್ವಜನಿಕರೇ ತೆರವುಗೊಳಿಸುತ್ತಿದ್ದಾರೆ. ಅಪಾರ ಹಾನಿ ಸಂಭವಿಸಿದ್ದರೂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೇಲೂರು ತಾಲ್ಲೂಕಿನ ಕೋನೇರ್ಲು ಗ್ರಾಮದ ಹುಸೇನ್ ಎಂಬುವರ ಮನೆಯ ಮೇಲ್ಛಾವಣಿ ಹಾರಿ ಹೋಗಿದೆ. ಬಳ್ಳೂರಿನ ಧರ್ಮೇಗೌಡರ ನೂರಾರು ಬಾಳೆ ಗಿಡಗಳು ನೆಲಕ್ಕುರುಳಿವೆ. ನಗರದ ವಲ್ಲಭಭಾಯಿ ರಸ್ತೆಯಲ್ಲಿ ಮನೆಯ ಗೋಡೆ ಕುಸಿದು ಆಟೊ ಸಂಪೂರ್ಣ ಜಖಂಗೊಂಡಿದೆ. ಬೇಲೂರು ಪಟ್ಟಣದ ಕೋಟೆ ನಿವಾಸಿ ಶೋಭಾ ಅವರ ಮನೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕೀಟ್ ಆಗಿ ಗೃಹೋಪಯೋಗಿ ವಸ್ತುಗಳು ಸುಟ್ಟಿವೆ.

ಅಪಾರ ನಷ್ಟ: ಶಿವಮೊಗ್ಗ ನಗರದ ಅರವಿಂದ ನಗರ, ಬೊಮ್ಮನಕಟ್ಟೆ, ವಿನೋಬನಗರ, ಕಲ್ಲಳ್ಳಿ, ಹೌಸಿಂಗ್ ಬೋರ್ಡ್, ಆಟೊ ಕಾಂಪ್ಲೆಕ್ಸ್, ಗೋಪಾಲಗೌಡ ಬಡಾವಣೆ ಭಾಗದಲ್ಲಿ 100ಕ್ಕೂ ಹೆಚ್ಚು ಗಿಡ–ಮರ, ವಿದ್ಯುತ್ ಕಂಬಗಳು ಧರೆಗುರುಳಿವೆ. ಹೀಗಾಗಿ, ಹಲವು ರಸ್ತೆಗಳಲ್ಲಿ ಬೆಳಿಗ್ಗೆ ಸಂಚಾರ ಸ್ಥಗಿತಗೊಂಡಿತ್ತು. 60ಕ್ಕೂ ಹೆಚ್ಚು ಮನೆ, ಅಂಗಡಿಗಳ ಚಾವಣಿ ಹಾರಿ ಹೋಗಿವೆ.

ವಿದ್ಯುತ್ ತಂತಿಯ ಮೇಲೆ ಮರಗಳು ಉರುಳಿ ಬಿದ್ದ ಪರಿಣಾಮ ನಗರದ ಬಹಳಷ್ಟು ಕಡೆ ರಾತ್ರಿಯಿಡೀ ವಿದ್ಯುತ್ ಪೂರೈಕೆ ಕಡಿತಗೊಂಡಿತ್ತು. ದುರ್ಗಿಗುಡಿಯಲ್ಲಿ ಮರ ಬಿದ್ದು ಮೂರು ಕಾರು, ಬೊಮ್ಮನಕಟ್ಟೆಯಲ್ಲಿ ಒಂದು ಆಟೊ ಜಖಂಗೊಂಡಿದೆ.

ದಾವಣಗೆರೆ ತಾಲ್ಲೂಕಿನ ಕೊಡಗನೂರು, ಗಿರಿಯಾಪುರ, ಜರೀಕಟ್ಟೆ ಗ್ರಾಮದಲ್ಲಿ ಭತ್ತ, ಅಡಿಕೆ ಗಿಡಗಳಿಗೆ ಹಾನಿಯಾಗಿದೆ. ಮಲೇಬೆನ್ನೂರಿನಲ್ಲಿ ವಿಶ್ವಕರ್ಮ ಸಮುದಾಯ ಭವನದ ಚಾವಣಿಯ ಶೀಟ್ ಹಾರಿ ಹೋಗಿವೆ.

ನೆಲಕ್ಕುರುಳಿದ ವಿದ್ಯುತ್ ಕಂಬಗಳು

ಮಡಿಕೇರಿ: ಕೊಡಗು ಜಿಲ್ಲೆಯ ವಿರಾಜಪೇಟೆ ಪಟ್ಟಣದಲ್ಲಿ ಸುರಿದ ಬಿರುಗಾಳಿ ಸಹಿತ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿದೆ. ಸುಂಕದ ಕಟ್ಟೆ ಬಳಿ ವಿದ್ಯುತ್ ಕಂಬಗಳು ಆಟೊವೊಂದರ ಮೇಲೆ ಬಿದ್ದು, ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾದರು. ಹಲವು ಮರಗಳು ಉರುಳಿ ಬಿದ್ದದ್ದರಿಂದ ವಿರಾಜಪೇಟೆ-ಸಿದ್ದಾಪುರ ರಸ್ತೆಯಲ್ಲಿ ಸಂಚಾರ ಸ್ಥಗಿತಗೊಂಡಿತ್ತು. ಇಡೀ ಪಟ್ಟಣದಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿದೆ.

ಸುಂಟಿಕೊಪ್ಪ ಸಮೀಪದ ಚೆಟ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿವೆ. ಅಭ್ಯತ್ ಮಂಗಲ ಗ್ರಾಮ ಸೇರಿದಂತೆ ಚೆಟ್ಟಳ್ಳಿಯಿಂದ ಸುಂಟಿಕೊಪ್ಪ ಸಂಪರ್ಕ ರಸ್ತೆಯಲ್ಲಿ ಸುಮಾರು 60ಕ್ಕೂ ಹೆಚ್ಚು ಮರಗಳು ಧರೆಗುರುಳಿವೆ. ಚೆಟ್ಟಳ್ಳಿ ಫಾರಂನ ವಸತಿ ಗೃಹದ ಮೇಲೆ ಮರವೊಂದು ಬಿದ್ದು ಭಾಗಶಃ ಹಾನಿಯಾಗಿದೆ.

ಕೇರಳ ಗಡಿ ಭಾಗದ ಕುಟ್ಟದಲ್ಲಿ 6 ಸೆಂ.ಮೀಗೂ ಅಧಿಕ ಮಳೆ ಸುರಿದಿದೆ ಎಂದು ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯುತ್ ತಂತಿ ತುಂಡಾಗಿ 11 ಜಾನುವಾರು ಬಲಿ

ಕೊಪ್ಪಳ: ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ತಾವರಗೇರಾ ಸಮೀಪದ ಕಳಮಳ್ಳಿ ತಾಂಡಾದಲ್ಲಿ ವಿದ್ಯುತ್ ತಂತಿ ತುಂಡಾಗಿ ಬಿದ್ದ ಪರಿಣಾಮ 11 ಜಾನುವಾರುಗಳು ಮೃತಪಟ್ಟಿವೆ.

ರೈತ ಭದ್ರಪ್ಪ ಪವಾರ್ ಅವರ ಎರಡು ಎಮ್ಮೆ, ರಾಮಪ್ಪ ಪವಾರ್ ಅವರ ಎರಡು ಎತ್ತು ಹಾಗೂ ಏಳು ಆಕಳುಗಳು ಬಲಿಯಾಗಿವೆ.

‘ತೋಟದ ಮನೆಯಲ್ಲಿ ಹಾದು ಹೋಗಿದ್ದ ವಿದ್ಯುತ್ ತಂತಿ ಜಾನುವಾರುಗಳ ಮೇಲೆ ಬಿದ್ದು ವಿದ್ಯುತ್ ಪ್ರವಹಿಸಿದ್ದರಿಂದ ಈ ಅನಾಹುತ ನಡೆದಿದೆ. ಇದಕ್ಕೆ ಜೆಸ್ಕಾಂ ಸಿಬ್ಬಂದಿಯ ನಿರ್ಲಕ್ಷ್ಯವೇ ಕಾರಣ. ವಿದ್ಯುತ್ ಕಿಡಿ ಹೊತ್ತಿಕೊಂಡಾಗ ತಕ್ಷಣವೇ ಸಂಪರ್ಕ ಕಡಿತಗೊಳಿಸಿದ್ದರೆ ನಮ್ಮ ಜೀವನಕ್ಕೆ ಆಸರೆಯಾಗಿದ್ದ ಜಾನುವಾರು ಬದುಕುತ್ತಿದ್ದವು’ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಸಿಡಿಲಿನ ಆರ್ಭಟಕ್ಕೆ ಕುಷ್ಟಗಿ ತಾಲ್ಲೂಕಿನ ನಾಗರಾಳ ಗ್ರಾಮದಲ್ಲಿ ಎತ್ತು ಮೃತಪಟ್ಟಿದೆ.

ಸಿಡಿಲಿಗೆ 3 ಹಸು ಸಾವು

ಹನಗೋಡು (ಮೈಸೂರು ಜಿಲ್ಲೆ): ಹುಣಸೂರು ತಾಲ್ಲೂಕಿನ ಹನಗೋಡು ಹೋಬಳಿ ಸುತ್ತಮುತ್ತ ಸಿಡಿಲು ಬಡಿದು ನಾಗೇಗೌಡ, ನಾಸಿರ್ ಪಾಷಾ ಹಾಗೂ ಮುದಗನೂರಿನ ಸೂರೇಗೌಡ ಎಂಬುವರಿಗೆ ಸೇರಿದ ಹಸುಗಳು ಮೃತಪಟ್ಟಿವೆ.

ಹೊಲದಲ್ಲಿ ಮೇಯಲು ಬಿಟ್ಟಾಗ ಈ ಅವಘಡ ಸಂಭವಿಸಿದೆ.

7.85 ಲಕ್ಷ ಕ್ವಿಂಟಲ್ ಬಿತ್ತನೆ ಬೀಜ, 13.90 ಲಕ್ಷ ಟನ್ ರಸಗೊಬ್ಬರ ದಾಸ್ತಾನು

ಮುಂಗಾರು: 82.35 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಗಾರು ಹಂಗಾಮಿನಲ್ಲಿ 82.35 ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಬಿತ್ತನೆಗೆ ಗುರಿ ಇದ್ದು, ಬಿತ್ತನೆ ಬೀಜ ಮತ್ತು ರಸಗೊಬ್ಬರದ ಕೊರತೆ ಇಲ್ಲ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಗಳ ಜತೆ ಮಂಗಳವಾರ ಸಭೆ ನಡೆಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಈ ವಿವರ ನೀಡಿದರು.

ಎರಡು– ಮೂರು ವರ್ಷಗಳಲ್ಲಿ ಬಿತ್ತನೆ ಮತ್ತು ರಸಗೊಬ್ಬರ ಪೂರೈಕೆಗೆ ಆದ್ಯತೆ ನೀಡಿದ ಮಾದರಿಯಲ್ಲಿಯೇ ಈ ವರ್ಷವೂ ಆದ್ಯತೆ ನೀಡಲಾಗಿದೆ. ಜೂನ್ ಮೊದಲ ವಾರವೇ ಮುಂಗಾರು ಆರಂಭವಾಗಲಿದೆ. ಕಳಪೆ ಬಿತ್ತನೆ ಬೀಜ ಮಾರಾಟಗಾರರ ಮೇಲೆ ನಿಗಾ ಇಟ್ಟು ಕ್ರಮ ಕೈಗೊಳ್ಳಲಾಗುವುದು. ಕೃಷಿ ಚಟುವಟಿಕೆ ಆರಂಭಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಈ ವರ್ಷದಿಂದ ಎಲ್‌ನಿನೋ ಆರಂಭವಾಗುವುದರಿಂದ ಆಗಸ್ಟ್ ಬಳಿಕ ಮಳೆ ಕಡಿಮೆಯಾದರೆ ತುರ್ತು ಪರ್ಯಾಯ ಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದೂ ಅವರು ವಿವರಿಸಿದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಕೃಷಿ ಇಲಾಖೆ ಅಧಿಕಾರಿಗಳು ಮತ್ತು ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆಯಲ್ಲಿ ಮಾತನಾಡಿದರು. ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಇಲಾಖೆಯ ಕಾರ್ಯದರ್ಶಿ ಶಿವಯೋಗಿ ಕಳಸದ್ ಇದ್ದರು.

ಬಿತ್ತನೆ ಬೀಜ ಲಭ್ಯತೆ: ಸದ್ಯ ರಾಜ್ಯದಲ್ಲಿ 5.54 ಲಕ್ಷ ಕ್ವಿಂಟಲ್ ಬಿತ್ತನೆ ಬೀಜಕ್ಕೆ ಬೇಡಿಕೆ ಇದ್ದು, 7.85 ಲಕ್ಷ ಕ್ವಿಂಟಲ್ ಬಿತ್ತನೆ ಬೀಜ ಲಭ್ಯವಿದೆ. ರಾಜ್ಯದಾದ್ಯಂತ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳ ಮೂಲಕ ಮೇ 30ರವರೆಗೆ 5,915 ಕ್ವಿಂಟಲ್‌ಗಳಷ್ಟು ಬಿತ್ತನೆ ಬೀಜ ವಿತರಣೆ ಮಾಡಲಾಗಿದೆ. 86,794 ಕ್ವಿಂಟಲ್ ಬಿತ್ತನೆ ಬೀಜ ದಾಸ್ತಾನಿದೆ ಎಂದು ಹೇಳಿದರು.

ಮುಂಗಾರು ಹಂಗಾಮಿಗೆ 25.47 ಲಕ್ಷ ಟನ್‌ಗಳಷ್ಟು ವಿವಿಧ ಗ್ರೇಡ್‌ಗಳ ರಸಗೊಬ್ಬರಕ್ಕೆ ಬೇಡಿಕೆ ಇದೆ. ಮೇ 30ರ ವೇಳೆಗೆ 7.30 ಲಕ್ಷ ಟನ್ ರಸಗೊಬ್ಬರ ಸರಬರಾಜಾಗಿದೆ. ಒಟ್ಟು 18.75 ಲಕ್ಷ ಟನ್ ದಾಸ್ತಾನಿನಲ್ಲಿ 4.84 ಲಕ್ಷ ಟನ್ ರಸಗೊಬ್ಬರ ಮಾರಾಟವಾಗಿದೆ. ಉಳಿದ 13.90 ಲಕ್ಷ ಟನ್ ರಸಗೊಬ್ಬರ ಖಾಸಗಿ ಮಾರಾಟಗಾರರು ಮತ್ತು ಸಹಕಾರ ಸಂಘಗಳಲ್ಲಿ ದಾಸ್ತಾನಿದೆ. ಈ ಪೈಕಿ 1.68 ಲಕ್ಷ ಟನ್ ರಸಗೊಬ್ಬರ ಕಾಪು ದಾಸ್ತಾನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಲಭ್ಯವಿದೆ ಎಂದು ವಿವರಿಸಿದರು.

ಬೆಳೆ ವಿಮೆ ಮುಂದುವರಿಕೆ: ಬೆಳೆ ವಿಮೆ ಯೋಜನೆ ಮುಂದುವರಿಯಲಿದೆ. ಕಂತು ಪಾವತಿಯಲ್ಲಿ ರೈತರ ಪಾಲು ಇಳಿಸಿ, ಹೆಚ್ಚಿನ ಮೊತ್ತವನ್ನು ಸರ್ಕಾರವೇ ಭರಿಸುವ ಬಗ್ಗೆ ಕ್ರಮವಹಿಸಲಾಗುವುದು. ರೈತರ ಹೊರೆಯನ್ನು ಕಡಿಮೆ ಮಾಡಲು ಉದ್ದೇಶಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ 57 ಮಳೆಯಾಶ್ರಿತ ತಾಲ್ಲೂಕುಗಳಲ್ಲಿ ಯೋಜನೆ ಜಾರಿಯಾಗಿದ್ದು, ಹೆಚ್ಚುವರಿ 5 ತಾಲ್ಲೂಕುಗಳನ್ನು ಸೇರಿಸಲಾಗಿದೆ. ನೀರು ಕಡಿಮೆ ಇರುವೆಡೆ ಪ್ರತಿ ರೈತರ ಹೊಲಗಳಿಗೂ ನೀರು ಪೂರೈಸಲಾಗುತ್ತದೆ ಎಂದು ಹೇಳಿದರು.

ಎಲ್ಲ ಕಡೆ ‘ಅಮೃತ ಮಳಿಗೆ’

ರಾಜ್ಯದ ಎಲ್ಲ ಕಡೆಗಳಲ್ಲಿ ನಂದಿನಿ ಪಾರ್ಲರ್‌ಗಳ ಪಕ್ಕದಲ್ಲೇ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ‘ಅಮೃತ ಮಳಿಗೆ’ಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ ಎಂದು ಸಚಿವ ಚಲುವರಾಯಸ್ವಾಮಿ ತಿಳಿಸಿದರು.

ಬೆಂಗಳೂರಿನ ನಾಗರಭಾವಿ ಬಡಾವಣೆಯಲ್ಲಿ ಎರಡು ಕಡೆಗಳಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿದ್ದು, ರಾಜ್ಯದ ಎಲ್ಲ ಕಡೆ ಆರಂಭಿಸುವುದರಿಂದ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಸಿಗಲಿದೆ ಎಂದರು.

ನೆಟೆ ರೋಗ ಪರಿಹಾರಕ್ಕೆ ₹240 ಕೋಟಿ

ಕಲಬುರಗಿ, ಬೀದರ್, ವಿಜಯಪುರ, ಯಾದಗಿರಿ ಜಿಲ್ಲೆಗಳಲ್ಲಿ ನೆಟೆ ರೋಗದಿಂದ ತೊಗರಿ ಬೆಳೆಗೆ ಹಾನಿ ಆಗಿದ್ದು, ಪರಿಹಾರಕ್ಕೆ ₹240 ಕೋಟಿ ಬಿಡುಗಡೆ ಮಾಡಲಾಗುವುದು ಎಂದು ಚಲುವರಾಯಸ್ವಾಮಿ ತಿಳಿಸಿದರು. ಹಿಂದಿನ ಸರ್ಕಾರ ₹223 ಕೋಟಿ ಪರಿಹಾರ ಘೋಷಿಸಿತ್ತು.

ಆದರೆ ಚುನಾವಣೆ ಕಾರಣ ಬಿಡುಗಡೆ ಮಾಡಿರಲಿಲ್ಲ. 2 ಹೆಕ್ಟೇರ್‌ಗೆ ಸೀಮಿತವಾಗಿ ಹೆಕ್ಟೇರ್‌ಗೆ ತಲಾ ₹10 ಸಾವಿರ ಪರಿಹಾರ ನೀಡಲಾಗುವುದು. ಕಲಬುರಗಿ ಜಿಲ್ಲೆಯಲ್ಲಿ 1,98,488 ಹೆ., ಬೀದರ್ ಜಿಲ್ಲೆಯಲ್ಲಿ 14,495 ಹೆ., ವಿಜಯಪುರ ಜಿಲ್ಲೆಯಲ್ಲಿ 20,401 ಹೆ., ಮತ್ತು ಯಾದಗಿರಿ ಜಿಲ್ಲೆಯಲ್ಲಿ 10,259 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿತ್ತು ಎಂದರು.

ವಿವಾದಿತ ಪಾಠಗಳಿಗೆ ಕೊಕ್ ಖಚಿತ

ಒಂದನೇ ಪುಟದಿಂದ

‘ಸಮಿತಿಗೆ ವರದಿ ನೀಡಲು ಎರಡು ತಿಂಗಳ ಗಡುವು ನೀಡಲಾಗುವುದು’ ಎಂದು ತಿಳಿಸಿದರು. ‘ಪಠ್ಯದಲ್ಲಿ ಕೆಲವು ಪಾಠಗಳಷ್ಟೆ ವಿವಾದಕ್ಕೆ ಒಳಗಾಗಿವೆ. ಅವುಗಳನ್ನು ಬಿಟ್ಟು ಉಳಿದ ಪಾಠಗಳನ್ನು ಬೋಧನೆ ಮಾಡಲಾಗುತ್ತದೆ. ಪೋಷಕರು, ಮಕ್ಕಳು ಆತಂಕ ಪಡುವ ಅಗತ್ಯವಿಲ್ಲ. ಈ ಕುರಿತು ಎಲ್ಲ ಶಾಲೆಗಳಿಗೂ ಸ್ಪಷ್ಟ ಸೂಚನೆ ನೀಡಲಾಗುತ್ತದೆ. ಸಮಿತಿಯ ವರದಿಯ ನಂತರ ಇದೇ ಪಠ್ಯಕ್ರಮಕ್ಕೆ ಹೊಸ ಪಾಠಗಳನ್ನು ಸೇರಿಸಲಾಗುವುದು’ ಎಂದು ಮಾಹಿತಿ ನೀಡಿದರು.

ಈ ಮಧ್ಯೆ ಮೈಸೂರಿನಲ್ಲಿ ಮಾತನಾಡಿದ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ‘ಬಿಜೆಪಿ ಸರ್ಕಾರದ ಅವಧಿಯಲ್ಲಿ ಪಠ್ಯಪುಸ್ತಕಗಳಲ್ಲಿ ಆಗಿರುವ ಎಡವಟ್ಟುಗಳನ್ನು ನಾವು ತಿದ್ದುತ್ತೇವೆ’ ಎಂದು ಹೇಳಿದರು.

‘ಇತಿಹಾಸ ಪುರುಷರನ್ನೇ ಅವರು ಇತಿಹಾಸ ಪುರುಷರಲ್ಲ ಎಂದು ಹೇಳಿದ್ದಾರೆ. ಆ ತಪ್ಪು ತಿದ್ದಬೇಕಲ್ಲವೇ? ನಾವು ಚುನಾವಣೆಗೂ ಮುಂಚಿನಿಂದಲೇ ಅದನ್ನು ಹೇಳುತ್ತಿದ್ದೇವೆ. ಈಗ ಅದನ್ನು ಜಾರಿಗೊಳಿಸಲಿದ್ದೇವೆ. ವಾಸ್ತವವನ್ನು ಪಠ್ಯದಲ್ಲಿ ಸೇರಿಸಲಿದ್ದೇವೆ. ಸತ್ಯವಲ್ಲದ್ದನ್ನು ತೆಗೆದು ಹಾಕುತ್ತೇವೆ’ ಎಂದರು.

ಅಂಕಿ–ಅಂಶ

47,483 ಸರ್ಕಾರಿ ಶಾಲೆಗಳು

6,493 ಅನುದಾನಿತ ಶಾಲೆಗಳು

58 ಲಕ್ಷ ಹಿಂದಿನ ವರ್ಷ ಬಿಸಿಯೂಟ ಯೋಜನೆ ಫಲಾನುಭವಿ ಮಕ್ಕಳು

ಕೃಷಿ ಇಲಾಖೆ: ಶೇ 57 ಹುದ್ದೆ ಖಾಲಿ

ಬೆಂಗಳೂರು: ಕೃಷಿ ಇಲಾಖೆಯಲ್ಲಿ ವಿವಿಧ ದರ್ಜೆಯ ಶೇ 57ರಷ್ಟು ಹುದ್ದೆಗಳು ಖಾಲಿ ಇದ್ದು, ಹೊರ ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲು ಚಿಂತನೆ ನಡೆಸಲಾಗಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಹಿಂದಿನ ಸರ್ಕಾರ 368 ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕೆಪಿಎಸ್‌ಸಿಗೆ ಪ್ರಸ್ತಾವನೆ ಸಲ್ಲಿಸಿದೆ. ಇವುಗಳನ್ನು ಹೊರತುಪಡಿಸಿ ಇತರ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಒಟ್ಟು 8,982 ಹುದ್ದೆಗಳು ಮಂಜೂರಾಗಿದ್ದು, 3,787 ಹುದ್ದೆಗಳು ಭರ್ತಿ ಆಗಿವೆ. 5,195 ಹುದ್ದೆಗಳು ಖಾಲಿ ಇವೆ ಎಂದರು.

ಬ್ರಿಜ್‌ಭೂಷಣ್ ವಿರುದ್ಧ ಕ್ರಮಕ್ಕೆ 5 ದಿನ ಗಡುವು

ಒಂದನೇ ಪುಟದಿಂದ...

ಆಮರಣ ಉಪವಾಸ ಸತ್ಯಾಗ್ರಹ ಘೋಷಣೆ: ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಕುಸ್ತಿಪಟುಗಳು, ಭಾನುವಾರ ಸಂಸತ್ ಭವನಕ್ಕೆ ತೆರಳಿ ‘ಮಹಿಳಾ ಮಹಾ ಪಂಚಾಯತ್’ ನಡೆಸಲು ಮುಂದಾಗಿದ್ದರು. ಪ್ರತಿಭಟನಕಾರರನ್ನು ಮಾರ್ಗ ಮಧ್ಯೆಯೇ ತಡೆದಿದ್ದ ಪೊಲೀಸರು, ನಂತರ ಅವರಿಗೆ ಜಂತರ್ ಮಂತರ್‌ಗೆ ತೆರಳಲು ಅವಕಾಶ ನೀಡಿರಲಿಲ್ಲ.

‘ಬ್ರಿಜ್‌ಭೂಷಣ್ ಸಿಂಗ್ ವಿರುದ್ಧದ ನಮ್ಮ ಹೋರಾಟವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ’ ಎಂದು ಆರೋಪಿಸಿದ್ದ ಪ್ರತಿಭಟನಕಾರರು, ತಮ್ಮ ಸಾಧನೆಗೆ ಸಂದಿರುವ ಪದಕಗಳನ್ನು ಗಂಗಾ ನದಿಯಲ್ಲಿ ಹಾಕುತ್ತೇವೆ. ಬಳಿಕ ಇಂಡಿಯಾ ಗೇಟ್ ಬಳಿ ಆಮರಣ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಘೋಷಿಸಿದ್ದರು.

ಸಾಕ್ಷಿ ಮಲಿಕ್ ಈ ಬಗ್ಗೆ ಟ್ವೀಟ್ ಮಾಡಿದ್ದರು. ಇತರ ಕುಸ್ತಿಪಟುಗಳು ಈ ಟ್ವೀಟ್ ಅನ್ನು ಹಂಚಿಕೊಂಡಿದ್ದರು.

‘ಗಂಗೆಯಷ್ಟೇ ಪದಕಗಳು ಪವಿತ್ರ’: ‘ನಾವು ಗೆದ್ದಿಕೊಂಡಿರುವ ಈ ಪದಕಗಳು ಗಂಗೆಯಷ್ಟೇ ಪವಿತ್ರವಾಗಿವೆ’ ಎಂದು ಸಾಕ್ಷಿ ಮಲಿಕ್ ಹೇಳಿದ್ದಾರೆ.

ಟ್ವಿಟರ್‌ನಲ್ಲಿ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ಅವರು, ‘ಈ ಪದಕಗಳು ಇಡೀ ದೇಶದ ಪಾಲಿಗೂ ಪೂಜನೀಯವಾಗಿವೆ. ಆದರೆ, ತಪ್ಪು ಎಸಗಿರುವ ವ್ಯಕ್ತಿಯ ಪರವಾಗಿ ನಿಲ್ಲುತ್ತಿರುವ ವ್ಯವಸ್ಥೆಯೊಂದರ ಮುಖವಾಡವಾದಂತೆ ಈ ಪದಕಗಳನ್ನು ಬಳಸುವ ಬದಲು ಅವುಗಳನ್ನು ಹಾಕಲು ಪವಿತ್ರವಾದ ಗಂಗಾ ನದಿಯೇ ಹೆಚ್ಚು ಸೂಕ್ತವಾದ ಸ್ಥಳ’ ಎಂದು ತಿಳಿಸಿದ್ದಾರೆ.

ಕುಂಬ್ಳೆ ಬೆಂಬಲ: ಖ್ಯಾತ ಕ್ರಿಕೆಟಿಗ ಅನಿಲ್ ಕುಂಬ್ಳೆ ಅವರು ಪ್ರತಿಭಟನೆ ನಡೆಸುತ್ತಿರುವ ಕುಸ್ತಿಪಟುಗಳಿಗೆ ಬೆಂಬಲ ಸೂಚಿಸಿದ್ದಾರೆ. ‘ಮೇ 28ರಂದು ಕುಸ್ತಿಪಟುಗಳ ಮೇಲೆ ಹಲ್ಲೆ ನಡೆದಿರುವುದನ್ನು ಕೇಳಿ ದಿಗಿಲಾಗಿದೆ. ಮಾತುಕತೆ ಮೂಲಕ ಎಂಥ ಸಮಸ್ಯೆ ಯನ್ನೂ ಬಗೆಹರಿಸಲು ಸಾಧ್ಯ. ಕುಸ್ತಿಪಟುಗಳ ಸಮಸ್ಯೆಗೆ ಶೀಘ್ರವೇ ಪರಿಹಾರ ಸಿಗಲಿದೆ ಎಂದು ಆಶಿಸುತ್ತೇನೆ’ ಎಂದು ಕುಂಬ್ಳೆ ಟ್ವೀಟ್ ಮಾಡಿದ್ದಾರೆ.

‘ಇಂಡಿಯಾ ಗೇಟ್ ಪ್ರತಿಭಟನೆ ನಡೆಸುವ ಸ್ಥಳವಲ್ಲ’

ನವದೆಹಲಿ(ಪಿಟಿಐ): ‘ಇಂಡಿಯಾ ಗೇಟ್ ಬಳಿ ಪ್ರತಿಭಟನೆ ನಡೆಸಲು ಕುಸ್ತಿಪಟುಗಳಿಗೆ ಅವಕಾಶ ನೀಡುವುದಿಲ್ಲ. ರಾಷ್ಟ್ರೀಯ ಸ್ಮಾರಕವು ಪ್ರತಿಭಟನೆ ನಡೆಸುವಂತಹ ಸ್ಥಳವಲ್ಲ. ಧರಣಿ ನಡೆಸಲು ಬೇರೆ ಸ್ಥಳದ ಬಗ್ಗೆ ಮಾಹಿತಿ ನೀಡಲಾಗುವುದು’ ಎಂದು ಪೊಲೀಸ್ ಮೂಲಗಳು ಮಂಗಳವಾರ ಹೇಳಿವೆ.

‘ಇಂಡಿಯಾ ಗೇಟ್ ಬಳಿ ಧರಣಿ ನಡೆಸುವುದಕ್ಕೆ ಅನುಮತಿ ಕೋರಿ ಅವರು (ಕುಸ್ತಿಪಟುಗಳು) ಈ ವರೆಗೆ ನಮಗೆ ಮನವಿ ಸಲ್ಲಿಸಿಲ್ಲ. ಪ್ರತಿಭಟನೆ ನಡೆಸುವ ಸಂಬಂಧ ಅವರು ಡಿಸಿಪಿಗೆ ಮನವಿ ಸಲ್ಲಿಸಿದ ನಂತರ, ನಿರ್ಧಾರ ತಿಳಿಸಲಾಗುವುದು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ. ರಾಮಲೀಲಾ ಮೈದಾನ ಮತ್ತು ಬುರಾರಿಯಲ್ಲಿ ಪ್ರತಿಭಟನೆ ನಡೆಸುವಂತೆ ದೆಹಲಿ ಪೊಲೀಸರು ಸಲಹೆ ನೀಡುವ ಸಾಧ್ಯತೆ ಇದೆ ಎಂದು ಹೇಳಿವೆ.

ದೂರು: ಮಹಿಳಾ ಕುಸ್ತಿಪಟುಗಳ ಮೇಲೆ ದೆಹಲಿ ಪೊಲೀಸರು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿರುವ ಟಿಎಂಸಿ ವಕ್ತಾರ ಸಾಕೇತ್ ಗೋಖಲೆ, ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಿದ್ದಾರೆ.

‘ಕುಸ್ತಿಪಟುಗಳು ದಾರಿ ತಪ್ಪಿಸುತ್ತಿದ್ದಾರೆ’

ರೋಹ್ಟಕ್ (ಪಿಟಿಐ): ‘ಕುಸ್ತಿಪಟುಗಳು ನಮ್ಮ ಕುಟುಂಬದ ದಾರಿ ತಪ್ಪಿಸುತ್ತಿದ್ದಾರೆ. ಬ್ರಿಜ್‌ಭೂಷಣ್ ಸಿಂಗ್ ಅವರನ್ನು ಸಿಲುಕಿಸಲು ನಮ್ಮ ಕುಟುಂಬವನ್ನು ಬಳಸಿಕೊಳ್ಳುತ್ತಿದ್ದಾರೆ’ ಎಂದು, ಸಿಂಗ್ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿರುವ ಬಾಲಕಿಯ ಚಿಕ್ಕಪ್ಪ ಎಂದು ಹೇಳಿಕೊಳ್ಳುವ ಅಮಿತ್ ಪೆಹಲ್ವಾನ್ ಹೇಳಿದ್ದಾರೆ.‘ಬಾಲಕಿ ಜನಿಸಿದ್ದು 2004ರ ಫೆಬ್ರುವರಿ 22ರಂದು. ಆದರೆ, ಪ್ರತಿಭಟನೆ ನಡೆಸುತ್ತಿರುವ ಕುಸ್ತಿಪಟುಗಳು ನನ್ನ ಅಣ್ಣನ ಮಗಳ ವಯಸ್ಸನ್ನು 16 ವರ್ಷ ಎಂದು ಬದಲಿಸಿ, ಪೋಕ್ಸೊ ಕಾಯ್ದೆಯ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇದೊಂದು ಹಗರಣ. ಇದಕ್ಕಾಗಿ ನಮ್ಮ ಕುಟುಂಬವನ್ನು ಬಳಸಿಕೊಳ್ಳುತ್ತಿದ್ದಾರೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ತನಿಖೆಯ ಭಾಗವಾಗಿ ಮಾಹಿತಿ ಪಡೆಯಲು ಎಸ್‌ಐಟಿ ಅಧಿಕಾರಿಗಳು 15 ದಿನಗಳ ಹಿಂದೆ ನನ್ನ ಮನೆಗೆ ಬಂದಿದ್ದಾಗ ಈ ವಿಷಯ ತಿಳಿಯಿತು. ಸಾಕ್ಷಿ, ವಿನೇಶಾ ಅವರು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರಷ್ಟೆ’ ಎಂದರು.

ತಂಬಾಕು ಉತ್ಪನ್ನ: ಬಳಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಂಬಾಕು ಉತ್ಪನ್ನಗಳ ಬಳಕೆಯು ಕ್ಯಾನ್ಸರ್ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ರಾಜ್ಯದಲ್ಲಿ ಶೇ 22.8ರಷ್ಟು ವಯಸ್ಕರು ತಂಬಾಕು ಉತ್ಪನ್ನ ಬಳಸುತ್ತಿದ್ದಾರೆ’ ಎಂದು ಆರೋಗ್ಯ ಇಲಾಖೆಯ ರಾಜ್ಯ ತಂಬಾಕು ನಿಯಂತ್ರಣ ಘಟಕ ಕಳವಳ ವ್ಯಕ್ತಪಡಿಸಿದೆ.

ವಿಶ್ವ ತಂಬಾಕುರಹಿತ ದಿನದ ಪ್ರಯುಕ್ತ ಆರೋಗ್ಯ ಇಲಾಖೆ ರಾಜ್ಯದಾದ್ಯಂತ ಜಾಗೃತಿ ಕಾರ್ಯಕ್ರಮಗಳನ್ನು ಬುಧವಾರ ಹಮ್ಮಿಕೊಂಡಿದೆ. ‘ನಮಗೆ ಆಹಾರ ಬೇಕು, ತಂಬಾಕು ಅಲ್ಲ’ ಈ ವರ್ಷದ ಘೋಷವಾಕ್ಯ.

‘ವಿಶ್ವ ಆರೋಗ್ಯ ಸಂಸ್ಥೆಯ ‘ಗ್ಲೋಬಲ್ ಅಡಲ್ಟ್ ಟೊಬ್ಯಾಕೊ’ ಸಮೀಕ್ಷೆ 2016–17ರ ಪ್ರಕಾರ ರಾಜ್ಯದಲ್ಲಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ತಂಬಾಕು ಉತ್ಪನ್ನಗಳನ್ನು ಬಳಸುತ್ತಿದ್ದಾರೆ. ಸುಮಾರು 3 ಕೋಟಿ ಜನರು ಒಂದಲ್ಲ ಒಂದು ರೀತಿಯ ತಂಬಾಕು ಉತ್ಪನ್ನಗಳನ್ನು ಬಳಸುತ್ತಿದ್ದಾರೆ. ಈ ಉತ್ಪನ್ನಗಳನ್ನು ಬಳಸುತ್ತಿರುವ ಶೇ 22.8ರಷ್ಟು ವಯಸ್ಕರಲ್ಲಿ ಶೇ 8.8ರಷ್ಟು ಮಂದಿ ಧೂಮಪಾನಿಗಳಾಗಿದ್ದಾರೆ. ಶೇ 16.3ರಷ್ಟು ಮಂದಿ ಧೂಮರಹಿತ ತಂಬಾಕು ಉತ್ಪನ್ನಗಳನ್ನು ಬಳಸುತ್ತಿದ್ದಾರೆ’ ಎಂದು ಘಟಕ ಹೇಳಿದೆ.

1.50 ಲಕ್ಷ ಪ್ರಕರಣ: ‘ರಾಜ್ಯದಲ್ಲಿ 30ಕ್ಕೂ ಹೆಚ್ಚು ಗ್ರಾಮಗಳನ್ನು ತಂಬಾಕು ಮುಕ್ತ ಗ್ರಾಮಗಳು ಎಂದು ಘೋಷಿಸಲಾಗಿದೆ. ರಾಜ್ಯದಲ್ಲಿ ಕೋಟ್ಪಾ ಸ್ಕ್ವಾಡ್‌ಗಳ ಮೂಲಕ ಪ್ರತಿ ವರ್ಷ ಸರಾಸರಿ 1.50 ಲಕ್ಷ ಕೋಟ್ಪಾ ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ತಂಬಾಕು ಉತ್ಪನ್ನಗಳ ಬಳಕೆಗೆ ಪರಿಣಾಮಕಾರಿಯಾಗಿ ಕಡಿವಾಣ ಹಾಕಬೇಕಾದರೆ ತಂಬಾಕು ಉತ್ಪನ್ನಗಳ ತೆರಿಗೆಯನ್ನು ಹೆಚ್ಚಿಸಬೇಕು. ತಂಬಾಕು ಉತ್ಪನ್ನಗಳ ಜಾಹೀರಾತುಗಳಿಗೆ ನಿಷೇಧ ಹೇರಬೇಕು’ ಎಂದು ತಿಳಿಸಿದೆ.

‘ದೇಶದಲ್ಲಿ ತಂಬಾಕು ಬೆಳೆಯುವ ಎರಡನೆ ಅತೀ ದೊಡ್ಡ ರಾಜ್ಯ ಕರ್ನಾಟಕ. ತೋಟಗಾರಿಕೆ ಇಲಾಖೆಯ ಪ್ರಕಾರ ರಾಜ್ಯವು 51,175 ತಂಬಾಕು ಬೆಳೆಗಾರರನ್ನು ಹೊಂದಿದೆ. ಬೆಳಗಾವಿ, ಮೈಸೂರು, ಹಾಸನ, ಚಾಮರಾಜನಗರ ಮತ್ತು ದಾವಣಗೆರೆಯಲ್ಲಿ ತಂಬಾಕು ಬೆಳೆಯಲಾಗುತ್ತಿದೆ’ ಎಂದು ಹೇಳಿದೆ.

ಬಾಲಕರ ರಕ್ಷಣೆಗೆ ಹೊಸ ನೀತಿ

‘ಬಾಲಕರನ್ನು ತಂಬಾಕು ಹಾವಳಿಯಿಂದ ರಕ್ಷಿಸಲು ‘ತಂಬಾಕು ಮುಕ್ತ ಜನಾಂಗ-2030’ ಎಂಬ ಹೊಸ ನೀತಿಯನ್ನು ಪರಿಚಯಿಸುವ ಪ್ರಕ್ರಿಯೆ ನಡೆಯುತ್ತಿದೆ. ಕೋಟ್ಪಾ ಕಾಯ್ದೆ 2003ಕ್ಕೆ ತಿದ್ದುಪಡಿ ತರುವ ಪ್ರಸ್ತಾವ ಸರ್ಕಾರದ ಹಂತದಲ್ಲಿದೆ. ನಗರಾಭಿವೃದ್ಧಿ ಇಲಾಖೆ 2022ರಲ್ಲಿ ಹೊರಡಿಸಿರುವ ಅಧಿಸೂಚನೆ ಪ್ರಕಾರ ತಂಬಾಕು ಉತ್ಪನ್ನಗಳ ಮಾರಾಟಕ್ಕೆ ಪ್ರತ್ಯೇಕ ಪರವಾನಗಿ ಕಡ್ಡಾಯ. ತಂಬಾಕು ಉತ್ಪನ್ನಗಳ ಕಾನೂನುಬಾಹಿರ ಮಾರಾಟ ಮತ್ತು ಬಳಕೆಗೆ ಕಡಿವಾಣ ಹಾಕಲು ಆರೋಗ್ಯ ಇಲಾಖೆ ಪ್ರತ್ಯೇಕ ಮೊಬೈಲ್ ಆ್ಯಪ್ ಪರಿಚಯಿಸಿದೆ’ ಎಂದು ರಾಜ್ಯ ತಂಬಾಕು ನಿಯಂತ್ರಣ ಘಟಕ ಹೇಳಿದೆ.

‘ಪಠ್ಯ ಬದಲಾವಣೆ: ಸಮಾಜದಿಂದಲೇ ಉತ್ತರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತೀಯ ಸಂಸ್ಕೃತಿ, ಸಾಹಿತ್ಯ, ವಿಚಾರಗಳ ಆಧಾರದಲ್ಲಿ ಹೊಸ ಪಠ್ಯಗಳನ್ನು ಪರಿಚಯಿಸಿದ್ದೆವು. ಅದನ್ನು ಬದಲಿಸಲು ಸಮಿತಿ ಮಾಡಲು ಹೊರಟಿದ್ದಾರೆ. ಇದಕ್ಕೆ ಸಮಾಜವೇ ಪ್ರತಿಕ್ರಿಯಿಸಲಿದೆ’ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಶಿಕ್ಷಣ ಕುರಿತ ವಿದ್ಯಮಾನಗಳನ್ನು ಪೋಷಕರು ಗಮನಿಸುತ್ತಿದ್ದಾರೆ. ಪಠ್ಯವನ್ನು ಪದೇ ಪದೇ ಬದಲಿಸುವುದರಿಂದ ಮಕ್ಕಳಿಗೆ ಸಮಸ್ಯೆ ಆಗಬಾರದು. ಜವಾಬ್ದಾರಿಯುತ ಸರ್ಕಾರ ಏನು ಮಾಡುತ್ತದೆ ನೋಡೋಣ’ ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

‘ಎನ್‌ಇಪಿ ಮೂಲಕ ಈಗ ಮಕ್ಕಳು ಅಧ್ಯಯನ ಆರಂಭಿಸಿದ್ದಾರೆ. ಎನ್‌ಇಪಿ ಮಾಡುವಾಗಲೇ ಸಮಿತಿ ರಚನೆ ಮಾಡಿ ಎಲ್ಲರ ಅಭಿಪ್ರಾಯ ಪಡೆದು ಜಾರಿ ಮಾಡಲಾಗಿದೆ’ ಎಂದು ಬೊಮ್ಮಾಯಿ ತಿಳಿಸಿದರು.

‘ಕಾಮಗಾರಿಗಳ ಬಗ್ಗೆ ಅನುಮಾನಗಳಿದ್ದರೆ ಯಾವುದೇ ತನಿಖೆ ನಡೆಸಬಹುದು. ಎದುರಿಸಲು ನಾವು ಸಿದ್ಧ. ತನಿಖೆಯಿಂದ ಕಾಮಗಾರಿಗಳಿಗೆ ಅಡ್ಡಿ ಆಗಬಾರದು. ‘ಟಾರ್ಗೆಟ್’ ಮಾಡಿ ಕಾಮಗಾರಿ ಬದಲಾವಣೆ ಮಾಡಬಾರದು’ ಎಂದು ಹೇಳಿದರು.

ಉದ್ಯೋಗ ವಾಣಿ

ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್
ನೋಂದಾಯಿತ ಕಛೇರಿ: 17, ಜೆಮ್‌ಶೆಡ್‌ಜೀ ಟಾಟಾ ರಸ್ತೆ, ಮುಂಬಯಿ – 400020
CIN No. L23201MH1952GOI008858

ಅಗತ್ಯವಿದೆ

ಹೆಚ್‌ಪಿ ಗ್ರೀನ್ ಆರ್ ಅಂಡ್ ಡಿ ಕೇಂದ್ರ, ಬೆಂಗಳೂರು, ಇಲ್ಲಿಗೆ ನಿಗದಿತ ಅವಧಿ ಸಂಶೋಧನಾ ಸಹಾಯಕರು (ಎಫ್‌ಟಿಆರ್‌ಎ) ಪಿಹೆಚ್.ಡಿ/ಎಂ.ಟೆಕ್) ಮತ್ತು ನಿಗದಿತ ಅವಧಿ ಯೋಜನಾ ಸಹಾಯಕರು (ಎಫ್‌ಟಿಪಿಎ) (ಎಂ.ಎಸ್‌ಸಿ/ಬಿ.ಎಸ್‌ಸಿ/ಡಿಪ್ಲಮೋ/ಪಿಜಿ ಡಿಪ್ಲಮೋ)

ಮಹಾರತ್ನ ಕೇಂದ್ರ ಸಾರ್ವಜನಿಕ ವಲಯದ ಕಂಪೆನಿಯಾದ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ತನ್ನ **ಹೆಚ್‌ಪಿ ಗ್ರೀನ್ ಆರ್ ಅಂಡ್ ಡಿ ಕೇಂದ್ರ, ಬೆಂಗಳೂರು, ಇಲ್ಲಿಗೆ** ನಿಗದಿತ ಅವಧಿ ಸಂಶೋಧನಾ ಸಹಾಯಕರು ಮತ್ತು ನಿಗದಿತ ಅವಧಿ ಯೋಜನಾ ಸಹಾಯಕರನ್ನು ತೊಡಗಿಸಿಕೊಳ್ಳಲು ಯೋಜಿಸಿದೆ. ವಿವರಗಳಿಗಾಗಿ, ಮತ್ತು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದಕ್ಕಾಗಿ, ನಮ್ಮ ವೆಬ್‌ಸೈಟ್ **www.hindustanpetroleum.com** ಗೆ ಭೇಟಿ ನೀಡಿ. ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಆರಂಭ ದಿನಾಂಕ 01.06.2023 ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ 30.06.2023.

/hpcl | /hpcl | /hpcl
www.hindustanpetroleum.com

भारत इलेक्ट्रॉनिक्स BHARAT ELECTRONICS
QUALITY. TECHNOLOGY. INNOVATION.

ಭಾರತ್ ಇಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಸಚಿವಾಲಯದ ಅಡಿಯಲ್ಲಿ, ಭಾರತ ಸರ್ಕಾರದ ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ರಕ್ಷಣಾ ಮಂತ್ರಾಲಯದ ಅಧೀನ ಒಂದು ನವರತ್ನ ಕಂಪನಿ ಮತ್ತು ಭಾರತದ ಪ್ರಮುಖ ವೃತಿಪರ ಎಲೆಕ್ಟ್ರಾನಿಕ್ಸ್ ಕಂಪನಿಗೆ ಮಿಲಿಟರಿ ರಾಡಾರ್ ಎಸ್ ಬಿ ಯು ಗೆ ತಕ್ಷಣ ನೇಮಕಾತಿ / ಪುನ:ಉದ್ಯೋಗದ ಆಧಾರದ ಮೇಲೆ ಭಾರತೀಯ ಭೂಸೇನೆಯಿಂದ ನಿವೃತ್ತಿ ಹೊಂದಿದ ಅಥವಾ ಸೇವೆಸಲ್ಲಿಸುತ್ತಿರುವ ಅಧಿಕಾರಿಗಳು ಮತ್ತು ಮಿಲ್ ಕಾಂ ಎಸ್ ಬಿ ಯು ಗಾಗಿ ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ ವಿಷಯದಲ್ಲಿ ಅನುಭವೀ ಇಂಜಿನಿಯರ್‌ಗಳ ಆವಶ್ಯಕತೆ ಇದೆ.
ಆಯ್ದ ಅಭ್ಯರ್ಥಿಗಳು ಆವಶ್ಯಕತೆಗಳನುಸಾರ ಪ್ರವಾಸ ಕೈಗೊಳ್ಳಲು ಆಸಕ್ತಿಯನ್ನು ಹೊಂದಿರತಕ್ಕದ್ದು. ಹುದ್ದೆಯ ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಹುದ್ದೆ/ ಶ್ರೇಣಿ	೦೧.೦೫.೨೦೨೩ ರಂತೆ ಗರಿಷ್ಠ ವಯೋಮಿತಿ	ಹುದ್ದೆಗಳ ಸಂಖ್ಯೆ	೦೧.೦೫.೨೦೨೩ ರಂತೆ ಕನಿಷ್ಠ ಅನುಭವ
೧	ಹಿರಿಯ ಸಹಾಯಕ ಇಂಜಿನಿಯರ್ – ಇ-೧ (ಎಂ ಆರ್ ಎಸ್ ಬಿ ಯು ಗೆ ೧೫ವರ್ಷಗಳ ನಿಗದಿತ ಅವಧಿಯ ಆಧಾರದ ಮೇಲೆ)	೫೦ ವರ್ಷಗಳು	೪	ರಕ್ಷಣ ಪಡೆಗಳಿಂದ ಜೆಸಿಒ ಅಥವಾ ಸಮಾನ ಶ್ರೇಣಿಯಲ್ಲಿ ಮಾಜಿ ಸೈನಿಕರಿಗೆ ಕನಿಷ್ಠ ೧೫ ವರ್ಷಗಳ ಸಂಗತ ಅಹತೋತ್ತರ ಅನುಭವ.
೨	ಪ್ರಾಜೆಕ್ಟ್ ಇಂಜಿನಿಯರ್ (ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್) ಮಿಲ್ ಕಾಂ ಎಸ್ ಬಿ ಯು ಗಾಗಿ	೩೨ವರ್ಷಗಳು	೨	ಕನಿಷ್ಠ ೨ ಅರ್ಹತೋತ್ತರ ಅನುಭವ ವರ್ಷಗಳ ಸಂಗತ

ಸಂಗತ ಅನುಭವ ಹೊಂದಿದಂತಹ ಅಭ್ಯರ್ಥಿಗಳು ಮಾತ್ರ ದಿನಾಂಕ ೧೫.೦೬.೨೦೨೩ ಅಥವಾ ಅದಕ್ಕೂ ಮುಂಚಿತವಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.
ಅಧಿಕ ವಿವರಗಳಿಗಾಗಿ ದಯವಿಟ್ಟು ನಮ್ಮ ವೆಬ್ ಸೈಟ್ www.bel-india.in ಅನ್ನು ವೀಕ್ಷಿಸಿ.

‘हर एक काम देश के नाम’

ಒಲಿಂಪಿಯಾಡ್: ನಗರದ ಮೂವರಿಗೆ ರ್‍ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಒಎಫ್ ಒಲಿಂಪಿಯಾಡ್ 2022–23 ಸಾಲಿನ ಪರೀಕ್ಷೆಯಲ್ಲಿ ಬೆಂಗಳೂರಿನ ಮೂವರು ವಿದ್ಯಾರ್ಥಿಗಳು ಅಂತರರಾಷ್ಟ್ರೀಯ ರ್‍ಯಾಂಕ್ ಪಡೆದಿದ್ದಾರೆ.

ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ 12ನೇ ತರಗತಿ ವಿದ್ಯಾರ್ಥಿ ಆದಿತ್ಯ ವಿವೇಕ್ ಗುಲವಾನಿ ಅಂತರರಾಷ್ಟ್ರೀಯ ಕಾಮರ್ಸ್ ಒಲಿಂಪಿಯಾಡ್‌ನಲ್ಲಿ ಪ್ರಥಮ ರ್‍ಯಾಂಕ್ ಗಳಿಸಿ ₹50 ಸಾವಿರ ನಗದು ಪ್ರಮಾಣಪತ್ರ, ಚಿನ್ನದ ಪದಕ ಪಡೆದಿದ್ದಾರೆ.

ಪ್ರೆಸಿಡೆನ್ಸಿ ಶಾಲೆಯ 11ನೇ ತರಗತಿ ವಿದ್ಯಾರ್ಥಿ ಅಭಿನವ್ ಜೈನ್ ವಾಣಿಜ್ಯ ಒಲಿಂಪಿಯಾಡ್‌ನಲ್ಲಿ ಪ್ರಥಮ, ದೀನ್ಸ್ ಅಕಾಡೆಮಿಯ 3ನೇ ತರಗತಿಯ ವಿದ್ಯಾರ್ಥಿ ವೇದಾಂಶ್ ಬನ್ಸಾಲ್ ವಿಜ್ಞಾನ ಒಲಿಂಪಿಯಾಡ್‌ನಲ್ಲಿ ಪ್ರಥಮ ರ್‍ಯಾಂಕ್ ಪಡೆದಿದ್ದರು. ಇವರಿಬ್ಬರಿಗೂ ತಲಾ ₹50 ಸಾವಿರ ನಗದು ಬಹುಮಾನ, ಚಿನ್ನದ ಪದಕ ವಿತರಿಸಲಾಗಿದೆ.

ಎಸ್‌ಒಎಫ್ ಒಲಿಂಪಿಯಾಡ್ ಪರೀಕ್ಷೆಯಲ್ಲಿ 70 ದೇಶಗಳಿಂದ ಸುಮಾರು 60 ಲಕ್ಷ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬೆಂಗಳೂರಿನಿಂದಲೇ 4.10 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸೈನ್ಸ್ ಒಲಿಂಪಿಯಾಡ್ ಫೌಂಡೇಷನ್ ದೆಹಲಿಯಲ್ಲಿ ಮೇ 28ರಂದು ಪ್ರಶಸ್ತಿ ಪ್ರದಾನ ಮಾಡಿತು.

ಜಾಮೀನು ಪಡೆಯಲು ಪಿಎಂಎಲ್‌ಎ ಪ್ರಶ್ನಿಸಿ ಅರ್ಜಿ: 'ಸುಪ್ರೀಂ' ಅಸಮಾಧಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಮನ್ಸ್‌ಗಳಿಂದ ತಪ್ಪಿಸಿಕೊಳ್ಳಲು ಇಲ್ಲವೇ ಜಾಮೀನು ಪಡೆಯುವುದಕ್ಕಾಗಿ ಕೆಲ ಆರೋಪಿಗಳು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ)ಯ ನಿಬಂಧನೆಗಳ ಸಿಂಧುತ್ವವನ್ನೇ ಪ್ರಶ್ನಿಸುವುದನ್ನು ರೂಢಿಸಿಕೊಂಡಿದ್ದಾರೆ ಎಂದು ಸುಪ್ರೀಂಕೋರ್ಟ್ ಮಂಗಳವಾರ ಅಸಮಾಧಾನ ವ್ಯಕ್ತಪಡಿಸಿತು.

ನ್ಯಾಯಮೂರ್ತಿಗಳಾದ ಬೇಲಾ ಎಂ.ತ್ರಿವೇದಿ ಹಾಗೂ ಪ್ರಶಾಂತಕುಮಾರ್ ಮಿಶ್ರಾ ಅವರಿದ್ದ ರಜಾಕಾಲದ ನ್ಯಾಯ ಪೀಠ ಅರ್ಜಿ ವಿಚಾರಣೆ ನಡೆಸಿತು. ಛತ್ತೀಸಗಡದಲ್ಲಿ ನಡೆದಿದೆ ಎನ್ನಲಾದ ಅಬಕಾರಿ ಹಗರಣದ ಆರೋಪಿಯೊಬ್ಬರು ಮೇಲ್ಮನವಿ ಸಲ್ಲಿಸಿದ್ದರು.

'ಪರಿಹಾರ ಕೋರಿ, ಹಣ ಅಕ್ರಮ ವರ್ಗಾವಣೆ ಕಾಯ್ದೆಯ ವಿರುದ್ಧ ಸಲ್ಲಿಕೆಯಾಗುವ ಇಂಥ ಮೇಲ್ಮನವಿಗಳು, ನ್ಯಾಯ ಪಡೆಯುವುದಕ್ಕಾಗಿ ಇರುವ ಇತರ ವೇದಿಕೆಗಳಿಂದ ಅರ್ಜಿದಾರರನ್ನು ವಂಚಿತರನ್ನಾಗಿ ಮಾಡುತ್ತವೆ' ಎಂದು ನ್ಯಾಯಪೀಠ ಹೇಳಿತು.

ಇ.ಡಿ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಪಿಎಂಎಲ್‌ಎದ ಕೆಲ ನಿಬಂಧನೆಗಳನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿ ಸಮರ್ಥನೀಯವಲ್ಲ ಎಂದು ವಾದಿಸಿದರು.

'ಖರೀದಿಯಾಗದ 3 ವರ್ಷಗಳ ಪುಸ್ತಕ'

ಪುಸ್ತಕೋದ್ಯಮದ ಸಮಸ್ಯೆಗಳನ್ನು ಪರಿಹರಿಸುವಂತೆ ಮನವಿ

ಪ್ರಜಾವಾಣಿ ವಾರ್ತೆ

ನಿಡಸಾಲೆ ಪುಟಸ್ವಾಮಯ್ಯ ಅವರು ಮಧು ಬಂಗಾರಪ್ಪ ಅವರಿಗೆ ಮನವಿ ಸಲ್ಲಿಸಿದರು. ನಿತಿನ್ ಶಾ, ಆರ್. ದೊಡ್ಡೇಗೌಡ ಇದ್ದಾರೆ.

ಬೆಂಗಳೂರು: 'ಕನ್ನಡ ಪುಸ್ತಕೋದ್ಯಮ ಸಂಕಷ್ಟದಲ್ಲಿದ್ದು, ಕನ್ನಡ ಪುಸ್ತಕಗಳನ್ನು ಖರೀದಿಸಲು ಮುಂಬರುವ ಬಜೆಟ್‌ನಲ್ಲಿ ₹25 ಕೋಟಿ ಮೀಸಲಿಡಬೇಕು' ಎಂದು ಪ್ರಕಾಶಕರು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ನಿಯೋಗವು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರನ್ನು ಮಂಗಳವಾರ ಭೇಟಿ ಮಾಡಿ, ಪುಸ್ತಕೋದ್ಯಮದ ಸಮಸ್ಯೆಗಳನ್ನು ಪರಿಹರಿಸುವಂತೆ ಮನವಿ ಮಾಡಿಕೊಂಡಿತು.

'ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ 2020ರಿಂದ ಮೂರು ವರ್ಷಗಳ ಪುಸ್ತಕ ಖರೀದಿ ನಡೆದಿಲ್ಲ. ಇದರಿಂದಾಗಿ ರಾಜ್ಯದ ಎಲ್ಲೆಡೆ ಓದುಗರು ಹೊಸ ಕೃತಿಗಳಿಂದ ವಂಚಿತರಾಗಿದ್ದಾರೆ. ಬಿಬಿಎಂಪಿ ₹ 450 ಕೋಟಿ ಗ್ರಂಥಾಲಯ ಕರ ಸಂಗ್ರಹಿಸಿದೆ. ಇದನ್ನು ಸಂಬಂಧಿಸಿದ ಇಲಾಖೆಗೆ ಹಸ್ತಾಂತರಿಸಿಲ್ಲ. ಇದರಿಂದಾಗಿ ಪ್ರಕಾಶನ ಉದ್ಯಮ ಸಂಕಷ್ಟಕ್ಕೆ ಸಿಲುಕಿದೆ' ಎಂದು ಪ್ರಕಾಶಕರು ಹೇಳಿದರು.

'ಪುಸ್ತಕ ಪ್ರಕಟಣೆ ವೆಚ್ಚ ಗಗನಕ್ಕೇರಿದೆ. ಆದರೆ, ಸಗಟು ಖರೀದಿಯಲ್ಲಿ ಮಾತ್ರ ಹಳೆಯ ದರವನ್ನೇ ನಿಗದಿಪಡಿಸಲಾಗಿದೆ. ಹೆಚ್ಚಿರುವ ಕಾಗದ, ಮುದ್ರಣ ಬೆಲೆ, ಸರಕು ಮತ್ತು ಸೇವಾ ತೆರಿಗೆಯಿಂದ (ಜಿಎಸ್‌ಟಿ) ಪ್ರಕಾಶನ ರಂಗ ತತ್ತರಿಸಿದೆ. ಆದ್ದರಿಂದ ಒಂದು ಪುಟದ ಬೆಲೆಯನ್ನು ಇನ್ನೂ ₹40 ಪೈಸೆ ಹೆಚ್ಚಳ ಮಾಡಬೇಕು' ಎಂದು ಮನವಿ ಮಾಡಿಕೊಂಡರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಮಧು ಬಂಗಾರಪ್ಪ, 'ರಾಜ್ಯದಲ್ಲಿ ಉತ್ತಮ ಸ್ಥಿತಿಯಲ್ಲಿದ್ದ ಪ್ರಕಾಶನ ರಂಗ, ಕೆಲವು ವರ್ಷಗಳಿಂದ ದುಸ್ಥಿತಿಗೆ ತಲುಪಿರುವುದು ಗಮನಕ್ಕೆ ಬಂದಿದೆ. ಈ ಸಮಸ್ಯೆಗಳನ್ನು ಆದ್ಯತೆಯ ಮೇರೆಗೆ ಪರಿಹರಿಸಲಾಗುವುದು. ಪುಸ್ತಕ ಸಂಸ್ಕೃತಿಯನ್ನು ಬಲಪಡಿಸಲಾಗುವುದು' ಎಂದು ಭರವಸೆ ನೀಡಿದರು.

ನಿಯೋಗದಲ್ಲಿ ಸಂಘದ ಅಧ್ಯಕ್ಷ ನಿಡಸಾಲೆ ಪುಟಸ್ವಾಮಯ್ಯ, ಕಾರ್ಯದರ್ಶಿ ಆರ್. ದೊಡ್ಡೇಗೌಡ, ಪ್ರಕಾಶಕರಾದ ನಿತಿನ್ ಶಾ, ಜಿ.ಎನ್. ಮೋಹನ್, ಮಾನಸ, ಬಿ.ಕೆ. ಸುರೇಶ್, ನಿಡಸಾಲೆ ವಿಜಯ್ ಇದ್ದರು.

ಪಠ್ಯಪುಸ್ತಕದಿಂದ 'ಖಾಲಿಸ್ತಾನ' ಉಲ್ಲೇಖ ತೆಗೆದುಹಾಕಿದ ಎನ್‌ಸಿಇಆರ್‌ಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: 12ನೇ ತರಗತಿ ರಾಜ್ಯಶಾಸ್ತ್ರ ಪಠ್ಯಪುಸ್ತಕದಿಂದ ಖಾಲಿಸ್ತಾನದ ಉಲ್ಲೇಖವಿದ್ದ ಎರಡು ಪ್ಯಾರಾಗಳನ್ನು ತೆಗೆದುಹಾಕುವಂತೆ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ (ಎಸ್‌ಜಿಪಿಸಿ) ಒತ್ತಾಯಿಸಿದ ಬಳಿಕ ಅದನ್ನು ತೆಗೆದುಹಾಕಲು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ನಿರ್ಧರಿಸಿದೆ.

'ಆನಂದಪುರ ಸಾಹಿಬ್ ನಿರ್ಣಯ: 1973' ಎಂಬ ವಿಷಯವಿರುವ ಕಡೆ 'ಪ್ರತ್ಯೇಕ ಸಿಖ್ ದೇಶ ಸ್ಥಾಪನೆ' ಎಂಬ ವಾಕ್ಯವಿರುವುದನ್ನು ಎಸ್‌ಜಿಪಿಸಿ ಕೇಂದ್ರ ಸರ್ಕಾರದ ಗಮನಕ್ಕೆ ತಂದಿತ್ತು. ಇದನ್ನು ಈಗ ತೆಗೆದು ಹಾಕಲಾಗಿದೆ.

ಪುಸ್ತಕ ಅಚ್ಚಾದ ಬಳಿಕ ಎನ್‌ಸಿಇಆರ್‌ಟಿ ಈ ಶಿಫಾರಸುಗಳನ್ನು ನೀಡಿತು. ಈ ಕಾರಣ ಎನ್‌ಸಿಇಆರ್‌ಟಿ ನೀಡಿರುವ ತಿದ್ದುಪಡಿಗಳನ್ನು ಸದ್ಯ ಡಿಜಿಟಲ್ ಪಠ್ಯಪುಸ್ತಕದಲ್ಲಿ ಮಾಡಲಾಗುವುದು ಎಂದು ಕೇಂದ್ರ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಕಾರ್ಯದರ್ಶಿ ಸಂಜಯ್ ಕುಮಾರ್ ತಿಳಿಸಿದ್ದಾರೆ.

ಪಠ್ಯಕ್ರಮದಲ್ಲಿ ಮತ್ತೊಂದು ಕಡೆ 'ಭಾರತದಿಂದ ವಿಭಜನೆಗೊಂಡು ಪ್ರತ್ಯೇಕ ಖಾಲಿಸ್ತಾನ ಸ್ಥಾಪಿಸುವ ನಿಟ್ಟಿನಲ್ಲಿ ಹಲವು ಉಗ್ರವಾದಿಗಳು ಚಳವಳಿ ಆರಂಭಿಸಿದರು' ಎಂದು ಉಲ್ಲೇಖಿಸಲಾಗಿತ್ತು. ಇದನ್ನು ಸಂಪೂರ್ಣ ತೆಗೆದುಹಾಕಲಾಗಿದೆ' ಎಂದು ಅವರು ಹೇಳಿದ್ದಾರೆ.

9 ಮಂದಿಗೆ ನೆರವಾದ ಬಾಲಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಮಹಡಿಯಿಂದ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ನಗರದ ಕಾಟನ್ ಪೇಟೆಯ 14 ವರ್ಷದ ಬಾಲಕಿ, ಅಂಗಾಂಗ ದಾನದ ಮೂಲಕ 9 ಮಂದಿಗೆ ನೆರವಾಗಿದ್ದಾಳೆ.

ಕೃತಿ ಜೈನ್ ಅಂಗಾಂಗ ದಾನ ಮಾಡಿದ ಬಾಲಕಿಯಾಗಿದ್ದಾಳೆ. ಬಾಲ್ಡ್‌ವಿನ್ ಶಾಲೆಯಲ್ಲಿ ಅವಳು 8ನೇ ತರಗತಿ ಓದುತ್ತಿದ್ದಳು. ಮೇ 24ರಂದು ಮನೆಯಲ್ಲಿ ಆಟವಾಡುತ್ತಿದ್ದಾಗ ಮನೆಯ ಮಹಡಿಯಿಂದ ಬಿದ್ದು ಗಾಯಗೊಂಡಿದ್ದಳು. ಸ್ಥಳೀಯ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ಬಿಜಿಎಸ್ ಗ್ಲೆನಿಗಲ್ಸ್ ಗ್ಲೋಬಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಕೆಯ ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ವೈದ್ಯರು ಮೇ 28ರಂದು ಘೋಷಿಸಿದರು. ಪೋಷಕರ ಸಮ್ಮತಿ ಮೇರೆಗೆ ಆಕೆಯ ಶ್ವಾಸಕೋಶ, ಯಕೃತ್ತು, ಮೂತ್ರ ಪಿಂಡಗಳು, ಹೃದಯದ ಕವಾಟ ಮತ್ತು ಅಕ್ಷಿಪಟಲಗಳನ್ನು ಪಡೆದು, ಅಂಗಾಂಗ ವೈಫಲ್ಯಕ್ಕೆ ಒಳಗಾದವರಿಗೆ ಕಸಿ ಮಾಡಲಾಗಿದೆ. ಶ್ವಾಸಕೋಶವನ್ನು ಚೆನ್ನೈಗೆ ರವಾನಿಸಿ, ಕಸಿ ನಡೆಸಲಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

HOLY ANGEL'S High School Hampinagar, Vijayanagar, Bengaluru-560104. Phone:23404465/ 23202042 holyangels.highschoolrpclayout@gmail.com Requires Experienced Trained Teachers to handle Kannada, English, Science, for Primary/Higher Primary and Computer Teacher & P.E.Teacher for High School for Academic year 2023-2024. STATE & ICSE. Qualification: B.A./B.Sc.,B.Ed, M.A/M.Sc.,M.Ed. Only English medium candidates need apply.

CAMLIN HIGH SCHOOL, 6th 'C' Main Hampinagara, Vijayanagar 2nd Stage, Bangalore. REQUIRES TEACHERS MATHS, ENGLISH, SOCIAL STUDIES. Contact for immediate appointments. Contact: 080-23301363

WANTED KANNADA TEACHER: Highschool Sagar Convent Kanakapura Main Bangalore 82 Near APS Engineering College Good Salary: 9342552428

NEW FLORENCE English school, 8th main, shivanagar, Rajajinagar, Bengaluru-10 Requires lady teachers to handle higher primary (English, Maths, Science, Social), High school (English, Social, PCM, CBZ) 9620396782, 9845346754

St. Benedict's Academy CBSE School, Asirvanam, Anchepalya, Kengeri, Mysore Road, Bangalore-74
Requires Trained & Experienced **PRINCIPAL** Post graduate with prior experience.
TEACHERS ENGLISH MATHEMATICS
Call: 98868 12398
Mail your resume to: jeromeosb@gmail.com

WANTED ENGLISH medium teachers for taking classes for nursery primary and High school, peon's watchman and ayahs. Contact personally with resume, original documents. Manjula Nadgir Memorial English School Near Modi Hospital Rajajinagar Bangalore – 560010. Ph: 23387333, 8867065525

NATIONAL PUBLIC School (CBSE) Bandappa Garden,Bangalore-54. Wanted TEACHERS BA, BEd/ BSc, BEd for Primary, High School (All Subjects) Call 9845054168, 080-23374802

MOUNT CARMEL PU COLLEGE. #58, Palace Road, Bengaluru-52. mountcarmelpucollege@yahoo.co.in Phone:22370404, requires Post Graduates in Library Science. Apply before 09/06/2023

LR CAMBRIDGE SCHOOL Wilson Garden, Bangalore-30 Required HIGHER PRIMARY, HIGH SCHOOL SCIENCE, MATHS TEACHERS 9481613600

WANTED TRAINED/ Untrained Experienced Lady TEACHERS for Florence Primary & High School, Sanjaynagar: 6361720478/ 9591569625

ENGLISH & MATH TEACHERS needed for CHITRAKOOTA CBSE School in Nagarbhavi, Kengeri Ring Road, with High Salary Immediately or for the academic year. Call: 7829647333.

St. Lord's International Public School
CBSE Pattern/ State Syllabus
#114/2, 10th Main, Mariyappanpalya, KP Agrahara, Bangalore-23
Required **TEACHERS**
NTT, D.Ed, BA, B.Sc/ B.Ed BP.Ed/ CP.Ed.Freshers / Experience for Nursery, Primary & High School (All Subjects)
Computer Operators
In & Around Vijay Nagar, Rajajinagar, Chamarajapet, Magadi Road.
Walk-in Monday to Saturdays
Call: 80731 62527
Mail: shree.slips@gmail.com

REQUIRED ENGLISH, Computer (online) TEACHERS for High School M.A./MA., B.Ed. NAYANA VIDYANIKETANA SCHOOL, Near Kengeri. Contact: 9632202212, 9901030617

ANTONY SCHOOL Mathikere, Bangalore. Wanted Female TEACHERS BA. B.Ed (English, Social) B.Sc B.Ed. 9663350140/ 23471952

WANTED TEACHERS/ English (Primary) Science, Social Science (High School) P.E. Sans Public School, Nandini Layout. 9448228407

Wanted

WANTED COUNTER Sales Men/ Women Ready Made Blouse Shop in Chickpet, Bangalore CONTACT: 9448121073

EDUCATION CORNER ಕ್ಲಾಸಿಫೈಡ್ಸ್



Call Centre

WANTED
PG ACCOMMODATION & FOOD PROVIDED
We are hiring for Domestic Call Centre & BPO
FEMALE TELECALLERS Freshers & Experience
TEAM LEADERS Freshers & 1 Year Experience
SALES MANAGERS Minimum 2 Yrs Experience
SALARY 15000 to 50000 Plus Incentives.
CALL OR WHATSAPP YOU CV
87223 21122
91132 49952
WORK LOCATION : BENGALURU

Engg/ Production Technical

WANTED: ITI, Diploma Holders, Fitters, Electricians, Helpers (50 Members) near Kengeri for S K RESOURCE SOLUTIONS-080 23133633/ 23134876/ 9845739500. Good Salary with All benefits.

WANTED ENGINEERS. Diploma/B.E (Mechanical) with 3-5 years experience. VINUMAC 205-A, Peenya 3rd phase Bangalore-58 Phone: 080-28391959, 28394512 admin@vinumac.com

PREM INDUSTRIES MYSORE (Moulding Industry) Requires: 1) Mould Maker- Male- Diploma from NTTF/ GTTC/ CIPET. 2) Mould designer- Male- Diploma or PG from GTTC/ CIPET Has experience designing in automotive/ electrical parts. 3) Surface Grinding Operator- Male- Diploma or ITI. All above 3 Positions should have 2 to 3 yrs Experience & should work Individual & Team. Send your CV and Cover letter to hr@premind.com or Prem Industries, 299/A, Hebbal Industrial Area, Mysore-16.

WANTED ITI Fitters, Freshers for Reputed Company at Bangalore. Attractive Salary. Contact: 8762181106

"**WANTED DIPLOMA- CANDIDATE** from ECE, EEE and CSE, with Experience of 0/2 Year only. Contact: 9986934382/ 7795734869"

General

JOB VACANCY
(CONTRACTUAL) AT URC 515 ARMY BASE WORKSHOP ULSOOR, BANGALORE-08
Sale Attendant- 01:
(Minimum middle class pass)
(a) Eligible category as per preference: i) War Widows/ Widows of Defence pers. ii) Disabled Solder. iii) Ex Servicemen. iv) Spouse/ Widows of ex servicemen/ Def civilian employees. v)Others
Last date of application: 04-06-2023
Email: bangmweagle@gmail.com

"**RDBS INVESTMENT- EXECUTIVE,** B.Com 3Years Experience English & Kannada near nexus Mall Koramangala. mahesh24239@yahoo.com, 9066689879"

ENGG SERVICE COMPANY. Jeevanbhima Nagar needs MANAGER- OPERATIONS ELECTRICAL, OFFICE MANAGER, TALLY ACCOUNTANT, OFFICE SECRETARY, ELECTRICIANS, PLUMBERS. 9845163857/9972304335 sudeshna.sowmya@gmail.com

Marketing & Sales

A REPUTED National NGO requires Development Executives for Bellary- Dharwad Mangalore & Bangalore. Male/Female Graduates with aptitude for social Marketing are preferred. Call:6384946556 jobforngo@gmail.com

WELL ESTABLISHED 46 year old Business needs following: 1.SALES ENGINEER-Diploma Holder in Mechanical Engg with some knowledge in Pumps, Propellor Shafts, Cables, Spare Parts, Slewing Rings for various industries. Should be able to Travel and have 2-wheeler. Age 35 to 40. Salary about Rs.23,000. 2.OFFICE ASSISTANT-with experience for general work to travel locally such as BBMP, BESCOM, BWSSB etc. as needed on work. Should have 2-wheeler. Age 35 to 40. Salary about Rs.24,000. Apply with full details to- officestaffblr@gmail.com

WANTED- BALL ROLLER BEARINGS Sales Executive from South India requires to get Bearings Orders from Sugar, Cement, Paper, Power. Receptionist required. Accurate Bearing Centre, Bangalore. Whatsapp: 9341211791. Email: accuratebearing@yahoo.co.in

Manager

WANTED TEAM Leads for MNC. Upto 75k fixed pay + Incentives. IRDA licensed/ Financial services experience preferred. Call: 9845088345

Multiple Vacancy

WANTED: SECURITY Officer/ Field Officer/ Area Manager/ Training Officer in & around Bangalore, Tumkur & Mysore for SHASHI DETECTIVE SERVICES PVT.LTD-9845162830, 9880495755, 9845739500

ATTENTION: REQUIRED OFFICE STAFF Any Graduates Freshers for bright career and also required Information Technology- CYBERSECURITY AUDITORS and CONSULTANTS for Digital Age Strategies Pvt.Ltd. 20years old Company in Hulimavu, Bannerghatta Road Bangalore near proposed Metro- Station Email: Biodata to chinwik@gmail.com and confirm to:9448088666 for- Interview.

Part-Time Jobs

RETIRED/ VRS Persons, Age Above 45 Years, Earn 50K-60K PM, Here No Retirement: 9886641282/ 7019215243

Drivers

DRIVER Salary- Rs.15000 to 20000/-PM. SSLC, Minimum 2-3 years Experience with valid Driving License- Preferably staying surrounding Sahakarnagar, Bangalore-92 Contact: 9343833300

BUSINESS

Business Offers

Finance

WE ARRANGE Housing, Mortgage, Business and Personal loan from Financial Institutions. Call Mrs Jyothi - 8971377299, 9353410567.

LOANS AVAILABLE on car/ bikes pledging and also provide loan on mortgage of Properties. 9986991597

REAL ESTATE BUYING

Commercial Land

Devanahalli

WANTED LAND in Bangalore North DEVANAHALLI.We are looking for 2 to 5 acres of top notch property for school with atleast 40 feet wide attractive access road and frontage of 300 feet. Clear Titles & Real Owners. Contact: Sumanth Narayan of Eduweft Services Pvt Ltd, Mobile: 9606353036, Email: info@eduweft.com

REAL ESTATE SELLING

House

Out-Station

FOR IMMEDIATE SALE in Kunigal Town 60x80 sitewith villa type building can be used for Residential/ Commercial purpose situated in Kunigal Town Main Road, opposite BGS School. Contact: 9844377103

Commercial Land

Horamavu

URGENT SALE 2800 sq. ft. Prime land in Horamavu at Rs. 7000/- per sq. ft. more options available Call 9886787064.

GOODWILL CHRISTIAN COLLEGE FOR WOMEN
No.10, Promenade Road, Frazer Town (Opp. Coles Park) Bengaluru - 560 005
CSI Karnataka Central Diocese
Affiliated to Bengaluru North University
NAAC ACCREDITED
Phone: 080 - 41516793, 41100422, 7022905576
Website: www.goodwillchristiancollege.com
E-mail: goodwillchristiancollege@gmail.com
Instagram: goodwillchristiancollege
ADMISSIONS OPEN 2023 - 2024
COURSES OFFERED
B.Com BBA BCA B.Sc B.A.
ROUNAQH

Flat

Basavanagudi

FLAT RESALE Gavipuram Extension 2BHK 1050 Sqft SBA A'Katha Covered Car Park 1.10Cr Negotiable: 9886019240

RENTAL PROPERTIES

Accommodation Available

Industrial And Factory

INDUSTRIAL GODOWN For Rent in 3rd Phase of KIADB Industrial Area, Malur Town, Kolar District. Site Area 10,000 Sq.Feet Built Up Area 5000 Sq.Feet. Area. Suitable For Industrial Purpose, Storage Purpose etc. Contact: Mr. G.S. Shivakumar: Mobile: 9731010200/ 9483377777

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PERSONAL

Change of Name

I, SMT. VEDAVATHI KULKARNI, legally wedded w/o No, JC66296, Ex Naib Subedar, Late VYANKATESH KULKARNI, residing at Address, No 13, Block 2, BEML Layout, Srirampura II stage, Mysore, District- Mysore, Karnataka, PIN- 570023, have changed my name from VEDAVATI to VEDAVATHI KULKARNI vide affidavit dated 25/05/2023 by Shri Chandrahas S., Advocate & Notary, MYSURU

CHANGE OF NAME
I, **SHIVAPPA,** R/@ 12/1, 1st Cross, Adarshanagar, Nagarabhavi, Bengaluru-72, have changed my minor daughter's name from **SANVIKHA SHIVAPPA GOWDA** to **SRESHTAA VIJETA** vide affidavit dated 25.05.2023 before Notary N.Narayana Swamy, Bengaluru. Henceforth she shall be known as **SRESHTAA VIJETA** only

I SYED Maqbul R/O Bagur Road, Chikka Mohalla, Channarayapatna-573116, have changed my name to Maqbool Pasha for all purposes.

ವಿಕಾಸಸೌಧದಲ್ಲಿ ನಡೆದ ಸಭೆಯಲ್ಲಿ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಹೇಳಿಕೆ

‘ಕೇಂದ್ರಕ್ಕೆ ಅಧಿಕಾರಿಗಳೇ ಮಧ್ಯವರ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರದ ಅನುಮತಿ ತರುವುದು ಅಧಿಕಾರಿಗಳ ಜವಾಬ್ದಾರಿ’ ಎಂದು ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಸೂಚಿಸಿದರು.

ವಿಕಾಸಸೌಧದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಇಲಾಖೆಯ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ’ಕೇಂದ್ರದಿಂದ ಯೋಜನೆಗಳನ್ನು ತರುವ ಗುರಿ ನಿಭಾಯಿಸಬೇಕು. ಕೇಂದ್ರಕ್ಕೆ ಮನವರಿಕೆ ಮಾಡಿಕೊಡಬೇಕು‘ ಎಂದರು.

‘ಯೋಜನೆ ತರುವುದೇ ನಿಮ್ಮ ಕೆಲಸ. ಅದಕ್ಕಾಗಿ ಕರ್ನಾಟಕದ ಸಂಸದರ ಜತೆ ಸಭೆ ಆಯೋಜಿಸಬೇಕು. ಪ್ರಧಾನಿ, ಕೇಂದ್ರದ ಜಲ ಸಂಪನ್ಮೂಲ ಸಚಿವರೂ ಸೇರಿದಂತೆ ಸಂಬಂಧಿಸಿದ ಎಲ್ಲರನ್ನೂ ಭೇಟಿ ಮಾಡಬೇಕು. ಕೇಂದ್ರ ಸಚಿವ ಶೇಖಾವತ್ ಉತ್ತಮ ವ್ಯಕ್ತಿ. ರಾಜ್ಯದ ಕೆಲಸಗಳಿಗೆ ಅವರ ಸಹಕಾರ ಪಡೆಯಬೇಕು‘ ಎಂದು ಅಧಿಕಾರಿಗಳಿಗೆ ಹೇಳಿದರು.

ಟೆಂಡರ್, ಬಿಲ್ ಮಾಡುವುದಷ್ಟೆ ಕೆಲಸವೇ?

ಅಧಿಕಾರಿಗಳು ಬರಿ ಟೆಂಡರ್, ಗುತ್ತಿಗೆ ಹಂಚಿಕೆ, ಎಲ್‌ಒಸಿ, ಬಿಲ್ ಮಾಡುವ ಕೆಲಸಕ್ಕೆ ಶ್ರಮ ವಿನಿಯೋಗ ಮಾಡುತ್ತಿದ್ದಾರೆ. ಯೋಜನೆಗಳ ಅನುಷ್ಠಾನಕ್ಕೆ ಆ ಶ್ರಮ ಬಳಕೆಯಾಗಬೇಕು ಎಂದು ಸಚಿವ ಶಿವಕುಮಾರ್ ಹೇಳಿದರು.

ಭ್ರಷ್ಟಾಚಾರಕ್ಕೆ ಆಸ್ಪದ ನೀಡಬಾರದು. ನಿಷ್ಠೆ, ಪ್ರಾಮಾಣಿಕತೆಗೆ ಪ್ರೋತ್ಸಾಹ ನೀಡಬೇಕು. ಜಾತಿಯತೆ ತೊರೆಯಬೇಕು. ಮಾನವೀಯತೆ ಮೆರೆಯಬೇಕು ಎಂದು ಕಿವಿಮಾತು ಹೇಳಿದರು.

ಅಧಿಕಾರಿಗಳು ತಮಗೆ ಸ್ಥಾನಕೊಟ್ಟವರಿಗೆ ಬದ್ಧವಾಗಿರದೆ, ಸರ್ಕಾರಕ್ಕೆ ನಿಷ್ಠರಾಗಿರಬೇಕು. ಇಲ್ಲದಿದ್ದರೆ ಅಂಥವರನ್ನು ಸಹಿಸುವುದಿಲ್ಲ. ಮೇಕೆದಾಟು ಯೋಜನೆಗೆ ಮೀಸಲಿಟ್ಟ ₹ 1,000 ಕೋಟಿ ಅನುದಾನವನ್ನು ಭೂಸ್ವಾಧೀನದಂತಹ ಪೂರ್ವಸಿದ್ಧತಾ ಕೆಲಸಗಳಿಗೆ ಬಳಸಬಹುದಿತ್ತು. ಆ ಕೆಲಸ ಮಾಡಿಲ್ಲ ಎಂದು ಪ್ರಶ್ನಿಸಿದರು.

ರಾಜ್ಯದ ಜನರಿಗೆ ಕೊಟ್ಟ ಮಾತಿನಂತೆ ನೀರಾವರಿ ಯೋಜನೆಗಳಿಗೆ ಐದು ವರ್ಷದಲ್ಲಿ ₹ 2 ಲಕ್ಷ ಕೋಟಿ ವಿನಿಯೋಗಿಸಲು ಸರ್ಕಾರ ಬದ್ಧವಾಗಿದೆ. ಸರ್ಕಾರ, ಸಂಸ್ಥೆಗಳು, ಕೇಂದ್ರದ ಅನುದಾನದ ಮೂಲಕ ಯೋಜನೆಗೆ ಅಗತ್ಯ ಸಂಪನ್ಮೂಲ ಒಗ್ಗೂಡಿಸಬೇಕು. ಮೇಕೆದಾಟು, ಮಹದಾಯಿ ಯೋಜನೆಗಳನ್ನು ಆದ್ಯತೆ ಮೇರೆಗೆ ಅನುಷ್ಠಾನಕ್ಕೆ ತರಬೇಕು. ಅದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು. ಜಲವಿವಾದಗಳಿಗೆ ಸಮರ್ಪಕ ಪರಿಹಾರ ಕಂಡುಕೊಳ್ಳಬೇಕು. ಉದ್ಯೋಗ ಸೃಷ್ಟಿಗೆ ಒತ್ತು ಕೊಡಬೇಕು. ಬಾಕಿ ಯೋಜನೆಗಳಿಗೆ ತ್ವರಿತಗತಿಯಲ್ಲಿ ಭೂಸ್ವಾಧೀನ ಕಾರ್ಯ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ನೆರೆಯ ತಮಿಳುನಾಡು, ಆಂಧ್ರ, ಮಹಾರಾಷ್ಟ್ರಕ್ಕೆ ಎಷ್ಟು ಯೋಜನೆಗಳು ಬಂದಿವೆ, ರಾಜ್ಯಕ್ಕೆ ಎಷ್ಟು ಬಂದಿವೆ ಎಂದು ಹೋಲಿಸಿದರೆ ಎಷ್ಟು ಕೆಲಸವಾಗಿದೆ ಎಂಬುದು ಗೊತ್ತಾಗುತ್ತದೆ. ಈ ವಿಷಯದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ. ರಾಜ್ಯದ ಯೋಜನೆಗಳ ಸ್ಥಿತಿಗತಿ ಕುರಿತು ಸಮಗ್ರ ವರದಿ ನೀಡಬೇಕು. ಕೆಆರ್‌ಎಸ್, ಮಂಚನಬೆಲೆ, ತಿಪ್ಪಗೊಂಡನಹಳ್ಳಿ, ಹೇಮಾವತಿ ಜಲಾಶಯ ಸೇರಿ ಈಗ ಸಿದ್ಧವಾಗಿರುವ ಉದ್ಯಾನ, ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿದರು.

ಪ್ರತಿಭಟನೆ ಮಣಿಪುರದಲ್ಲಿ ಕ್ರೈಸ್ತ ಸಮುದಾಯದ ಮೇಲೆ ನಡೆಯುತ್ತಿರುವ ಹಿಂಸಾಚಾರವನ್ನು ಖಂಡಿಸಿ ‘ಇಂಡಿಯನ್ ಕ್ರಿಶ್ಚಿಯನ್ ಯೂನಿಟಿ ಫೋರಮ್’ ಸದಸ್ಯರು ಮತ್ತು ವಿದ್ಯಾರ್ಥಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ/ರಂಜು ಪಿ

ಮನೆಯೊಳಗೆ ಪ್ರವೇಶಿಸಿ ಬೆದರಿಕೆಯೊಡ್ಡಿದ್ದ ಆರೋಪ

ಇನ್‌ಸ್ಪೆಕ್ಟರ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯೊಳಗೆ ಅಕ್ರಮವಾಗಿ ಪ್ರವೇಶಿಸಿ ಗಲಾಟೆ ಮಾಡಿ ಜೀವ-ಬೆದರಿಕೆಯೊಡ್ಡಿದ್ದ ಆರೋಪದಡಿ ಪುಲಿಕೇಶಿನಗರ ಠಾಣೆಯ ಇನ್‌ಸ್ಪೆಕ್ಟರ್ ಕಿರಣ್ ಪಿ.ಬಿ ಹಾಗೂ ಇತರರ ವಿರುದ್ಧ ಅಶೋಕನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ರಿಚ್ಮಂಡ್ ಟೌನ್‌ನ ಆಲ್ಬರ್ಟ್ ಸ್ಟ್ರೀಟ್‌ನ ನಿವಾಸಿ ಹರೀಶ್ ಫರ್ನಾಂಡೀಸ್ (50) ಎಂಬುವವರು ಇನ್‌ಸ್ಪೆಕ್ಟರ್ ಕಿರಣ್ ಕೃತ್ಯದ ವಿರುದ್ಧ ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಹೂಡಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಲಯ, ಇನ್‌ಸ್ಪೆಕ್ಟರ್ ವಿರುದ್ಧ ಪ್ರಕರಣ ದಾಖಲಿಸುವಂತೆ ನಿರ್ದೇಶನ ನೀಡಿದೆ. ಅದರಂತೆ ಪ್ರಕರಣ ದಾಖಲಿಸಿ-ಕೊಳ್ಳಲಾಗಿದ್ದು, ಆರೋಪಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಅಶೋಕನಗರ ಠಾಣೆ ಪೊಲೀಸರು ಹೇಳಿದರು.

‘ಕುಟುಂಬದ ಆಸ್ತಿ ವಿಚಾರವಾಗಿ ಹರೀಶ್ ಫರ್ನಾಂಡೀಸ್ ಹಾಗೂ

ಕಿರಣ್ ಪಿ.ಬಿ

ಸಹೋದರ ವಸಂತ್ ನಡುವೆ ವ್ಯಾಜ್ಯವಿತ್ತು. ಇಬ್ಬರ ನಡುವೆ ಹಲವು ಬಾರಿ ಜಗಳವಾಗಿತ್ತು. ಘಟನೆ ಸಂಬಂಧ ವಸಂತ್ ಅವರು ಠಾಣೆಗೆ ಮಾಹಿತಿ ನೀಡಿದ್ದರು’ ಎಂದು ತಿಳಿಸಿದರು.

ಗುಂಪಿನಲ್ಲಿ ನುಗ್ಗಿ ಕಳ್ಳತನ: ‘ಸದ್ಯ ಪುಲಿಕೇಶಿನಗರ ಠಾಣೆಯ ಇನ್‌ಸ್ಪೆಕ್ಟರ್ ಆಗಿರುವ ಕಿರಣ್, 2016ರಲ್ಲಿ ಅಶೋಕನಗರ ಠಾಣೆಯ ಪಿಎಸ್‌ಐ ಆಗಿದ್ದರು. 2016ರ ಡಿಸೆಂಬರ್ 12ರ ತಡರಾತ್ರಿ ವಸಂತ್ ಜೊತೆ ಹರೀಶ್ ಮನೆ ಬಳಿ ಹೋಗಿದ್ದ ಕಿರಣ್ ಹಾಗೂ ಇತರರು, ಗೇಟ್ ಮುರಿದು ಒಳಗೆ ನುಗ್ಗಿ ಗಲಾಟೆ ಮಾಡಿದ್ದರು. ಈ ವಿಷಯ ದೂರಿನಲ್ಲಿದೆ’ ಎಂದು ಪೊಲೀಸರು ಹೇಳಿದರು.

‘ಮನೆಯಲ್ಲಿದ್ದವರ ಮೇಲೆ ಹಲ್ಲೆ ಮಾಡಲಾಗಿತ್ತು. ಮನೆಯ ಡ್ರಾಯರ್ ನಲ್ಲಿಟ್ಟಿದ್ದ ₹ 22,000 ಕಳ್ಳತನ ಮಾಡಲಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ಸಹ ಮುರಿದು ಹಾಕಲಾಗಿತ್ತು. ಈ ಸಂಬಂಧ ಹರೀಶ್ ದೂರು ನೀಡಿದ್ದರು. ಆದರೆ, ಅಂದಿನ ಪೊಲೀಸರು ದೂರು ದಾಖಲಿಸಿಕೊಂಡಿರಲಿಲ್ಲ. ಇದೀಗ, ನ್ಯಾಯಾಲಯದ ನಿರ್ದೇಶನದಂತೆ ಎಫ್‌ಐಆರ್ ದಾಖಲಾಗಿದೆ’ ಎಂದು ತಿಳಿಸಿದರು.

‘ಹರೀಶ್ ಅವರ ಸಹೋದರ ವಸಂತ್, ಮರಿತಾ ಎಂಬುವವರನ್ನೂ ಪ್ರಕರಣದ ಆರೋಪಿಯನ್ನಾಗಿ ಮಾಡಲಾಗಿದೆ’ ಎಂದು ಹೇಳಿದರು.

ಬಾವಿ ಗಂಗಮ್ಮದೇವಿ ಶಿರಸ್ಸು ಜಾತ್ರಾ ಮಹೋತ್ಸವದಲ್ಲಿ ಕರಗ ಆಚರಣೆ ಗಮನ ಸೆಳೆಯಿತು

ಅದ್ದೂರಿ ಜಾತ್ರಾ ಮಹೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಾವಿ ಗಂಗಮ್ಮದೇವಿಯ ಹೂವಿನ ಕರಗ ಹಾಗೂ ಜಾತ್ರಾ ಮಹೋತ್ಸವದ ಅಂಗವಾಗಿ ಇಲ್ಲಿನ ಪ್ರಮುಖ ಬೀದಿಗಳಲ್ಲಿ ಹಮ್ಮಿಕೊಂಡಿದ್ದ ಶಿರಸ್ಸು ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ಕೆ.ಆರ್.ಪುರ ಮುನಿಯಪ್ಪ ಬಡಾವಣೆ, ಕೆ.ಟಿ.ವೆಂಕಟಪ್ಪ ಬಡಾವಣೆ, ಕುಂಬಾರ ಬೀದಿ, ಹಳೆ ಪೊಲೀಸ್ ಠಾಣೆ ರಸ್ತೆ, ಕೆ.ಆರ್.ಪುರ, ಟ್ಯಾಂಕರ್ ರಸ್ತೆ, ಸರ್ಕಾರಿ ಪದವಿ ಪೂರ್ವ ಕಾಲೇಜು, ಯುಬಿ ಬಡಾವಣೆ ಸೇರಿ ಪ್ರಮುಖ ಬಡಾವಣೆಗಳಲ್ಲಿ ಬಾವಿ ಗಂಗಮ್ಮ ದೇವಿಯ ಶಿರಸ್ಸು ಮಹೋತ್ಸವದ ಮೆರವಣಿಗೆ ನಡೆಯಿತು.

ಪ್ರಮುಖ ಬೀದಿಗಳಲ್ಲಿ ನಡೆದ ಮಹೋತ್ಸವದಲ್ಲಿ ದೇವಿಗೆ ಗ್ರಾಮಸ್ಥರು ಶ್ರದ್ಧಾ ಭಕ್ತಿಯಿಂದ ವಿಶೇಷಪೂಜೆ ನೆರವೇರಿಸಿ, ದೇವರ ಕೃಪೆಗೆ ಪಾತ್ರರಾದರು.

ಬೆಳಿಗ್ಗೆ 6.30ಕ್ಕೆ ಆರಂಭವಾದ ದೇವಿಯ ಶಿರಸ್ಸು ಮಹೋತ್ಸವ ಮೆರವಣಿಗೆ, ಮಧ್ಯಾಹ್ನ 12.30ಕ್ಕೆ ಮುಕ್ತಾಯಗೊಂಡಿತು. 1 ಗಂಟೆಯವರೆಗೆ ತಂಬಿಟ್ಟು ಆರತಿ ನೆರವೇರಿತು.

ಮಧ್ಯಾಹ್ನ 1 ಗಂಟೆಯಿಂದ ರಾತ್ರಿ 7.30ರ ವರೆಗೂ ಭಕ್ತರ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು.

ಪಂಕ್ಚರ್ ಮಾಫಿಯಾ: 400 ಗ್ರಾಂ ಮೊಳೆ ಸಂಗ್ರಹಿಸಿದ ಪಿಎಸ್‌ಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹೆಚ್ಚಾಗಿರುವ ಪಂಕ್ಚರ್ ಮಾಫಿಯಾ ಕೃತ್ಯ ಪತ್ತೆಗಾಗಿ ರಸ್ತೆಗೆ ಇಳಿದಿದ್ದ ಅಶೋಕನಗರ ಸಂಚಾರ ಠಾಣೆಯ ಪಿಎಸ್‌ಐ ಮಹಮ್ಮದ್ ಅಲಿ ಇಮ್ರಾನ್, ರಸ್ತೆಯಲ್ಲಿ ಎರಚಿದ್ದ 400 ಗ್ರಾಂ ಮೊಳೆ ಸಂಗ್ರಹಿಸಿದ್ದಾರೆ.

ರಸ್ತೆಯಲ್ಲಿ ಮೊಳೆ ಎಸೆದು ವಾಹನಗಳ ಚಕ್ರ ಪಂಕ್ಚರ್ ಮಾಡುವ ಜಾಲ ನಗರದಲ್ಲಿ ಸಕ್ರಿಯವಾಗಿದೆ. ಈ ಕೃತ್ಯದ ಬಗ್ಗೆ ‘ಪ್ರಜಾವಾಣಿ’ಯ ಮೇ 20ರ ಸಂಚಿಕೆಯಲ್ಲಿ ‘ಎಸೆತ: ‘ಪಂಕ್ಚರ್ ಮಾಫಿಯಾ’ ಸಕ್ರಿಯ’ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು.

ಇದರ ಬೆನ್ನಲ್ಲೇ ಪಿಎಸ್‌ಐ ಮಹಮ್ಮದ್ ಅಲಿ ಇಮ್ರಾನ್, ಹೆಣ್ಣೂರು, ಎಚ್‌ಬಿಆರ್ ಬಡಾವಣೆ, ಆನೆಪಾಳ್ಯ, ನಂಜಪ್ಪ ವೃತ್ತ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ಸುತ್ತಾಡಿ ಮೊಳೆಗಳನ್ನು ಪತ್ತೆ ಮಾಡಿದ್ದಾರೆ. ಜೊತೆಗೆ, ರಸ್ತೆಯ ಅಕ್ಕ-ಪಕ್ಕದಲ್ಲಿರುವ ಪಂಕ್ಚರ್ ತಿದ್ದುವ ಕೆಲ ಅಂಗಡಿಗಳ ಕೆಲಸಗಾರರಿಗೆ ಎಚ್ಚರಿಕೆ ನೀಡಿದ್ದಾರೆ.

‘ನನ್ನ ದ್ವಿಚಕ್ರ ವಾಹನದ ಚಕ್ರ ಮೂರು ಬಾರಿ ಪಂಕ್ಚರ್ ಆಗಿತ್ತು. ಪ್ರತಿ ಬಾರಿ ಪಂಕ್ಚರ್ ತಿದ್ದಿಸಿದಾಗಲೂ ಮೊಳೆ ಸಿಕ್ಕಿತ್ತು. ಹೀಗಾಗಿ, ದ್ವಿಚಕ್ರ ವಾಹನದಲ್ಲಿ ಓಡಾಡಿದ್ದ ರಸ್ತೆಯಲ್ಲಿ ಪರಿಶೀಲನೆ ನಡೆಸಿದೆ. ಅವಾಗಲೇ ಮೊಳೆ ಹಾಗೂ ತಂತಿಗಳು ಪತ್ತೆಯಾಗಿವೆ. ಪಂಕ್ಚರ್ ಅಂಗಡಿಯವರು ಗ್ರಾಹಕರು ತಮ್ಮತ್ತ

ರಸ್ತೆಯಲ್ಲಿ ಸಿಕ್ಕ ಮೊಳೆ– ತಂತಿಗಳ ಜೊತೆ ಅಶೋಕನಗರ ಸಂಚಾರ ಠಾಣೆಯ ಪಿಎಸ್‌ಐ ಮಹಮ್ಮದ್ ಅಲಿ ಇಮ್ರಾನ್

ಬರುವಂತೆ ಮಾಡಲು ಎಸಗುತ್ತಿರುವ ಕೃತ್ಯವೋ ? ಅಥವಾ ಸಂಚಾರ ವ್ಯವಸ್ಥೆಗೆ ಅನನುಕೂಲ ಮಾಡುವ ಕೆಲಸವೋ ? ಎಂಬುದನ್ನು ದೇವರೇ ಬಲ್ಲ‘ ಎಂದು ಪಿಎಸ್‌ಐ ಮಹಮ್ಮದ್ ಅಲಿ ಇಮ್ರಾನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಮ್ಮ ಸಂಚಾರ ಪೊಲೀಸರು, ಮಳೆ-ಗಾಳಿ-ಚಳಿ ಎನ್ನದೇ ರಸ್ತೆಗಳಲ್ಲಿ ನಿಂತು ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಆದರೆ, ಕೆಲವರು ರಸ್ತೆಯಲ್ಲಿ ಮೊಳೆ ಎಸೆದು ಸಂಚಾರಕ್ಕೆ ಹಾಗೂ ಜನರಿಗೆ ತೊಂದರೆಯನ್ನುಂಟು ಮಾಡುತ್ತಿದ್ದಾರೆ’ ಎಂದರು.

ಶಿಕ್ಷಕರ ನೇಮಕಾತಿ ಹಗರಣ: ಆರೋಪಿ ಬಂಧನ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಸರ್ಕಾರಿ ಶಾಲೆ ಮತ್ತು ಅನುದಾನಿತ ಶಾಲೆಗಳಲ್ಲಿ ಶಿಕ್ಷಕರ ಅಕ್ರಮ ನೇಮಕಾತಿ ಹಗರಣದಲ್ಲಿ ಭಾಗಿಯಾಗಿರುವ ಆರೋಪದ ಮೇರೆಗೆ ಸುಜಯ್ ಕೃಷ್ಣ ಭದ್ರ ಎಂಬುವವರನ್ನು ಜಾರಿ ನಿರ್ದೇಶನಾಲಯವು ಮಂಗಳವಾರ ರಾತ್ರಿ ಬಂಧಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಾಲಿಘಾಟ್‌ನ ಅಂಕಲ್ ಎಂದೇ ಹೆಸರುವಾಸಿಯಾಗಿರುವ ಭದ್ರ ಅವರನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು 12 ತಾಸು ವಿಚಾರಣೆ ನಡೆಸಿದ ಬಳಿಕ ಬಂಧಿಸಿದ್ದಾರೆ.

ಕತ್ತು ಕೊಯ್ದು ಕಾರ್ಮಿಕನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಮಾರುಕಟ್ಟೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಆನಂದ್ ಎಂಬುವವರನ್ನು ಸೋಮವಾರ ರಾತ್ರಿ ಕತ್ತು ಕೊಯ್ದು ಕೊಲೆ ಮಾಡಲಾಗಿದೆ.

‘ಆನಂದ್ ಅವರ ಮೃತದೇಹ ಕೆ.ಆರ್. ರಸ್ತೆಯ ಬಸ್ ತಂಗುದಾಣ ಬಳಿ ಪತ್ತೆಯಾಗಿದೆ. ಕೊಲೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಯಾರೋ ದುಷ್ಕರ್ಮಿಗಳು ಆನಂದ್ ಜೊತೆ ಜಗಳ ತೆಗೆದು ಕೊಲೆ ಮಾಡಿ ಪರಾರಿಯಾಗಿದ್ದಾರೆ. ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದರು.

ಶುಲ್ಕದ ಕಾರಣಕ್ಕೆ ಶಿಕ್ಷಣ ನಿರಾಕರಿಸಿದರೆ ಕ್ರಮ: ಸಚಿವ ಮಹದೇವಪ್ಪ ಎಚ್ಚರಿಕೆ

ಮೈಸೂರು: ‘ಶುಲ್ಕದ ಕಾರಣಕ್ಕೆ ಮಕ್ಕಳಿಗೆ ಶಿಕ್ಷಣ ನಿರಾಕರಿಸುವ ಖಾಸಗಿ ಶಾಲೆಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು’ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಎಚ್ಚರಿಕೆ ನೀಡಿದ್ದಾರೆ.

ಈ ಬಗ್ಗೆ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಹಾಕಿರುವ ಅವರು, ‘ಹಿಂದಿನ ಸರ್ಕಾರದ ಅವಧಿಯಲ್ಲಿ ಬಡ ಮಕ್ಕಳು ಶುಲ್ಕ ಪಾವತಿಸದಿದ್ದರೆ ಶಿಕ್ಷಣ ಪಡೆಯಲು ಅಡ್ಡಿಪಡಿಸಲಾ-ಗುತ್ತಿತ್ತು. ಆದರೆ, ಶಿಕ್ಷಣ ಪ್ರಾಥಮಿಕ ಹಕ್ಕಾಗಿದ್ದು ಶುಲ್ಕದ ನೆಪವೊಡ್ಡಿ ಯಾರಿಗೂ ಶಿಕ್ಷಣದ ಸೌಲಭ್ಯವನ್ನು ನಿರಾಕರಿಸುವಂತಿಲ್ಲ’ ಎಂದಿದ್ದಾರೆ.

3M INDIA LIMITED

CIN:L31300KA1987PLC013543, Regd Office: 48-51, Electronics City, Hosur Road, Bengaluru - 560100, Website: www.3m.com/in

Extract of the Standalone and Consolidated Financial Results for the Quarter and Twelve Months Ended 31 March 2023

(Rs. in Lakhs, except per share data, unless otherwise stated)

Particulars	Standalone				Consolidated			
	3 months ended 31 March 2023 (Unaudited)	12 months ended 31 March 2023 (Audited)	3 months ended 31 March 2022 (Unaudited)	12 months ended 31 March 2022 (Audited)	3 months ended 31 March 2023 (Unaudited)	12 months ended 31 March 2023 (Audited)	3 months ended 31 March 2022 (Unaudited)	12 months ended 31 March 2022 (Audited)
Total income from operations (including other income)	99,451.40	3,79,766.33	85,792.60	3,11,301.92	1,05,590.45	4,02,746.36	93,480.62	3,37,295.68
Net Profit for the period (before tax, Exceptional and / or Extraordinary items)	16,781.67	56,079.61	14,338.51	35,969.60	18,431.27	60,743.81	15,141.19	36,751.81
Net Profit for the period before tax (after Exceptional and / or Extraordinary items)	16,781.67	56,079.61	14,338.51	35,969.60	18,431.27	60,743.81	15,141.19	36,751.81
Net Profit for the period after tax	12,326.67	41,614.39	10,559.18	26,617.51	13,571.93	45,101.92	11,091.51	27,197.11
Total comprehensive income for the period [Comprising Profit / (Loss) for the period (after tax) and other comprehensive income (after tax)]	12,431.32	41,658.80	10,860.60	26,727.38	13,684.85	45,142.87	11,437.77	27,324.37
Equity share capital	1,126.51	1,126.51	1,126.51	1,126.51	1,126.51	1,126.51	1,126.51	1,126.51
Reserves (excluding revaluation reserves as per Ind AS)	1,93,657.31	1,93,657.31	2,47,751.61	2,47,751.61	1,66,620.54	1,66,620.54	2,17,230.77	2,17,230.77
Earnings per share (in Rs.) (of Rs. 10/- each)								
a) Basic (in Rs.)	109.42	369.41	93.73	236.28	120.48	400.37	98.46	241.43
b) Diluted (in Rs.)	109.42	369.41	93.73	236.28	120.48	400.37	98.46	241.43

Notes:

1. The above standalone and consolidated financial results of 3M India Limited and its subsidiary, 3M Electro & Communication India Private Limited (hereafter refer to as the 'Group') have been reviewed by the Audit Committee and approved by the Board of Directors on 30 May 2023.
2. The above is an extract of the detailed format for the unaudited financial results for the quarter and audited twelve months ended 31 March 2023 filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format for the unaudited financial results for the quarter and audited twelve months ended 31 March 2023 are available on the BSE Limited website (www.bseindia.com), the National Stock Exchange of India Limited website (www.nseindia.com) and on the Company's website (https://www.3mindia.in/3M/en_IN/company-in/about-3m/financial-facts-local/).
3. The financial results of the Company have been prepared in accordance with Indian Accounting Standards (Ind AS) as notified by the Ministry of Corporate Affairs pursuant to Section 133 of the Companies Act, 2013 read with Rule 3 of the Companies (Indian Accounting Standard) Rules 2015, as amended and in terms of Regulation 33 of the SEBI (Listing Obligations and Disclosure Requirements) Regulations, 2015.

By Order of the Board
For 3M India Limited

Place: Bengaluru
Date: 30 May 2023

Ramesh Ramadurai
Managing Director

KIRLOSKAR ELECTRIC COMPANY LIMITED

REGD OFFICE: No.19, 2nd Main Road, Peenya 1st Stage, Phase-1, Peenya, Bengaluru - 560 058.
Phone no: 080-28397256; **Fax:** 080-28396727; **Website:** www.kirloskarelectric.com
Email: investors@kirloskarelectric.com; **CIN:** L31100KA1946PLC000415

EXTRACT OF STATEMENT OF AUDITED FINANCIAL RESULTS FOR THE QUARTER AND YEAR ENDED MARCH 31, 2023

(₹. in Lakhs)

Sr. No.	Particulars	STANDALONE				CONSOLIDATED			
		Quarter ended		Year ended		Quarter ended		Year ended	
		March 31, 2023	March 31, 2022	March 31, 2023	March 31, 2022	March 31, 2023	March 31, 2022	March 31, 2023	March 31, 2022
		Audited	Audited	Audited	Audited	Audited	Audited	Audited	Audited
1	Total income from operations	14,621	21,005	48,963	44,239	14,620	22,135	49,580	45,369
2	Net Profit / (Loss) for the period (before Tax, Exceptional and/or Extraordinary items)	1,115	9,500	2,588	5,816	1,089	10,579	3,108	6,739
3	Net Profit / (Loss) for the period before tax (after Exceptional and/or Extraordinary Items)	1,115	9,500	2,588	5,816	1,089	10,579	3,108	6,739
4	Net Profit / (Loss) for the period after tax (after Exceptional and/or Extraordinary Items)	1,115	9,500	2,588	5,816	1,089	10,579	3,108	6,739
5	Total Comprehensive Income for the period [Comprising Profit / (Loss) for the period (after tax) and Other Comprehensive Income (after tax)]	(339)	7,003	1,066	3,325	(365)	8,082	1,586	4,248
6	Equity Share Capital	6,641	6,641	6,641	6,641	6,641	6,641	6,641	6,641
7	Reserves (excluding revaluation reserves as shown in the Balance Sheet of previous year)	NA	NA	NA	NA	NA	NA	NA	NA
8	Earnings Per Share (EPS) (₹.)								
	(a) Basic EPS before extra ordinary items (not annualised)	1.68	14.30	3.90	8.76	1.64	15.93	4.68	10.15
	(b) Diluted EPS before extra ordinary items (not annualised)	1.68	14.30	3.90	8.76	1.64	15.93	4.68	10.15
	(c) Basic EPS after extra ordinary items (not annualised)	1.68	14.30	3.90	8.76	1.64	15.93	4.68	10.15
	(d) Diluted EPS after extra ordinary items (not annualised)	1.68	14.30	3.90	8.76	1.64	15.93	4.68	10.15

NOTE:

1. The above IND AS Compliant audited standalone and consolidated financial results have been reviewed by the Audit Committee and approved by the Board of Directors at its meeting held on May 30, 2023.
2. The standalone and consolidated financial results of the Company for the quarter and year ended March 31, 2023 have been audited by its Statutory auditors.
3. The above is an extract of the detailed format of the Ind AS compliant audited financial results for the quarter and year ended March 31, 2023 filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015 as amended from time to time. The full format of the audited financial results are available on the stock exchange websites (www.bseindia.com, www.nseindia.com) and also on the Company's website (https://kirloskarelectric.com/investors/investors-information/financial.html).
4. **Total income from operations for the year ended March 31, 2022 includes ₹ 9,819.65 lakhs profit on sale of 29.5 acres of land of the Company situated at Hubli (Karnataka) and ₹ 297.86 lakhs profit on sale of non core asset situated at Hyderabad.**

Place : Bengaluru
Date : May 30, 2023

Sd/-
Vijay R Kirloskar
Executive Chairman

ಸುಭಾಷಿತ

ಪ್ರೀತಿಯನ್ನು ಯಾರು ಬಯಸುತ್ತಾರೋ ಅವರು ಮೊದಲು ಪ್ರೀತಿಯನ್ನು ನೀಡಬೇಕು.

-ಕಬೀರ

ರೋಚಕ ಕ್ಷಣಗಳ ಕಣಜ ಐಪಿಎಲ್‌ಗೆ ಚೆನ್ನೈ ಬಳಗವೇ 'ಸೂಪರ್ ಕಿಂಗ್'

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಇತಿಹಾಸದಲ್ಲಿಯೇ ಅತ್ಯಂತ ರೋಚಕ ಟೂರ್ನಿಯಾಗಿ ಹದಿನಾರನೇ ಆವೃತ್ತಿಯು ದಾಖಲೆಯ ಪುಟ ಸೇರಿತು. ಮೊದಲ ಪಂದ್ಯದಿಂದ ಫೈನಲ್ ಹಣಾಹಣಿಯ ಕೊನೆಯ ಎಸೆತದವರೆಗೂ ರೋಚಕ ರಸದೌತಣ ನೀಡಿದ ಟೂರ್ನಿಯಲ್ಲಿ ಮಹೇಂದ್ರ ಸಿಂಗ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡಿತು. 2008ರಲ್ಲಿ ಆರಂಭವಾದ ಐಪಿಎಲ್‌ನಲ್ಲಿ ಹತ್ತನೇ ಬಾರಿ ಫೈನಲ್ ಪ್ರವೇಶಿಸಿದ್ದ ಧೋನಿ ಬಳಗವು ಐದನೇ ಸಲ ಟ್ರೋಫಿ ಜಯಿಸಿತು. ಮುಂಬೈ ಇಂಡಿಯನ್ಸ್ ತಂಡದ ದಾಖಲೆಯನ್ನೂ ಸರಿಗಟ್ಟಿತು. ಅಲ್ಲದೆ ಧೋನಿ ಅವರಿಗೆ ಈ ಐಪಿಎಲ್ ಕೊನೆಯದಾಗುವ ಸಾಧ್ಯತೆ ಇದೆ. ಆದ್ದರಿಂದ ತಂಡದ ಆಟಗಾರರು ತಮ್ಮ ನೆಚ್ಚಿನ ನಾಯಕನಿಗೆ 'ವಿಜಯದ ವಿದಾಯ' ನೀಡಿದ್ದಾರೆಂಬ ಮಾತುಗಳೂ ಇವೆ. ಹೋದ ವರ್ಷದ ಚಾಂಪಿಯನ್ ಗುಜರಾತ್ ಟೈಟನ್ಸ್ ತಂಡವು ಇಲ್ಲಿ ರನ್ನರ್ಸ್ ಅಪ್ ಆಯಿತು. ಸೋಲು, ಗೆಲುವುಗಳಾಚೆ ನೋಡಿದಾಗ ಕೆಲವು ವಿಶೇಷಗಳು ಗಮನ ಸೆಳೆಯುತ್ತವೆ. 58 ದಿನಗಳ ಕ್ರಿಕೆಟ್ ಹಬ್ಬದಲ್ಲಿ ಹತ್ತು ತಂಡಗಳು ಆಡಿದವು. ಮೂರು ವರ್ಷಗಳ ನಂತರ ತವರು ಹಾಗೂ ತವರಿನಾಚೆ ಮಾದರಿಯಲ್ಲಿ ಪಂದ್ಯಗಳು ಆಯೋಜನೆಗೊಂಡಿದ್ದರಿಂದ ಕ್ರೀಡಾಂಗಣಗಳೂ ತುಂಬಿ ತುಳುಕಿದವು. ಕೋವಿಡ್ ಬಿಕ್ಕಟ್ಟಿನಿಂದಾಗಿ ಮೂರು ವರ್ಷ ತಟಸ್ಥ ತಾಣದಲ್ಲಿ ಟೂರ್ನಿ ಆಯೋಜನೆಗೊಂಡಿತ್ತು. ಈ ಸಲ ಒಟ್ಟು 74 ಪಂದ್ಯಗಳು ನಡೆದವು. ಅದರಲ್ಲಿ ಶೇ 95ರಷ್ಟು ಪಂದ್ಯಗಳ ಫಲಿತಾಂಶಗಳು ಕೊನೆಯ ಓವರ್‌ನಲ್ಲಿಯೇ ಹೊರಹೊಮ್ಮಿದ್ದು ವಿಶೇಷ. ಮೇ 28ರಂದು ಮಳೆ ಸುರಿದ ಕಾರಣ ಫೈನಲ್ ಪಂದ್ಯವನ್ನು ಮೀಸಲು ದಿನವಾದ ಮರುದಿನಕ್ಕೆ ಮುಂದೂಡಲಾಯಿತು. ಈ ರೀತಿಯಾಗಿದ್ದು ಇದು ಮೊದಲ ಬಾರಿ. ಅಲ್ಲದೆ ಈ ಟೂರ್ನಿಯು ಅನುಭವಿ ಆಟಗಾರರು ಮತ್ತು ಯುವ ಪ್ರತಿಭೆಗಳ ನಡುವಣ ಪೈಪೋಟಿಗೂ ವೇದಿಕೆಯಾಯಿತು. ಅಜಿಂಕ್ಯ ರಹಾನೆ, ಎರಡು ಭರ್ಜರಿ ಶತಕ ಗಳಿಸಿದ ವಿರಾಟ್ ಕೊಹ್ಲಿ, ಶಿಖರ್ ಧವನ್, ವೇಗಿ ಮೊಹಮ್ಮದ್ ಶಮಿ, ದಕ್ಷಿಣ ಆಫ್ರಿಕಾದ ಫಫ್ ಡುಪ್ಲೆಸಿ, ವೆಸ್ಟ್ ಇಂಡೀಸ್‌ನ ನಿಕೊಲಸ್ ಪೂರನ್, ಆಸ್ಟ್ರೇಲಿಯಾದ ಮಾರ್ಕಸ್ ಸ್ಟೊಯಿನಿಸ್ ಗಮನ ಸೆಳೆದರು. ಅಜಿಂಕ್ಯ ಮತ್ತೆ ಭಾರತ ತಂಡಕ್ಕೆ ಮರಳಲು ಇಲ್ಲಿಯ ಆಟ ನೆರವಾಗಿದ್ದು ಸುಳ್ಳಲ್ಲ. ಈ ಸ್ಪರ್ಧೆಯಲ್ಲಿ ಯುವ ಆಟಗಾರರೂ ಹಿಂದೆ ಬೀಳಲಿಲ್ಲ. ಅತಿ ಹೆಚ್ಚು ರನ್ ಗಳಿಸಿದ ಆರಂಭ ಆಟಗಾರರಾದ ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ಋತುರಾಜ್ ಗಾಯಕವಾಡ್ ಜೊತೆ ಸಾಯಿ ಸುದರ್ಶನ್, 'ಸಿಕ್ಸರ್ ಸಿಂಗ್' ಖ್ಯಾತಿಯ ರಿಂಕು ಸಿಂಗ್, ಬೌಲರ್ ಆಕಾಶ್ ಮಧ್ವಾಲ್ ಹಾಗೂ ಸುಯಶ್ ಶರ್ಮಾ ಭರವಸೆ ಮೂಡಿಸಿದರು.

ಕ್ರೀಡಾಂಗಣದಲ್ಲಿ ಪಂದ್ಯ ವೀಕ್ಷಿಸಲು ಬರುವವರಿಗೆ ಸೂಕ್ತ ಮೂಲಸೌಲಭ್ಯ ಒದಗಿಸಲು, ಪ್ರೇಕ್ಷಕಸ್ನೇಹಿ ವ್ಯವಸ್ಥೆ ಮಾಡಲು ಬಿಸಿಸಿಐ ಮುಂದಾಗಬೇಕು

ಆದರೆ ಕೆಲವು ನಿರಾಶೆಯ ಸಂಗತಿಗಳೂ ಇಣುಕಿದವು. ಲಖನೌ ಸೂಪರ್‌ಜೈಂಟ್ಸ್ ತಂಡದ ನಾಯಕ, ಕನ್ನಡಿಗ ಕೆ.ಎಲ್. ರಾಹುಲ್ ಗಾಯಗೊಂಡು ಅರ್ಧದಲ್ಲಿಯೇ ಐಪಿಎಲ್‌ನಿಂದ ಹೊರಬಿದ್ದರು. ಹರಾಜು ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಹಣ ಗಳಿಸಿದ್ದ ಇಂಗ್ಲೆಂಡ್‌ನ ಸ್ಯಾಮ್ ಕರನ್ ಹಾಗೂ ಮಯಂಕ್ ಅಗರವಾಲ್ ಅವರು ನಿರೀಕ್ಷೆ ಹುಸಿಗೊಳಿಸಿದರು. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವೈಫಲ್ಯ ಮುಂದುವರಿಯಿತು. ಪ್ಲೇ ಆಫ್ ಕೂಡ ಪ್ರವೇಶಿಸಲಿಲ್ಲ. ಆದರೆ ಕನ್ನಡಿಗ ವೈಶಾಖ ವಿಜಯಕುಮಾರ್ ಈ ತಂಡದ ಮೂಲಕ ಐಪಿಎಲ್‌ಗೆ ಪದಾರ್ಪಣೆ ಮಾಡಿದ್ದು ಸಮಾಧಾನಕರ ಸಂಗತಿ. ವೈಶಾಖ ಮೂಡಿಸಿರುವ ಭರವಸೆಯಿಂದಾಗಿ ಕರ್ನಾಟಕದ ಇನ್ನಷ್ಟು ಆಟಗಾರರಿಗೆ ಅವಕಾಶ ಕೊಡುವತ್ತ ಗಮನಹರಿಸಲು ಆರ್‌ಸಿಬಿಗೆ ಇದು ಸಕಾಲ. ಈ ಬಾರಿ ಕೆಲವು ಹೊಸ ನಿಯಮಗಳನ್ನು ಜಾರಿಗೊಳಿಸಲಾಗಿತ್ತು. ಇದರಿಂದಾಗಿ ಟಾಸ್ ಹಾಕಿದ ನಂತರ ಉಭಯ ತಂಡಗಳ ನಾಯಕರು, ಆಡುವ ತಮ್ಮ 11ರ ಬಳಗವನ್ನು ನಿರ್ಧರಿಸುವ ಅವಕಾಶ ಲಭಿಸಿದೆ. ವೈಡ್, ನೋಬಾಲ್‌ಗಳಿಗೂ ಅಂಪೈರ್ ತೀರ್ಪು ಮರುಪರಿಶೀಲನೆ ಹಾಗೂ ಇಂಪ್ಯಾಕ್ಟ್ ಪ್ಲೇಯರ್ ಕಣಕ್ಕಿಳಿಸುವ ನಿಯಮಗಳನ್ನು ಕೆಲವು ತಂಡಗಳು ಸಮರ್ಥವಾಗಿ ಬಳಸಿಕೊಂಡವು. ಇವೆಲ್ಲದರ ಜೊತೆಗೆ ಮೊಬೈಲ್ ಆ್ಯಪ್ ಮೂಲಕ ಪಂದ್ಯಗಳ ನೇರ-ಪ್ರಸಾರವನ್ನು ವೀಕ್ಷಿಸುವ ದೊಡ್ಡ ವರ್ಗವೊಂದು ಈಗ ಸೃಷ್ಟಿಯಾಗಿದೆ. ಟಿ.ವಿ. ನೇರಪ್ರಸಾರಕ್ಕೆ ಸ್ಮಾರ್ಟ್‌ಫೋನ್ ಲೋಕದ ಪೈಪೋಟಿ ಶುರುವಾಗಿರುವ ಮುನ್ಸೂಚನೆ ಇದು. ಟಿ.ವಿ. ಹಾಗೂ ಡಿಜಿಟಲ್ ಪ್ರಸಾರ ಹಕ್ಕುಗಳನ್ನು ಪ್ರತ್ಯೇಕ ಸಂಸ್ಥೆಗಳು ಖರೀದಿಸಿರುವುದೇ ಇದಕ್ಕೆ ಕಾರಣ. ಇದರಿಂದಾಗಿ ಬಿಸಿಸಿಐ ಬೊಕ್ಕಸಕ್ಕೆ ₹ 48 ಸಾವಿರ ಕೋಟಿ ಹರಿದುಬಂದಿತ್ತು. ಆದರೆ ಇಷ್ಟೆಲ್ಲ ಹಣ ಹರಿದುಬಂದರೂ ಕ್ರೀಡಾಂಗಣದಲ್ಲಿ ಪಂದ್ಯ ವೀಕ್ಷಿಸಲು ಬರುವವರಿಗೆ ಸೂಕ್ತ ಮೂಲಸೌಲಭ್ಯಗಳನ್ನು ನೀಡುವಲ್ಲಿ ಮಂಡಳಿಯು ಹಿಂದೆ ಬಿದ್ದಿರುವುದು ಫೈನಲ್ ಪಂದ್ಯದ ವೇಳೆ ಬಹಿರಂಗವಾಗಿದೆ. ವಿಶ್ವದ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮಳೆಯಿಂದ ರಕ್ಷಿಸಿಕೊಳ್ಳಲು ಜನರಿಗೆ ಸೂಕ್ತ ವ್ಯವಸ್ಥೆ ಇರಲಿಲ್ಲವೆಂಬ ದೂರುಗಳು ಕೇಳಿಬಂದವು. ಕೆಲವು ನಗರಗಳಲ್ಲಿ ಟಿಕೆಟ್ ಬೆಲೆ ದುಬಾರಿಯಾಗಿತ್ತು ಎಂಬ ಟೀಕೆ ಇದೆ. ಭಾರತವು ಇದೇ ವರ್ಷ ಏಕದಿನ ವಿಶ್ವಕಪ್ ಟೂರ್ನಿಗೆ ಆತಿಥ್ಯ ವಹಿಸಲಿದೆ. ಈ ಸಂದರ್ಭದಲ್ಲಿ ಪ್ರೇಕ್ಷಕಸ್ನೇಹಿ ವ್ಯವಸ್ಥೆಗಳನ್ನು ನೀಡಲು ಮುಂದಾಗಬೇಕು.

ದಿನದ ಟ್ವೀಟ್

ಏನು ಮಾಡುತ್ತಿದ್ದಾರೆ?

ಹದಿನಾರು ವರ್ಷದ ಹುಡುಗಿ ಸಾಕ್ಷಿಯ ಕೊಲೆ ನನ್ನನ್ನು ಇನ್ನಿಲ್ಲದಂತೆ ಅಲುಗಾಡಿಸಿಬಿಟ್ಟಿದೆ. ಕೊಲೆಗಾರ ಸಾಹಿಲ್ ಖಾನ್ ಒಬ್ಬ ರಾಕ್ಷಸ. ಕಾನೂನಿನ ಅಡಿಯಲ್ಲಿ ಅವನಿಗೆ ಅತ್ಯಂತ ಕಠಿಣವಾದ ಶಿಕ್ಷೆ ವಿಧಿಸಲೇಬೇಕು. ದೆಹಲಿಯಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಅಪರಾಧಗಳ ಸಂಖ್ಯೆ ಹೆಚ್ಚುತ್ತಿರುವುದು ದಿಗಿಲು ಹುಟ್ಟಿಸುತ್ತದೆ. ದೆಹಲಿ ಪೊಲೀಸರು ಏನು ಮಾಡುತ್ತಿದ್ದಾರೆ? ಮಹಿಳೆಯರನ್ನು ರಕ್ಷಿಸುವ ಬದಲು ಮಹಿಳಾ ಕುಸ್ತಿಪಟುಗಳ ಮೇಲೆ ಪ್ರತಾಪ ತೋರುವುದರಲ್ಲಿ ಹಾಗೂ ಅವರ ಮೇಲೆ ಎಫ್‌ಐಆರ್‌ಗಳನ್ನು ಹಾಕುವುದರಲ್ಲಿ ಅವರು ಮುಳುಗಿಹೋಗಿದ್ದಾರೆ!

ಡಾ. ಶಮಾ ಮೊಹಮ್ಮದ್, ರಾಷ್ಟ್ರೀಯ ವಕ್ತಾರೆ, ಕಾಂಗ್ರೆಸ್ ಪಕ್ಷ

ಕಿಡಿನುಡಿ

ದೇಶದ ರಾಷ್ಟ್ರಪತಿ ಮಹಿಳೆ. ಅದರಲ್ಲೂ ಆದಿವಾಸಿ ಸಮುದಾಯಕ್ಕೆ ಸೇರಿದ ಮೊದಲನೇ ರಾಷ್ಟ್ರಪತಿ. ಅಲ್ಲದೆ, ನರೇಂದ್ರ ಮೋದಿಯವರ ಸಂಪುಟದಲ್ಲಿ 11 ಮಹಿಳಾ ಸಚಿವರಿದ್ದಾರೆ. ಆದರೆ ಪ್ರತಿಭಟನೆನಿರತ ಕುಸ್ತಿಪಟುಗಳ ಜೊತೆ ಮಾತನಾಡಲು ಇವರಲ್ಲಿ ಯಾರೊಬ್ಬರೂ ಮುಂದಾಗುತ್ತಿಲ್ಲ. ನ್ಯಾಯಯುತ ಹಾಗೂ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಅವರಿಗೆ ಯಾರೂ ಭರವಸೆ ನೀಡುತ್ತಿಲ್ಲ. ನ್ಯಾಯ ದೊರಕಿಸಿಕೊಡಲಾಗುವುದು ಎಂದು ವಿಶ್ವಾಸ ತುಂಬುವವರು ಯಾರೂ ಇಲ್ಲ. ಎಂತಹ ನಾಚಿಕೆಗೇಡು.

ಅನುಷಾ ರವಿ ಸೂದ್, ಪತ್ರಕರ್ತೆ

25 ವರ್ಷಗಳ ಹಿಂದೆ

ಭಾನುವಾರ, 31-5-1998

- **ಖಾಸಗಿ ಶಾಲೆಗಳ ಶಿಕ್ಷಣ ಶುಲ್ಕ ಪಾವತಿಗೆ ಸರ್ಕಾರಕ್ಕೆ ಆದೇಶ**

ಬೆಂಗಳೂರು, ಮೇ 30– ಮಕ್ಕಳಿಗೆ 14ನೇ ವಯಸ್ಸಿನವರೆಗೆ ಉಚಿತ ಶಿಕ್ಷಣ ಕೊಡಬೇಕೆಂಬ ಸಂವಿಧಾನದ ನಿರ್ದೇಶನದ ಪಾಲನೆ ದೃಷ್ಟಿಯಿಂದ, ಖಾಸಗಿ ಶಾಲೆಗಳಲ್ಲಿ ಅಧ್ಯಯನ ನಡೆಸುತ್ತಿರುವ ಮಕ್ಕಳ ಶುಲ್ಕವನ್ನು ಸರ್ಕಾರವು ಪೋಷಕರಿಗೆ ಅಥವಾ ಶಿಕ್ಷಣ ಸಂಸ್ಥೆಗೆ ತುಂಬಿ ಕೊಡಬೇಕೆಂದು ಹೈಕೋರ್ಟ್ ಇಂದು ಸರ್ಕಾರಕ್ಕೆ ಆದೇಶಿಸಿತು.

ಇದಕ್ಕಾಗಿ ಸರ್ಕಾರವು ಶಿಕ್ಷಣ ಕಾಯ್ದೆಯ 145 (2) ವಿಧಿ ಅನ್ವಯ ಖಾಸಗಿ ಶಿಕ್ಷಣ ಸಂಸ್ಥೆಗಳು ವಸೂಲಿ ಮಾಡಬಹುದಾದ ಶುಲ್ಕ, ವಂತಿಗೆ ಮತ್ತಿತರ ವಸೂಲಿಗಳ ಬಗ್ಗೆ ನಿಯಮಗಳನ್ನು ಮೂರು ತಿಂಗಳಲ್ಲಿ ರಚಿಸಬೇಕೆಂದು ಸೂಚಿಸಿತು.

ಅನುದಾನ ಪಡೆಯದ ಖಾಸಗಿ ಶಿಕ್ಷಣ ಸಂಸ್ಥೆಗಳ ಬೋಧಕರು ಮತ್ತು ಬೋಧಕೇತರರಿಗೆ ವೇತನ ಅನುದಾನ ಕೊಡಬೇಕೆಂದು ಏಕ ನ್ಯಾಯಮೂರ್ತಿಯವರು ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಸರ್ಕಾರ ಮತ್ತು ಶಿಕ್ಷಣ ಇಲಾಖೆ 19 ಮೇಲ್ಮನವಿಗಳನ್ನು ಹಾಗೂ ಅನುದಾನಕ್ಕೆ ಆದೇಶ ಕೋರಿ ಖಾಸಗಿ ಸಂಸ್ಥೆಗಳವರು ಸಲ್ಲಿಸಿದ್ದ 58 ರಿಟ್ ಅರ್ಜಿಗಳನ್ನು ವಿಲೇವಾರಿ ಮಾಡಿದ ಮುಖ್ಯ ನ್ಯಾಯಮೂರ್ತಿ ಆರ್.ಪಿ.ಸೇಥಿ ಮತ್ತು ನ್ಯಾಯಮೂರ್ತಿ ವಿ.ಗೋಪಾಲಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಇಂದು ತೀರ್ಪು ನೀಡಿ, ರಿಟ್ ಅರ್ಜಿಗಳನ್ನು ವಜಾ ಮಾಡಿತು.

ಏಕ ನ್ಯಾಯಮೂರ್ತಿಯವರ ತೀರ್ಪನ್ನು ಮಾರ್ಪಡಿಸಿ, 'ಖಾಸಗಿಯವರು ಅನುದಾನವನ್ನೂ ಪಡೆಯುವುದು ಹಾಗೂ ವಂತಿಗೆ, ಶುಲ್ಕವನ್ನೂ ವಸೂಲಿ ಮಾಡುವುದು ಸರಿಯಲ್ಲ' ಎಂದು ಅಭಿಪ್ರಾಯಪಟ್ಟಿತು.

50 ವರ್ಷಗಳ ಹಿಂದೆ

ಗುರುವಾರ, 31-5-1973

- **ಕೃಷಿ ವಿಶ್ವವಿದ್ಯಾನಿಲಯದಲ್ಲಿ ಅಧಿಕಾರ ಮೀರಿ ಹಸ್ತಕ್ಷೇಪ: ಸಚಿವರ ವಿರುದ್ಧ ಆಪಾದನೆ**

ಬೆಂಗಳೂರು, ಮೇ 30– ಕೃಷಿ ಸಚಿವ ಶ್ರೀ ಕೆ.ಎಚ್.ಪಾಟೀಲ್ ಅವರು ಹೆಬ್ಬಾಳದ ಕೃಷಿ ವಿಶ್ವವಿದ್ಯಾನಿಲಯದ ವ್ಯವಹಾರದಲ್ಲಿ ತಮಗಿರುವ ಅಧಿಕಾರವನ್ನು ಮೀರಿ ಹಸ್ತಕ್ಷೇಪ ನಡೆಸಿದ್ದಾರೆಂದು ವಿಧಾನಪರಿಷತ್ತಿನಲ್ಲಿ ಇಂದು ಪಕ್ಷೇತರ ಸದಸ್ಯ ಎಂ.ಸತ್ಯನಾರಾಯಣ ರಾವ್ ಅವರು ಆಪಾದಿಸಿದರು.

ಮೈಸೂರು ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳ ವಿಧೇಯಕದ ಪರಿಶೀಲನೆಗೆ ಸಂಯುಕ್ತ ಪರಿಶೀಲಕ ಸಮಿತಿ ರಚಿಸುವುದಕ್ಕೆ ಒಪ್ಪಿಗೆ ಸೂಚಿಸುವ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಶೈಕ್ಷಣಿಕ ತತ್ವಗಳ ಆಧಾರದಲ್ಲಿ ಪಠ್ಯ ರಚಿಸಬೇಕಾದುದು ಇಂದಿನ ಅಗತ್ಯ

ಇತಿಹಾಸ ಪಠ್ಯ ಮತ್ತು ಶೈಕ್ಷಣಿಕ ತತ್ವ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಇತಿಹಾಸ ಪಠ್ಯದ ಕುರಿತು ಬಹಳಷ್ಟು ಚರ್ಚೆಗಳಿವೆ. ಯಾವುದೇ ರಾಷ್ಟ್ರದಲ್ಲಿ ವರ್ತಮಾನವನ್ನು ಕಟ್ಟಲು ಇತಿಹಾಸವು ಪರೋಕ್ಷ ಸಾಧನವಾಗಿ ಬಳಕೆಯಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲೂ ಇದು ನಡೆದಿದೆ. ಆದರೆ ಇತಿಹಾಸ ಬೋಧನೆಯ ಉದ್ದೇಶವೇ ರಾಷ್ಟ್ರೀಯತೆಯನ್ನು ಕಟ್ಟುವುದಾಗಿರುವುದಿಲ್ಲ. ರಾಷ್ಟ್ರೀಯತೆಯ ವಿಚಾರವು ವರ್ತಮಾನದ ನಾಗರಿಕ ಪ್ರಜ್ಞೆಯನ್ನು ರೂಪಿಸುವ ಜವಾಬ್ದಾರಿ ಹೊಂದಿರುವ 'ರಾಜ್ಯಶಾಸ್ತ್ರ'ದ ಉದ್ದೇಶವಾಗಿದೆ. ಆ ರಾಜಕೀಯ ಆಶಯಗಳು ಸಂವಿಧಾನದ ಆಶಯವನ್ನು ತಳಹದಿಯಾಗಿ ಹೊಂದಿರುತ್ತವೆ. ಇತಿಹಾಸದಲ್ಲಿ ಕೆಲವು ಅಂಶಗಳು ಇಂದಿನ ರಾಷ್ಟ್ರೀಯತೆಯ ಪರಿಕಲ್ಪನೆಗೆ ಪೂರಕವಾಗಿಯೂ ಬರಬಹುದು, ಕೆಲವು ಅಂಶಗಳು ವಿರುದ್ಧವಾಗಿಯೂ ಬರಬಹುದು. ಆದರೆ ರಾಷ್ಟ್ರೀಯತೆಯ ಇಂದಿನ ಆಶಯಕ್ಕೆ ಅನುಗುಣವಾಗಿಯೇ ಇತಿಹಾಸದ ಮರುನಿರೂಪಣೆಗೆ ಹೋಗಬಾರದು. ಏಕೆಂದರೆ, ಇತಿಹಾಸದ ಉದ್ದೇಶ ಬೇರೆಯದೇ ಆಗಿರುತ್ತದೆ.

ಇತಿಹಾಸ ಬೋಧನೆಯ ಉದ್ದೇಶವು ವಿಶಾಲ ದೃಷ್ಟಿಕೋನವನ್ನು ಬೆಳೆಸುವುದು, ಸೌಂದರ್ಯ ಪ್ರಜ್ಞೆ, ಜೀವನ ಮೌಲ್ಯಗಳ ಅರಿವು, ಚಿಂತನಾ ಸಾಮರ್ಥ್ಯದ ಉನ್ನತೀಕರಣ, ಮನುಷ್ಯರನ್ನು ಅರಿತುಕೊಳ್ಳುವುದು ಮುಂತಾದವು. ಇತಿಹಾಸದ ಅಭ್ಯಾಸದಲ್ಲಿ 'ಇದು ಹೀಗೆ ಇರಬೇಕಿತ್ತು' ಎನ್ನುವ ಕುರಿತ ವರ್ತಮಾನದ ಚಿಂತನಾ ಕ್ರಮದ ಮಾನಸಿಕ ಒತ್ತಡ ಇರಬಾರದು. ಇರುವುದನ್ನು ಇರುವ ಹಾಗೆಯೇ ಸ್ವೀಕರಿಸಬೇಕು ಎಂಬ ಸಹಜ ಸ್ಥಿತಿಯನ್ನು ಒಪ್ಪಿಕೊಂಡಿರಬೇಕು.

ಪಠ್ಯವನ್ನು ರಚಿಸುವಾಗ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಸಿದ್ಧಾಂತಗಳು ಪ್ರಮುಖ ಆಧಾರವಾಗಬಾರದು. ಮೊದಲನೆಯದಾಗಿ, ಮಕ್ಕಳ ಮನೋವಿಜ್ಞಾನ, ಬೋಧನಾ ಪದ್ಧತಿ, ಶಿಕ್ಷಣ ತತ್ವಗಳು ಮತ್ತು ಬೋಧನೋದ್ದೇಶಗಳು ಪ್ರಮುಖ ಆಧಾರಗಳಾಗಬೇಕು. ಇವೆಲ್ಲದರಲ್ಲಿ ಕಲಿಕಾ ಪ್ರಕ್ರಿಯೆಗೆ ಇರುವ ಪ್ರಧಾನ ಉದ್ದೇಶ ಎಲ್ಲಕ್ಕೂ ಮೂಲವಾಗಿದೆ. ಕಲಿಕಾರ್ಥಿಯ ವರ್ತನೆಯಲ್ಲಿ ಸಕಾರಾತ್ಮಕವಾದ ಪರಿವರ್ತನೆಯನ್ನು ತರುವುದು ಕಲಿಕಾಪ್ರಕ್ರಿಯೆಯ ಮೂಲ ಉದ್ದೇಶ. ಮನುಷ್ಯನಲ್ಲಿನ ಕೆಟ್ಟ ಸ್ವಭಾವಗಳನ್ನು ಪ್ರಜ್ಞಾಪೂರ್ವಕವಾಗಿ ಕೈಬಿಟ್ಟು ಒಳ್ಳೆಯ ಸ್ವಭಾವಗಳು ರೂಢಿಯಾಗುವ ಹಾಗೆ ಮಾಡುವುದು ಔಪಚಾರಿಕ ಶಿಕ್ಷಣದ ಉದ್ದೇಶವಾಗಿದೆ. ಆದರೆ ನಿರ್ದಿಷ್ಟ ಸಂದರ್ಭದಲ್ಲಿ ಒಳ್ಳೆಯದು ಎನಿಸುವುದೇ ಮತ್ತೊಂದು ಸಂದರ್ಭದಲ್ಲಿ ಕೆಟ್ಟದ್ದೂ ಆಗಬಹುದು. ಆಗ ಯಾವುದನ್ನು ಯಾವ ಸಂದರ್ಭದಲ್ಲಿ ಆದ್ಯತೆಯಾಗಿ ತೆಗೆದುಕೊಳ್ಳಬೇಕು ಎಂಬ ಪ್ರಶ್ನೆ ಬರುತ್ತದೆ. ಈ ಸಮಸ್ಯೆಯನ್ನು ಪರಿಹರಿಸುವುದು ಮನುಷ್ಯರ ವಿವೇಕ. ಮನುಷ್ಯರನ್ನು ವಿವೇಕಿಗಳನ್ನಾಗಿಸುವುದು ಶಿಕ್ಷಣದ ಧ್ಯೇಯವಾಗಿರುತ್ತದೆ. ಇತಿಹಾಸ, ವಿಜ್ಞಾನ, ಗಣಿತ ಅಥವಾ ಇನ್ನೇನನ್ನು ಬೋಧಿಸುವಾಗಲೂ ಈ ಅಂಶ ಇದ್ದೇ ಇರುತ್ತದೆ.

ಪಠ್ಯಪುಸ್ತಕವನ್ನು ರಚಿಸುವಾಗ ಬೋಧನಾ ಪದ್ಧತಿ ಮತ್ತು ಮೌಲ್ಯಮಾಪನ ಎಂಬ ಇನ್ನೆರಡು ಅಂಶಗಳಿಗೆ ಮಹತ್ವ ಕೊಡಬೇಕು. ಬೋಧನಾ ಪದ್ಧತಿಯಲ್ಲಿ ಮಗುವಿಗೆ ಸಂಬಂಧಿಸಿದ್ದು ಮಗುವಿನ ದೈಹಿಕ ವಯಸ್ಸು ಮತ್ತು ಮಾನಸಿಕ ವಯಸ್ಸು. ಹದಿಹರೆಯದ ಹಂತಕ್ಕೆ ಹೇಳುವುದಾದರೆ, ಇತಿಹಾಸದಲ್ಲಿ ಆದ ದೌರ್ಜನ್ಯಗಳನ್ನು 'ದೌರ್ಜನ್ಯಗಳಾಗಿವೆ' ಎನ್ನುವಲ್ಲಿಗೆ ಸೀಮಿತಗೊಳಿಸಬೇಕು. ಕ್ರೌರ್ಯದ ವಿವರಗಳನ್ನೇ ಕೊಡಲು ಹೋಗಬಾರದು. ಒಂದು ವೇಳೆ ಅಂತಹ ವಿವರಗಳಿದ್ದರೆ ಬೋಧಿಸುವಾಗ ಅಧ್ಯಾಪಕರು ಅದನ್ನು ಮಕ್ಕಳ ಮನಃಸ್ಥಿತಿಗೆ ಹೊಂದಿಕೊಳ್ಳುವ ಹಾಗೆ ಮರು ಹೊಂದಾಣಿಕೆ ಮಾಡಿಕೊಳ್ಳಬಹುದು. ಶೈಕ್ಷಣಿಕವಾಗಿ ಅದು ಸರಿ. ಆದರೆ ಅಧಿಕೃತ ಪಠ್ಯದಲ್ಲಿ ಬಂದಾಗ ಶೈಕ್ಷಣಿಕ ತತ್ವಗಳ ಜ್ಞಾನ ಇಲ್ಲದವರು ಶಿಕ್ಷಣದೊಂದಿಗೆ ಸೇರಿಕೊಂಡಾಗ, 'ಪಾಠ ಪುಸ್ತಕದಲ್ಲಿದ್ದರೂ ಯಾಕೆ ವಿವರಿಸಲಿಲ್ಲ?' ಎಂಬ ಆಕ್ಷೇಪಗಳು ಶೈಕ್ಷಣಿಕ ಕಿರುಕುಳವನ್ನು ಸೃಷ್ಟಿಸಲು ಅವಕಾಶ ಇರುತ್ತದೆ. ಆದ್ದರಿಂದ ಪಾಠ ಪುಸ್ತಕವನ್ನು ರಚಿಸುವಾಗಲೇ ಈ ಎಚ್ಚರಿಕೆ ಇರಬೇಕು. ಹಾಗೆಂದು, ಹೇಳಬೇಕಾದ ವಿವರಗಳನ್ನು ಹೇಳದೇ ಇರುವುದಲ್ಲ. ಹೇಗೆ ಹೇಳಬೇಕು ಎಂದು ಗೊತ್ತಿದ್ದು ಹೇಳಬೇಕಾಗುತ್ತದೆ.

ಪಠ್ಯಗಳು ಮೌಲ್ಯಮಾಪನಕ್ಕೆ ಆಧಾರಗಳೂ ಹೌದು. ಮೌಲ್ಯಮಾಪನದ ವಿಚಾರ ಬಂದಾಗ ಅಂಕಗಳ ಹಂಚಿಕೆಯ ವಿಧಾನ ಮುಖ್ಯವಾಗುತ್ತದೆ. ಉದಾಹರಣೆಗೆ, ಬಹು ದೀರ್ಘಕಾಲದಿಂದ ಹತ್ತನೆಯ ತರಗತಿಯ ಇತಿಹಾಸದಲ್ಲಿ ಪ್ರಧಾನ ಪ್ರಶ್ನೆಯ ಅಂಕ 'ಗಾಂಧಿ ಯುಗ'ಕ್ಕೆ ಹೋಗಿದೆ. ಗಾಂಧಿ, ನೆಹರೂ, ಬೋಸ್, ಅಂಬೇಡ್ಕರ್, ಬುಡಕಟ್ಟು ಬಂಡಾಯಗಳು, ರೈತ ಬಂಡಾಯಗಳು- ಹೀಗೆ ಆ ಪಾಠದ ವಿಷಯಗಳಿಂದ ಪ್ರಧಾನ ಪ್ರಶ್ನೆ ಬರುತ್ತದೆ. ಪ್ರಧಾನ ಪ್ರಶ್ನೆಯಾಗಿ ಬರುವ ವಿಷಯವೂ ಬಹಳಷ್ಟು ವಿಸ್ತಾರವಾಗಿ ಪಾಠ ಪುಸ್ತಕದಲ್ಲಿ ಮಂಡನೆಯಾಗಿರುತ್ತದೆ.

ಈ ಬಾರಿ ಸಣ್ಣ ವ್ಯತ್ಯಾಸ ಆಯಿತು. 'ಭಾರತಕ್ಕೆ ಯುರೋಪಿಯನ್ನರ ಆಗಮನ' ಪಾಠದಲ್ಲಿ, ಮಾರ್ತಾಂಡ ವರ್ಮನು ಡಚ್ಚರನ್ನು ಎದುರಿಸಿದ ವಿಷಯ ಮೊದಲ ಬಾರಿಗೆ ಬಂದಿದೆ. ಪ್ರೌಢ ಶಿಕ್ಷಣದಲ್ಲೇ ಇದುವರೆಗೆ ಬಾರದ ವಿಚಾರವನ್ನು ಕೊಟ್ಟದ್ದು ಸಮರ್ಪಕವಾಗಿದೆ. ಆದರೆ ಅದರ ವಿವರಣೆ ಬಹಳಷ್ಟು ದೀರ್ಘವಾಗಿ ಬೆಳೆದಿದೆ. ಅಷ್ಟು ದೀರ್ಘ ವಿವರಣೆ ಇದ್ದಾಗ ಅದೇ ಪ್ರಧಾನ ಪ್ರಶ್ನೆಗೆ ಅರ್ಹವಾಗುತ್ತದೆ. ಆದರೆ ಶೈಕ್ಷಣಿಕ ದೃಷ್ಟಿಯಿಂದ ಆಧುನಿಕ ಇತಿಹಾಸದಲ್ಲಿ ಗಾಂಧಿ ಯುಗಕ್ಕೆ ಇರುವ 'ತೂಕ', '...ಯುರೋಪಿಯನ್ನರ ಆಗಮನ'ಕ್ಕೆ ಇಲ್ಲ. ಆಗ ಪಾಠದ ತೂಕ, ಮೌಲ್ಯಮಾಪನದ ನಡುವಿನ ಹೊಂದಾಣಿಕೆಯಲ್ಲಿ ಸಮಸ್ಯೆಗಳು ಬರುತ್ತವೆ. ಆಗ ಸೇರ್ಪಡೆಗಳನ್ನು ಆಯಾ ಪಾಠದ ತೂಕಕ್ಕೆ ಹೊಂದುವಷ್ಟೇ ಪ್ರಮಾಣದಲ್ಲಿ ಮಾಡುವ ಜವಾಬ್ದಾರಿ ಪಠ್ಯಪುಸ್ತಕ ರಚನೆಕಾರರಿಗೆ ಇರಬೇಕಾಗುತ್ತದೆ.



ಇದೇ ರೀತಿ ಒಂದು ಪಾಠ ಪುಸ್ತಕದ ವಿವಿಧ ಪಾಠಗಳ ಗಾತ್ರ ಮತ್ತು ವೈಚಾರಿಕ ಮಹತ್ವಕ್ಕೆ ಅನುಗುಣವಾಗಿ, ಪ್ರತೀ ಪಾಠಕ್ಕೂ ಎಷ್ಟು ಗಂಟೆ ಬಳಸಬೇಕು ಎಂದು ಸಮಯದ ಹಂಚಿಕೆ ಆಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಬೇಗ ಪಾಠಗಳನ್ನು ಮುಗಿಸಿ, ಪ್ರಶ್ನೋತ್ತರಗಳ ಅಭ್ಯಾಸ ಮಾಡಿಸಿ ಅಂಕಗಳನ್ನು ಹೆಚ್ಚಿಸುವ ಕಲ್ಪನೆಯಿಂದಾಗಿ ವಾಸ್ತವದಲ್ಲಿ ಸಮಯ ಹಂಚಿಕೆ ಪಾಲನೆಯಾಗುತ್ತಿಲ್ಲ. ಕೋವಿಡ್ ಕಾಲದಲ್ಲಿ ಈ ಪದ್ಧತಿಯೇ ಹೊರಟುಹೋದಂತಾಗಿದೆ. 10 ತಿಂಗಳ ಪಾಠವನ್ನು ಆರು ತಿಂಗಳಲ್ಲಿ ಮುಗಿಸಬೇಕಾದರೆ ತಿಂಗಳಲ್ಲಿ ಎಷ್ಟು ಪಾಠಗಳನ್ನು ಮುಗಿಸಬೇಕು ಎಂದು ಗುಣಾಕಾರ ಮಾಡಿ ಸಮಯ ವಿಂಗಡಣೆ ಮಾಡಲಾಯಿತು. ಆದರೆ ಆ ರೀತಿ ಮಾಡಲು ಬರುವುದಿಲ್ಲ. ಆ ಪದ್ಧತಿಯೇ ಅವೈಜ್ಞಾನಿಕವಾಗಿತ್ತು. ಒಂದು ಪಾಠಕ್ಕೆ ಮೂರು ಗಂಟೆ ಎಂದು ನಿಗದಿಯಾದ ಮೇಲೆ ಅದನ್ನು ಒಂದೂವರೆ ಗಂಟೆಗೆ ಇಳಿಸಿ ಬೋಧಿಸುವುದು ಹೇಗೆ? ಹತ್ತು ತಿಂಗಳು ಪೂರ್ತಿ ಲಭ್ಯ ಇಲ್ಲದಿರುವುದರಿಂದ ಲಭ್ಯ ಇರುವ ಆರು ತಿಂಗಳಿಗೆ ಎಷ್ಟು ಪಾಠಗಳು ಹಂಚಿಕೆಯಾಗಿವೆಯೋ ಅಷ್ಟೇ ಸಾಕು ಎಂಬ ನಿರ್ಧಾರ ವೈಜ್ಞಾನಿಕವಾಗಿ ಸಮರ್ಥನೀಯವಾಗಿತ್ತು.

ಪಾಠಗಳಿಗೆ ಸಮಯ ಹಂಚಿಕೆಯ ಸಮಸ್ಯೆಯಿಂದಾಗಿ ಆಗಬೇಕಾದ ಕಲಿಕಾ ಪರಿಣಾಮ ಆಗುವುದಿಲ್ಲ. ಸಮಯ ಹಂಚಿಕೆಯನ್ನು ತಕ್ಕ ಮಟ್ಟಿಗಾದರೂ ಅನುಸರಿಸಿದಾಗ ಮಾತ್ರ ಬೋಧನಾ ಪದ್ಧತಿಯ ಪ್ರಕಾರ ಬೋಧನೆಯನ್ನು ಸ್ವಲ್ಪಮಟ್ಟಿಗೆ ನಡೆಸಲು ಸಾಧ್ಯವಾಗುತ್ತದೆ. ಇದರ ಅರಿವು ಪಠ್ಯಪುಸ್ತಕ ರಚನೆಕಾರರಿಗೆ ಇರಬೇಕಾಗುತ್ತದೆ.

ಬೋಧನೆಯಲ್ಲಿ ಉಪನ್ಯಾಸ ಪದ್ಧತಿ, ಸಂವಾದ ಪದ್ಧತಿ, ಸಂಕಿರಣ ಪದ್ಧತಿ, ಚಟುವಟಿಕೆ ಪದ್ಧತಿ, ಕಥನ ಪದ್ಧತಿ, ಪ್ರಯೋಗ ಪದ್ಧತಿ, ಕ್ಷೇತ್ರಾಧ್ಯಯನ ಪದ್ಧತಿ... ಹೀಗೆ ಹಲವಾರು ಪದ್ಧತಿಗಳಿರುತ್ತವೆ. ಡಿ.ಇಡಿ, ಬಿ.ಇಡಿ, ಎಂ.ಇಡಿ ಮಾಡಿದ ಅಧ್ಯಾಪಕರಿಗೆ ಇದು ತಿಳಿದಿರುತ್ತದೆ. ಯಾವ ಪಾಠದ ಯಾವ ವಿಷಯಕ್ಕೆ ತನ್ನ ವಿದ್ಯಾರ್ಥಿಗಳ ಮಟ್ಟಕ್ಕೆ, ತನ್ನ ಪರಿಸರದಲ್ಲಿ ಯಾವ ಪದ್ಧತಿಯನ್ನು ಅನುಸರಿಸಬಹುದು ಎಂದು ಅಧ್ಯಾಪಕರು ನಿರ್ಧರಿಸಬೇಕು. ವಿದ್ಯಾರ್ಥಿಗಳನ್ನು ವೈಯಕ್ತಿಕವಾಗಿ ಬಲ್ಲವರಲ್ಲದವರಿಗೆ ಇದನ್ನು ನಿರ್ಧರಿಸಲು ಆಗುವುದಿಲ್ಲ. ಆದರೆ ಪಠ್ಯಪುಸ್ತಕ ರಚನೆಕಾರರು ಸೂಕ್ತ ಪದ್ಧತಿಯನ್ನು ಅಧ್ಯಾಪಕರು ಅಳವಡಿಸಿಕೊಳ್ಳಲು ಅವಕಾಶ ಇರುವ ಹಾಗೆ ಪಠ್ಯಪುಸ್ತಕವನ್ನು ರಚಿಸಬೇಕಾಗುತ್ತದೆ. ಪಠ್ಯದಲ್ಲಿ ಅತಿಯಾಗಿ ವಿಷಯಗಳನ್ನು ತುಂಬಿ, ಅದೆಲ್ಲವನ್ನೂ ಮಕ್ಕಳಿಗೆ ಕಲಿಸಬೇಕು ಎಂದು ಹೇಳಿದಾಗ ಅಧ್ಯಾಪಕರು ಕ್ಷಿಪ್ರವಾಗಿ ವಿವರಿಸುವ ಉಪನ್ಯಾಸ ಪದ್ಧತಿಯನ್ನು ಆಯ್ದುಕೊಳ್ಳುವುದು ಅವರಿಗೆ ಅನಿವಾರ್ಯವಾಗುತ್ತದೆ. ಏಕೆಂದರೆ, ಉಳಿದ ಪದ್ಧತಿಗಳಿಗೆ ಸಮಯ ಜಾಸ್ತಿ ಬೇಕು. ಪಠ್ಯ ವಿಷಯವೇ ಹೊರೆಯಾದಾಗ ಪಾಠಗಳನ್ನು ಮುಗಿಸುವ ಅವಸರ ಇರುತ್ತದೆ. ಆದ್ದರಿಂದ ಔಚಿತ್ಯಕ್ಕೆ ಅನುಗುಣವಾಗಿ ಬೋಧನಾ ಪದ್ಧತಿಯನ್ನು ಅಳವಡಿಸಲು ಆಗುವುದಿಲ್ಲ.

ರಾಜಕೀಯ ಧೋರಣೆ ಏನಾದರೂ ಇರಬಹುದು. ಅದನ್ನು ರಾಜಕೀಯಾತ್ಮಕವಾಗಿ ಸಾಧಿಸಬೇಕು. ಶೈಕ್ಷಣಿಕ ತತ್ವಗಳ ಆಧಾರದಲ್ಲಿ ಪಠ್ಯ ರಚನೆ ಮಾಡಿ, ಇತಿಹಾಸ ಪಠ್ಯವನ್ನು ಅರ್ಥಪೂರ್ಣಗೊಳಿಸುವ ಅಗತ್ಯವಿದೆ.

ಚುರುಮುರಿ

ಯಜಮಾನಿ ಯಾರು?

• ಮಣ್ಣೆರಾಜು

ಅತ್ತೆ-ಸೊಸೆ ಜಗಳ ಜಗತ್ತಿನ ಮೊದಲ ಯುದ್ಧ. ಅಂದು ಶುರುವಾಗಿದ್ದು ಇಂದಿಗೂ ನಿಂತಿಲ್ಲ, ನಿಲ್ಲುವಂತೆಯೂ ಇಲ್ಲ. ಅತ್ತೆ-ಸೊಸೆ ಕದನದಲ್ಲಿ ಯಾರೊಬ್ಬರೂ ಗೆದ್ದಿಲ್ಲ, ಸೋತೂ ಇಲ್ಲ!

ಸರ್ಕಾರದ ಗೃಹಲಕ್ಷ್ಮಿ ಯೋಜನೆಗಾಗಿ ಕುಟುಂಬದ ಯಜಮಾನಿ ಫಲಾನುಭವಿ ಆಯ್ಕೆ ವಿಚಾರದಲ್ಲಿ ಶಂಕ್ರಿ ಸಂಸಾರದಲ್ಲಿ ಅತ್ತೆ-ಸೊಸೆ ಜಗಳ ಶುರುವಾಗಿತ್ತು.

'ತಟ್ಟೆ, ಲೋಟದಿಂದ ಟಿ.ವಿ, ಫ್ರಿಜ್‌ವರೆಗೆ ಎಲ್ಲವನ್ನೂ ಸಂಪಾದಿಸಿ ಸಂಸಾರ ಕಟ್ಟಿ ಬೆಳೆಸಿದ್ದೇನೆ. ನಾನೇ ಕುಟುಂಬದ ಯಜಮಾನಿ' ಎಂಬುದು ಸುಮಿಯ ಅತ್ತೆಯ ವಾದ.

'ಚುನಾವಣೆ ಗೆದ್ದಂತೆ, ಸೊಸೆಯಾಗಿ ಸೇರು ಒದ್ದು ಮನೆ ಪ್ರವೇಶ ಮಾಡಿದ್ದೇನೆ. ನೀವು ನಿವೃತ್ತರಾಗಿ ನನಗೆ ಯಜಮಾನಿ ಹುದ್ದೆ ಹಸ್ತಾಂತರಿಸಬೇಕು' ಎಂಬುದು ಸುಮಿಯ ಒತ್ತಾಯ.

'ನಾನು ಬದುಕಿರುವವರೆಗೂ ಅದು ಸಾಧ್ಯವಿಲ್ಲ' ಎಂದಳು ಅತ್ತೆ.

'ಚುನಾವಣೆ ನಡೆಸೋಣ, ಗೆದ್ದವರಿಗೆ ಯಜಮಾನಿ ಪಟ್ಟ...' ಸುಮಿ ಪಟ್ಟು ಬಿಡಲಿಲ್ಲ.

'ಮಕ್ಕಳನ್ನು, ನನ್ನನ್ನು ಬೆದರಿಸಿ ವೋಟ್ ಹಾಕಿಸಿಕೊಂಡು ನೀನೇ ಗೆಲ್ತೀಯ, ಒಬ್ಬಂಟಿ ಅಮ್ಮ ಸಿಂಗಲ್ ವೋಟಿನಲ್ಲಿ ಸೋಲ್ತಾಳೆ' ಶಂಕ್ರಿ ಮಧ್ಯ ಪ್ರವೇಶಿಸಿದ.

'ಎದುರು ಮನೆಯ ಅತ್ತೆಯು ಸೊಸೆಗೆ ಪಟ್ಟಕಟ್ಟಿ ತಾನು ಜಪಮಣಿ ಎಣಿಸಿಕೊಂಡಿದ್ದಾಳೆ, ಅವಳನ್ನು ನೋಡಿ ಕಲಿಯಿರಿ'- ಸುಮಿ.

'ಪಕ್ಕದ ಮನೆ ಸೊಸೆಯು ಅತ್ತೆಗೆ ಯಜಮಾನಿಕೆ ಬಿಟ್ಟುಕೊಟ್ಟು ದೊಡ್ಡತನ ತೋರಿದ್ದಾಳೆ'- ಅತ್ತೆ.

'ಹುದ್ದೆ ನೀಡದಿದ್ದರೆ ಬೇರೆ ಸಂಸಾರ ಹೂಡಿ ಯಜಮಾನಿಯಾಗಿ ಸ್ವತಂತ್ರವಾಗಿ ಬಾಳುತ್ತೇನೆ...' ಸುಮಿ ಎಚ್ಚರಿಸಿದಳು.

ಶಂಕ್ರಿ ಎಚ್ಚೆತ್ತುಕೊಂಡ. ಅತ್ತೆ-ಸೊಸೆ ನಡುವೆ ಹಲವು ಸುತ್ತಿನ ಸಂಧಾನ ಸಭೆ ನಡೆಸಿ, ಮೊದಲ ಅರ್ಧ ಅವಧಿ ಅಮ್ಮನಿಗೆ, ಉಳಿದ ಅವಧಿ ಹೆಂಡತಿಗೆ ಯಜಮಾನಿ ಹುದ್ದೆ ನೀಡುವ ಒಪ್ಪಂದವನ್ನು ಪ್ರಕಟಿಸಿದ.

'ಆದರೆ ಗೃಹಲಕ್ಷ್ಮಿ ಯೋಜನೆಯ ಅರ್ಧ ಪಾಲು ಹಣ ತನಗೆ ಸೇರಬೇಕು...' ಎಂಬ ಕಂಡೀಷನ್ನಿನೊಂದಿಗೆ ಸುಮಿ ಒಪ್ಪಂದ ಒಪ್ಪಿಕೊಂಡಳು.

ಸಂಗತ

ಮಕ್ಕಳ ಕಣ್ಣು: ಇರಲಿ ಎಚ್ಚರ

ಮಕ್ಕಳಲ್ಲಿ ಕಂಡುಬರುವ ಕಣ್ಣಿನ ಕ್ಯಾನ್ಸರ್ ಅನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚುವುದು ಚಿಕಿತ್ಸೆಯ ಯಶಸ್ಸಿನ ದೃಷ್ಟಿಯಿಂದ ಅತ್ಯಂತ ನಿರ್ಣಾಯಕ

• ಡಾ. ವಸುಧಾ ಎನ್. ರಾವ್

ಕಣ್ಣಿನ ಕ್ಯಾನ್ಸರ್‌ನ ರೋಗಲಕ್ಷಣಗಳುಳ್ಳ ಮಕ್ಕಳ ದೃಷ್ಟಿಯಿಂದ ಮೇ ಅತ್ಯಂತ ಮಹತ್ವದ ತಿಂಗಳು. ರೆಟಿನಾದ ಮೇಲೆ ಪರಿಣಾಮ ಬೀರುವ ಕ್ಯಾನ್ಸರ್‌ನ ಅಪರೂಪದ ಹಂತವಾದ ರೆಟಿನೊಬ್ಲಾಸ್ಟೋಮಾ ಕುರಿತು ಜನಜಾಗೃತಿ ಮೂಡಿಸುವ ಮಹತ್ವದ ಕಾರ್ಯ ಈ ಅವಧಿಯಲ್ಲಿ ಆಗುತ್ತದೆ. ಸಾಮಾನ್ಯವಾಗಿ ರೆಟಿನೊಬ್ಲಾಸ್ಟೋಮಾ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ. ಪ್ರತಿವರ್ಷ ವಿಶ್ವದಾದ್ಯಂತ ಸರಿಸುಮಾರು 8,000 ಪ್ರಕರಣಗಳು ಪತ್ತೆಯಾಗುತ್ತವೆ. ವಿಶೇಷವಾಗಿ, ರೋಗನಿರ್ಣಯ ಮತ್ತು ಚಿಕಿತ್ಸೆ ವಿಳಂಬವಾಗುವ ಅಭಿವೃದ್ಧಿಶೀಲ ದೇಶಗಳಲ್ಲಿ ಈ ಪ್ರಕರಣಗಳ ನಿಖರ ಸಂಖ್ಯೆಯು ಲೆಕ್ಕಕ್ಕೆ ಸಿಗದಿರುವ ಸಾಧ್ಯತೆಯೇ ಹೆಚ್ಚು.

ಕಣ್ಣಿನ ಹಿಂಭಾಗದಲ್ಲಿರುವ ರೆಟಿನಾದ ಜೀವಕೋಶಗಳಲ್ಲಿ ನಡೆಯುವ ಆನುವಂಶಿಕ ರೂಪಾಂತರಗಳಿಂದ ಇಂತಹ ಸ್ಥಿತಿ ಉಂಟಾಗುತ್ತದೆ. ಚಿಕಿತ್ಸೆಯ ಫಲಿತಾಂಶದಲ್ಲಿ ಯಶಸ್ಸು ಪಡೆಯಲು ಆರಂಭದಲ್ಲೇ ಅದನ್ನು ಪತ್ತೆ ಹಚ್ಚುವುದು ಅತ್ಯಂತ ಮುಖ್ಯ. ಕಣ್ಣಿನಲ್ಲಿ ಬಿಳಿ ಹೊಳಪು ಅಥವಾ ಪ್ರತಿಬಿಂಬ ಕಾಣಿಸಿಕೊಳ್ಳುವುದು, ದೃಷ್ಟಿಯಲ್ಲಿ ಹಠಾತ್ ಬದಲಾವಣೆ, ಕಣ್ಣು ಅತಿಯಾಗಿ ಕೆಂಪಾಗುವುದು ಅಥವಾ ಊತದಂತಹ ಲಕ್ಷಣಗಳು ಆರಂಭದಲ್ಲಿ ಕಾಣಿಸಿಕೊಳ್ಳುತ್ತವೆ. ಈ ಮುನ್ನೆಚ್ಚರಿಕೆ ಲಕ್ಷಣಗಳನ್ನು ಗುರುತಿಸುವಲ್ಲಿ ಪೋಷಕರು ಮತ್ತು ಆರೈಕೆದಾರರ ಪಾತ್ರ ಪ್ರಮುಖವಾದುದು. ಈ ಯಾವುದೇ ರೋಗಲಕ್ಷಣಗಳು ಕಂಡುಬಂದರೆ, ತಕ್ಷಣವೇ ವೈದ್ಯಕೀಯ ನೆರವು ಪಡೆಯುವುದು ಒಳ್ಳೆಯದು.

ರೆಟಿನೊಬ್ಲಾಸ್ಟೋಮಾದ ಪತ್ತೆಗೆ ಸರಳ ಟಾರ್ಚ್‌ಲೈಟ್ ಪರೀಕ್ಷೆ ಸೇರಿದಂತೆ ನಿಯಮಿತ ಕಣ್ಣಿನ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಶಿಶುವೈದ್ಯರು, ಕುಟುಂಬ ವೈದ್ಯರು ಅಥವಾ ನೇತ್ರತಜ್ಞರು ಈ ಸ್ಕ್ರೀನಿಂಗ್ ಪರೀಕ್ಷೆಗಳನ್ನು ಮಾಡಬಹುದು. ವಿಶೇಷವಾಗಿ, ಎರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ರೆಟಿನೊಬ್ಲಾಸ್ಟೋಮಾದ ಲಕ್ಷಣಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಆರಂಭಿಕ ರೋಗನಿರ್ಣಯವು ದೃಷ್ಟಿಯ ರಕ್ಷಣೆಗೆ ಅನುವು ಮಾಡಿಕೊಡುವುದಷ್ಟೇ ಅಲ್ಲ ಗಂಭೀರವಾದ ಚಿಕಿತ್ಸೆಗಳ ಅಗತ್ಯವನ್ನೂ ಕಡಿಮೆ ಮಾಡುತ್ತದೆ.

ರೆಟಿನೊಬ್ಲಾಸ್ಟೋಮಾ ಆನುವಂಶಿಕವಾಗಿ ಬರಬಹುದು ಅಥವಾ ಆನುವಂಶಿಕ ಅಲ್ಲದೆಯೂ ಇರಬಹುದು. ಆನುವಂಶಿಕವಾಗಿ ರೆಟಿನೊಬ್ಲಾಸ್ಟೋಮಾ ಕಂಡುಬರುವ ವ್ಯಕ್ತಿಗಳಿಗೆ, ಎರಡೂ ಕಣ್ಣುಗಳಲ್ಲಿ ಅಥವಾ ಒಂದೇ ಕಣ್ಣಿನಲ್ಲಿ ಗಡ್ಡೆಗಳು ಉಂಟಾಗುವ ಅಪಾಯ ಇರುತ್ತದೆ. ಇಂತಹ ಸಂದರ್ಭದಲ್ಲಿ, ಯಶಸ್ವಿ ಚಿಕಿತ್ಸೆಯ ನಂತರವೂ ನಿಯಮಿತ ತಪಾಸಣೆ ಮತ್ತು ಮೇಲ್ವಿಚಾರಣೆ ಅತ್ಯಂತ ಮುಖ್ಯ. ನಿರ್ಲಕ್ಷ್ಯ ವಹಿಸಿದರೆ ಕಾಲಾನಂತರದಲ್ಲಿ ಹೊಸ ಗಡ್ಡೆಗಳು ಬೆಳೆಯಬಹುದು.

ರೆಟಿನೊಬ್ಲಾಸ್ಟೋಮಾವನ್ನು ಮೊದಲೇ ಪತ್ತೆಹಚ್ಚಲು ಆಧುನಿಕ ತಂತ್ರಜ್ಞಾನ ನೆರವಾಗುತ್ತದೆ. ಸರಳವಾದ ಕಾರ್ಯವಿಧಾನವು ವೈದ್ಯರು ರೆಟಿನಾವನ್ನು ಪರೀಕ್ಷಿಸಿ ಯಾವುದೇ ಅಸಹಜತೆಯನ್ನು ಕಂಡುಹಿಡಿಯಲು ಅನುವು ಮಾಡಿಕೊಡುತ್ತದೆ. ಅಲ್ಟ್ರಾಸೌಂಡ್, ಕಂಪ್ಯೂಟೆಡ್ ಟೊಮೊಗ್ರಫಿ (ಸಿ.ಟಿ) ಮತ್ತು ಮ್ಯಾಗ್ನೆಟಿಕ್ ರೆಸೊನೆನ್ಸ್ ಇಮೇಜಿಂಗ್‌ನಂತಹ (ಎಂಆರ್‌ಐ) ಪರೀಕ್ಷೆಗಳು ಗಡ್ಡೆಯ ವ್ಯಾಪ್ತಿ ಮತ್ತು ಅದು ಬೆಳೆದಿರುವ ಸ್ಥಳದ ಬಗ್ಗೆ ಹೆಚ್ಚು ವಿವರವಾದ ಮಾಹಿತಿ ಒದಗಿಸುತ್ತವೆ. ಇಂತಹ ಮಾಹಿತಿಯು ಸೂಕ್ತ ಚಿಕಿತ್ಸೆ ನೀಡುವುದಕ್ಕೆ ಪೂರಕವಾಗಿರುತ್ತದೆ.

ರೆಟಿನೊಬ್ಲಾಸ್ಟೋಮಾ ಚಿಕಿತ್ಸೆಯ ಮಾದರಿಯು ರೋಗದ ಹಂತ, ವ್ಯಾಪ್ತಿ ಸೇರಿದಂತೆ ವಿವಿಧ ಅಂಶಗಳನ್ನು ಅವಲಂಬಿಸಿರುತ್ತದೆ. ಗಡ್ಡೆಯು ಕಣ್ಣಿನೊಳಗೆ ಇದ್ದಾಗ, ಬರೀ ಒಂದು ಕಣ್ಣನ್ನು ಆವರಿಸಿಕೊಂಡಾಗ ಮತ್ತು ದೇಹದ ಇತರ ಭಾಗಗಳಿಗೆ ಹರಡದಿದ್ದಾಗ ಸಾಮಾನ್ಯವಾದ ಚಿಕಿತ್ಸೆ ನೀಡಿ ಅದನ್ನು ಗುಣಪಡಿಸಬಹುದು. ಇವುಗಳಲ್ಲಿ ಲೇಸರ್ ಚಿಕಿತ್ಸೆ, ಕ್ರಯೋಥೆರಪಿ (ಗಡ್ಡೆಯ ಕೋಶಗಳನ್ನು ಹೆಪ್ಪುಗಟ್ಟಿಸುವುದು) ಅಥವಾ ಕಣ್ಣಿಗೆ ನೇರವಾಗಿ ತಲುಪಿಸುವ ಕಿಮೋಥೆರಪಿ ಸೇರಿವೆ. ಸುತ್ತಮುತ್ತಲಿನ ಆರೋಗ್ಯಕರ ಅಂಗಾಂಶಗಳಿಗೆ ಹೆಚ್ಚು ಹಾನಿಯಾಗದಿದ್ದಾಗ ಗಡ್ಡೆಯನ್ನು ನಾಶಪಡಿಸಲು ಅಥವಾ ಕುಗ್ಗಿಸಲು ಇಂತಹ ಸಾಮಾನ್ಯವಾದ ಚಿಕಿತ್ಸೆಗಳು ಪರಿಣಾಮಕಾರಿಯಾಗಿರುತ್ತವೆ.

ಕ್ಯಾನ್ಸರ್ ಗಂಭೀರವಾದ ಹಂತ ತಲುಪಿದ್ದರೆ ಅಥವಾ ಕಣ್ಣಿನಾಚೆಗೂ ಹರಡಿದ್ದರೆ ಅಂತಹ ಸಂದರ್ಭಗಳಲ್ಲಿ, ಹೆಚ್ಚು ವ್ಯಾಪಕವಾದ ಚಿಕಿತ್ಸಾ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಗಡ್ಡೆಯನ್ನು ನಾಶಪಡಿಸಿ ಮತ್ತೆ ಅದು ಬೆಳೆಯದಂತೆ ಮಾಡಲು ಕಿಮೋಥೆರಪಿ, ರಕ್ತನಾಳಗಳ ಮೂಲಕ ನಿರ್ವಹಿಸುವ ವ್ಯವಸ್ಥಿತ ಅಥವಾ ಅಂತರ್ ಅಪಧಮನಿ ವಿಧಾನವನ್ನು ಬಳಸಬಹುದು. ಕ್ಯಾನ್ಸರ್ ದೇಹದ ಇತರ ಭಾಗಗಳಿಗೆ ಹರಡದಿರುವುದನ್ನು ಖಚಿತಪಡಿಸಿಕೊಳ್ಳಲು ಅತ್ಯಂತ ಗಂಭೀರವಾದ ಸಂದರ್ಭಗಳಲ್ಲಿ ಎನ್ಯುಕ್ಲಿಯೇಷನ್– ರೋಗಪೀಡಿತ ಕಣ್ಣನ್ನು ತೆಗೆದುಹಾಕುವುದು– ಅಥವಾ ಎಕ್ಸೆಂಟರೇಶನ್‌ನಂತಹ– ಸುತ್ತಮುತ್ತಲಿನ ಅಂಗಾಂಶಗಳ ಸಮೇತ ಕಣ್ಣನ್ನು ತೆಗೆದುಹಾಕುವುದು– ಶಸ್ತ್ರಚಿಕಿತ್ಸೆಗಳು ಬೇಕಾಗಬಹುದು. ಸಾಂದರ್ಭಿಕವಾಗಿ, ಕ್ಯಾನ್ಸರ್ ಕೋಶಗಳನ್ನು ಗುರಿಯಾಗಿಸಲು ಮತ್ತು ನಾಶಪಡಿಸಲು ವಿಕಿರಣ ಚಿಕಿತ್ಸೆಯನ್ನು ಅನುಸರಿಸಲಾಗುತ್ತದೆ.

ರೆಟಿನೊಬ್ಲಾಸ್ಟೋಮಾ ಪೀಡಿತ ಮಕ್ಕಳಿಗೆ ವೈದ್ಯಕೀಯ ಚಿಕಿತ್ಸೆಯನ್ನು ಮೀರಿದ ಬೆಂಬಲ ಮತ್ತು ಆರೈಕೆಯ ಅಗತ್ಯ ಇರುತ್ತದೆ. ಮಗು ಮತ್ತು ಅದರ ಕುಟುಂಬದ ಭಾವನಾತ್ಮಕ ಯೋಗಕ್ಷೇಮವೂ ಅಷ್ಟೇ ಮುಖ್ಯ. ಮಾನಸಿಕ ಬೆಂಬಲ, ಸಮಾಲೋಚನೆ, ಸೂಕ್ತ ಮಾರ್ಗದರ್ಶನದ ಜೊತೆಗೆ ಚಿಕಿತ್ಸೆಗಾಗಿ ತೆರಳುವಾಗ ಆರಾಮದಾಯಕ ಪ್ರಯಾಣದ ಲಭ್ಯತೆಯನ್ನು ಒದಗಿಸುವುದೂ ನಿರ್ಣಾಯಕವಾಗಿರುತ್ತದೆ.

ಲೇಖಕಿ: ಮಕ್ಕಳ ಕ್ಯಾನ್ಸರ್ ತಜ್ಞೆ

ವಾಚಕರ ವಾಣಿ

ಕೇಸರೀಕರಣ, ಹಸಿರೀಕರಣ ಎರಡೂ ಬೇಡ

ಪಠ್ಯಪುಸ್ತಕ ಪರಿಷ್ಕರಣೆ ವಿಚಾರ ಮತ್ತೆ ಸದ್ದು ಮಾಡುತ್ತಿದೆ. ಮಕ್ಕಳಿಗೆ ಮೌಲ್ಯಯುತ ಶಿಕ್ಷಣದ ಅವಶ್ಯಕತೆ ಇದೆ. ಆದರೆ ಸರ್ಕಾರ ಮುನ್ನಡೆಸುವ ಪಕ್ಷ ಬದಲಾದಾಗಲೆಲ್ಲಾ ತಮ್ಮ ಮೂಗಿನ ನೇರಕ್ಕೆ ಪಠ್ಯ ಪರಿಷ್ಕರಿಸಿ ಮಕ್ಕಳಿಗೆ ಗೊಂದಲದ ಇತಿಹಾಸ ನೀಡದಿರಿ. ಮಕ್ಕಳಿಗೆ ಮತೀಯ ರಾಜರ ಯುದ್ಧದ ಇತಿಹಾಸಕ್ಕಿಂತ ಸದ್ಯದ ಪರಿಸ್ಥಿತಿಯಲ್ಲಿ ಮಳೆನೀರು ಸಂಗ್ರಹ, ಮಣ್ಣಿನ ಫಲವತ್ತತೆ ಹೆಚ್ಚಿಸುವುದು, ಪರಿಸರ ಸಂರಕ್ಷಣೆ, ಜಾಗತಿಕ ತಾಪಮಾನದಿಂದ ಆಗುತ್ತಿರುವ ಹಾನಿ ಮತ್ತು ತಡೆ, ವೃತ್ತಿಪರ ಕೌಶಲ ಹಾಗೂ ಮಾನವೀಯ ಮೌಲ್ಯಗಳ ಕುರಿತು ಹೆಚ್ಚಿನ ಜ್ಞಾನದ ಅಗತ್ಯವಿದೆ. ಈ ದಿಸೆಯಲ್ಲಿ ಸರ್ಕಾರ ಮತ್ತು ಪಠ್ಯ ತಜ್ಞರು ಚಿಂತಿಸಲಿ. ಕೇಸರೀಕರಣ ಮತ್ತು ಹಸಿರೀಕರಣವನ್ನು ಬಿಟ್ಟು ಸರ್ಕಾರ ತೆಗೆದುಕೊಳ್ಳುವ ನಿರ್ಣಯಗಳು ಇತಿಹಾಸ ಸೃಷ್ಟಿಸುವಂತಿರಲಿ. ಮುಂದಿನ ಪೀಳಿಗೆಯ ಭವಿಷ್ಯ ಪ್ರಜ್ವಲಿಸುವಂತಿರಲಿ.

ಎಸ್.ನಾಗರಾಜ ನಾಗೂರ, ಬಾಗಲಕೋಟೆ

ಮುದ್ರಿತ ಪಠ್ಯಪುಸ್ತಕ ಮುಂದುವರಿಯಲಿ

ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೋ ಆ ಪಕ್ಷದ ಸಿದ್ಧಾಂತಕ್ಕೆ ತಕ್ಕಂತೆ ಪಠ್ಯಪುಸ್ತಕಗಳು ರೂಪುಗೊಳ್ಳುವ ಪರಿಪಾಟ ಶುರುವಾಗಿದೆ. ಈ ಹಿಂದೆ ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಯು ಶಾಲಾ ಪಠ್ಯಪುಸ್ತಕ ಪರಿಷ್ಕರಿಸಿ ಹೆಚ್ಚು ವಿವಾದಕ್ಕೀಡಾಗಿತ್ತು. ಅನೇಕ ಲೇಖಕರು, ಸಾಹಿತಿಗಳು, ಚಿಂತಕರು ತಮ್ಮ ಕವಿತೆ, ಲೇಖನಗಳನ್ನು ವಾಪಸ್ ಪಡೆದಿದ್ದರು. ಆಗ ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್ ಪಕ್ಷ ಇದನ್ನು ತೀವ್ರವಾಗಿ ವಿರೋಧಿಸಿತ್ತು. ಈಗ ಕಾಂಗ್ರೆಸ್ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದ ಮೇಲೆ ಪಠ್ಯಪುಸ್ತಕ ಪರಿಷ್ಕರಣೆಗೆ ಚಿಂತಿಸುತ್ತಿರುವ ವರದಿಗಳು ಬರುತ್ತಿವೆ. ಇದನ್ನೆಲ್ಲ ನೋಡಿದರೆ, ಪಠ್ಯಪುಸ್ತಕಗಳು ರಾಜಕೀಯ ಪಕ್ಷಗಳ ಪುಸ್ತಕಗಳಂತೆ ಆಗುತ್ತಿವೆಯೇ ಎಂಬ ಸಂದೇಹ ಮೂಡುತ್ತದೆ.

ಪ್ರಸ್ತುತ ಶೈಕ್ಷಣಿಕ ವರ್ಷದ ಶೇಕಡ 90ರಷ್ಟು ಪಠ್ಯಪುಸ್ತಕಗಳು ಮುದ್ರಣಗೊಂಡು ಶಾಲೆಗಳಿಗೆ ತಲುಪಿವೆ. ಈ ಹಂತದಲ್ಲಿ ಅವುಗಳನ್ನು ವಾಪಸ್ ಪಡೆದು ಪಠ್ಯವಿಷಯ ಪರಿಷ್ಕರಿಸಿ ಮರು ಮುದ್ರಣ ಮಾಡುವುದು ಸಮಂಜಸವಲ್ಲ ಹಾಗೂ ಆರ್ಥಿಕವಾಗಿ ಸರ್ಕಾರಕ್ಕೆ ಹೆಚ್ಚು ಹೊರೆ. ಆದ್ದರಿಂದ ಮುದ್ರಣಗೊಂಡ ಪಠ್ಯಪುಸ್ತಕಗಳನ್ನು ಮುಂದುವರಿಸಿ, ಮುಂದಿನ ಶೈಕ್ಷಣಿಕ ವರ್ಷಕ್ಕೆ ಒಂದು ಶಾಶ್ವತ ಪಠ್ಯಪುಸ್ತಕ ಆಯೋಗವನ್ನು ರಚಿಸಲಿ. ಅದಕ್ಕೆ ಕಾನೂನಿನ ಮಾನ್ಯತೆ ನೀಡಲಿ. ಆ ಮೂಲಕ ಯಾವುದೇ ಪಕ್ಷ ತನ್ನ ಸಿದ್ಧಾಂತಕ್ಕೆ ತಕ್ಕಂತೆ ಪಠ್ಯಪುಸ್ತಕ ಬದಲಾವಣೆ ಮಾಡುವುದಕ್ಕೆ ಸಂಪೂರ್ಣ ಕಡಿವಾಣ ಹಾಕಬಹುದು.

ಆಂಜನೇಯ ಎನ್., ಕಸಿನಾಯಕನಹಳ್ಳಿ, ಮಧುಗಿರಿ

ಕೈಕೊಟ್ಟ ರೈಲು, ಉಡಾಫೆಯ ನಡೆ

ವಿಜಯಪುರದಿಂದ ಸಂಜೆ 6.15ಕ್ಕೆ ಹೊರಡುವ ಗೋಲ್‌ಗುಂಬಜ್ ಎಕ್ಸ್‌ಪ್ರೆಸ್ ಇದ್ದಕ್ಕಿದ್ದಂತೆ ಸಮಯವನ್ನು 5.45ಕ್ಕೆ ಬದಲಿಸಿದೆ. ಟಿಕೆಟ್ ಬುಕಿಂಗ್‌ನಲ್ಲಾಗಲೀ ಮೆಸೇಜಿನಲ್ಲಾಗಲೀ ಸಮಯ ಬದಲಾವಣೆಯನ್ನು ಗ್ರಾಹಕರಿಗೆ ತಿಳಿಸಿಲ್ಲ. ಕೇಳಿದರೆ 'ಪೇಪರಲ್ಲಿ ಹಾಕ್ಸಿದೀವಿ', 'ಸ್ಟೇಷನ್‌ನಲ್ಲಿ ತಿಳಿಸಿದ್ದೀವಿ' ಎಂಬಂತಹ ಉಡಾಫೆಯ ಉತ್ತರ ಕೊಡುತ್ತಾರೆ. ನಾನು ಹಾಗೂ ತಮಿಳುನಾಡಿನ ಕವಿ ಸುಕೀರ್ತಾ ರಾಣಿ ಅರ್ಧಗಂಟೆ ಮೊದಲೇ ನಿಲ್ದಾಣಕ್ಕೆ ಹೋದಾಗ ರೈಲು ಹೋಗಿತ್ತು. ತೊಂದರೆಗೊಳಗಾದ ನೂರಾರು ಜನ ಗಲಾಟೆ ಮಾಡಿದಾಗ, ಮಂಗಳೂರು ರೈಲು ಹತ್ತಿಸಿ, ಗದಗ್‌ನಲ್ಲಿ ಲಿಂಕ್ ಕೊಡ್ತೀವಿ ಅಂತ ಸಾಗಹಾಕಿ, ಅಲ್ಲೂ ಕೊಡದೆ, ನಡುರಾತ್ರಿ ಹುಬ್ಬಳ್ಳಿಯಲ್ಲಿ ದೂರದ ಪ್ಲ್ಯಾಟ್‌ಫಾರ್ಮಲ್ಲಿ ನಿಲ್ಲಿಸಿ, ಆತಂಕದಿಂದ ಹೋಗಿ ರೈಲು ತಲುಪಿದರೆ, ಕಾದಿರಿಸಿದ್ದ ನಮ್ಮ ಸೀಟನ್ನು ಬೇರೆಯವರಿಗೆ ನೀಡಿದ್ದರು. ಕೊನೆಗೆ ಗೋಗರೆದು ಬೇರೆ ಸೀಟು ಪಡೆದು ಪ್ರಯಾಣಿಸಬೇಕಾಯಿತು.

ಹೀಗೆ ಹುಬ್ಬಳ್ಳಿಯಲ್ಲಿ ಗಂಟೆಗಟ್ಟಲೆ ನಿಲ್ಲಿಸಿ ಎಲ್ಲರಿಗೂ ತೊಂದರೆ ಕೊಟ್ಟು, ಅತ್ತ ಮಕ್ಕಳು, ಮುದುಕರು, ಹೆಂಗಸರು, ಗಂಡಸರೆನ್ನದೆ ಎಲ್ಲರಿಗೂ ತೊಂದರೆ ನೀಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು.

ಡಾ. ಸಬಿತಾ ಬನ್ನಾಡಿ, ಬಿ.ಆರ್.ಪ್ರಾಜೆಕ್ಟ್

ಮಣಿಪುರ: ಮೂಡಲಿ ಸಾಮರಸ್ಯ

ಮಣಿಪುರದಲ್ಲಿ ಜನಾಂಗೀಯ ಸಂಘರ್ಷ ಉಲ್ಬಣಿಸಿರುವುದು ವಿಷಾದದ ಸಂಗತಿ. ಪ್ರಜಾಸತ್ತಾತ್ಮಕವಾದ ಯಾವುದೇ ಸರ್ಕಾರ ಯಾವುದೋ ಒಂದು ಪ್ರಬಲ ಸಮುದಾಯದ ಪರವಾಗಿ ವರ್ತಿಸುವುದು ಅಕ್ಷಮ್ಯ. ಜನಾಂಗೀಯ ಸಂಘರ್ಷದಿಂದ ಸಮುದಾಯಗಳು ನಲುಗುತ್ತಿರುವುದು ಬಲಿಷ್ಠ ಶಕ್ತಿಯನ್ನು ಪರದೇಶದವರು ವಕ್ರದೃಷ್ಟಿಯಿಂದ ನೋಡುವಂತೆ ಮಾಡುತ್ತದೆ. ತಕ್ಷಣ ಮಣಿಪುರದಲ್ಲಿ ಸಮುದಾಯಗಳ ನಡುವೆ ಸಾಮರಸ್ಯ ಮೂಡುವಂತೆ ಮಾಡಬೇಕಾಗಿದೆ. ಸಮುದಾಯಗಳು ನೈತಿಕತೆ ಕಳೆದುಕೊಳ್ಳುವ ಮೊದಲು ಭಾರತದ ಸಾಂಘಿಕ ಜೀವನದ ಸಂಸ್ಕೃತಿಯನ್ನು ಬಲಿಷ್ಠಗೊಳಿಸಬೇಕಿದೆ.

ಎಂ.ಮಂಚಶೆಟ್ಟಿ ಕಡಿಲುವಾಗಿಲು, ಮದ್ದೂರು

ಹೊಸಬರಿಗೆ ಸಿಗಲಿ ಅವಕಾಶ

ರಾಜ್ಯದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಬಹುಜನರ ಆಶಯದಂತೆ ಸರ್ಕಾರ ಹೊಸ ಆಲೋಚನೆಗಳೊಂದಿಗೆ ಮುನ್ನಡೆಯಬೇಕಾಗುತ್ತದೆ. ಈ ಸಂದರ್ಭದಲ್ಲಿ ಸರ್ಕಾರದ ಅಕಾಡೆಮಿಗಳು, ನಿಗಮ ಮಂಡಳಿಗಳು, ರಂಗಾಯಣಗಳು, ವಿವಿಧ ಪ್ರಾಧಿಕಾರಗಳಲ್ಲಿ ಸ್ಥಾನ ಪಡೆಯಲು ಹಲವರು ಪ್ರಯತ್ನ ನಡೆಸುತ್ತಿದ್ದಾರೆ. ಸರ್ಕಾರ ಈ ಕ್ಷೇತ್ರಗಳಿಗೆ ನೇಮಕ ಮಾಡುವಾಗ, ಈಗಾಗಲೇ ಅಧಿಕಾರ ಅನುಭವಿಸಿ, ಸೇವೆ ಸಲ್ಲಿಸಿರುವವರ ಸ್ಥಾನದಲ್ಲಿ ಹೊಸ ಆಲೋಚನೆ, ಚಿಂತನೆಯುಳ್ಳ ಕ್ರಿಯಾಶೀಲರಿಗೆ ಅವಕಾಶ ನೀಡುವುದು ಅಪೇಕ್ಷಣೀಯ.

ಅಧಿಕಾರ ಪಡೆದವರಿಗೇ ಮತ್ತೆ ಮತ್ತೆ ಮಣೆ ಹಾಕುವ ಬದಲು ಕಾಲದ ಅಗತ್ಯಕ್ಕೆ ಅನುಗುಣವಾಗಿ ಸಾಂಸ್ಕೃತಿಕ ರಾಜಕಾರಣದ ಅನಿವಾರ್ಯ ಇರುವುದರಿಂದ, ಸರ್ಕಾರ ಈ ಬಗ್ಗೆ ಪರ್ಯಾಲೋಚಿಸಿ ಹೊಸ ಆಲೋಚನೆಗೆ ಅವಕಾಶ ಕಲ್ಪಿಸಿ, ಸೈದ್ಧಾಂತಿಕ ಕ್ರೋಡೀಕರಣದತ್ತ ಸಾಗಲಿ.

ಪ್ರೊ. ರಾಜಪ್ಪ ದಳವಾಯಿ, ಸಿ.ಬಸವಲಿಂಗಯ್ಯ, ಡಾ. ತಲಕಾಡು ಚಿಕ್ಕರಂಗೇಗೌಡ, ಡಾ. ವಡ್ಡಗೆರೆ ನಾಗರಾಜಯ್ಯ, ಶಿವರಾಮೇಗೌಡ (ಕ.ರ.ವೇ), ಡಾ. ಆರ್.ಎನ್.ರಾಜಾನಾಯಕ್, ಈ.ಬಸವರಾಜು, ಡಾ. ನಾಗೇಶ್ ಕೆ.ಎನ್., ಜಗದೀಶ್ ಜಾಣಜಾಣೆಯರು, ಪ್ರಭಾ ಬೆಳವಂಗಲ, ಡಾ. ಹುಲಿಕುಂಟೆಮೂರ್ತಿ, ವಿ.ಆರ್.ಕಾರ್ಪೆಂಟರ್, ಡಾ. ರವಿಕುಮಾರ್ ನೀ.ಹ., ಅಲ್ಲೂರು ಶಿವರಾಜ ನಾಯಕ, ಉದಯಕುಮಾರ್ ಆರ್.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮೋದಿ ಸರ್ಕಾರಕ್ಕೆ ಒಂಬತ್ತು ವರ್ಷ



ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬಿಜೆಪಿಯು ಕೇಂದ್ರದಲ್ಲಿ ಸರ್ಕಾರ ರಚಿಸಿ ಒಂಬತ್ತು ವರ್ಷಗಳು ತುಂಬಿವೆ. 2014ರ ಮೇಯಲ್ಲಿ ರಚನೆಯಾದ ಸರ್ಕಾರವು, 2019ರಲ್ಲಿ ಎರಡನೇ ಅವಧಿಗೂ ಆರಿಸಿಬಂದಿತ್ತು. ಈ ಒಂಬತ್ತು ವರ್ಷಗಳ ಅವಧಿಯಲ್ಲಿ ಮೋದಿ ಅವರ ಸರ್ಕಾರವು ಹಲವು ಮಹತ್ವದ ಕ್ರಮಗಳನ್ನು ತೆಗೆದುಕೊಂಡಿದೆ. ಹಲವು ಹೊಸ ಕಾರ್ಯಕ್ರಮಗಳನ್ನು ಆರಂಭಿಸಿದೆ. ಹಲವು ಕಾನೂನುಗಳನ್ನು ಬದಲಿಸಿದೆ. ಜನ ಸಾಮಾನ್ಯರ ಬದುಕಿನ ಮೇಲೆ ಪರಿಣಾಮ ಬೀರುವ ಇಂತಹ ಕ್ರಮಗಳಲ್ಲಿ, ಹಲವು ಯಶಸ್ವಿಯಾಗಿವೆ. ಇನ್ನೂ ಹಲವಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿವೆ. ಮೋದಿ ನೇತೃತ್ವದ ಸರ್ಕಾರದ ಈ ಒಂಬತ್ತು ವರ್ಷಗಳ ಅಧಿಕಾರದಲ್ಲಿ ದೇಶದಲ್ಲಾದ ಏಳು-ಬೀಳುಗಳತ್ತ ಒಂದು ಕಿರುನೋಟ ಇಲ್ಲಿದೆ

2014: ಸ್ವಚ್ಛಭಾರತ

ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರ ವಹಿಸಿಕೊಂಡ ವರ್ಷವಿದು. ಸರ್ಕಾರ ಅಸ್ತಿತ್ವಕ್ಕೆ ಬಂದ ದಿನದಿಂದಲೇ ಹೊಸ ಹೊಸ ಯೋಜನೆಗಳನ್ನು ಘೋಷಿಸಲಾಗಿದೆ. ಈ ಹಿಂದಿನಿಂದ ಜಾರಿಯಲ್ಲಿದ್ದ ಹಲವು ಕಾರ್ಯಕ್ರಮಗಳು ಮತ್ತು ಸಾಂವಿಧಾನಿಕ ಸಂಸ್ಥೆಗಳ ಹೆಸರನ್ನು ಬದಲಿಸಲಾಗಿದೆ. ಗಂಗಾ ನದಿ ಸ್ವಚ್ಛತೆಗಾಗಿ ಹಲವು ವರ್ಷಗಳಿಂದ ಜಾರಿಯಲ್ಲಿದ್ದ 'ನಿರ್ಮಲ ಗಂಗಾ' ಕಾರ್ಯಕ್ರಮದ ಹೆಸರನ್ನು ಮೋದಿ ಸರ್ಕಾರವು 2014ರಲ್ಲಿ 'ನಮಾಮಿ ಗಂಗಾ' ಎಂದು ಬದಲಿಸಿತ್ತು.

ಈ ವರ್ಷದಲ್ಲಿ ಸರ್ಕಾರವು ಆರಂಭಿಸಿದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ 'ಸ್ವಚ್ಛ ಭಾರತ ಅಭಿಯಾನ'ವು ಪ್ರಮುಖವಾದುದು. ಈ ಯೋಜನೆಯೂ ಸಂಪೂರ್ಣವಾಗಿ ಹೊಸದಾಗಿರಲಿಲ್ಲ. ಈ ಹಿಂದೆ ಜಾರಿಯಲ್ಲಿದ್ದ 'ನಿರ್ಮಲ ಭಾರತ' ಯೋಜನೆಯ ಹೆಸರನ್ನು ಸ್ವಚ್ಛ ಭಾರತ ಎಂದು ಬದಲಿಸಲಾಗಿತ್ತು. ಆದರೆ, ಯೋಜನೆಯ ರೂಪುರೇಷೆಗಳನ್ನು ಬದಲಿಸಲಾಗಿತ್ತು. ದೇಶದ ಎಲ್ಲಾ ಮನೆಗಳಲ್ಲಿ ಶೌಚಾಲಯ ನಿರ್ಮಾಣ ಮತ್ತು ಬಳಕೆಯನ್ನು ಉತ್ತೇಜಿಸುವುದು ಈ ಯೋಜನೆಯ ಉದ್ದೇಶವಾಗಿತ್ತು.ಈಗ ದೇಶದ ಶೇ 99.6ರಷ್ಟು ಮನೆಗಳಲ್ಲಿ ಶೌಚಾಲಯವಿದೆ ಎಂದು ಸರ್ಕಾರದ ದಾಖಲೆಗಳು ಹೇಳುತ್ತವೆ. ಇದು ಕೇಂದ್ರ ಸರ್ಕಾರದಲ್ಲಿ ಅತಿಹೆಚ್ಚು ಪ್ರಗತಿ ಸಾಧಿಸಿದ ಯೋಜನೆಗಳಲ್ಲಿ ಒಂದು. ಸ್ವಚ್ಛ ಭಾರತ ಕಾರ್ಯಕ್ರಮದ ಅಡಿ 'ಭಾರತವು ಬಯಲು ಶೌಚ ಮುಕ್ತ ದೇಶ'ವಾಗಿದೆ ಎಂದು 2019ರ ಅಕ್ಟೋಬರ್ 2ರಂದು ಕೇಂದ್ರ ಸರ್ಕಾರ ಘೋಷಿಸಿತ್ತು. ಆದರೆ ದೇಶದಲ್ಲಿ ಶೌಚಾಲಯ ಹೊಂದಿರುವ ಮನೆಗಳ ಪ್ರಮಾಣ ಶೇ 100ರಷ್ಟಾಗಿಲ್ಲ.

2016: ನೋಟು ರದ್ದತಿ

'ಇಂದು ಮಧ್ಯರಾತ್ರಿಯಿಂದಲೇ ಜಾರಿಯಾಗುವಂತೆ ₹500 ಹಾಗೂ ₹1000 ಮುಖಬೆಲೆಯ ನೋಟುಗಳು ರದ್ದಾಗಲಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ನ. 8ರಂದು ಘೋಷಣೆ ಮಾಡಿದ್ದರು. 'ಹೆಚ್ಚು ಮುಖಬೆಲೆಯ ನೋಟುಗಳಿಂದ ದೇಶದಲ್ಲಿ ಭ್ರಷ್ಟಾಚಾರ ಹೆಚ್ಚುತ್ತಿದೆ. ಜೊತೆಗೆ ದೇಶದಲ್ಲಿನ ಭಯೋತ್ಪಾದನೆಯ ನಿಗ್ರಹಕ್ಕಾಗಿ ಈ ಕ್ರಮ ಕೈಗೊಳ್ಳುವುದು ಜರೂರು' ಎಂದೂ ಪ್ರತಿಪಾದಿಸಿದ್ದರು. ನೋಟು ರದ್ದತಿಯ ಕಾರಣ ಸುಮಾರು 100 ಜನರು ತಮ್ಮ ಪ್ರಾಣ ಕಳೆದುಕೊಂಡರು. 'ನನಗೆ ಇನ್ನು 50 ದಿನ ಸಮಯಾವಕಾಶ ನೀಡಿ. ಒಂದು ವೇಳೆ ಈ ದಿನಗಳ ಒಳಗೆ ನಿಮ್ಮ ಕಷ್ಟಗಳು ಸರಿಹೋಗದಿದ್ದರೆ ನೀವು ಏನೇ ಶಿಕ್ಷೆ ನೀಡಿದರೂ ಎದುರಿಸುತ್ತೇನೆ' ಎಂದು ಪ್ರಧಾನಿ ಮೋದಿ ಅವರು ಕಾರ್ಯಕ್ರಮವೊಂದರಲ್ಲಿ ಜನರಿಗೆ ಕರೆ ನೀಡಿದ್ದರು. ದೇಶದಲ್ಲಿ ಯಾವ ಪ್ರಮಾಣದಲ್ಲಿ ಭ್ರಷ್ಟಾಚಾರ ಹಾಗೂ ಭಯೋತ್ಪಾದನೆ ಕಡಿಮೆ ಆಗಿದೆ ಎನ್ನುವ ಬಗ್ಗೆ ಈವರೆಗೂ ಕೇಂದ್ರ ಸರ್ಕಾರವು ಯಾವುದೇ ಮಾಹಿತಿ ನೀಡಿಲ್ಲ.

ರಿಸರ್ವ್ ಬ್ಯಾಂಕ್ 2023ರ ಮೇ 19ರಂದು ₹2000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯಿತು. ಹೆಚ್ಚುಮುಖಬೆಲೆಯ ನೋಟುಗಳು ಭಯೋತ್ಪಾದನೆ ಹೆಚ್ಚಳಕ್ಕೆ, ಭ್ರಷ್ಟಾಚಾರಕ್ಕೆ ಇಂಬು ನೀಡುತ್ತದೆ ಎಂದಿದ್ದ ಕೇಂದ್ರವು, ಈಗ 2000 ಮುಖಬೆಲೆಯ ನೋಟುಗಳನ್ನೂ ಚಲಾವಣೆಯಿಂದ ಹಿಂದಕ್ಕೆ ಪಡೆಯಲು ನಿರ್ಧರಿಸಿದೆ. 'ಹಾಗಾದರೆ, 2016ರಲ್ಲಿ ಕೇಂದ್ರದ ನೋಟು ರದ್ದತಿಯು 'ತಪ್ಪು ನಡೆ'ಯಾಗಿತ್ತೇ?' ಎಂದು ವಿರೋಧ ಪಕ್ಷಗಳು ಕೇಂದ್ರವನ್ನು ತರಾಟೆಗೆ ತೆಗೆದಿಕೊಂಡಿವೆ.

ಉಜ್ವಲ ಯೋಜನೆ: ಗ್ರಾಮೀಣ ಮಹಿಳೆಯರು ಸೌದೆ ಒಲೆ ಉರಿಸಬಾರದು. ಇದರಿಂದ ಅವರಿಗೆ ಹಲವು ಆರೋಗ್ಯ ಸಮಸ್ಯೆಗಳು ಕಾಡುತ್ತದೆ ಎಂಬ ಕಾರಣಕ್ಕೆ ಕೇಂದ್ರವು 'ಪ್ರಧಾನ ಮಂತ್ರಿ ಉಜ್ವಲ ಯೋಜನೆ'ಯನ್ನು ಜಾರಿಗೆ ತಂದಿತು. ಎಲ್‌ಪಿಜಿ ಸಿಲಿಂಡರ್‌ಗಳಿಗೆ ಕೇಂದ್ರವು ಸಹಾಯಧನ ನೀಡುತ್ತಿತ್ತು. ಆದರೆ, ಕಾಲಕ್ರಮೇಣ ಸಿಲಿಂಡರ್ ಬೆಲೆಯು ಗಗನಮುಖಿಯಾಗಿದ್ದರಿಂದ ಗ್ರಾಮೀಣ ಭಾಗದ ಮಹಿಳೆಯರು ಸಿಲಿಂಡರ್ ತೊರೆದು ಮತ್ತೊಮ್ಮೆ ಸೌದೆ ಒಲೆಯತ್ತ ವಾಲಿದರು ಎಂದು ಸಿಎಜಿ ತನ್ನ ವರದಿಯಲ್ಲಿ ಉಲ್ಲೇಖಿಸಿತ್ತು.

ನಿರ್ದಿಷ್ಟ ದಾಳಿ: ಸೆ.18ರಂದು ಉರಿ ಸೇನಾ ನೆಲೆಗೆ ನುಗ್ಗಿದ್ದ ಭಯೋತ್ಪಾದಕರು ಭಾರತದ 19 ಸೈನಿಕರನ್ನು ಹತ್ಯೆ ಮಾಡಿದರು. ಇದಕ್ಕೆ ಪ್ರತೀಕಾರವಾಗಿ ಕೇಂದ್ರ ಸರ್ಕಾರವು ಸೆ.28ರಂದು 'ನಿರ್ದಿಷ್ಟ ದಾಳಿ' ನಡೆಸಿತು. ಸರ್ಕಾರದ ಈ ಕ್ರಮವನ್ನು ಹಲವು ವಿರೋಧ ಪಕ್ಷಗಳು ಸ್ವಾಗತಿಸಿದರೆ, ಕೆಲವರು ವಿರೋಧಿಸಿದರು.

2015: 'ಸೂಟು ಬೂಟಿನ ಸರ್ಕಾರ'

ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರವು ಸುಗ್ರೀವಾಜ್ಞೆ ಹೊರಡಿಸಿತ್ತು. ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಭೂಸ್ವಾಧೀನ ಮಾಡಿಕೊಳ್ಳುವ ನಿಯಮಗಳನ್ನು ಸರಳಗೊಳಿಸಲಾಗಿತ್ತು. ಈ ಸುಗ್ರೀವಾಜ್ಞೆಗೆ ವಿರೋಧ ಪಕ್ಷಗಳಿಂದ ವ್ಯಾಪಕ ಆಕ್ಷೇಪ ವ್ಯಕ್ತವಾಗಿತ್ತು. ರೈತರ ಹಕ್ಕುಗಳನ್ನು ಮೊಟಕು ಮಾಡಲಾಗಿದೆ ಎಂದು ವಿಪಕ್ಷಗಳು ಆರೋಪಿಸಿದ್ದವು. 2015ರಲ್ಲಿ ಅಮೆರಿಕದ ಅಂದಿನ ಅಧ್ಯಕ್ಷ ಬರಾಕ್ ಒಬಾಮ ಭಾರತಕ್ಕೆ ಭೇಟಿ ನೀಡಿದ್ದರು. ಆ ಕಾರ್ಯಕ್ರಮದಲ್ಲಿ ಭಾಗಿಯಾಗುವಾಗ ಮೋದಿ ಅವರು ಧರಿಸಿದ್ದ ಸೂಟಿನಲ್ಲಿ 'ನರೇಂದ್ರ ದಾಮೋದರದಾಸ್ ಮೋದಿ' ಎಂದು ಚಿನ್ನದ ಎಳೆಗಳಿಂದ ಹೆಣೆಯಲಾಗಿತ್ತು. ವಿರೋಧ ಪಕ್ಷಗಳು ಮೋದಿ ಸರ್ಕಾರವನ್ನು, 'ಸೂಟು ಬೂಟಿನ ಸರ್ಕಾರ' ಎಂದು ಕರೆದಿದ್ದವು.

ರೈತರಿಗೆ ಮಣಿದ ಸರ್ಕಾರ

ಕೃಷಿಯಲ್ಲಿ ಖಾಸಗಿ ಕಂಪನಿಗಳ ಹೂಡಿಕೆಗೆ ಮತ್ತು ಕಾರ್ಪೊರೇಟ್ ಮಟ್ಟದಲ್ಲಿ ಗುತ್ತಿಗೆ ಕೃಷಿಗೆ ಅವಕಾಶ ಮಾಡಿಕೊಡುವ ಮೂರು ನೂತನ ಕೃಷಿ ಕಾಯ್ದೆಗಳನ್ನು ಕೇಂದ್ರ ಸರ್ಕಾರ 2020ರಲ್ಲಿ ಜಾರಿಗೆ ತಂದಿತ್ತು.

ಇದನ್ನು ವಿರೋಧಿಸಿ ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದ ರೈತರು ದೆಹಲಿಗೆ ನಡೆಸಿದ ಪಾದಯಾತ್ರೆ ಮತ್ತು ಅವರು ದೆಹಲಿ ಗಡಿಯಲ್ಲಿ ವರ್ಷದ ಕಾಲ ನಡೆಸಿದ ಪ್ರತಿಭಟನೆ ಅತ್ಯಂತ ಪ್ರಮುಖವಾದ ಬೆಳವಣಿಗೆ. ಪ್ರತಿಭಟನೆಯನ್ನು ಹತ್ತಿಕ್ಕಲು ಸರ್ಕಾರವು ಪೊಲೀಸರು, ಅರೆಸೇನಾ ಪಡೆಗಳನ್ನು ನಿಯೋಜಿಸಿತ್ತು. ಹಲವು ಸುತ್ತಿನ ಮಾತುಕತೆಯಲ್ಲೂ ರೈತರು ತಮ್ಮ ಪಟ್ಟು ಸಡಿಲಿಸಲಿಲ್ಲ. ರೈತರು ದೆಹಲಿ ಗಡಿಯಲ್ಲಿ ಮಳೆ-ಚಳಿ ಎನ್ನದೆ ವರ್ಷದ ಕಾಲ ಅಹೋರಾತ್ರಿ ಧರಣಿ ನಡೆಸಿದರು. ಹೀಗಿದ್ದೂ ಪ್ರಧಾನಿ ನರೇಂದ್ರ ಮೋದಿ ಅವರು ಒಮ್ಮೆಯೂ ರೈತರನ್ನು ಭೇಟಿ ಮಾಡಲಿಲ್ಲ ಎಂಬುದು ವ್ಯಾಪಕ ಟೀಕೆಗೆ ಒಳಗಾಗಿತ್ತು. ಈ ಪ್ರತಿಭಟನೆಗೆ ಸರ್ಕಾರವು ಕೊನೆಗೂ ಮಣಿಯಿತು.

2017: ಜಿಎಸ್‌ಟಿ- ಒಂದು ದೇಶ, ಒಂದು ತೆರಿಗೆ

ಒಂದು ದೇಶ, ಒಂದು ತೆರಿಗೆ ಪರಿಕಲ್ಪನೆಯಲ್ಲಿ 'ಸರಕು ಮತ್ತು ಸೇವಾ ತೆರಿಗೆ-ಜಿಎಸ್‌ಟಿ'ಯನ್ನು 2017ರ ಜುಲೈನಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತಂದಿತು. ಈ ಹಿಂದಿನ ಯುಪಿಎ ಸರ್ಕಾರವು ತರಲು ಹೊರಟಿದ್ದ ಜಿಎಸ್‌ಟಿಗಿಂತ ಸಂಪೂರ್ಣ ಭಿನ್ನವಾದ ಜಿಎಸ್‌ಟಿ ಇದಾಗಿತ್ತು. ಯುಪಿಎ ಸರ್ಕಾರವು ಗರಿಷ್ಠ ಶೇ 18ರಷ್ಟು ತೆರಿಗೆ ಹೇರುವ ಪ್ರಸ್ತಾವ ಇರಿಸಿಕೊಂಡಿತ್ತು. ಆದರೆ, ಮೋದಿ ಸರ್ಕಾರವು ಗರಿಷ್ಠ ತೆರಿಗೆ ಪ್ರಮಾಣವನ್ನು ಶೇ 28ರವರೆಗೆ ನಿಗದಿ ಮಾಡಿತ್ತು. ಟ್ರ್ಯಾಕ್ಟರ್ ಮತ್ತು ಕೃಷಿ ಯಂತ್ರೋಪಕರಣಗಳಿಗೆ ಶೇ 28ರಷ್ಟು ಜಿಎಸ್‌ಟಿ ನಿಗದಿ ಮಾಡಿದ್ದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು.

ಜಿಎಸ್‌ಟಿ ಜಾರಿಯಲ್ಲಿ ಹಲವು ತೊಡಕುಗಳು ಎದುರಾದರೂ, ಎಲ್ಲಾ ರಾಜ್ಯಗಳೂ ಜಿಎಸ್‌ಟಿ ವ್ಯವಸ್ಥೆಗೆ ವರ್ಗಾವಣೆಯಾದವು. ಈ ವ್ಯವಸ್ಥೆಯಿಂದ ರಾಜ್ಯ ಸರ್ಕಾರಗಳಿಗೆ ಆದ ತೆರಿಗೆ ನಷ್ಟವನ್ನು ತುಂಬಿಕೊಡಲು ಕೇಂದ್ರ ಸರ್ಕಾರ ಒಪ್ಪಿಕೊಂಡಿತು. ಇದಕ್ಕಾಗಿ ಜಿಎಸ್‌ಟಿ ಪರಿಹಾರ ನೀಡುವ ವ್ಯವಸ್ಥೆ ಜಾರಿಗೆ ಬಂದಿತು. ಆದರೆ, ಈ ವ್ಯವಸ್ಥೆ ಅಡಿ ರಾಜ್ಯ ಸರ್ಕಾರಗಳಿಗೆ ನೀಡಬೇಕಿದ್ದ ಪರಿಹಾರವನ್ನು ಈವರೆಗೆ ಪೂರ್ಣಪ್ರಮಾಣದಲ್ಲಿ ನೀಡಿಯೇ ಇಲ್ಲ.

ಜಿಎಸ್‌ಟಿ ವ್ಯವಸ್ಥೆಯಿಂದ ದೇಶದಲ್ಲಿ ತೆರಿಗೆ ವರಮಾನ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಆದರೆ, ಸಣ್ಣ ಮತ್ತು ಮಧ್ಯಮ ಮಟ್ಟದ ಉದ್ಯಮಗಳಿಗೆ ತೆರಿಗೆ ಹೊರೆ ಹೆಚ್ಚಾಗಿದೆ ಎಂಬ ಆರೋಪವೂ ಇದೆ. ದ್ವಿಚಕ್ರವಾಹನಗಳ ಮೇಲೂ ದೊಡ್ಡ ಪ್ರಮಾಣದ ಜಿಎಸ್‌ಟಿ ಹೊರೆ ಇದೆ. ಇದರಿಂದ ಅವುಗಳ ಮಾರಾಟ ಕುಸಿಯುತ್ತಿದೆ. ಇದನ್ನು ಇಳಿಸಿ ಎಂದು ದ್ವಿಚಕ್ರವಾಹನಗಳ ತಯಾರಕರ ಒಕ್ಕೂಟ ಸರ್ಕಾರಕ್ಕೆ ಮನವಿ ಮಾಡುತ್ತಲೇ ಇದೆ.

2018: ಆಯುಷ್ಮಾನ್ ಭಾರತ

ಆಯುಷ್ಮಾನ್ ಭಾರತ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (ಪಿಎಂಜೆಎವೈ) ಎಂಬ ರಾಷ್ಟ್ರೀಯ ಆರೋಗ್ಯ ಭದ್ರತೆಯ ಯೋಜನೆಯನ್ನು ಸೆ. 23ರಂದು ಆರಂಭಿಸಲಾಯಿತು. 10 ಕೋಟಿ ಕುಟುಂಬಗಳ ಸುಮಾರು 50 ಕೋಟಿ ಜನರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ.

2020-21: ದೇಶವನ್ನು ಹೈರಾಣಾಗಿಸಿದ ಕೋವಿಡ್

2020ರಲ್ಲೇ ಕೋವಿಡ್ ಪ್ರಕರಣ ಪತ್ತೆಯಾದರೂ, ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಸರ್ಕಾರವು ವಿಳಂಬ ಮಾಡಿತು. ಆದರೆ, ಸೋಂಕು ತೀವ್ರವಾಗಿ ಹರಡಿದಾಗ ಸರ್ಕಾರವು ದಿಢೀರ್ ಲಾಕ್‌ಡೌನ್ ಹೇರಿತು. ದೇಶದ ಸಾರಿಗೆ ವ್ಯವಸ್ಥೆ ಸ್ಥಗಿತವಾಗಿತ್ತು. ಉದ್ಯೋಗವೂ ಇಲ್ಲದ ಕಾರಣ, ಕೋಟ್ಯಂತರ ಜನರು ನಗರ ಪ್ರದೇಶಗಳಿಂದ ತಮ್ಮ ಊರುಗಳತ್ತ ಪ್ರಯಾಣ ಹೊರಟರು. ಜನಸಾಮಾನ್ಯರು ಸಾವಿರಾರು ಕಿ.ಮೀ. ಅನ್ನು ನಡೆದು ಮತ್ತು ಸೈಕಲ್ ಏರಿ ಕ್ರಮಿಸಿದರು. ದುಡಿಮೆ ನಷ್ಟ ಮತ್ತು ಆರ್ಥಿಕ ಸಂಕಷ್ಟದಿಂದ ನಲುಗಿದ ಜನರ ನೆರವಿಗೆ ಉಚಿತ ಪಡಿತರ ನೀಡಲಾಯಿತು. ಆರ್ಥಿಕತೆ ಸ್ಥಗಿತವಾದ ಕಾರಣ, ಕೋಟ್ಯಂತರ ಮಂದಿ ಸಂಕಷ್ಟಕ್ಕೆ ತುತ್ತಾದರು. ಇದರ ಮಧ್ಯೆಯೂ ದೇಶದಾದ್ಯಂತ ಕೋವಿಡ್ ವ್ಯಾಪಕವಾಗಿ ಹರಡಿತು. ಕೋವಿಡ್ ತೀವ್ರವಾದ ಕಾರಣ ಜನರು ಸಾಯತೊಡಗಿದರು. ಇದು ದೇಶದ ಇತಿಹಾಸದಲ್ಲೇ ಅತ್ಯಂತ ಕರಾಳ ಅಧ್ಯಾಯ ಎಂದರೆ ತಪ್ಪಾಗಲಾರದು. ಕೋವಿಡ್ ಅನ್ನು ನಿರ್ವಹಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದವು.

ಕೋವಿಡ್ ಮೊದಲ ಅಲೆ ಮುಗಿದು, ಆರ್ಥಿಕತೆಗೆ ಚಾಲನೆ ದೊರೆಯಿತು ಎನ್ನುವಷ್ಟರಲ್ಲಿ ಕೋವಿಡ್‌ನ ಎರಡನೇ ಅಲೆ ಬಂದೆರಗಿತು. 2021ರ ಏಪ್ರಿಲ್‌ನಲ್ಲಿ ತೀವ್ರವಾಗಿದ್ದ ಈ ಅಲೆ, ದೇಶವನ್ನು ಹೈರಾಣಾಗಿಸಿತು. ಕೋವಿಡ್ ಎರಡನೇ ಅಲೆಯನ್ನು ನಿರ್ವಹಿಸುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಯಿತು ಎಂಬುದು ವಿರೋಧ ಪಕ್ಷಗಳ ಆರೋಪ. ಅದನ್ನು ಪುಷ್ಟೀಕರಿಸುವಂತೆ ರೋಗದ ತೀವ್ರತೆ ಗರಿಷ್ಠ ಮಟ್ಟದಲ್ಲಿ ಇದ್ದ ಕಾರಣ ಜನರು ದೊಡ್ಡ ಪ್ರಮಾಣದಲ್ಲಿ ಸಾಯತೊಡಗಿದರು. ಆಮ್ಲಜನಕದ ಕೊರತೆ ಉಂಟಾಯಿತು. ಆಮ್ಲಜನಕ ಸಿಗದೆಯೇ ಆಸ್ಪತ್ರೆಗಳಲ್ಲಿ ರೋಗಿಗಳು ಸಾಯತೊಡಗಿದರು.

ಸಾವಿನ ಸಂಖ್ಯೆ ಹೆಚ್ಚಾದ್ದರಿಂದ ಶವಸಂಸ್ಕಾರಕ್ಕೂ ತೊಡಕಾಯಿತು. ಗಂಗಾ ನದಿ ತಟದಲ್ಲಿ ಹೂಳಲಾಗಿದ್ದ ಶವಗಳು ನದಿಯಲ್ಲಿ ತೇಲಿ ಬಂದು, ಜಾಗತಿಕ ಮಟ್ಟದಲ್ಲಿ ದೊಡ್ಡ ಸುದ್ದಿಯಾಗಿತ್ತು. ಸರ್ಕಾರ ಸಾವಿನ ಸಂಖ್ಯೆಯನ್ನು ಮುಚ್ಚಿಟ್ಟಿದೆ ಎಂದು ಕೆಲವು ಸ್ವಯಂಸೇವಾ ಸಂಸ್ಥೆಗಳು ಆರೋಪಿಸಿದವು. ಸತ್ತವರ ಒಟ್ಟು ಸಂಖ್ಯೆಯನ್ನು ಸರ್ಕಾರ ಪದೇ ಪದೇ ಬದಲಿಸಿತು. ಆ ಎರಡು ವರ್ಷಗಳ ಮರಣ ನೋಂದಣಿ ದಾಖಲೆಗಳನ್ನೂ ತೀರಾ ವಿಳಂಬ ಮಾಡಿ ಬಿಡುಗಡೆ ಮಾಡಲಾಯಿತು. ಇದರ ಮಧ್ಯೆ ಕೋವಿಡ್ ಲಸಿಕೆ ಕಾರ್ಯಕ್ರಮವನ್ನು ಸರ್ಕಾರ ಆರಂಭಿಸಿತು. ಆರಂಭದಲ್ಲಿ ಲಸಿಕೆ ಕಾರ್ಯಕ್ರಮಕ್ಕೆ ಹಿನ್ನಡೆಯಾದರೂ, ನಂತರದ ದಿನಗಳಲ್ಲಿ ಜನರು ಲಸಿಕೆ ಹಾಕಿಸಿಕೊಂಡರು.

4.5 ಕೋಟಿ
ಈವರೆಗೆ ಕೋವಿಡ್ ತಗುಲಿದ ಜನರ ಸಂಖ್ಯೆ

53 ಲಕ್ಷ
ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ

220 ಕೋಟಿ
ಡೋಸ್‌ನಷ್ಟು ಲಸಿಕೆಗಳನ್ನು ಈವರೆಗೆ ನೀಡಲಾಗಿದೆ

2019: ಪುಲ್ವಾಮಾ ದಾಳಿ ಮತ್ತು ಬಿಜೆಪಿಯ ಗೆಲುವು

ಪುಲ್ವಾಮಾ ದಾಳಿಯ ಸ್ಥಳ

2019 ಮೋದಿ ನೇತೃತ್ವದ ಸರ್ಕಾರಕ್ಕೆ ಅತ್ಯಂತ ಮಹತ್ವದ ವರ್ಷವಾಗಿತ್ತು. ಮೋದಿ ಸರ್ಕಾರವು ಲೋಕಸಭಾ ಚುನಾವಣೆ ಎದುರಿಸಬೇಕಿತ್ತು. ಚುನಾವಣೆ ಇನ್ನೇನು ಹತ್ತಿರದಲ್ಲಿದೆ ಎನ್ನುವಾಗ ಜಮ್ಮುವಿನ ಪುಲ್ವಾಮಾದಲ್ಲಿ ಸಿಆರ್‌ಪಿಎಫ್ ಯೋಧರ ವಾಹನಗಳ ಮೇಲೆ ಉಗ್ರರ ದಾಳಿ ನಡೆದಿತ್ತು. ಸಿಆರ್‌ಪಿಎಫ್‌ನ 40 ಯೋಧರು ಮೃತಪಟ್ಟಿದ್ದರು. ಅಷ್ಟು ದೊಡ್ಡ ಪ್ರಮಾಣದ ಸ್ಫೋಟಕಗಳನ್ನು ಜಮ್ಮುವಿಗೆ ತಂದಿದ್ದು ಹೇಗೆ ಎಂಬುದರ ಕುರಿತು ನಡೆಯುತ್ತಿರುವ ತನಿಖೆ ಇನ್ನೂ ಮುಗಿದಿಲ್ಲ. 'ಸರ್ಕಾರದ ಕಡೆಯಿಂದ ಲೋಪಗಳಾಗಿತ್ತು' ಎಂದು ಜಮ್ಮು-ಕಾಶ್ಮೀರದ ಅಂದಿನ ರಾಜ್ಯಪಾಲರಾಗಿದ್ದ ಸತ್ಯಪಾಲ್ ಮಲಿಕ್ ಈಚೆಗೆ ಹೇಳಿದ್ದರು.

ಪುಲ್ವಾಮ ದಾಳಿಯ ಬೆನ್ನಲ್ಲೇ ಭಾರತೀಯ ಸೇನೆಯು ಪಾಕಿಸ್ತಾನದ ಉಗ್ರ ತಾಣಗಳ ಮೇಲೆ ದಾಳಿ ನಡೆಸಿತ್ತು. ಬಾಲಾಕೋಟ್ ವೈಮಾನಿಕ ದಾಳಿ ಮತ್ತು ನಂತರದ ಸೇನಾ ಕಾರ್ಯಾಚರಣೆಗಳು ಹೆಚ್ಚು ಸದ್ದು ಮಾಡಿದ್ದವು. ನಂತರ ನಡೆದ ಚುನಾವಣೆಯಲ್ಲಿ ಮೋದಿ ಸರ್ಕಾರವು ಅಭೂತಪೂರ್ವ ಗೆಲುವು ಸಾಧಿಸಿತ್ತು.

ಅದೇ ವರ್ಷದ ಆಗಸ್ಟ್‌ನಲ್ಲಿ ಜಮ್ಮು-ಕಾಶ್ಮೀರದ ರಾಜ್ಯದ ಸ್ಥಾನಮಾನವನ್ನು ರದ್ದುಪಡಿಸಲಾಯಿತು ಮತ್ತು ಜಮ್ಮು-ಕಾಶ್ಮೀರ ಮತ್ತು ಲಡಾಖ್ ಎಂಬ ಎರಡು ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶಗಳನ್ನು ರಚಿಸಲಾಯಿತು. ಜಮ್ಮು-ಕಾಶ್ಮೀರದ ವಿಶೇಷ ಸ್ಥಾನಮಾನವನ್ನೂ ವಾಪಸ್ ಪಡೆಯಲಾಯಿತು. ಇದಕ್ಕೆ ಅಲ್ಲಿನ ನಿವಾಸಿಗಳಿಂದ ಭಾರಿ ವಿರೋಧ ವ್ಯಕ್ತವಾಗಿತ್ತು. ರಾಜಕೀಯ ನಾಯಕರನ್ನು ವರ್ಷಗಟ್ಟಲೆ ಗೃಹಬಂಧನದಲ್ಲಿ ಇರಿಸಲಾಗಿತ್ತು. ಕಾಶ್ಮೀರದಲ್ಲಿ ಹಲವು ತಿಂಗಳವರೆಗೆ ಇಂಟರ್‌ನೆಟ್ ಸ್ಥಗಿತಗೊಳಿಸಲಾಗಿತ್ತು.

ಪೌರತ್ವ ಕಾಯ್ದೆಗೆ (ಸಿಎಎ) ತಿದ್ದುಪಡಿ ತಂದಿದ್ದು ಮೋದಿ ಸರ್ಕಾರದ ಅತ್ಯಂತ ಪ್ರಮುಖ ನಿರ್ಧಾರಗಳಲ್ಲಿ ಒಂದು. ಭಾರತದ ನೆರೆಯ ದೇಶಗಳಲ್ಲಿ ಕಿರುಕುಳಕ್ಕೆ ಗುರಿಯಾದ ಧಾರ್ಮಿಕ ಅಲ್ಪಸಂಖ್ಯಾತ ಹಿಂದೂ, ಸಿಖ್, ಜೈನ, ಬೌದ್ಧ, ಕ್ರೈಸ್ತ ಧರ್ಮೀಯರಿಗೆ ಭಾರತದ ಪೌರತ್ವ ನೀಡುವ ಸರ್ಕಾರದ ಈ ನಿರ್ಧಾರಕ್ಕೆ ಭಾರಿ ವಿರೋಧ ವ್ಯಕ್ತವಾಗಿತ್ತು. ಈ ಕಾಯ್ದೆಯಿಂದ ಮುಸ್ಲಿಮರನ್ನು ಹೊರಗಿಡಲಾಗಿತ್ತು. ಇದರ ವಿರುದ್ಧ ಅಸ್ಸಾಂನಲ್ಲಿ ಭಾರಿ ಪ್ರತಿಭಟನೆ ನಡೆಯಿತು. ದೆಹಲಿಯಲ್ಲಿ ಆರಂಭವಾದ ಪ್ರತಿಭಟನೆ ದೇಶದಾದ್ಯಂತ ಪಸರಿಸಿತು. ಮೋದಿ ಆಡಳಿತದಲ್ಲಿ ಸರ್ಕಾರದ ವಿರುದ್ಧ ನಡೆದ ಮೊದಲ ಅತ್ಯಂತ ದೊಡ್ಡ ಪ್ರತಿಭಟನೆ ಇದು. ಹಲವು ತಿಂಗಳ ಕಾಲ ನಡೆದ ಈ ಪ್ರತಿಭಟನೆ ದಿನೇದಿನೇ ತೀವ್ರ ಸ್ವರೂಪ ಪಡೆಯುತ್ತಲೇ ಹೋಯಿತು. ಕೆಲವೆಡೆ ಹಿಂಸಾಚಾರವೂ ನಡೆದಿತ್ತು. ಆದರೆ, ವರ್ಷಾಂತ್ಯದ ವೇಳೆಗೆ ಕೋವಿಡ್ ಬಂದದ್ದರಿಂದ, ಮತ್ತು 2020ರಲ್ಲಿ ಲಾಕ್‌ಡೌನ್‌ನ ಕಾರಣದಿಂದ ಪ್ರತಿಭಟನೆ ನಿಂತುಹೋಯಿತು.

2022: ಭಾರತಕ್ಕೆ ಬಂದ ಚೀತಾ

ಭಾರತಕ್ಕೆ ಚೀತಾಗಳನ್ನು ಮರುಪರಿಚಯಿಸುವ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾಯಿತು. ಆರಂಭದಲ್ಲಿ ಎಂಟು ಚೀತಾಗಳನ್ನು ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಬಯಲು ಬಂಧನದಲ್ಲಿ ಇರಿಸಲಾಯಿತು. ನಂತರ ಅವುಗಳಲ್ಲಿ ಕೆಲವನ್ನು ಅರಣ್ಯಕ್ಕೆ ಬಿಡಲಾಯಿತು.

2023

ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾದ ಸೆಂಟ್ರಲ್ ವಿಸ್ತಾದ ಭಾಗವಾದ ನೂತನ ಸಂಸತ್ ಭವನ ಈಗ ಲೋಕಾರ್ಪಣೆಯಾಗಿದೆ. ಸಾಂವಿಧಾನಿಕ ಮುಖ್ಯಸ್ಥರಾದ ಮತ್ತು ಸಂಸತ್ತಿನ ಭಾಗವಾದ ರಾಷ್ಟ್ರಪತಿಯನ್ನು ಹೊರಗಿಟ್ಟು ಪ್ರಧಾನಿ ನರೇಂದ್ರ ಮೋದಿಯೇ ನೂತನ ಸಂಸತ್ ಭವನವನ್ನು ಉದ್ಘಾಟಿಸಿದರು. ಇದು ಸಂವಿಧಾನ ಮತ್ತು ರಾಷ್ಟ್ರಪತಿಗೆ ಮಾಡಿದ ಅವಮಾನ ಎಂದು ವಿರೋಧ ಪಕ್ಷಗಳು ಟೀಕಿಸಿವೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಅಂಕೆಮೀರಿದ ಸತ್ವ

ಸಂಕೇತಭಾವಮಯ ಲೋಕಜೀವನದ ನಯ |
ಸಂಖ್ಯೆ ಗುಣ ಹೇತು ಕಾರ್ಯಗಳ ಲಕ್ಷಣದಿಂ- ||
ದಂಕಿತಂಗಳು ಪದ ಪದಾರ್ಥ ಸಂಬಂಧಗಳು |
ಅಂಕೆ ಮೀರ್ದುದು ಸತ್ತ್ವಂ – ಮಂಕುತಿಮ್ಮ ||
895 ||

ಪದ-ಅರ್ಥ: ಹೇತು = ಕಾರಣ, ಲಕ್ಷಣದಿಂ-ದಂಕಿತಂಗಳು = ಲಕ್ಷಣದಿಂದ + ಅಂಕಿತಂಗಳು (ಅಂಕಿತಗಳು), ಅಂಕೆ = ಮೇರೆ, ಗಡಿ, ಮೀರ್ದು-ದು = ಮೀರಿದುದು.

ವಾಚ್ಯಾರ್ಥ: ಲೋಕ ಜೀವನದ ವ್ಯವಹಾರ ನಡೆಯುವುದೇ ಭಾವಗಳಿಂದ ಮತ್ತು ಸಂಕೇತಗಳಿಂದ, ಸಂಖ್ಯೆ, ಗುಣ, ಕಾರಣ ಮತ್ತು ಕಾರ್ಯದ ಲಕ್ಷಣದಿಂದ ವಸ್ತುಗಳ ಗುರುತು ಮತ್ತು ಸಂಬಂಧ. ಪರಸತ್ವ ಇವೆಲ್ಲವುಗಳನ್ನು ಮೀರಿದ್ದು.

ವಿವರಣೆ: ನಮ್ಮ ಲೋಕ ಜೀವನದ ಎಲ್ಲ ವ್ಯವಹಾರಗಳು ಕೇವಲ ಸಂಕೇತ ಮತ್ತು ಭಾವಗಳಲ್ಲಿಯೇ ನಡೆಯುತ್ತವೆ. ನಮ್ಮಲ್ಲಿ ಎಲ್ಲವೂ ಸಂಕೇತವೇ. ಪ್ರತಿಯೊಬ್ಬ ವ್ಯಕ್ತಿಗೆ ಒಂದು ಹೆಸರಿದೆ. ಅದು ಆ ದೇಹಕ್ಕೆ ಒಂದು ಸಂಕೇತ. ಆ ಸಂಕೇತದಿಂದಲೇ ದೇಹ ಸದಾಕಾಲ ನೆನಪಿನಲ್ಲಿರು-ವುದು. ಯಾರಿಗೂ ಹೆಸರೇ ಇಲ್ಲದಿದ್ದರೆ ಜನರನ್ನು ನೆನಪಿನಲ್ಲಿಡುವುದು, ಗುರುತಿಸುವುದು ಸಾಧ್ಯವಿತ್ತೇ? ಇದು ದೇಹಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ನಮ್ಮ ಸುತ್ತಮುತ್ತಲಿರುವ ಪ್ರತಿಯೊಂದು ವಸ್ತುವಿಗೂ ಒಂದು ಹೆಸರಿದೆ. ಪುಸ್ತಕ ಎಂದೊಡನೆ ಚಿತ್ರವೊಂದು ಮನದಲ್ಲಿ ಮೂಡುತ್ತದೆ. ಅದೇ ರೀತಿ, ಮೇಜು, ಕುರ್ಚಿ, ನಕ್ಷತ್ರ, ಸೂರ್ಯ, ಆಕಾಶ ಎಂದಾಗ ಒಂದೊಂದು ಚಿತ್ರಗಳು ಕಣ್ಣಮುಂದೆ ಬರುತ್ತವೆ. ಹೀಗೆ ಸಂಕೇತಗಳ ಮೂಲಕವೇ ನಮ್ಮ ವಸ್ತು ಪರಿಚಯ.ಸಂಕೇತ ಸರಿ ಇಲ್ಲದಾಗ ಅರ್ಥವೇ ಸ್ಪಷ್ಟ-ವಾಗುವುದಿಲ್ಲ. ಉದಾಹರಣೆಗೆ, "ಮೊನ್ನೆ ಅವರು ಬಂದು ಇವರನ್ನು ಬೆಟ್ಟಿಯಾಗಿ ಅವರ ಮನೆಯಲ್ಲಿ ನಡೆಯುವ ಅದರ ಬಗ್ಗೆ ಹೇಳಿ ಹೋದರು" ಎಂದರೆ ಏನರ್ಥವಾದೀತು? ಅದರ ಬದಲಿಗೆ, "ಮೊನ್ನೆ ರಾಮಣ್ಣ ಬಂದು ಭೀಮಣ್ಣನನ್ನು ಭೆಟ್ಟಿಯಾಗಿ ರಾಮಣ್ಣನ ಮನೆಯಲ್ಲಿ ನಡೆಯುವ ಮದುವೆಯ ಬಗ್ಗೆ ಹೇಳಿ ಹೋದರು" ಎಂದಾಗ ವಿಷಯ ತಿಳಿಯಾಗುತ್ತದೆ. ಇಲ್ಲಿ ರಾಮಣ್ಣ ಮತ್ತು ಭೀಮಣ್ಣ ಇಬ್ಬರು ವ್ಯಕ್ತಿಗಳ ಸಂಕೇತ. ಮದುವೆಯೂ ಒಂದು ಕಾರ್ಯದ ಸಂಕೇತ. "ನಾಳೆ ಮನೆಯಲ್ಲಿ ದೀಪಾವಳಿ ಹಬ್ಬ. ಅದಕ್ಕಾಗಿ ಅಂಗಡಿಯಲ್ಲಿ ಬಂದಿದ್ದ ಸೊಗಸಾದ ತರಕಾರಿಯನ್ನು ಐವತ್ತು ರೂಪಾಯಿಗೆ ಒಂದು ಕಿಲೋದಂತೆ ಹತ್ತು ಕಿಲೋ ತಂದೆ". ಈ ವಾಕ್ಯದಲ್ಲಿ ದೀಪಾವಳಿ ಹಬ್ಬವೆಂಬುದು ಕಾರ್ಯದ ಸಂಕೇತ. ಸೊಗಸಾದ ತರಕಾರಿ ಎನ್ನುವುದು ಗುಣದ ಸಂಕೇತ. ಐವತ್ತು ರೂಪಾಯಿಗೆ ಒಂದು ಕಿಲೋ ಎನ್ನುವುದು ಬೆಲೆಯ ಸಂಕೇತ. ಹಬ್ಬದ ಕಾರಣಕ್ಕಾಗಿ ಹೆಚ್ಚಿನ ತರಕಾರಿ ಎನ್ನುವುದು, ಕಾರಣ ಮತ್ತು ಕಾರ್ಯಗಳ ಸಂಬಂಧ. ಕಗ್ಗ ಹೇಳುತ್ತದೆ ನಮ್ಮ ಜಗತ್ತಿನ ವ್ಯವ-ಹಾರವೆಲ್ಲ ಈ ಸಂಕೇತಗಳಿಂದಲೇ ನಡೆಯುತ್ತದೆ. ಈ ಸಂಕೇತಗಳು ಸಂಖ್ಯೆಯಾಗಿರಬಹುದು, ವಸ್ತುವಿನ ಗುಣವಾಗಿರಬಹುದು. ಕಾರಣವಾಗಿರಬಹುದು. ಈ ಲಕ್ಷಣಗಳಿಂದ ವಸ್ತುಗಳ ನಡುವಿನ ಸಂಬಂಧ. ನಾವು ಬಳಸುವ ಭಾಷೆ ಕೂಡ ನಮ್ಮ ಭಾವನೆಗಳ ಸಂಕೇತವೇ. ಎಲ್ಲವನ್ನೂ ಈ ಸಂಕೇತಗಳಿಂದ ವಿವರಿಸುವುದು ಸಾಧ್ಯವಿದ್ದರೂ ಪರಸತ್ವವನ್ನು ಇವುಗಳಿಂದ ತಿಳಿಯುವುದು, ತಿಳಿಸುವುದು ಸಾಧ್ಯವಿಲ್ಲ. ಯಾಕೆಂದರೆ ಪರಸತ್ವ ಇಂದ್ರಿಯಗಳಿಗೆ ಅತೀತವಾದದ್ದು, ಭಾಷೆ, ಭಾವನೆಗಳ ಪ್ರಪಂಚವನ್ನು ದಾಟಿದ್ದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಮೇ 31, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಏಕಾದಶಿ ಗಂ. 13-46 ನಕ್ಷತ್ರ: ಹಸ್ತ ಗಂ. 6-00 ಯೋಗ: ವ್ಯತೀಪಾತ ಗಂ. 20- 14, ಕರಣ: ವಿಷ್ಟಿ ಗಂ. 13-46, ವೃಷಭ ಮಾಸದ 16 ನೇ ದಿನ, ಮಳೆನಕ್ಷತ್ರ: ರೋಹಿಣಿ 2.
ರಾಹುಕಾಲ : ಮಧ್ಯಾಹ್ನ 12-00 – 01-30, ಸೂರ್ಯೋದಯ : 06-06 ಸೂರ್ಯಾಸ್ತ : 06-50, ಮುಸ್ಲಿಂ ದಿನಾಂಕ : 11 ಜುಲ್ಹಾಯದ್
ದಿನ ವಿಶೇಷ : ನಿರ್ಜಲ ಏಕಾದಶಿ
ಅದೃಷ್ಟ ಸಂಖ್ಯೆ : 12, 1

ಮೇಷ: ವ್ಯಾಪಾರ ವ್ಯವಹಾರದಲ್ಲಿ ಸ್ವಲ್ಪ ಬುದ್ಧಿವಂತಿಕೆಯಿಂದ ಕಾರ್ಯ ನಿರ್ವಹಿಸಬೇಕಾಗುವುದು. ದೇಹಾರೋಗ್ಯವನ್ನು ಸ್ವತಃ ಕಾಳಜಿ ವಹಿಸಿ ನೋಡಿಕೊಳ್ಳಬೇಕು. ಸಾಂಸಾರಿಕವಾಗಿ ನೆಮ್ಮದಿ ಅಭಿವೃದ್ಧಿಯಾಗಲಿದೆ.

ವೃಷಭ: ಪಾರಮಾರ್ಥಿಕತೆಯಿಂದಾಗಿ ದೇವರ ರಕ್ಷಣೆ ಸದಾಕಾಲ ದೊರೆಯುವುದು. ವೃತ್ತಿ ಕ್ಷೇತ್ರದಲ್ಲಿ ನಿಮ್ಮ ನಿಷ್ಠೆ, ಪ್ರಾಮಾಣಿಕತೆ ಮತ್ತು ಸಾಧನೆಗೆ ಪುರಸ್ಕಾರ ದೊರಕಲಿದೆ. ನಿಮ್ಮ ಅನಿಸಿಕೆ ಅಭಿಪ್ರಾಯಗಳಿಗೆ ಮನ್ನಣೆ ಇರುವುದು.

ಮಿಥುನ: ನಿಮ್ಮ ವಚನದಲ್ಲಿ ಹಿಡಿತವಿರಲಿ. ಮಾತುಕತೆಯಿಂದ ಕಟ್ಟುಬೀಳುವ ಪರಿಸ್ಥಿತಿ ಬರುತ್ತದೆ. ರಾಜಕೀಯ ಭವಿಷ್ಯದಲ್ಲಿ ಉತ್ತಮ ಅವಕಾಶ ಸಿಕ್ಕಿದರೂ ಕಾದು ನೋಡುವ ಪ್ರವೃತ್ತಿ ಉತ್ತಮ. ಉಷ್ಣದ ಸಮಸ್ಯೆಯಾಗಬಹುದು.

ಕರ್ಕಾಟಕ: ಸಮಯ ಕಳೆಯಲು ಮಾಡಿದ ಕೆಲಸದಿಂದ ಸೃಜನಶೀಲತೆ ಹೆಚ್ಚಲಿದೆ. ವೃತ್ತಿರಂಗದಲ್ಲಿ ಅಭಿವೃದ್ಧಿ ತೋರಿಬಂದರೂ ವಿಘ್ನ ಭೀತಿ ಉಂಟಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪ್ರಯತ್ನ ಅನಿವಾರ್ಯ.

ಸಿಂಹ: ಆರ್ಥಿಕವೃದ್ಧಿ, ಆರೋಗ್ಯವೃದ್ಧಿ, ಆಕಸ್ಮಿಕ ಧನ ಪ್ರಾಪ್ತಿ ಯೋಗ ಈ ದಿನದಲ್ಲಿದೆ. ತಂತ್ರಜ್ಞರಿಗೆ ಮತ್ತು ಕುಶಲ ಕಾರ್ಮಿಕರಿಗೆ ಬೇಡಿಕೆಗಳು ಹೆಚ್ಚುವುದು.ಅವಿರತ ಶ್ರಮದ ಫಲ ಏನು ಎಂಬುದು ಮಕ್ಕಳಿಗೆ ಅರಿವಾಗಲಿದೆ.

ಕನ್ಯಾ: ನಿಮ್ಮಲ್ಲಿರುವ ಸ್ಪರ್ಧಾತ್ಮಕ ಮನೋಭಾವ ಅತ್ಯುನ್ನತ ಮಟ್ಟಕ್ಕೆ ಏರುವಂತೆ ಮಾಡುತ್ತದೆ. ವ್ಯವಸ್ಥಾಪಕ ವೃತ್ತಿಯವರಿಗೆ ಅಧಿಕಾರ ತಪ್ಪುವ ಭೀತಿ ಎದುರಾಗಬಹುದು. ಕ್ರಿಮಿಕೀಟಗಳಿಂದ ಅಲರ್ಜಿ ಉಂಟಾಗಬಹುದು.

ತುಲಾ: ಸರ್ಕಾರಿ ಕಚೇರಿಗಳಲ್ಲಿನ ಕೆಲಸಕ್ಕೆ ಹೆಚ್ಚು ಅಲೆದಾಡುವಂತಾಗಲಿದೆ. ವರ್ತಮಾನ ಕಾಲದಲ್ಲಿರುವ ಕೆಲಸವು ಶುಭ ಅಂತ್ಯ ನೋಡುತ್ತದೆ. ತಾಂತ್ರಿಕ ಕ್ಷೇತ್ರದವರಿಗೆ ರಾತ್ರಿ ಪಾಳಿಯಂತಹ ಬದಲಾವಣೆ ಇರಬಹುದು.

ವೃಶ್ಚಿಕ: ವಾತಾವರಣದಲ್ಲಾಗುವ ಬದಲಾವಣೆಯು ದೇಹದ ಮೇಲೆ ಪ್ರಭಾವ ಬೀರಲಿದೆ. ನೂತನ ಮನೆ ಕಟ್ಟಲೇಬೇಕೆಂಬ ಆಸೆ ಪ್ರಾರಂಭದ ಹಾದಿಯನ್ನು ಕಾಣಲಿದೆ. ಸತ್ಫಲಗಳಿಗಾಗಿ ಶಾರದೆಯನ್ನು ದರ್ಶಿಸುವುದು ಒಳ್ಳೆಯದು.

ಧನು: ರಾಜಕೀಯ ವ್ಯವಹಾರಗಳ ಪ್ರಬಲ ಆಕಾಂಕ್ಷಿಯಾಗಿರುವರು ಇನ್ನಷ್ಟು ಚುರುಕಾಗಬೇಕಾಗಿದೆ.ಕನಸುಗಳಿಗೆ ಜೀವ ಬಂದಂತೆ ಭಾಸವಾಗುತ್ತದೆ. ಸಿದ್ಧ ಉಡುಪು ಮಾರಾಟಗಾರರಿಗೆ ವಿಶೇಷ ಲಾಭ ಇರುವುದು.

ಮಕರ: ಒಳಗೊಳಗೆ ಅಸೂಯೆ ಪಡುವ ಸಂಬಂಧಿಗಳು ಸಾಧನೆಗೆ ಅಡ್ಡಿ ತಂದಾರು. ಮಗಳ ಮನೆಯಿಂದ ವಿಶೇಷ ಸುದ್ದಿ ಕೇಳುವಿರಿ. ಮಾರಾಟ ಪ್ರತಿನಿಧಿ-ಗಳಿಗೆ ಸಂತೋಷದ ದಿನ. ಬೆಳೆಗಳಿಗೆ ಉತ್ತಮ ಬೆಲೆ ದೊರೆಯುವ ಸಂಭವವಿದೆ.

ಕುಂಭ: ಕಾರ್ಯ ಸಾಧನೆಗೆ ಅಧಿಕ ತಿರುಗಾಟ, ಗಣ್ಯರ ಭೇಟಿ ಅನಿವಾರ್ಯ-ವಾಗಲಿದೆ. ನಿಧಾನ ಗತಿಯ ಕೆಲಸ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ಇದು ಸಾಧನೆಯಲ್ಲಿ ಮೇಲಕ್ಕೆ ಸಾಗಲು ಸಹಕಾರಿ.

ಮೀನ: ತಂದೆ-ತಾಯಿಯ ಅಥವಾ ಮನೆಯವರ ಮಾತಿನತ್ತ ವಿಶೇಷ ಗಮನ ಹರಿಸಬೇಕಾಗುವುದು. ಕರ್ತವ್ಯದಲ್ಲಿ ಅಧಿಕವಾದ ಆತ್ಮವಿಶ್ವಾಸವು ಲೆಕ್ಕಾಚಾರ-ವಿಲ್ಲದ ಜೀವನದಂತೆ ಆಗುತ್ತದೆ. ಮಿತವ್ಯಯ ಸಾಧಿಸಲು ಪ್ರಯತ್ನಿಸಿ.

ಪದಬಂಧ 5335

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಸಾಮಂತರಿಂದ ಅಧಿರಾಜನಿಗೆ ಸಲ್ಲುವ ಹಣ (2)
4.ಕೊನೆಗೆ ದರವಿದ್ದಾಗ ಮಡಿಕೆ ಕಾಣುವುದೇ?(3)
5.ಪರದೆ ಇಲ್ಲದೆ (4)
6.ಇದು ನಕ್ಷತ್ರಗಳ ಗುಂಪು (4)
7.ದಾನ ನೀಡುತ್ತಿರುವ ರಾಕ್ಷಸ (3)
9.ನಗ ತರಲು ಕೈಯಲ್ಲಿರುವ ಹಣ (3)
13.ತಾಯಿಯ ಮನೆ ಕಿಟಕಿ (4)
14.ಜೇನಿನೊಡನಿರುವ ತಿಂಗಳು (4)
15.ಬನದಲ್ಲಿ ನೀಡಿದ ಮುತ್ತು (3)
16.ಚಿನ್ನ ಬೆಳ್ಳಿ ಇತ್ಯಾದಿಗಳ ತಂತಿ (2)

ಮೇಲಿಂದ ಕೆಳಕ್ಕೆ
1.ನಡುವೆ ಪತ್ರ ಬಂದದಕ್ಕೇ ಈ ತೊಂದರೆ! (4)
2.ಚಪ್ಪಾಳೆಯನ್ನು ಹೀಗೆನ್ನಿ (5)
3.ಈಕೆ ಹೆಂಗಸು (3)
5.ಮಾನವನ್ನು ಹೊಂದಿರುವ ಒಡೆಯನಿಲ್ಲದ್ದಾನೆ (4)
8.ಕಾಡಿನಲ್ಲಿ ವಾಸಮಾಡುವುದು (4)
10.ಆಕಾಶವನ್ನು ಮುಟ್ಟುವಂಥ ಕಟ್ಟಡ (5)
11.ಹೊಸದಾಗಿ ಅಭಿನಯಿಸುತ್ತಿರುವವನು (4)
12.ಸವಿಯಾದುದು ಮರದೊಳಗಿದೆ (3)

5334ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆನಂದ 4.ನಗುಮೊಗ
6.ರಥೋತ್ಸವ 8.ಹಿಜರಿ
11.ರಿಕಾಪು 13.ದಿನಮಣಿ
17.ಗಡಿರುಗಾ 18.ಸುಯೋಗ

ಮೇಲಿಂದ ಕೆಳಕ್ಕೆ:
1.ಆಚಾರ್ಯ 2.ದನಗಾಹಿ
3.ಭೀಭತ್ಸ 5.ಗರ
7.ವರ್ಣನೆ 9.ರಿಪೇರಿ
10.ವರದಿ 12.ಪುಡಿಗಾಸು
14.ನಲ್ಬಡಿ 15.ಣಿಗ
16.ಪರಾಗ

ಸುಡೊಕು 5721

			4		2		7	
3		6				2		5
				5			8	
8		5						1
			5	9	3		2	
7		2		6		5		4
				2		8		7
2		7					6	
6			7		9	4		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5720 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

ಕೊಬ್ಬರಿ ಧಾರಣೆ	
ಅರಸೀಕೆರೆ	₹8500-8880
ಕೆ.ಆರ್ ಪೇಟೆ (ಇತರ)	₹7950-7950
ತುಮಕೂರು (ಇತರ)	₹8400-9200

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	18598
ಇಂದಿನ ಅಂತ್ಯ	18633
▲	35
ದಿನದ ಗರಿಷ್ಠ	18662

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1570(1605)
ಸೋಯಾ (ರಿಫೈನ್ಡ್)	₹900(915)
ಸೂರ್ಯಕಾಂತಿ (ರಿಫೈನ್ಡ್)	₹902(940)
ಪಾಮೋಲಿನ್	₹847(870)

ಮೊಬೈಲ್ ಸಂಖ್ಯೆಗೆ ಒತ್ತಾಯ ಸಲ್ಲದು

ರಿಟೇಲ್ ವರ್ತಕರಿಗೆ ಮಾಹಿತಿ ನೀಡಲು ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆಯಿಂದ ಸೂಚನೆ

ನವದೆಹಲಿ (ಪಿಟಿಐ): ಸರಕುಗಳ ಮಾರಾಟ ಅಥವಾ ಸೇವೆಗಳನ್ನು ಒದಗಿಸುವ ಸಂದರ್ಭದಲ್ಲಿ ಗ್ರಾಹಕರ ಅನುಮತಿ ಇಲ್ಲದೆ ಅವರ ಮೊಬೈಲ್ ದೂರವಾಣಿ ಸಂಖ್ಯೆ ಪಡೆದುಕೊಳ್ಳಬಾರದು ಎಂದು ರಿಟೇಲ್ ವರ್ತಕರಿಗೆ ಸೂಚಿಸುವಂತೆ ಕೇಂದ್ರವು ಉದ್ಯಮ ಸಂಘಟನೆಗಳಿಗೆ ಹೇಳಿದೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಅವರು ಈ ಸಂಬಂಧ ಈಚೆಗೆ ಸಿಐಐ, ಫಿಕ್ಕಿ, ಅಸೋಚಾಂ, ಭಾರತೀಯ ರಿಟೇಲರ್‌ಗಳ ಒಕ್ಕೂಟ ಮತ್ತು ಅಖಿಲ ಭಾರತ ವರ್ತಕರ ಒಕ್ಕೂಟಕ್ಕೆ (ಸಿಎಐಟಿ) ಪತ್ರ ಬರೆದಿದ್ದಾರೆ.

ಮುಖ್ಯಾಂಶಗಳು
- ಮೊಬೈಲ್ ಸಂಖ್ಯೆ ಕೊಡುವುದನ್ನು ಕಡ್ಡಾಯಗೊಳಿಸುವುದು ಅಕ್ರಮ
- ಕೇಂದ್ರ ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿಯಿಂದ ಸಿಎಐಟಿಗೆ ಪತ್ರ
- ಮೊಬೈಲ್ ಸಂಖ್ಯೆ ಕೊಡದವರಿಗೆ ಉತ್ಪನ್ನ ಮಾರಲು ನಿರಾಕರಣೆ

'ಮಾರಾಟ ಸಂದರ್ಭದಲ್ಲಿ ಗ್ರಾಹಕರ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಅವರ ಒಪ್ಪಿಗೆಯಿಲ್ಲದೆ ಪಡೆಯುವಂತಿಲ್ಲ ಎಂದು ರಿಟೇಲ್ ವರ್ತಕರಿಗೆ ಸೂಕ್ತ ಸಲಹೆ ನೀಡಬೇಕು. ಮೊಬೈಲ್ ದೂರವಾಣಿ ಸಂಖ್ಯೆ ನೀಡುವುದು ಕಡ್ಡಾಯವಾಗಬಾರದು' ಎಂದು ಮೇ 26ರಂದು ಬರೆದಿರುವ ಪತ್ರದಲ್ಲಿ ಸಿಂಗ್ ಅವರು ಹೇಳಿದ್ದಾರೆ.

ಹಲವು ರಿಟೇಲ್ ಮಳಿಗೆಗಳು ತಮ್ಮ ಗ್ರಾಹಕರಿಗೆ ಮೊಬೈಲ್ ಸಂಖ್ಯೆ ಸಲ್ಲಿಸಲು ಒತ್ತಾಯಿಸುತ್ತಿವೆ ಎಂಬ ದೂರುಗಳು ರಾಷ್ಟ್ರೀಯ ಗ್ರಾಹಕರ ಸಹಾಯವಾಣಿಗೆ ಬಂದಿವೆ ಎಂದು ಸಿಂಗ್ ಹೇಳಿದ್ದಾರೆ. ಮೊಬೈಲ್ ಸಂಖ್ಯೆ ಕೊಡಲು ಒಪ್ಪದ ಗ್ರಾಹಕರಿಗೆ ಉತ್ಪನ್ನ ಮಾರಾಟ ಮಾಡಲು ನಿರಾಕರಿಸಿದ ಪ್ರಸಂಗಗಳೂ ಇವೆ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

ಮೊಬೈಲ್ ಸಂಖ್ಯೆ ಕೊಟ್ಟ ನಂತರದಲ್ಲಿ ಗ್ರಾಹಕರಿಗೆ ಮಾರ್ಕೆಟಿಂಗ್ ಮತ್ತು ಪ್ರಚಾರ ಉದ್ದೇಶದ ಎಸ್‌ಎಂಎಸ್‌ಗಳು ಬರುತ್ತಿವೆ. ಇವನ್ನು ಇಲಾಖೆಯು ಗಂಭೀರವಾಗಿ ಪರಿಗಣಿಸಿದೆ. 'ವಸ್ತುವನ್ನು ಮಾರಾಟ ಮಾಡುವಾಗ ಮೊಬೈಲ್ ಸಂಖ್ಯೆ ಬೇಕೇಬೇಕು ಎನ್ನುವುದು ಗ್ರಾಹಕರ ಹಕ್ಕುಗಳ ಉಲ್ಲಂಘನೆ ಮತ್ತು ನ್ಯಾಯಸಮ್ಮತವಲ್ಲದ ಕೆಲಸ' ಎಂದು ಸಿಂಗ್ ಎಚ್ಚರಿಸಿದ್ದಾರೆ.

ಗ್ರಾಹಕರು ಮೊಬೈಲ್ ಸಂಖ್ಯೆ ಕೊಟ್ಟಿಲ್ಲ ಎಂಬ ಒಂದೇ ಕಾರಣಕ್ಕೆ ಅವರಿಗೆ ಉತ್ಪನ್ನ ಮರಳಿಸಲು, ಬೇರೊಂದು ಉತ್ಪನ್ನದೊಂದಿಗೆ ವಿನಿಮಯ ಮಾಡಿಕೊಳ್ಳಲು ನಿರ್ಬಂಧಿಸುವುದು, ಅವರಿಗೆ ಹಣ ಮರಳಿಸಲು ನಿರಾಕರಿಸುವುದು ಅಥವಾ ದೂರುಗಳನ್ನು ಇತ್ಯರ್ಥ ಮಾಡದೆ ಇರುವುದು ಕೂಡ ಅಕ್ರಮ ಎಂದು ಸಿಂಗ್ ಅವರು ಹೇಳಿದ್ದಾರೆ.

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)	
ದಪ್ಪ	₹1,200-1,600
ಮಧ್ಯಮ	₹800-1,200
ಸಣ್ಣ	₹400-800

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹155
ಆರ್‌ಎಸ್‌ಎಸ್-5	₹150
ಗುಡ್ ಲಾಟ್	₹131

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40500
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಶಿವಮೊಗ್ಗ	
ಬೆಟ್ಟೆ	46569-54169
ಗೊರಬಲು	17001-36209
ರಾಶಿ	28050-49599
ಸರಕು	49319-81910
ಸಿದ್ದಾಪುರ	
ಬಿಳಿಗೋಟು	28699-32899
ಚಾಲಿ	35099-37570
ಕೋಕ	27699-32899
ಹಳೆಚಾಲಿ	37099-37099
ಕೆಂಪುಗೋಟು	29689-32619
ರಾಶಿ	42699-47749
ತಟ್ಟಿಬೆಟ್ಟೆ	38769-44099
ಶಿರಸಿ	
ಬೆಟ್ಟೆ	36399-44099
ಬಿಳಿಗೋಟು	25296-33299
ಚಾಲಿ	35008-38151
ಕೆಂಪುಗೋಟು	22199-34031
ರಾಶಿ	44099-46991
ತುಮಕೂರು	
ರಾಶಿ	47250-48400
ಯಲ್ಲಾಪುರ	
ಬಿಳಿಗೋಟು	26899-34899
ಚಾಲಿ	31455-37880
ಕೋಕ	18899-32212
ಕೆಂಪುಗೋಟು	28899-34296
ರಾಶಿ	41008-52199
ತಟ್ಟಿಬೆಟ್ಟೆ	38699-48299

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಮುದ್ರೆಮನೆ
ಎಪಿ	15000
ಎಸಿ	7980
ಆರ್‌ಪಿ	10500
ಆರ್‌ಸಿ	5910

ಜೂನ್ 1ರಿಂದ ಅಜಿಯೊ ಮಾರಾಟ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ಯಾಷನ್ ಇ-ವಾಣಿಜ್ಯ ವೇದಿಕೆ ಅಜಿಯೊ ಜೂನ್ 1ರಿಂದ 'ಬಿಗ್ ಬೋಲ್ಡ್ ಸೇಲ್' ಮಾರಾಟ ಮೇಳ ಆಯೋಜಿಸಿದೆ.

ಈ ಬಾರಿಯದ್ದು ಅತಿದೊಡ್ಡ ಮಾರಾಟ ಮೇಳ. ಗ್ರಾಹಕರು ಐದು ಸಾವಿರಕ್ಕೂ ಹೆಚ್ಚಿನ ಬ್ರ್ಯಾಂಡ್‌ಗಳಿಗೆ ಸೇರಿದ ಉಡುಪು, ಫ್ಯಾಷನ್ ವಸ್ತುಗಳನ್ನು ಖರೀದಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಗ್ರಾಹಕರಿಗೆ ಗರಿಷ್ಠ ಶೇ 90ರವರೆಗೆ ರಿಯಾಯಿತಿ ಇರಲಿದೆ. ಎಸ್‌ಬಿಐ ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್ ಬಳಸಿ ಪಾವತಿ ಮಾಡುವವರಿಗೆ ಹೆಚ್ಚುವರಿ ಶೇ 10ರಷ್ಟು ವಿನಾಯಿತಿ ಸಿಗಲಿದೆ. ಈ ಮಾರಾಟ ಮೇಳದ ಸಂದರ್ಭದಲ್ಲಿ ಆರು ಕೋಟಿಗೂ ಹೆಚ್ಚಿನ ಹೊಸ ಗ್ರಾಹಕರು ಅಜಿಯೊ ವೇದಿಕೆಗೆ ಭೇಟಿ ನೀಡುವ ನಿರೀಕ್ಷೆ ಇದೆ ಎಂದು ಕಂಪನಿಯ ಸಿಇಒ ವಿನೀತ್ ನಾಯರ್ ಹೇಳಿದ್ದಾರೆ.

ಹೊಸ ಪಾವತಿ ವ್ಯವಸ್ಥೆ ರೂಪಿಸುತ್ತಿರುವ ಆರ್‌ಬಿಐ

ಮುಂಬೈ (ಪಿಟಿಐ): ನೈಸರ್ಗಿಕ ವಿಕೋಪ, ಯುದ್ಧದಂತಹ ದುರಂತಗಳ ಸಂದರ್ಭಗಳಲ್ಲಿ ಬಳಕೆಗೆ ಬರುವ, ಹಗುರವಾದ ಹಾಗೂ ಎಲ್ಲಿಗೆ ಬೇಕಿದ್ದರೂ ಒಯ್ಯಲು ಆಗುವಂತಹ ಪಾವತಿ ವ್ಯವಸ್ಥೆಯೊಂದನ್ನು ರೂಪಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕೆಲಸ ಮಾಡುತ್ತಿದೆ.

ಇದನ್ನು ಆರ್‌ಬಿಐ 'ಪಾವತಿ ವ್ಯವಸ್ಥೆಯ ಪಾಲಿನ ಬಂಕರ್' ಇದ್ದಂತೆ ಎಂದು ಬಣ್ಣಿಸಿದೆ. ಈ ವ್ಯವಸ್ಥೆಯು ಈಗಿರುವ ಯಾವುದೇ ಸಾಂಪ್ರದಾಯಿಕ ಪಾವತಿ ವ್ಯವಸ್ಥೆಯ ಜೊತೆ ನಂಟು ಹೊಂದಿರುವುದಿಲ್ಲ. ಇದನ್ನು ಕನಿಷ್ಠ ಸಂಖ್ಯೆಯ ಸಿಬ್ಬಂದಿಯೊಂದಿಗೆ ಎಲ್ಲಿಂದ ಬೇಕಿದ್ದರೂ ನಿರ್ವಹಿಸಬಹುದು ಎಂದು ಆರ್‌ಬಿಐ ಮಾಹಿತಿ ನೀಡಿದೆ.

ಈಗಿರುವ ಸಾಂಪ್ರದಾಯಿಕ ಪಾವತಿ ವ್ಯವಸ್ಥೆಗಳಾಗಿರುವ ಆರ್‌ಟಿಜಿಎಸ್, ಎನ್‌ಇಎಫ್‌ಟಿ ಮತ್ತು ಯುಪಿಐ ಭಾರಿ ಪ್ರಮಾಣದ ವಹಿವಾಟುಗಳನ್ನು ನಿಭಾಯಿಸಲು ವಿನ್ಯಾಸಗೊಂಡಿವೆ. ಆದರೆ ಈ ವ್ಯವಸ್ಥೆಗಳಿಗೆ ಸಂಕೀರ್ಣ ಜಾಲ ಹಾಗೂ ಉನ್ನತ ಐ.ಟಿ. ಮೂಲಸೌಕರ್ಯದ ಅಗತ್ಯವಿದೆ.

ನೈಸರ್ಗಿಕ ವಿಕೋಪಗಳು ಹಾಗೂ ಯುದ್ಧದಂತಹ ದುರಂತಗಳು, ಮಾಹಿತಿ ಮತ್ತು ಸಂವಹನ ವ್ಯವಸ್ಥೆಯನ್ನು ಹಾಳುಗೆಡವಿ ಈ ವ್ಯವಸ್ಥೆಗಳನ್ನು ಕೆಲವು ಹೊತ್ತಿನವರೆಗೆ ನಿಷ್ಕ್ರಿಯವಾಗಿಸಬಹುದು ಎಂದು ಆರ್‌ಬಿಐ ತನ್ನ ವಾರ್ಷಿಕ ವರದಿಯಲ್ಲಿ ವಿವರಿಸಿದೆ.

ಇವನ್ನು ಗಮನದಲ್ಲಿ ಇರಿಸಿಕೊಂಡು ಆರ್‌ಬಿಐ ಹೊಸ ವ್ಯವಸ್ಥೆ ರೂಪಿಸಲು ಕೆಲಸ ಮಾಡುತ್ತಿದೆ. 'ಹೊಸ ವ್ಯವಸ್ಥೆಯು ಅತ್ಯಂತ ಕಡಿಮೆ ಪ್ರಮಾಣದ ತಂತ್ರಾಂಶಗಳನ್ನು ಮತ್ತು ಯಂತ್ರಾಂಶಗಳನ್ನು ಬಳಸಿಕೊಳ್ಳುತ್ತದೆ. ಅಗತ್ಯ ಅನ್ನಿಸಿದ ಸಂದರ್ಭಗಳಲ್ಲಿ ಮಾತ್ರ ಇದನ್ನು ಬಳಸಿಕೊಳ್ಳಬಹುದು. ಅರ್ಥ ವ್ಯವಸ್ಥೆಯ ಸ್ಥಿರತೆಗೆ ಅಗತ್ಯವಿರುವ ವಹಿವಾಟುಗಳನ್ನು ಇದು ನಿಭಾಯಿಸುತ್ತದೆ' ಎಂದು ಆರ್‌ಬಿಐ ಹೇಳಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸುರೇಶ ಕುಮಾರ್, ಊರು ಬೇಡ

- **ಪ್ರಶ್ನೆ: ನಾನು ಹಿರಿಯ ನಾಗರಿಕ. ವಯಸ್ಸು 64 ವರ್ಷ. ನಾನು ಪ್ರತಿ ದಿನ ₹1,500ವರೆಗೆ ವ್ಯಾಪಾರ ಮಾಡುತ್ತೇನೆ. ಗ್ರಾಹಕರು ಆನ್‌ಲೈನ್ ಮೂಲಕ ಪಾವತಿ ಮಾಡುತ್ತೇವೆ ಎಂದು ಹೇಳುತ್ತಾರೆ. ನಮ್ಮ ಬಳಿ ಇರುವ ಉಳಿತಾಯ ಖಾತೆಗೆ ಹಣ ಪಾವತಿ ಮಾಡಿಸಿಕೊಳ್ಳಲೇ ಅಥವಾ ಹೊಸದಾಗಿ ಚಾಲ್ತಿ ಖಾತೆ ತೆರೆದು ಪಾವತಿ ಮಾಡಿಸಿಕೊಳ್ಳಲೇ? ಚಾಲ್ತಿ ಖಾತೆಯಲ್ಲಿ ಬರುವ ಹಣಕ್ಕೆ ತೆರಿಗೆ ಬರುತ್ತದೆಯೇ?**

ಉತ್ತರ: ನಿಮ್ಮ ವೃತ್ತಿ ವ್ಯಾಪಾರ. ಗರಿಷ್ಠ ವಾರ್ಷಿಕ ವಹಿವಾಟು ₹5ರಿಂದ ₹6 ಲಕ್ಷ. ಆದರೆ ಇದು ತೆರಿಗೆಗೆ ಒಳಪಡುವ ಆದಾಯವಲ್ಲ. ಹೀಗಾಗಿ, ನಿಮ್ಮ ಲಾಭವು ತೆರಿಗೆಗೆ ಒಳಪಡುವ ಆದಾಯಕ್ಕಿಂತ ಕಡಿಮೆ ಇರಬಹುದೆಂದು ಮೇಲ್ನೋಟಕ್ಕೆ ಊಹಿಸಬಹುದು. ಯಾರು ವ್ಯವಹಾರದಲ್ಲಿ ತೊಡಗಿ, ಲೆಕ್ಕ ಪರಿಶೋಧನೆಗೆ ಒಳಪಡಬೇಕಾಗಿಲ್ಲವೋ ಅವರಿಗೆ ಡಿಜಿಟಲ್ ವಹಿವಾಟಿನಲ್ಲಿ ಸಿಗುವ ಮೊತ್ತದ ಶೇ 6ರಷ್ಟನ್ನು ತೆರಿಗೆಗೆ ಒಳಪಡುವ ಆದಾಯವೆಂದು ಪರಿಗಣಿಸಿ, ಆ ಮೊತ್ತಕ್ಕೆ ಅನ್ವಯಿಸುವ ತೆರಿಗೆ ಕಟ್ಟುವುದಕ್ಕೆ ಅವಕಾಶವಿದೆ. ನಿಮ್ಮ ಆದಾಯ ₹30 ಸಾವಿರದಿಂದ ₹40 ಸಾವಿರದವರೆಗೆ ಬರಬಹುದು. ಉಳಿದಂತೆ ಎಲ್ಲ ಮೊತ್ತ ನಿಮ್ಮ ಖರ್ಚು-ವೆಚ್ಚ ಎಂದು ಪರಿಗಣಿತ ಆಗುತ್ತದೆ. ಇದಕ್ಕೆ ವಿಶೇಷ ಲೆಕ್ಕ ಇಡುವ ಅಗತ್ಯವಿಲ್ಲ. ನಿಮ್ಮ ವ್ಯವಹಾರ ಅಸಲಿ ಎಂಬುದಕ್ಕೆ ಸರಿಯಾಗಿ ಬ್ಯಾಂಕ್ ಖಾತೆಯ ಜಮಾ ಮಾಹಿತಿ ಇದ್ದರೆ ಸಾಕು.

ಈಗ ಹೊಸ ತೆರಿಗೆ ಪದ್ಧತಿ ಅನುಸರಿಸುವವರಿಗೆ 'ತೆರಿಗೆಗೆ ಒಳಪಡುವ ಆದಾಯ' ₹7 ಲಕ್ಷದೊಳಗಿದ್ದರೆ ವಿನಾಯಿತಿ ಸಿಗುವ ಕಾರಣ, ಅಷ್ಟೂ ಮೊತ್ತಕ್ಕೆ ತೆರಿಗೆ ಬರುವುದಿಲ್ಲ. ಒಂದು ವೇಳೆ ನೂತನ ತೆರಿಗೆ ಪದ್ಧತಿಯನ್ನು ನೀವು ಆಯ್ಕೆ ಮಾಡಿಕೊಂಡರೆ, ಮುಂದಿನ ವರ್ಷಗಳಲ್ಲೂ ಅದೇ ಪದ್ಧತಿ ಅನುಸರಿಸಬೇಕಾಗುತ್ತದೆ. ನಿಮಗೆ ಹಳೆಯ ಪದ್ಧತಿಯಲ್ಲೂ ಇದೊಂದೇ ಆದಾಯವಿದ್ದರೆ ತೆರಿಗೆ ಬರುವುದಿಲ್ಲ.

ನೀವು ವ್ಯವಹಾರದಲ್ಲಿರುವ ಕಾರಣ, ನಿಮ್ಮ ಪ್ರತಿದಿನದ ಪೂರ್ಣ ಸ್ವೀಕೃತಿ ಮೊತ್ತ ತೆರಿಗೆಗೆ ಒಳಪಡುತ್ತದೆ ಎನ್ನುವ ಊಹೆ ಸರಿಯಲ್ಲ. ತೆರಿಗೆಗೆ ಒಳಪಡುವ ಆದಾಯ ಲೆಕ್ಕ ಹಾಕಲು ಸಂಪೂರ್ಣ ಮಾಹಿತಿಯೊಂದಿಗೆ ಸಮೀಪದ ತೆರಿಗೆ ಸಲಹೆಗಾರರೊಂದಿಗೆ ಸಮಾಲೋಚಿಸಬಹುದು. ಯಾವುದೇ ವಿಧಾನ ಅನುಸರಿಸಿದರೂ, ನಿಮ್ಮ ಖರ್ಚು ವೆಚ್ಚ ಕಳೆದು ಉಳಿಕೆಯಾದ ಮೊತ್ತ ಮಾತ್ರ ತೆರಿಗೆಗೆ ಒಳಪಡುತ್ತದೆ. ಅದರಲ್ಲೂ, ತೆರಿಗೆ ವ್ಯಾಪ್ತಿಗೆ ಬರುವಷ್ಟು ಆದಾಯ ಇದ್ದಾಗ ಮಾತ್ರವೇ ತೆರಿಗೆ ಅನ್ವಯವಾಗುತ್ತದೆ. ಅದಕ್ಕೆ ಖಾತೆ ಯಾವುದೆಂಬುದು ಮುಖ್ಯವಲ್ಲ. ಆದರೆ ನೀವು ಇನ್ನೂ ಕೆಲವು ಅಂಶಗಳನ್ನು ಗಮನಿಸಬೇಕು. ಉಳಿತಾಯ ಖಾತೆಗೆ ಕೆಲವು ಮಿತಿಗಳಿರುತ್ತವೆ. ಬೆಳೆಯುತ್ತಿರುವ ವ್ಯವಹಾರವಾದರೆ ಚಾಲ್ತಿ ಖಾತೆಯೇ ಹೆಚ್ಚು ಸೂಕ್ತ.

ಪ್ರಶಾಂತ, ಶಿರಸಿ

- **ಪ್ರಶ್ನೆ: ಇತ್ತೀಚಿನ ದಿನಗಳಲ್ಲಿ ಇಟಿಎಫ್‌ಗಳ ಬಗ್ಗೆ ಹೆಚ್ಚು ಕೇಳುತ್ತಿದ್ದೇನೆ. ಮ್ಯೂಚುವಲ್ ಫಂಡ್‌ಗಳಿಗಿಂತ ಇಲ್ಲಿ ಹೆಚ್ಚು ಲಾಭ ಸಿಗುತ್ತದೆ ಎಂದು ಕೆಲವರು ಹೇಳುತ್ತಿದ್ದಾರೆ. ಇದು ನಿಜವೇ? ಇಟಿಎಫ್ ಹಾಗೂ ಮ್ಯೂಚುವಲ್ ಫಂಡ್ ನಡುವೆ ಯಾವುದು ಸೂಕ್ತ?**

ಉತ್ತರ: ಇಟಿಎಫ್ (ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್) ಮಿಶ್ರ ಸ್ವಭಾವದ ಹೂಡಿಕೆ ಉತ್ಪನ್ನ. ಇಲ್ಲಿ ಮ್ಯೂಚುವಲ್ ಫಂಡ್ ಹಾಗೂ ಷೇರು ಮಾರುಕಟ್ಟೆ ಸ್ವಭಾವಗಳನ್ನು ಕಾಣಬಹುದು. ಇಟಿಎಫ್‌ಗಳು ತಾವು ಅನುಸರಿಸುವ ನಿಶ್ಚಿತ ಸೂಚ್ಯಂಕದ ಆಧಾರದಲ್ಲಿ ಮೌಲ್ಯ ಪಡೆಯುತ್ತವೆ. ಉದಾಹರಣೆಗೆ, ನಿಫ್ಟಿ ಅಥವಾ ಬಿಎಸ್‌ಇ ಸೆನ್ಸೆಕ್ಸ್‌ನಂತಹ ಸೂಚ್ಯಂಕಗಳನ್ನು ಅನುಸರಿಸುವ ಇಟಿಎಫ್‌ಗಳು, ಈ ನಿರ್ದಿಷ್ಟ ಸೂಚ್ಯಂಕಗಳಲ್ಲಾಗುವ ಏರಿಳಿತಗಳ ಆಧಾರದಲ್ಲಿ ತಮ್ಮ ಬೆಲೆಯಲ್ಲೂ ಬದಲಾವಣೆ ಕಾಣುತ್ತವೆ. ಆದರೆ ಮ್ಯೂಚುವಲ್ ಫಂಡ್‌ಗಳು ಅವು ಹೂಡಿಕೆ ಮಾಡಿರುವ ಷೇರು ಅಥವಾ ಆಸ್ತಿಗಳ ಮೌಲ್ಯದಲ್ಲಾಗುವ ಬದಲಾವಣೆಯನ್ನು ಮಾತ್ರ ಆಧರಿಸಿ, ದಿನಕ್ಕೊಂದು ಬಾರಿ ಮಾತ್ರ ಬೆಲೆಯಲ್ಲಿ ಬದಲಾಣೆ ಕಾಣುತ್ತವೆ.

ವ್ಯಕ್ತಿಯೊಬ್ಬ ತಾನು ನಿಭಾಯಿಸಬಹುದಾದ ನಷ್ಟದ ಪ್ರಮಾಣ, ಹೂಡಿಕೆಯ ಅವಧಿ ಇತ್ಯಾದಿ ಪರಿಗಣಿಸಿ ಹಣ ತೊಡಗಿಸಬೇಕೇ ಎಂಬುದನ್ನು ನಿರ್ಣಯಿಸಬಹುದು. ಇಟಿಎಫ್ ನಿರ್ದಿಷ್ಟ ಸೂಚ್ಯಂಕ ಆಧಾರಿತ ಬೆಲೆ ಪಡೆಯುವ ಕಾರಣ, ಯಾವುದೇ ಒಂದು ನಿರ್ದಿಷ್ಟ ಕಂಪನಿಯ ಷೇರಿಗಿರುವಷ್ಟು ರಿಸ್ಕ್, ಇಟಿಎಫ್ ಹೂಡಿಕೆಯಲ್ಲಿ ಇರುವುದಿಲ್ಲ. ಆದರೆ ಮಾರುಕಟ್ಟೆಯ ಏರುಪೇರುಗಳನ್ನು ಗ್ರಹಿಸುವ ಅರಿವು ನಮಗೇ ಇರಬೇಕು. ಮ್ಯೂಚುವಲ್ ಫಂಡ್‌ಗಳಲ್ಲಾದರೆ ಈ ಕೆಲಸವನ್ನು ನುರಿತ ವ್ಯಕ್ತಿಗಳು ನಿರ್ವಹಿಸುತ್ತಾರೆ. ಹೀಗಾಗಿಯೇ ಅವುಗಳನ್ನು ನಿಭಾಯಿಸುವ ವೆಚ್ಚವೂ ತುಲನಾತ್ಮಕವಾಗಿ ಹೆಚ್ಚು. ನಿರ್ದಿಷ್ಟ ಅವಧಿಗೆ ಮುನ್ನ ಯೂನಿಟ್‌ಗಳನ್ನು ಮಾರಾಟ ಮಾಡಿದರೆ, ಆಸ್ತಿ ನಿರ್ವಹಣಾ ಕಂಪನಿಗಳು ಅಂದಾಜು ಶೇ 1ರತನಕ ದಂಡ ವಿಧಿಸುತ್ತವೆ. ಆದರೆ ಇಟಿಎಫ್‌ಗಳಿಗೆ ಬ್ರೋಕರೇಜ್ ಹಾಗೂ ಇತರ ವಹಿವಾಟು ಶುಲ್ಕಗಳಷ್ಟೇ ಅನ್ವಯವಾಗುತ್ತದೆ.

ಸುಲಭವಾಗಿ ನಗದಾಗಿ ಪರಿವರ್ತಿಸಿಕೊಳ್ಳಬಹುದಾದ (ಲಿಕ್ವಿಡಿಟಿ) ಇಟಿಎಫ್ ಖರೀದಿಸುವುದು ಉತ್ತಮ ಹೂಡಿಕೆ ವಿಧಾನ. ಹೂಡಿಕೆದಾರರು ನಿರ್ದಿಷ್ಟ ಸರಕುಗಳ ಬೆಲೆಯಲ್ಲಿ ಏರುಗತಿ ನಿರೀಕ್ಷಿಸುತ್ತಿದ್ದರೆ, ಅಂತಹ ಸರಕು (ಕಮಾಡಿಟಿ) ಇಟಿಎಫ್‌ಗಳನ್ನೂ ಹೂಡಿಕೆಗೆ ಆಯ್ಕೆ ಮಾಡಿಕೊಳ್ಳಬಹುದು. ಆದರೆ ಅದಕ್ಕೂ ಸ್ವಂತ ಅರಿವು ಬೇಕು. ಇಲ್ಲಿ ಗಮನಿಸಬೇಕಾದ ಒಂದು ಪ್ರಮುಖ ಅಂಶವೆಂದರೆ, ಇಟಿಎಫ್‌ಗಳು ತಾವು ಅನುಕರಣೆ ಮಾಡುವ ನಿರ್ದಿಷ್ಟ ಸೂಚ್ಯಂಕವನ್ನು ಮೀರಿದ ಲಾಭ ತಂದುಕೊಡುವ ಸ್ವಭಾವ ಹೊಂದಿಲ್ಲ.

ವೈಯಕ್ತಿಕ ಹೂಡಿಕೆದಾರರು ಡಿಮ್ಯಾಟ್ ಖಾತೆ ಹೊಂದಿ ತಮ್ಮ ಹೆಚ್ಚುವರಿ ಮೊತ್ತವನ್ನು ನಿಯೋಜಿಸಲು ಇಟಿಎಫ್‌ಗಳನ್ನು ಬಳಸಬಹುದು. ಚಿನ್ನ, ಕಚ್ಚಾ ತೈಲ, ನೈಸರ್ಗಿಕ ಅನಿಲ ಇತ್ಯಾದಿಗಳ ಬೆಲೆಯಲ್ಲಿ ಏರಿಕೆಯಾಗುವ ನಿರೀಕ್ಷೆ ಇದ್ದರೆ, ಆಯಾ ವರ್ಗದ ಇಟಿಎಫ್ ಖರೀದಿಸಬಹುದು. ವಿದೇಶಿ ಮಾರುಕಟ್ಟೆ ಸೂಚ್ಯಂಕಗಳ ಆಧರಿಸಿರುವ ಇಟಿಎಫ್ ಕೂಡ ಲಭ್ಯವಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕೈಗಾರಿಕಾ ಕಾರಿಡಾರ್‌ಗೆ ಸಚಿವ ಎಂ.ಬಿ. ಪಾಟೀಲ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಜಿಎಫ್‌ನಲ್ಲಿ ಬಿಇಎಂಎಲ್ ಕಂಪನಿಗೆ ಸೇರಿದ 3,600 ಎಕರೆ ಜಾಗದಲ್ಲಿ ಕೈಗಾರಿಕಾ ಕಾರಿಡಾರ್ ನಿರ್ಮಿಸುವ ಬಗ್ಗೆ ಪರಿಗಣಿಸಬೇಕು ಎಂದು ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಉನ್ನತ ಪ್ರಾಧಿಕಾರವನ್ನು ಕೋರಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಮತ್ತು ಅನುಷ್ಠಾನ ಟ್ರಸ್ಟ್‌ನ ಉನ್ನತಮಟ್ಟದ ಮೇಲ್ವಿಚಾರಣಾ ಪ್ರಾಧಿಕಾರದ ಸಭೆಯಲ್ಲಿ ಪಾಟೀಲ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಪಾಲ್ಗೊಂಡರು.

'ಈ ಸಂಬಂಧ ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರವು ಶೀಘ್ರದಲ್ಲಿ ಪ್ರಸ್ತಾವ ಸಲ್ಲಿಸಲಿದೆ. ಇದು ಜಾರಿಗೆ ಬಂದರೆ ಚೆನ್ನೈ- ಬೆಂಗಳೂರು ಕೈಗಾರಿಕಾ ಕಾರಿಡಾರ್‌ನ ಪ್ರಮುಖ ವಲಯಗಳಲ್ಲಿ ಒಂದಾಗುವ ಜೊತೆಗೆ ಹೆಚ್ಚಿನ ಉದ್ಯೋಗ ಸೃಷ್ಟಿಸಲಿದೆ' ಎಂದು ಪಾಟೀಲ ವಿವರಿಸಿದರು.

ಪಾಟೀಲ ಮಾಡಿದ ಮನವಿಗೆ ಸಕಾರಾತ್ಮಕ ಪ್ರತಿಕ್ರಿಯೆ ನೀಡಿರುವ ನಿರ್ಮಲಾ ಸೀತಾರಾಮನ್ ಅವರು, ಇದಕ್ಕೆ ಸಂಬಂಧಿಸಿದ ವಿವರಗಳೊಂದಿಗೆ ಪ್ರಸ್ತಾವ ಸಲ್ಲಿಸುವಂತೆ ಸೂಚಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ 30-5-2023	
ಜಾವಾ 70/80(ಹೊಸ)	12050-12100
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1580(1615)
ಒಂದು ವಾರದ ಡೆಲಿವರಿ	1575(1610)
ಸೋಯಾ ಕಚ್ಚಾ	840(850)
ಪಾಮ್ ವಾರದ ಡೆಲಿವರಿ	845(868)
ಸೂರ್ಯಕಾಂತಿ ಎಣ್ಣೆ ಕಚ್ಚಾ	830(845)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	60100(59800)
ಬೆಳ್ಳಿ ಕೆ.ಜಿ	70800(70800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬ್ಯಾಂಕಿಂಗ್ ವಂಚನೆ: ಪ್ರಕರಣ ಏರಿಕೆ

ಮುಂಬೈ (ಪಿಟಿಐ): ದೇಶದ ಬ್ಯಾಂಕಿಂಗ್ ವಲಯದಲ್ಲಿ 2022-23ನೆಯ ಆರ್ಥಿಕ ವರ್ಷದಲ್ಲಿ ಒಟ್ಟು 13,530 ವಂಚನೆ ಪ್ರಕರಣಗಳು ವರದಿಯಾಗಿವೆ ಎಂದು ಆರ್‌ಬಿಐ ಹೇಳಿದೆ. ಆದರೆ, ವಂಚನೆಯ ಪ್ರಕರಣಗಳಿಗೆ ಸಂಬಂಧಿಸಿದ ಮೊತ್ತವು ₹30,252ಕ್ಕೆ ಇಳಿಕೆ ಆಗಿದೆ.

ಹೆಚ್ಚಿನ ಪ್ರಕರಣಗಳು ವರದಿಯಾಗಿರುವುದು ಡಿಜಿಟಲ್ ಪಾವತಿಗಳ (ಕಾರ್ಡ್ ಮತ್ತು ಇಂಟರ್ನೆಟ್ ಬ್ಯಾಂಕಿಂಗ್ ಮೂಲಕ ಪಾವತಿ) ಸುತ್ತ ಎಂದು ವಾರ್ಷಿಕ ವರದಿಯಲ್ಲಿ ಕೇಂದ್ರೀಯ ಬ್ಯಾಂಕ್ ಹೇಳಿದೆ.

2021-22ರಲ್ಲಿ ₹59,819 ಕೋಟಿ ಮೊತ್ತದ ಒಟ್ಟು 9,097 ವಂಚನೆ ಪ್ರಕರಣಗಳು ವರದಿಯಾಗಿದ್ದವು. 2020-21ರಲ್ಲಿ ₹1.32 ಲಕ್ಷ ಕೋಟಿ ಮೊತ್ತದ ಒಟ್ಟು 7,338 ಪ್ರಕರಣಗಳು ವರದಿಯಾಗಿದ್ದವು.

ವಂಚನೆ ಪ್ರಕರಣಗಳು ಅತಿಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗಿರುವುದು ಖಾಸಗಿ ಬ್ಯಾಂಕ್‌ಗಳಲ್ಲಿ. ವಂಚನೆಯ ಮೊತ್ತ ಹೆಚ್ಚಿರುವುದು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಎಂದು ಆರ್‌ಬಿಐ ಮಾಹಿತಿ ನೀಡಿದೆ.

ಸಂಭ್ರಮದ ನೆಪದಲ್ಲಿ ಮದ್ಯ ಹಂಚಿಕೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಬಳಿಕ ಶಿವರಾಜ ತಂಗಡಗಿ ಸೋಮವಾರ ಮೊದಲ ಬಾರಿಗೆ ತಮ್ಮ ಕ್ಷೇತ್ರ ಕನಕಗಿರಿಗೆ ಬಂದಾಗ ಸಂಭ್ರಮಾಚರಣೆ ವೇಳೆ ಅವರ ಬೆಂಬಲಿಗರು ಬಹಿರಂಗವಾಗಿ ಮದ್ಯ ಹಂಚಿಕೆ ಮಾಡಿದ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

20 ಲೀಟರ್ ಸಾಮರ್ಥ್ಯದ ಆರು ನೀರಿನ ಕ್ಯಾನ್‌ಗಳಲ್ಲಿ ಮದ್ಯ ತುಂಬಿ ಕೊಠಡಿಯಲ್ಲಿ ಇರಿಸಲಾಗಿತ್ತು. ಕನಕಗಿರಿ ಪಟ್ಟಣ ಪಂಚಾಯಿತಿ ಸದಸ್ಯರೊಬ್ಬರು ಮದ್ಯ ಹಂಚಿದ್ದಾರೆ ಎಂದು ಗೊತ್ತಾಗಿದೆ. ತಂಗಡಗಿ ಬೆಂಗಳೂರಿನಿಂದ ಇಲ್ಲಿಗೆ ಬರುವ ಮೊದಲು ಮದ್ಯ ಹಂಚಿಕೆ ಮಾಡಲಾಗಿದೆ. ಮದ್ಯದ ಜೊತೆ

ಕನಕಗಿರಿಯಲ್ಲಿ ಬಹಿರಂಗವಾಗಿ ಮದ್ಯ ಹಂಚಿಕೆ ಮಾಡಿದ ಚಿತ್ರ

ಸಂಡಿಗೆ ಪ್ಯಾಕೆಟ್ ಹಾಗೂ ಮಂಡಾಳು ಒಗ್ಗರಣೆ ನೀಡಿದ್ದಾರೆ.ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, 'ಈ ವಿಷಯ ಗಮನಕ್ಕೆ ಬಂದಿಲ್ಲ. ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು' ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಕವಿ ಲಾಜಿಸ್ಟಿಕ್ಸ್ ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001, 9886683188

General

ಮಂಡ್ಯ ಜಿಲ್ಲೆ ನಾಗಮಂಗಲ ತಾll, ದೇವಲಾಪುರ ಹೋಬಳಿ (ಯಡಿಯೂರುನಿಂದ 10 ಕಿಮೀ) ಹನಿ ನೀರಾವರಿ ತೋಟದಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ವಸತಿ ಉಚಿತ, ಉತ್ತಮ ಸಂಬಳ ಕೊಡಲಾಗುವುದು. 8105839708, 9448253867

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟವಸತಿ ಇದೆ.12,000 - 17,000. 8951315839, 9880120052

ಶ್ರೀಶಕ್ತಿ ಹೆಲ್ತ್ ಕೇರನಲ್ಲಿ ಹೆಲ್ಪರ್ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 13000/- ರಿಂದ 15000/- ಸಾವಿರವರೆಗೆ. ಬೆಂಗಳೂರು. 9019626612

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Hotel

ಬೆಂಗಳೂರಿನ ಉತ್ತರಹಳ್ಳಿಯಲ್ಲಿರುವ ಹೋಟೆಲ್‌ಗೆ ಸೌತ್‌ಇಂಡಿಯನ್ ಕುಕ್, ಸಹಾಯಕರು, ಕ್ಲೀನರ್‌ಗಳು ಬೇಕಾಗಿದ್ದಾರೆ. ಊಟ, ವಸತಿಯೊಂದಿಗೆ ಆಕರ್ಷಕ ಸಂಬಳ ಸಂಪರ್ಕಿಸಿ: 9148783551

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611227266/ 9611221244

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ:- 8884777502, 8884777503.

ಪ್ರವಾಸ

Travel

07.07.2023 11.09.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 15.06.2023 19.07.2023 ಭೂತಾನ್ 8 ದಿನಗಳು. 18.07.2023 20.08.2023 ನೇಪಾಳ,ಮುಕ್ತಿನಾಥ್ 9 ದಿನಗಳು. 22.06.2023 27.07.2023 ರಾಮೇಶ್ವರ,ಮದುರೈ, ಕುಂಭಕೋಣಮ್ 6 ದಿನಗಳು. 25.06.2023 27.07.2023 ಗ್ಯಾಂಗ್‌ಟಾಕ್,ಡಾರ್ಜಲಿಂಗ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು.03 9448402248 7022547922

10/7/2023 13/17ದಿನಗಳು ರೈಲು/ವಿಮಾನದಲ್ಲಿ ದೆಹಲಿ ಆಗ್ರ ಅಮೃತಸರ ವೈಷ್ಣವದೇವಿ ಅಮರನಾಥ್ ಕಾಶ್ಮೀರ ಕುರುಕ್ಷೇತ್ರ ಇತ್ಯಾದಿ24000/34000/ (ಕೆಲವೇ ಸೀಟುಗಳಿವೆ)'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219.

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ AC ಬಸ್ಸು/ AC ರೂಮ್ 01.06.2023 8 ದಿನಗಳ ಕಾಶಿ,ಬುದ್ದಗಯಾ ಅಲಹಾಬಾದ್. 08.06.2023 ಚಾರ್‌ಧಾಮ್ ಸಮೇತ ಪ್ರವಾಸ. 10.06.2023 ನೇಪಾಳ ಮುಕ್ತಿನಾಥ,ಪೋಕ್ರಾ. 23.06.2023 ಸೋಮನಾಥ ನಿಷ್ಕಳಂಕಮಹಾದೇವ ಓಂಕಾರೇಶ್ವರ್ ಮಂಹಾಕಾಳೇಶ್ವರ್. 05.07.2023 14.07.2023 ಅಮರನಾಥ ವೈಷ್ಣೋದೇವಿ,ಕಾಶ್ಮೀರ್ ಗುಲ್ಮಾರ್ಗ್ ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 9448508708 9686708171

ಸಮಾಜಸೇವೆ

Elder Care

ಕೆಲಸ ಮಾಡಲು ಸೇವಾ ಮನೋಭಾವನೆ ಇರುವ ಯುವತಿಯರು, ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 12,500 ರಿಂದ 17,500/. ಸಂಪರ್ಕಿಸಿ: 9113937969, 9632983695.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಏರಿಕೆ ಕಂಡ ಅಡಿಕೆ ದರ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಅಡಿಕೆ ದರ ಕೊಂಚ ಏರಿಕೆಯಾಗಿದ್ದು, ಬೆಳೆಗಾರರಲ್ಲಿ ಮಂದಹಾಸ ಮೂಡಿದೆ. ಸದ್ಯ ಕೆಂಪಡಿಕೆ ದರ ಕ್ವಿಂಟಲ್‌ಗೆ ₹49,000ಕ್ಕೆ ಏರಿಕೆ ಕಂಡಿದೆ. ಎರಡು ತಿಂಗಳಲ್ಲಿ ಒಂದು ಕ್ವಿಂಟಲ್‌ಗೆ ₹1,500ದಷ್ಟು ಹೆಚ್ಚಾಗಿದೆ.

ಜನವರಿ, ಫೆಬ್ರುವರಿಯಲ್ಲಿ ಅಡಿಕೆ ದರ ₹47,000ದಿಂದ ₹48,000 ಇತ್ತು. ಏಪ್ರಿಲ್, ಮೇ ತಿಂಗಳಲ್ಲಿ ಅಡಿಕೆ ದರ ಏರಿಕೆಯಾಗುವುದು ಸಾಮಾನ್ಯ.

ಕಳೆದ ವರ್ಷದ ಸೆಪ್ಟೆಂಬರ್ ಹೊತ್ತಿಗೆ ಕ್ವಿಂಟಲ್‌ಗೆ ₹58,000ಕ್ಕೆ ಏರಿಕೆಯಾಗಿದ್ದ ಅಡಿಕೆ ದರ ಡಿಸೆಂಬರ್ ಹೊತ್ತಿಗೆ ಒಮ್ಮೆಲೇ ₹19,000ರಷ್ಟು ಕುಸಿತ ಕಂಡು ₹39,000ಕ್ಕೆ ಬಂದಿತ್ತು.

'ಸೆಪ್ಟೆಂಬರ್‌ವರೆಗೂ ದರದಲ್ಲಿ ಏರಿಳಿತ ಇರುತ್ತದೆ. ದರ ₹49,000ರ ಆಸುಪಾಸಿನಲ್ಲೇ ಇರುವ ಸಾಧ್ಯತೆ ಇದೆ. ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ ಭಾಗದಲ್ಲಿ ಕೆಂಪಡಿಕೆ ದರ ಇದೇ ರೀತಿಯಲ್ಲಿ ಏರಿಕೆ ಕಾಣುವ ನಿರೀಕ್ಷೆ ಇದೆ' ಎಂದು ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘದ (ತುಮ್ಕೋಸ್) ಅಧ್ಯಕ್ಷ ಆರ್.ಎಂ. ರವಿ ಹೇಳಿದರು.

ಉಗ್ರದಾಳಿ: ಸರ್ಕಸ್ ಕಲಾವಿದನ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿ ಉಗ್ರರು ಸರ್ಕಸ್ ಕಲಾವಿದನ ಮೇಲೆ ಗುಂಡಿನ ದಾಳಿ ಮಾಡಿ ಹತ್ಯೆಗೈದ ಘಟನೆ ಸೋಮವಾರ ರಾತ್ರಿ ನಡೆದಿದೆ.

ಜಮ್ಮುವಿನ ಉಧಂಪುರ ನಿವಾಸಿ ದೀಪು ಹತ್ಯೆಯಾದ ಸರ್ಕಸ್ ಕಲಾವಿದ.

ಮನೆಯಲ್ಲೇ ಪತಿಯ ಮೃತದೇಹ ದಹನ ಮಾಡಿದ ಮಾನಸಿಕ ಅಸ್ವಸ್ಥೆ

ಕರ್ನೂಲ್ (ಪಿಟಿಐ): ಮಾನಸಿಕ ಸ್ಥಿಮಿತ ಕಳೆದುಕೊಂಡಿರುವ ಮಹಿಳೆಯೊಬ್ಬರು ತಮ್ಮ ಪತಿಯ ಮೃತದೇಹವನ್ನು ಏಕಾಂಗಿಯಾಗಿ ಮನೆಯಲ್ಲಿಯೇ ದಹನ ಮಾಡಿರುವ ಘಟನೆ ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಪಾತಿಕೊಂಡ ಗ್ರಾಮದಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಲಲಿತಮ್ಮ ಎಂಬವರ ಪತಿ ಹರಿಕೃಷ್ಣ ಪ್ರಸಾದ್ (63) ಅವರು ದೀರ್ಘಕಾಲದಿಂದ ಪಾರ್ಕಿನ್ಸನ್ ಕಾಯಿಲೆಯಿಂದ ಬಳಲುತ್ತಿದ್ದರು. ಅವರು ಈಚೆಗೆ ಮೃತಪಟ್ಟರು. ಮನೆಯಲ್ಲಿದ್ದ ರಟ್ಟಿನ ಪೆಟ್ಟಿಗೆಗಳು ಮತ್ತು ಬಟ್ಟೆಗಳನ್ನು ಬಳಸಿ ಲಲಿತಮ್ಮ ಅವರು ತಮ್ಮ ಪತಿಯ ಮೃತದೇಹವನ್ನು ಸೋಮವಾರ ತಾವೇ ದಹಿಸಿದ್ದಾರೆ. ಜೊತೆಗೆ, ಅಂತಿಮ ಸಂಸ್ಕಾರದ ವಿಧಿ ವಿಧಾನಗಳನ್ನು ನೆರವೇರಿಸಲೂ ಪ್ರಯತ್ನಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ದಂಪತಿಗೆ ಇಬ್ಬರು ಮಕ್ಕಳಿದ್ದು, ಒಬ್ಬ ಮಗ ಮೆಡಿಕವರ್ ಆಸ್ಪತ್ರೆಯಲ್ಲಿ ಉದ್ಯೋಗದಲ್ಲಿದ್ದಾರೆ ಮತ್ತೊಬ್ಬ ಮಗ ಕೆನಡಾದಲ್ಲಿ ನೆಲೆಸಿದ್ದಾರೆ. ಆಸ್ತಿ ಕಲಹದ ಕಾರಣ ಮಕ್ಕಳಿಬ್ಬರೂ ತಂದೆ, ತಾಯಿಯನ್ನು ದೂರವಿಟ್ಟಿದ್ದರು.

ಲಲಿತಮ್ಮ ಅವರು ಸಮಾಜ ಮತ್ತು ಬಂಧು ಬಳಗದಿಂದ ದೂರವಿದ್ದರು ಹಾಗಾಗಿ ಅವರ ಸಹಾಯಕ್ಕೆ ಯಾರೂ ಇರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ. ಎಲ್ಲಾ ಕೋನಗಳಲ್ಲೂ ತನಿಖೆ ನಡೆಸಿದ ಬಳಿಕ ಯಾವುದೇ ದುಷ್ಕೃತ್ಯ ನಡೆದಿರುವ ಶಂಕೆ ವ್ಯಕ್ತವಾಗಿಲ್ಲ ಎಂದು ಪೊಲೀಸರು ಮಾಹಿತಿ ನೀಡಿದರು.

ಲಾರಿ ಸಮೇತ ಅನ್ನಭಾಗ್ಯ ಅಕ್ಕಿ ಕಳವು

ಪ್ರಜಾವಾಣಿ ವಾರ್ತೆ

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ವಿವಿಧ ಗ್ರಾಮದ ಪಡಿತರ ಕೇಂದ್ರಗಳಿಗೆ ವಿತರಿಸಲು ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ತುಂಬಿಸಿ ನಗರದ ಎಪಿಎಂಸಿ ಬಳಿ ನಿಲ್ಲಿಸಿದ್ದ ಲಾರಿಯನ್ನು ಕಳ್ಳತನ ಮಾಡಲಾಗಿದೆ.

ಮಂಗಳವಾರ ಎಪಿಎಂಸಿಯಲ್ಲಿ ಅನ್ನಭಾಗ್ಯ ಅಕ್ಕಿ ಸರಬರಾಜು ಮಾಡುವ ನಾಲ್ಕು ಲಾರಿಗಳನ್ನು ನಿಲ್ಲಿಸಲಾಗಿತ್ತು. ಒಂದು ಲಾರಿಯಲ್ಲಿ 20 ಟನ್ (420 ಮೂಟೆ) ಅಕ್ಕಿ ಇತ್ತು. ಚಾಲಕ ಕೀಲಿಯನ್ನು ಬಿಟ್ಟು ಬೇರೆ ಕಡೆ ಹೋದಾಗ ಕಳವು ಮಾಡಲಾಗಿದೆ' ಎಂದು ಶಹಾಪುರ ಠಾಣೆಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಲಾರಿ ಶೋಧಕ್ಕೆ ಕಾರ್ಯಾಚರಣೆ ನಡೆದಿದೆ' ಎಂದು ಶಹಾಪುರ ಠಾಣೆಯ ಪಿ.ಐ ಚೆನ್ನಯ್ಯ ಹಿರೇಮಠ ತಿಳಿಸಿದರು.

ಉಕ್ರೇನ್–ರಷ್ಯಾ: ಡ್ರೋನ್ ದಾಳಿ

ಕೀವ್‌ನಲ್ಲಿ ಒಂದು ಸಾವು • ಮಾಸ್ಕೊದಲ್ಲಿ ಕೆಲ ಕಟ್ಟಡಗಳಿಗೆ ಹಾನಿ

ಕೀವ್ (ಎಪಿ): ಉಕ್ರೇನ್‌ನ ರಾಜಧಾನಿ ಕೀವ್ ನಗರದ ಮೇಲೆ ರಷ್ಯಾ ವಾಯುದಾಳಿಯನ್ನು ಮುಂದುವರಿಸಿದೆ. ಪ್ರತಿಯಾಗಿ ಉಕ್ರೇನ್ ಸೇನೆ ಕೂಡಾ ರಷ್ಯಾದ ರಾಜಧಾನಿ ಮಾಸ್ಕೊ ಅನ್ನು ಗುರಿಯಾಗಿಸಿ ಡ್ರೋನ್ ದಾಳಿ ನಡೆಸಿದೆ.

ಮಾಸ್ಕೊ ನಗರದ ಮೇಲೆ ಸುಮಾರು 8 ಡ್ರೋನ್‌ಗಳನ್ನು ಪ್ರಯೋಗಿಸಲಾಗಿದೆ. ಈ ದಾಳಿಯನ್ನು 'ಉಕ್ರೇನ್ ಸರ್ಕಾರದ ಭಯೋತ್ಪಾದನಾ ಕೃತ್ಯ' ಎಂದು ರಷ್ಯಾ ಬಣ್ಣಿಸಿದೆ. ದಾಳಿಗೆ ಸಂಬಂಧಿಸಿದಂತೆ ಉಕ್ರೇನ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

'5 ಡ್ರೋನ್‌ಗಳನ್ನು ಹೊಡೆದುರುಳಿಸಿದ್ದು, ದಾಳಿಯಿಂದ ಹಲವು ಕಟ್ಟಡಗಳಿಗೆ ಹಾನಿಯಾಗಿದೆ. ಹಲವರಿಗೆ ಗಾಯಗಳಾಗಿದ್ದು, ಇಬ್ಬರು ಆಸ್ಪತ್ರೆಗೆ ದಾಖಲಾಗಿದ್ದಾರೆ' ಎಂದು ರಷ್ಯಾದ ಸೇನೆಯು ಮಾಹಿತಿ ನೀಡಿದೆ.

ತೀವ್ರವಾಗಿ ಜಖಂಗೊಂಡಿದ್ದ ಎರಡು ಕಟ್ಟಡಗಳಿಂದ ನಿವಾಸಿಗಳನ್ನು ಸ್ಥಳಾಂತರಿಸಲಾಗಿದೆ. ಮಾಸ್ಕೊ ನಗರವನ್ನು ಗುರಿಯಾಗಿಸಿ ಪ್ರಯೋಗಿಸಿದ್ದ ಕೆಲ ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಮಾಸ್ಕೊ ಗವರ್ನರ್ ಆಂಡ್ರೆ ವೊರೊಬ್ಯೊವ್ ತಿಳಿಸಿದ್ದಾರೆ.

ಕೀವ್ ಮೇಲೆ ಮುಂದುವರಿದ ದಾಳಿ: ಇತ್ತ ಕೀವ್ ನಗರವನ್ನು ಗುರಿಯಾಗಿಸಿ ರಷ್ಯಾದ ಸೇನೆಯು ನಿರಂತರವಾಗಿ ಡ್ರೋನ್ ದಾಳಿ ಮುಂದುವರಿಸಿದೆ. ಕೀವ್‌ನಲ್ಲಿ ಒಬ್ಬರು ಸತ್ತಿದ್ದಾರೆ. ನಾಗರಿಕರು ಸುರಕ್ಷಿತ ಆಶ್ರಯತಾಣಗಳಲ್ಲಿ ರಕ್ಷಣೆ ಪಡೆದಿದ್ದಾರೆ.

ಉಕ್ರೇನ್ ನೀಡಿದ ಮಾಹಿತಿ ಪ್ರಕಾರ, ಸುಮಾರು 31 ಡ್ರೋನ್‌ಗಳನ್ನು ರಷ್ಯಾ ಪ್ರಯೋಗಿಸಿದ್ದು, ಈ ಪೈಕಿ 29 ಡ್ರೋನ್‌ಗಳನ್ನು ನಾಶಪಡಿಸಲಾಗಿದೆ. ಹಲವೆಡೆ ಸ್ಫೋಟಗಳು ಸಂಭವಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡ್ರೋನ್ ದಾಳಿಯಿಂದಾಗಿ ಉಕ್ರೇನ್ ರಾಜಧಾನಿ ಕೀವ್‌ನಲ್ಲಿ ಕಟ್ಟಡವೊಂದರ ಬಳಿ ಜಖಂಗೊಂಡಿದ್ದ ವಾಹನಗಳನ್ನು ತೆರವುಗೊಳಿಸಲಾಯಿತು —ಎಎಫ್‌ಪಿ ಚಿತ್ರ

ಕಕ್ಷೆ ಸೇರಿದ ಚೀನಾದ ಬಾಹ್ಯಾಕಾಶ ನೌಕೆ

ಬೀಜಿಂಗ್ (ಪಿಟಿಐ): ಶೆನ್‌ಝೌ–16 ಬಾಹ್ಯಾಕಾಶ ನೌಕೆ ಮೂಲಕ ಸಾಮಾನ್ಯ ಪ್ರಜೆ ಸೇರಿ ಮೂವರು ಗಗನಯಾತ್ರಿಗಳನ್ನು ಟಿಯಾನ್‌ಗೊಂಗ್ ಬಾಹ್ಯಾಕಾಶ ಕೇಂದ್ರಕ್ಕೆ ಚೀನಾ ಮಂಗಳವಾರ ಯಶಸ್ವಿಯಾಗಿ ಕಳುಹಿಸಿತು.

'ಜಿಯುಕ್ವಾನ್ ಉಪಗ್ರಹ ಉಡಾವಣಾ ಕೇಂದ್ರದಿಂದ ಸ್ಥಳೀಯ ಕಾಲಮಾನ 9:31ಕ್ಕೆ ರಾಕೆಟ್ ಉಡಾವಣೆಗೊಂಡಿತು. 10 ನಿಮಿಷಗಳ ನಂತರ ಶೆನ್‌ಝೌ–16 ನೌಕೆ ರಾಕೆಟ್‌ನಿಂದ ಬೇರ್ಪಟ್ಟು ನಿಗದಿತ ಕಕ್ಷೆ ತಲುಪಿತು' ಎಂದು ಚೀನಾ ಮಾನವಸಹಿತ ಬಾಹ್ಯಾಕಾಶ ಸಂಸ್ಥೆ (ಸಿಎಂಎಸ್‌ಎ) ಮಾಹಿತಿ ನೀಡಿದೆ.

ಕೋರ್ಟ್‌ಗೆ ಇಮ್ರಾನ್ ಖಾನ್ ಹಾಜರು

ಲಾಹೋರ್ (ಪಿಟಿಐ): ಇಲ್ಲಿನ 'ಜಿನ್ನಾ ಹೌಸ್' ಮೇಲಿನ ದಾಂದಲೆ ಕೃತ್ಯ ಸೇರಿ ನಾಲ್ಕು ಪ್ರಕರಣಗಳಿಗೆ ಸಂಬಂಧಿಸಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮಂಗಳವಾರ ಭಯೋತ್ಪಾದನಾ ನಿಗ್ರಹ ಕೋರ್ಟ್ ಎದುರು ಹಾಜರಾದರು. ಕೋರ್ಟ್ ನೀಡಿರುವ ಜಾಮೀನಿಗೆ ಸಂಬಂಧಿಸಿ ಶ್ಯೂರಿಟಿ ಬಾಂಡ್‌ಗಳನ್ನು ಸಲ್ಲಿಸಿದರು. ತಲಾ 1 ಲಕ್ಷದ ನಾಲ್ಕು ಬಾಂಡ್‌ಗಳನ್ನು ಅವರು ಕೋರ್ಟ್‌ಗೆ ಸಲ್ಲಿಸಿದರು.

ಭಾರತದಿಂದ ನಿತ್ಯ 10 ಲಕ್ಷ ಮೊಟ್ಟೆ ಆಮದಿಗೆ ನಿರ್ಧಾರ

ಕೊಲಂಬೊ (ಪಿಟಿಐ): ಭಾರತದಿಂದ ನಿತ್ಯವೂ 10 ಲಕ್ಷ ಮೊಟ್ಟೆಗಳನ್ನು ಭಾರತ ಐದು ಕೋಳಿಸಾಕಣೆ ಕೇಂದ್ರಗಳಿಂದ ಆಮದು ಮಾಡಿಕೊಳ್ಳಲು ಶ್ರೀಲಂಕಾ ನಿರ್ಧರಿಸಿದೆ ಎಂದು ದ್ವೀಪ ರಾಷ್ಟ್ರದ ಪ್ರಮುಖ ಆಮದು ಸಂಸ್ಥೆಯೊಂದು ಮಂಗಳವಾರ ತಿಳಿಸಿದೆ.



'ಮೊಟ್ಟೆಗೆ ದೇಶದಲ್ಲಿ ಬೇಡಿಕೆ ಹೆಚ್ಚಾಗಿದೆ. ಸದ್ಯ 20 ಲಕ್ಷ ಮೊಟ್ಟೆ ಆಮದು ಮಾಡಿಕೊಂಡಿದ್ದು, ಮಾರುಕಟ್ಟೆಗೆ 10 ಲಕ್ಷ ಮೊಟ್ಟೆಗಳನ್ನು ಬಿಡುಗಡೆ ಮಾಡಲಾಗಿದೆ' ಎಂದು ಶ್ರೀಲಂಕಾದ ಸರ್ಕಾರಿ ವ್ಯಾಪಾರ ನಿಗಮ (ಎಸ್‌ಟಿಸಿ) ಅಧ್ಯಕ್ಷ ಆಸಿರ ವಲಿಸುಂದರ ಹೇಳಿದರು.

'ಈ ಮೊಟ್ಟೆಗಳನ್ನು ಬೇಕರಿಗಳು, ಬಿಸ್ಕಟ್ ತಯಾರಿಕೆ ಕೇಂದ್ರಗಳು, ಆತಿಥ್ಯ ಸೇವೆ ಒದಗಿಸುವ ಸಂಸ್ಥೆಗಳು, ರೆಸ್ಟೋರೆಂಟ್‌ಗಳಿಗೆ ತಲಾ ಮೊಟ್ಟೆಗೆ ಶ್ರೀಲಂಕಾ ರೂಪಾಯಿ 35ರಂತೆ (ಭಾರತದ ₹ 9.74) ಬಿಡುಗಡೆ ಮಾಡಲಾಗುತ್ತಿದೆ' 'ಪ್ರಸ್ತುತ ಎರಡು ಕೋಳಿಸಾಗಣೆ ಫಾರ್ಮ್‌ಗಳಿಂದ ಆಮದು ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ದೇಗುಲದ ಆಭರಣ ಅಡವಿಟ್ಟಿದ್ದ ಅರ್ಚಕ 6 ವರ್ಷ ಸಜೆ

ಸಿಂಗಪುರ (ಪಿಟಿಐ): ದೇವಸ್ಥಾನದ ಆಭರಣಗಳನ್ನು ಪ್ರಧಾನ ಅರ್ಚಕರೇ ಸುಮಾರು ₹ 12.40 ಕೋಟಿಗೆ (1.5 ಮಿಲಿಯನ್ ಸಿಂಗಪುರ ಡಾಲರ್) ಅಡಮಾನ ಇಟ್ಟಿದ್ದ ಅಪರಾಧ ಸಾಬೀತಾಗಿದ್ದು, ಕೋರ್ಟ್ ಅಪರಾಧಿಗೆ ಆರು ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಇಲ್ಲಿನ ಅತಿ ಹಳೆಯದಾದ ಹಿಂದೂ ದೇವಾಲಯ ಶ್ರೀ ಮಾರಿಯಮ್ಮಾನ್ ದೇವಸ್ಥಾನದ ಮುಖ್ಯ ಅರ್ಚಕರಾಗಿದ್ದ ಕಂಡಸ್ವಾಮಿ ಸೇನಾಪತಿ ಶಿಕ್ಷೆಗೆ ಗುರಿಯಾದ ಅಪರಾಧಿ. ಹಿಂದೂ ದತ್ತಿ ಮಂಡಳಿ ಈತನನ್ನು ಡಿಸೆಂಬರ್ 2013ರಲ್ಲಿ ನೇಮಿಸಿತ್ತು. ಕ್ರಿಮಿನಲ್ ವಂಚನೆ ಸೇರಿ 2 ಪ್ರಕರಣದಲ್ಲಿ ಶಿಕ್ಷೆಯಾಗಿದೆ. ಇನ್ನು 6 ಪ್ರಕರಣದ ವಿಚಾರಣೆ ನಡೆದಿದೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆ ಅಧಿಕಾರಿಯವರ ಕಛೇರಿ, (ಲೆ.ಪ.)-1.5, ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1, 3ನೇ ಮಹಡಿ, ಬಿ.ಎಂ.ಟಿ.ಸಿ ಬಸ್‌ನಿಲ್ದಾಣ, ಟಿ.ಟಿ.ಎಂ.ಸಿ ಕಟ್ಟಡ, ಯಶವಂತಪುರ, ಬೆಂಗಳೂರು-560022 ದೂರವಾಣಿ ಸಂಖ್ಯೆ: 080-23476656

ಪ್ರಕಟಣೆ



ಈ ಭಾವಚಿತ್ರದಲ್ಲಿ ಕಂಡು ಬರುತ್ತಿರುವ ವ್ಯಕ್ತಿಯಾದ ಶ್ರೀ ಪ್ರತಾಪ್ ಸಿಂಗ್, ಬಿನ್ ಜಲಮ್ ಸಿಂಗ್ ಸುಮಾರು 53 ವರ್ಷ ವಯಸ್ಸಿನ, ಮಾಲೀಕರು ಮೆ: ರಾಜ್ ಗುರು ಇಂಪೆಕ್ಸ್, ನಂ. 17, 17/1 ಓ ನಿವಾಸ, 4ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು–560009. ಮನೆ ವಿಳಾಸ: ನಂ 116/5 ಸೆಲ ಮಹಡಿ, ಮುನ್ನೇನಕೊಳ್ಳ, ಮಾರತಹಳ್ಳಿ, ಬೆಂಗಳೂರು–560037. ಇವರು ವಾಣಿಜ್ಯ ತೆರಿಗೆ ಇಲಾಖೆಯ ಕೆಳಕಂಡ ಕಛೇರಿಗೆ ರೂ. 9,65,42,626/– ಬಾಕಿ ಉಳಿಸಿಕೊಂಡಿದ್ದು, ತಲೆಮರೆಸಿಕೊಂಡಿರುತ್ತಾರೆ. ಸದರಿಯವರ ಮಾಹಿತಿ ದೊರೆತಲ್ಲಿ ಕೆಳಗೆ ಸಹಿಮಾಡಿದ ಅಧಿಕಾರಿಗಳಿಗೆ ಮಾಹಿತಿ ನೀಡಲು/ಸಂಪರ್ಕಿಸಲು ಮತ್ತು ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಲು ಕೋರಲಾಗಿದೆ.

ಸಹಿ/– ವಾಣಿಜ್ಯ ತೆರಿಗೆ ಅಧಿಕಾರಿ, (ಲೆಕ್ಕ ಪರಿಶೋಧನೆ)-1.5, ಬೆಂಗಳೂರು

ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಚೇರಿ–2, ಬೆಂಗಳೂರು.

ಸಂ: ದಾಖಲಾ(ಆ)/ವಿಸಸೇತೆಕ–2/ದೊ/ಇ–ಪ್ರೊಕ್ಯೂ/ಸಿಆರ್ 42/2023–24 ದಿನಾಂಕ: 30.05.2023

ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿ ಮತ್ತು ಸ್ವಚ್ಛತಾ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ಇ–ಟೆಂಡರ್ ಅಧಿಸೂಚನೆ

ಈ ಕಛೇರಿಗೆ 17 ಸ್ವಚ್ಛತಾ ಸಿಬ್ಬಂದಿಗಳು ಮತ್ತು 09 ಜನ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ.

ಟೆಂಡರ್ ವೇಳಾಪಟ್ಟಿ: (1) ಅರ್ಹತೆ/ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **14.06.2023 ಸಮಯ: 5:30 PM.** (2) ಅರ್ಹತೆ/ಪ್ರಶ್ನೆಗಳಿಗೆ ಉತ್ತರ ನೀಡುವ ಕಡೆಯ ದಿನಾಂಕ: **15.06.2023 ಸಮಯ: 5:30 PM.** (3) ಬಿಡ್‌ನ ಪೂರ್ವಭಾವಿ ಸಭೆ ದಿನಾಂಕ: **16.06.2023 ಸಮಯ: 11:00 AM.** (4) ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **20.06.2023 ಸಮಯ: 5:30 PM.** (5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **21.06.2023 ಸಮಯ: 11:00 AM.** (6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **27.06.2023 ಸಮಯ: 11:00 AM.**

ನಿಗಧಿತ ಟೆಂಡರ್ ನಮೂನೆ ಹಾಗೂ ಟೆಂಡರ್ ಷರತ್ತುಗಳ ವಿವರಗಳಿಗೆ ಕರ್ನಾಟಕ ಸರ್ಕಾರದ ವೆಬ್‌ಸೈಟ್: **http://eproc.karnataka.gov.in** ಅಥವಾ ವಾಣಿಜ್ಯ ತೆರಿಗೆ ಇಲಾಖೆಯ **http://ctax.kar.nic.in** ನಿಂದ ಪಡೆಯಬಹುದು. ಸಹಿ/–

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿ.ಸ.&ಸೇ.ತೆ.ಕ–2, ಬೆಂಗಳೂರು

ವಾಸಾಸಂಇ/ವಾಪ್ರ/138/ಎಎಎ/2023–24

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಯೋಜನಾ ವಿಭಾಗ)

ಎಂಎಸ್‌ಐಎಲ್ ಹೌಸ್, ನಂ. 36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560 052. 080–22264021–25

ಸಂ. ಎಂಎಸ್‌ಐಎಲ್/ಪಿಆರ್‌ಜೆ/001/2023–24 ದಿನಾಂಕ: 31.05.2023

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ

ಕರ್ನಾಟಕ ಮತ್ತು ಇತರೆ ರಾಜ್ಯಗಳಲ್ಲಿನ ಎಂಎಸ್‌ಐಎಲ್ ಕಟ್ಟಡಗಳ ನಿರ್ಮಾಣದ ಅಂದಾಜು ಪಟ್ಟಿಗಳ ದಸ್ತಾವೇಜುಗಳನ್ನು ಸಿದ್ಧಪಡಿಸುವಿಕೆ, ಸರ್ವೆ ಮಾಡುವುದು, ವಿನ್ಯಾಸ ರೂಪಿಸುವುದು, ಮೇಲ್ವಿಚಾರಣೆ ನೋಡಿಕೊಳ್ಳುವುದು, ಉಸ್ತುವಾರಿ, ಡ್ರಾಯಿಂಗ್‌ಗಳು ಮತ್ತು ನಿರ್ಮಾಣ ಮೇಲ್ವಿಚಾರಣೆ ನೋಡಿಕೊಳ್ಳಲು 3 ವರ್ಷಗಳ ಅವಧಿವರೆಗೆ ಕನ್ಸಲ್ಟೆನ್ಸಿ ಸೇವೆಗಳ ಪೂರೈಕೆದಾರರುಗಳ ನೇಮಕಾತಿಗಾಗಿ ಅಲ್ಪಾವಧಿ ಇ–ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **14.06.2023 ರಂದು ಮಧ್ಯಾಹ್ನ 3:30 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in** ಗೆ ಭೇಟಿ ನೀಡುವುದು.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು(ಯೋಜನೆಗಳು), ಎಂಎಸ್‌ಐಎಲ್

ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ ಮೈಸೂರು ಜಿಲ್ಲೆ, ಮೈಸೂರು

ಡಾ.ಬಾಬು ಜಗಜೀವನ್‌ರಾಮ್ ಭವನ ಕಟ್ಟಡ, ಆದಿಪಂಪ ರಸ್ತೆ ನಾರಾಯಣಸ್ವಾಮಿ ಬ್ಲಾಕ್, ವಿನಾಯಕನಗರ, ಮೈಸೂರು.

E-mail- dswomysore9@gmail.com Ph.: 0821-2344661

ಸಂಖ್ಯೆ: ನಿಪಕೇ.ಮೈ/ಆಡಳಿತ/ಸಿಆರ್–1/2023–24 ದಿನಾಂಕ : 30–05–2023

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ನಿರಾಶ್ರಿತರ ಪರಿಹಾರ ಕೇಂದ್ರ, ಜ್ಯೋತಿನಗರ, ಮೈಸೂರು ಇಲ್ಲಿನ ನಿರಾಶ್ರಿತರುಗಳ ಊಟದ ನಿರ್ವಹಣೆಗಾಗಿ 2023–24ನೇ ಸಾಲಿಗೆ ಬೇಕಾಗಿರುವ ಆಹಾರ ಪದಾರ್ಥಗಳು ಮತ್ತು ಇತರೆ ಅಗತ್ಯ ವಸ್ತುಗಳ ಪೂರೈಕೆಗಾಗಿ ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್) ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ htpp//.kpp.karnataka.gov.in ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.

1. ಇ–ಟೆಂಡರ್ ನಮೂನೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 30–05–2023 ರಿಂದ 28–06–2023 ರ ಬೆಳಿಗ್ಗೆ 11.00 ಗಂಟೆಯವರೆಗೆ.
2. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್‌ಗೆ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 28–06–2023 ರ ಸಂಜೆ 04.00 ಗಂಟೆಯವರೆಗೆ
3. Prebid ಸಭೆ ದಿನಾಂಕ:20–06–2023 ರ ಬೆಳಿಗ್ಗೆ 11.00 ಗಂಟೆಯ ನಂತರ. (ಇದಕ್ಕೆ ಯಾವುದೇ ಸೂಚನ ಪತ್ರ ಕಳುಹಿಸುವುದಿಲ್ಲ.
4. ಇ–ಟೆಂಡರ್ ತೆರೆಯುವ ದಿನಾಂಕ: 30–06–2023 ರ ಬೆಳಿಗ್ಗೆ 11.00 ಗಂಟೆಯ ನಂತರ.

ಸಹಿ/– ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ ಹಾಗೂ
ಕಾರ್ಯದರ್ಶಿ, ನಿರಾಶ್ರಿತರ ಪರಿಹಾರ ಕೇಂದ್ರ, ಮೈಸೂರು.

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಜಂಟಿ ನಿರ್ದೇಶಕರ ಕಛೇರಿ, ಮೈಸೂರು ಜಿಲ್ಲೆ, ಮೈಸೂರು

ಡಾ॥ ಬಾಬು ಜಗಜೀವನರಾಂ ಭವನದ ಕಟ್ಟಡ, ಆದಿಪಂಪ ರಸ್ತೆ, ನಾರಾಯಣ ಸ್ವಾಮಿ ಬ್ಲಾಕ್, ಪಡುವಾರಹಳ್ಳಿ ಪೂರ್ವ ಬಡಾವಣೆ, ಮೈಸೂರು–12

Ph:0821-2344661 E-mail dswomysore9@gmail.com

ಸಂ:ಜಂ.ನಿ:ತಸ:ಸಿಆರ್:02:2023–24 ದಿನಾಂಕ: 25.05.2023

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್‌ಮೂಲಕ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ವ್ಯಾಪ್ತಿಯಡಿ ಬರುವ ಮೊರಾರ್ಜಿದೇಸಾಯಿ ವಸತಿ ಶಾಲೆ/ಕಿತ್ತೂರುರಾಣಿ ಚನ್ನಮ್ಮ ವಸತಿ ಶಾಲೆ/ ಡಾ: ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ / ಅಟಲ್ ಬಿಹಾರಿ ವಾಜಪೇಯಿ ಶಾಲೆ /ಇಂದಿರಾಗಾಂಧಿ/ ಏಕಲವ್ಯ ಮಾದರಿಯ ವಸತಿ ಶಾಲೆಗಳಲ್ಲಿ ಖಾಲಿ ಇರುವ ಭೋದಕ / ಭೋದಕೇತರ ಸಿಬ್ಬಂದಿಗಳನ್ನು ಹೊರಸಂಪನ್ಮೂಲ ಸಂಸ್ಥೆ ಮುಖಾಂತರ ಪಡೆಯುವ ಬಗ್ಗೆ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಆಹ್ವಾನಿಸುವ ಬಗ್ಗೆ ಎರಡು ಲಕೋಟೆ ಪದ್ಧತಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಕರೆಯಲಾಗಿದೆ.

1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ ಸಂಖ್ಯೆ: ಜಂನಿ:ಸಕಇ:ತಸ:ಸಿಆರ್ 02:2023–24, ದಿ: 25.5.2023 **2)** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 26.6.2023 ರಂದು ಸಂಜೆ 5.00 ಗಂಟೆಯೊಳಗೆ. **3)** ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ ದಿ:7.6.2023ರಂದು ಬೆಳಿಗ್ಗೆ 11–00 ಗಂಟೆಗೆ. **4)** ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ಸಮಯ ದಿ: 30.6.2023 ರಂದು ಬೆಳಿಗ್ಗೆ 11–00 ಗಂಟೆಯೊಳಗೆ. **5)** ಆರ್ಥಿಕ ಲಕೋಟೆ ತೆರೆಯುವ ದಿನಾಂಕ ಮತ್ತು ಸಮಯ: 5.7.2023 ರಂದು ಬೆಳಿಗ್ಗೆ 11–00 ಗಂಟೆಯೊಳಗೆ. **6)** ಟೆಂಡರಿನ ಒಟ್ಟಾರೆ ಮೊತ್ತ ರೂ.693.51 ಲಕ್ಷಗಳು. **7)** ಭದ್ರತಾ ಠೇವಣಿ ಮೊತ್ತ ರೂ.10.40 ಲಕ್ಷಗಳು

* ಟೆಂಡರ್ ಪ್ರಕ್ರಿಯೆಯನ್ನು ಅಂಗೀಕರಿಸುವ ಅಥವಾ ರದ್ದು ಪಡಿಸುವ ಅಧಿಕಾರವು ಮೈಸೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದತ್ತವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಗೆ ಖುದ್ದಾಗಿ ಭೇಟಿ ಮಾಡುವುದು ಅಥವಾ ದೂರವಾಣಿ ಸಂಖ್ಯೆ 0821–234461 ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/– ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು

DIPR/DDMYS/KSMCA/29/2023-24

Infosys
Navigate your next

ಇನ್‌ಫೋಸಿಸ್ ಲಿಮಿಟೆಡ್

ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560 100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

42ನೇ ವಾರ್ಷಿಕ ಸರ್ವಸದಸ್ಯರ ಸಭೆ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸುವ ಬಗ್ಗೆ, ದಾಖಲಾತಿಯ ದಿನಾಂಕ ಮತ್ತು ಅಂತಿಮ ಲಾಭಾಂಶದ ಮಾಹಿತಿ

1. ಕಂಪನಿಯ 42ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಡಿಯೋ ಕಾನ್ಫರೆನ್ಸ್ ಹಾಗೂ ಇತರೆ ದೃಶ್ಯಶ್ರಾವ್ಯ ಮಾಧ್ಯಮಗಳ ಮೂಲಕ ಬುಧವಾರ, ದಿನಾಂಕ ಜೂನ್ 28, 2023 ರಂದು ಸಂಜೆ ಭಾರತೀಯ ಕಾಲಮಾನ 4:00 ಗಂಟೆಗೆ ಸಾಮಾನ್ಯ ಸುತ್ತೋಲೆ ಸಂಖ್ಯೆ 10/2022, ಇತರ ಅನ್ವಯವಾಗುವ ಎಲ್ಲ ಕಾನೂನುಗಳು ಹಾಗೂ ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಸುತ್ತೋಲೆಗಳ ದಿನಾಂಕ ಡಿಸೆಂಬರ್ 28, 2022ರಲ್ಲಿ ಮತ್ತು SEBI ಹೊರಡಿಸಿರುವ ಸುತ್ತೋಲೆ ಸಂಖ್ಯೆ SEBI/HO/CFD/PoD-2/P/CIR/2023/4 ದಿನಾಂಕ ಜನವರಿ 05, 2023 (ಇನ್ನು ಮುಂದೆ "ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗುತ್ತದೆ) ಅನ್ವಯ ಸಭೆಯ ಸೂಚನೆಯಲ್ಲಿ ಹೇಳಲಾಗುವ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸಲಾಗುವುದು.
2. ಮೇಲಿನ ಸುತ್ತೋಲೆಗಳಿಗೆ ಅನುಸಾರವಾಗಿ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಗಳ ವಿದ್ಯುನ್ಮಾನ ಪ್ರತಿಗಳನ್ನು ಮತ್ತು 2022-23ರ ಹಣಕಾಸು ವರ್ಷದ ಸಂಯೋಜಿತ ವಾರ್ಷಿಕ ವರದಿಯನ್ನು ಕಂಪನಿ ಅಥವಾ ಡಿಪಾಸಿಟರಿ ಪಾರ್ಟಿಸಿಪೆಂಟ್‌ನಲ್ಲಿ ತಮ್ಮ ವಿದ್ಯುನ್ಮಾನ ಅಂಚೆಯನ್ನು (ಇ–ಮೇಲ್) ಯಾರು ನೋಂದಾಯಿಸಿದ್ದಾರೋ ಅಂತಹ ಷೇರುದಾರರ ವಿದ್ಯುನ್ಮಾನ ಅಂಚೆಗೆ ಕಳಿಸಲಾಗುವುದು. ಕಂಪನಿಯ ಷೇರುಗಳನ್ನು ಡೀಮೆಟೀರಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುದಾರರು ಅವರ ವಿದ್ಯುನ್ಮಾನ ಅಂಚೆ ಹಾಗೂ ದೂರವಾಣಿ ಸಂಖ್ಯೆಯನ್ನು ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳ ಮೂಲಕ ನೋಂದಾಯಿಸಲು ಹಾಗೂ ಭೌತಿಕರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಆ ವಿವರಗಳನ್ನು ಕಂಪನಿಯ ರಿಜಿಸ್ಟ್ರಾರ್ ಹಾಗೂ ಷೇರು ವರ್ಗಾವಣೆ ಏಜೆಂಟರಾದ ("ಆರ್‌ಟಿಎ") ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಇವರಿಗೆ ವಿದ್ಯುನ್ಮಾನ ಅಂಚೆ einward.ris@kfintech.com ಮೂಲಕ ತಿಳಿಸಲು ಕೋರಲಾಗಿದೆ. ಕಂಪನಿಯ 42ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ ಮತ್ತು 2022-23ನೇ ಸಾಲಿನ ಸಂಯೋಜಿತ ಹಣಕಾಸು ವರದಿಯನ್ನು ಕಂಪನಿಯ ಜಾಲತಾಣ www.infosys.com, ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣ ಮತ್ತು ಎನ್‌ಎಸ್‌ಡಿಎಲ್‌ನ ಜಾಲತಾಣವಾದ https://www.evoting.nsdl.com ಇಲ್ಲಿಯೂ ಒದಗಿಸಲಾಗುವುದು.
3. ತಮ್ಮ ವಿದ್ಯುನ್ಮಾನ ಅಂಚೆಯನ್ನು ನೋಂದಾಯಿಸದ ಷೇರುದಾರರಿಗೆ ಸರ್ವಸದಸ್ಯರ ಸಭೆಯ ನೋಟಿಸಿನಲ್ಲಿ ತಿಳಿಸಿರುವಂತೆ ಹೇಳಲಾಗುವ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುವ ಕುರಿತಾಗಿ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ಸದರಿ ಇ–ವೋಟಿಂಗ್ ಮಾಡಲು ಅವಕಾಶವಿರುತ್ತದೆ. ಕಂಪನಿಯ ಷೇರುಗಳನ್ನು ಡಿಮೆಟೀರಿಲೈಸ್ಡ್ ಮತ್ತು ಭೌತಿಕ ರೂಪದಲ್ಲಿ ಹೊಂದಿರುವ ಷೇರುದಾರರಿಗೆ ಮತ ಚಲಾಯಿಸುವ ವಿಧಾನವನ್ನೂ ಸಹ ಸರ್ವಸದಸ್ಯರ ಸಭೆಯ ಸೂಚನೆಗಳಲ್ಲಿ ಒದಗಿಸಲಾಗಿರುವುದು.
4. ದಿನಾಂಕ ಏಪ್ರಿಲ್ 13, 2023ರಂದು ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅಂತಿಮ ಲಾಭಾಂಶವನ್ನು ಪ್ರತಿ ಷೇರಿಗೆ ₹ 17.5 ಎಂದು ಶಿಫಾರಸು ಮಾಡಿದ್ದನ್ನು ಷೇರುದಾರರು ಗಮನಿಸಬಹುದಾಗಿದೆ. 2023ರ ಹಣಕಾಸು ವರ್ಷಕ್ಕೆ ಅಂತಿಮ ಲಾಭಾಂಶ ದಾಖಲಾತಿ ದಿನವು **ಜೂನ್ 2, 2023** ಆಗಿರುತ್ತದೆ. ಬರಲಿರುವ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಈ ಅಂತಿಮ ಲಾಭಾಂಶವು ಒಪ್ಪಿಗೆಯಾದ ನಂತರ **ಜುಲೈ 03, 2023**ರಂದು ವಿದ್ಯುನ್ಮಾನ ರೂಪದಲ್ಲಿ, ವಿವಿಧ ಆನ್ಲೈನ್ ಮಾರ್ಗಗಳಲ್ಲಿ ಯಾವ ಷೇರುದಾರರು ತಮ್ಮ ಬ್ಯಾಂಕ್ ವಿವರಗಳನ್ನು ಒದಗಿಸಿದ್ದಾರೋ ಅವರ ಖಾತೆಗಳಿಗೆ ವರ್ಗಾಯಿಸಲಾಗುವುದು. ಯಾವ ಷೇರುದಾರರು ತಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ಒದಗಿಸಿಲ್ಲವೋ ಅವರಿಗೆ ಲಾಭಾಂಶ ವಾರಂಟ್/ಡಿಮಾಂಡ್ ಡ್ರಾಫ್ಟ್/ಚೆಕ್ಕುಗಳನ್ನು ಅವರ ನೋಂದಾಯಿತ ವಿಳಾಸಕ್ಕೆ ಕಳಿಸಲಾಗುವುದು. ಲಾಭಾಂಶ ಸ್ವೀಕರಿಸುವುದು ತಡವಾಗುವುದನ್ನು ತಪ್ಪಿಸಲು ಷೇರುದಾರರು, ಲಾಭಾಂಶವನ್ನು ನೇರವಾಗಿ ತಮ್ಮ ಬ್ಯಾಂಕ್ ಖಾತೆಯಲ್ಲಿ ಪಡೆದುಕೊಳ್ಳಲು ತಮ್ಮ ಕೆವೈಸಿಯನ್ನು ತಮ್ಮ ಡಿಪಾಸಿಟರಿಗಳಲ್ಲಿ (ಎಲ್ಲಿ ಷೇರುಗಳನ್ನು ಡಿಮೆಟೀರಿಲೈಸ್ಡ್ ರೂಪದಲ್ಲಿ ಹೊಂದಿದ್ದಾರೋ ಅಲ್ಲಿ) ಮತ್ತು ಕಂಪನಿಯ ಆರ್‌ಟಿಎ ಬಳಿ (ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವವರು) ನೋಂದಾಯಿಸಲು ಕೋರಲಾಗಿದೆ.
5. ಯಾವ ಷೇರುದಾರರು ತಮ್ಮ ಷೇರುಗಳನ್ನು ಡಿಮೆಟೀರಿಲೈಸ್ಡ್ ಮಾಧ್ಯಮದಲ್ಲಿ ಹೊಂದಿದ್ದಾರೆಯೊ ಅವರು ತಮ್ಮ ವಿಳಾಸ ಹಾಗೂ ಬ್ಯಾಂಕ್ ಖಾತೆಯ ವಿವರಗಳ ಬದಲಾವಣೆಯಾದ ಸೂಚನೆಗಳನ್ನು ಆಯಾ ಡಿಪಾಸಿಟರಿ ಪಾರ್ಟಿಸಿಪೆಂಟ್‌ಗಳಿಗೆ ತಲುಪಿಸಲು ಕೋರಲಾಗಿದೆ. ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಷೇರುದಾರರು, ಲಾಭಾಂಶವನ್ನು ಸಕಾಲದಲ್ಲಿ ಪಡೆದುಕೊಳ್ಳಲು ಹಾಗೂ ಸುತ್ತೋಲೆಗಳಿಗೆ ಅನುಗುಣವಾಗಿ ವಿದ್ಯುನ್ಮಾನ ಠೇವಣಿ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳುವಂತೆ ಕೋರಲಾಗಿದೆ. ನಾವು ಷೇರುದಾರರನ್ನು ವಿದ್ಯುನ್ಮಾನ ಠೇವಣಿ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳಲು ಉತ್ತೇಜಿಸುತ್ತೇವೆ.
6. ತಮ್ಮ ಇಮೇಲ್ ವಿಳಾಸ/ಬ್ಯಾಂಕ್ ಖಾತೆಯ ಆದೇಶವನ್ನು ನೋಂದಾಯಿಸಲು ಬಯಸುವ ಷೇರುದಾರರು ಕೆಳಗಿನ ಸೂಚನೆಗಳನ್ನು ಅನುಸರಿಸಬಹುದು–

ಡಿಮೆಟಿರಿಯಲೈಸ್ಡ್ ಹೋಲ್ಡಿಂಗ್	ನಿಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ ಸಲಹೆ ನೀಡಿದ ಪ್ರಕ್ರಿಯೆಯ ಪ್ರಕಾರ, ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ವಿವರಗಳನ್ನು ನೋಂದಾಯಿಸಿ/ನವೀಕರಿಸಿ.
ಭೌತಿಕ ಹಿಡುವಳಿ	einward.ris@kfintech.com ನಲ್ಲಿ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಕಂಪನಿಯ ಆರ್‌ಟಿಎ ಗಳೊಂದಿಗೆ ನಿಗದಿತ ನಮೂನೆ ISR-1 ಮತ್ತು ಇತರ ಸಂಬಂಧಿತ ನಮೂನೆಗಳಲ್ಲಿ ವಿವರಗಳನ್ನು ನೋಂದಾಯಿಸಿ/ ನವೀಕರಿಸಿ. ಷೇರುದಾರರು ನಿಗದಿತ ನಮೂನೆಗಳನ್ನು ಕಂಪನಿಯ ಜಾಲತಾಣದಿಂದ https://www.infosys.com/investors/shareholder-services/investors-service.html ನಲ್ಲಿ ಡೌನ್‌ಲೋಡ್ ಮಾಡಬಹುದು. ಷೇರುದಾರರು ಕಂಪನಿಯ ಜಾಲತಾಣದಿಂದ https://www.infosys.com/investors/shareholder-services/faqs.html ನಲ್ಲಿ ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳನ್ನು (FAQ) ಉಲ್ಲೇಖಿಸಬಹುದು.

7. ಹಣಕಾಸು ಕಾಯಿದೆ 2020ರಂತೆ ತಿದ್ದುಪಡಿಯಾದ ಆದಾಯ ತೆರಿಗೆ ಕಾಯಿದೆ, 1961ರ (ಐಟಿ ಕಾಯಿದೆ) ಅನ್ವಯ ಎಪ್ರಿಲ್ 1, 2020ರ ನಂತರ ಕಂಪನಿ ನೀಡಿದ ಅಥವಾ ವಿತರಿಸಲಾದ ಲಾಭಾಂಶಕ್ಕೆ ಷೇರುದಾರರು ತೆರಿಗೆ ಪಾವತಿಸಬೇಕಾಗುತ್ತದೆ. ಆದ್ದರಿಂದ ಕಂಪನಿಯು ಅಂತಿಮ ಲಾಭಾಂಶವನ್ನು ಪಾವತಿಸುವಾಗ ಮೂಲದಲ್ಲಿ ತೆರಿಗೆಯನ್ನು ಕಡಿತಗೊಳಿಸಲಾಗುತ್ತದೆ. ಹೀಗೆ ಮೂಲದಲ್ಲಿ ತೆರಿಗೆಯನ್ನು ಹಿಡಿಯುವ ದರವನ್ನು ನಿಷ್ಕರ್ಷಿಸಲು ಅನುವಾಗುವಂತೆ ಕೆಳಗೆ ಸೂಚಿಸಲಾಗಿರುವ ಮೂಲದಾಖಲೆಗಳನ್ನು ಐಟಿ ಕಾಯಿದೆ ಅನುಸಾರ ಸಲ್ಲಿಸಲು ಕೋರಲಾಗಿದೆ.

ನಿವಾಸಿ ಷೇರುದಾರರಿಗೆ, ಆದಾಯ ತೆರಿಗೆ ಕಾಯಿದೆಯ 1961ರ ಪರಿಚ್ಛೇದ 194ರ ಅನ್ವಯ ಈ ಕೆಳಕಂಡಂತೆ ಕಡಿತಗೊಳಿಸಲಾಗುವುದು.

ಅಧಿಕೃತವಾದ ಪ್ಯಾನ್ ಸಂಖ್ಯೆ ಹೊಂದಿರುವ ಷೇರುದಾರರಿಗೆ	10%* ಅಥವಾ ಭಾರತ ಸರ್ಕಾರದ ಅಧಿಸೂಚನೆಯಂತೆ
ಅಧಿಕೃತವಾದ ಪ್ಯಾನ್/ಪ್ಯಾನ್ ಸಂಖ್ಯೆ ಹೊಂದಿರದ ಷೇರುದಾರರಿಗೆ	20% ಅಥವಾ ಭಾರತ ಸರ್ಕಾರದ ಅಧಿಸೂಚನೆಯಂತೆ

* ಹಣಕಾಸು ಕಾಯಿದೆ, 2021ರ ಪ್ರಕಾರ, ಸೆಕ್ಷನ್206AB ಅನ್ನು ಜುಲೈ 1, 2021 ರಿಂದ ಜಾರಿಗೆ ತರಲಾಗಿದೆ. ಮೇಲಿನ ವಿಭಾಗದ ನಿಬಂಧನೆಗಳ ಅಡಿಯಲ್ಲಿ ವ್ಯಾಖ್ಯಾನಿಸಿದಂತೆ 'ನಿರ್ದಿಷ್ಟ ವ್ಯಕ್ತಿ' ಎಂದು ವರ್ಗೀಕರಿಸಲಾದ ಷೇರುದಾರರಿಗೆ ಮಾಡಿದ ಪಾವತಿಗೆ ಹೆಚ್ಚಿನ ತೆರಿಗೆ ದರ (ನಿರ್ದಿಷ್ಟಪಡಿಸಿದ ದರಕ್ಕಿಂತ ಎರಡು ಪಟ್ಟು) ಅನ್ವಯಿಸುತ್ತದೆ.

* ಆದಾಯ ತೆರಿಗೆ ಕಾಯಿದೆ ಪರಿಚ್ಛೇದ 139ಎಎ ಅನ್ವಯ ಪ್ಯಾನ್ ಸಂಖ್ಯೆ ಹೊಂದಿರುವ ಹಾಗೂ ಆಧಾರ್ ಹೊಂದಲು ಅರ್ಹನಾಗಿರುವ ವ್ಯಕ್ತಿಯು ತನ್ನ ಪ್ಯಾನ್ ಅನ್ನು ಆಧಾರ್‌ನೊಂದಿಗೆ ಜೋಡಿಸಬೇಕಾಗಿರುತ್ತದೆ. ಹಾಗೆ ಮಾಡದ ಸಂದರ್ಭಗಳಲ್ಲಿ ನೀಡಲಾದ ಪ್ಯಾನ್ ಅನರ್ಹ ಇಲ್ಲವೇ ನಿಷ್ಕ್ರಿಯ ಎಂದಾಗುತ್ತದೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಕಾಯಿದೆಯಲ್ಲಿ ಹೇಳಲಾದ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಮತ್ತು ಆದಾಯ ತೆರಿಗೆ ಕಾಯಿದೆಯಲ್ಲಿ ಹೇಳಿರುವಂತೆ ತೆರಿಗೆಯನ್ನು ಹೆಚ್ಚುವರಿ ದರದಲ್ಲಿ ಕಡಿತಗೊಳಿಸಲಾಗುತ್ತದೆ.

ಆದಾಗ್ಯೂ, ಲಾಭಾಂಶ ಪಾವತಿಸಬೇಕಾದ ವ್ಯಕ್ತಿಗೆ ಆರ್ಥಿಕ ವರ್ಷ 2023-24ರಲ್ಲಿ ಲಾಭಾಂಶವು ₹ 5,000 ಮೀರದಿದ್ದಲ್ಲಿ ಹಾಗೂ ಷೇರುದಾರರು ನಮೂನೆ 15ಜಿ/ನಮೂನೆ 15ಎಚ್ (60ವರ್ಷ ವಯಸ್ಸನ್ನು ಮೀರಿದ ವ್ಯಕ್ತಿಗೆ ಅನ್ವಯಿಸುವಂತೆ) ಒದಗಿಸಿದವರಿಗೆ ಕಾಯಿದೆಯ ನಿಬಂಧನೆಗಳಿಗೆ ಒಳಪಟ್ಟಂತೆ ಯಾವುದೇ ತೆರಿಗೆಯನ್ನು ಕಡಿತಗೊಳಿಸಲಾಗುವುದಿಲ್ಲ. ನಿವಾಸಿ ಷೇರುದಾರರು ಐಟಿ ಕಾಯಿದೆಯಲ್ಲಿ ಹೇಳಲಾದ ಇತರೆ ಯಾವುದೇ ದಸ್ತಾವೇಜನ್ನು ಒದಗಿಸಿ ಕಡಿಮೆ ದರದ ತೆರಿಗೆ ಕಡಿತ ಅಥವಾ ಪೂರ್ಣ ತೆರಿಗೆ ಕಡಿತವನ್ನು ಪಡೆಯಬಹುದಾಗಿರುತ್ತದೆ. ನಮೂನೆ 15ಜಿ/ನಮೂನೆ 15ಎಚ್ ಅಥವಾ ಮೇಲೆ ಹೇಳಿದ ಇತರೆ ದಸ್ತಾವೇಜನ್ನು ಒದಗಿಸುವ ಷೇರುದಾರಿಗೆ ಪ್ಯಾನ್ ಸಂಖ್ಯೆ ಒದಗಿಸುವುದು ಕಡ್ಡಾಯವಾಗಿರುತ್ತದೆ.

ಅನಿವಾಸಿ ಷೇರುದಾರರಿಗೆ, ಪರಿಚ್ಛೇದ 195 ಹಾಗೂ ಐಟಿ ಕಾಯಿದೆಯ ಅನ್ವಯವಾಗುವ ಇತರೆ ಪರಿಚ್ಛೇದಗಳ ಅನುಸಾರ ತೆರಿಗೆಗಳನ್ನು, ಚಾಲ್ತಿಯಲ್ಲಿರುವ ದರದಲ್ಲಿ ತಡೆಹಿಡಿಯಬೇಕಾಗಿರುತ್ತದೆ. ಈ ತೆರಿಗೆಯನ್ನು ತಡೆಹಿಡಿಯುವ ದರವು ಶೇ 20** (ಜೊತೆಗೆ ಅನ್ವಯವಾಗುವ ಸರ್‌ಚಾರ್ಜ್ ಮತ್ತು ಸೆಸ್) ಅಥವಾ ಲಾಭಾಂಶದ ಮೊತ್ತದ ಮೇಲೆ ಭಾರತ ಸರ್ಕಾರ ಸೂಚಿಸಿರುವಂತೆ ಆಗಿರುತ್ತದೆ. ಆದರೂ, ಐಟಿ ಕಾಯಿದೆಯ ಪರಿಚ್ಛೇದ 90ರ ಪ್ರಕಾರ, ಅನಿವಾಸಿ ಷೇರುದಾರರು, ಬಹುಪಕ್ಷೀಯ ಸಾಧನದೊಂದಿಗೆ (ಎಂಎಲ್‌ಐ) ಪರಿಗಣಿಸಲಾದ ದ್ವಿತೆರಿಗೆ ಪ್ರತಿಬಂಧಕ ಒಪ್ಪಂದವನ್ನು (ಡಿಟಿಎಎ) ಆಯ್ಕೆ ಮಾಡಿಕೊಂಡು ಭಾರತದ ಮತ್ತು ಷೇರುದಾರರು ವಾಸವಾಗಿರುವ ದೇಶದ ತೆರಿಗೆ ಇವುಗಳಲ್ಲಿ ಅವರಿಗೆ ಯಾವುದು ಹೆಚ್ಚು ಲಾಭಕರವೋ ಅದನ್ನು ಅನುಸರಿಸಲು ಅವಕಾಶವಿದೆ. ಇದಕ್ಕಾಗಿ, ಅಂದರೆ, ಡಿಟಿಎಎ ಸೌಲಭ್ಯವನ್ನು ಬಳಸಿಕೊಳ್ಳಲು, ಅನಿವಾಸಿ ಷೇರುದಾರರು ಈ ಕೆಳಕಂಡ ವಿವರಗಳನ್ನು ನೀಡಬೇಕಾಗುತ್ತದೆ:

- ಭಾರತದ ಆದಾಯ ತೆರಿಗೆ ಇಲಾಖೆಯು ನೀಡಿದ, ಷೇರುದಾರರಿಂದ ಅನುಪ್ರಮಾಣಿತ ಪ್ಯಾನ್ ಕಾರ್ಡಿನ ಪ್ರತಿ ಅಥವಾ ಆದಾಯ ತೆರಿಗೆ ನಿಯಮಾವಳಿ 1962ರ ನಿಯಮ 37ಬಿಸಿರ ಅನ್ವಯ ವಿವರಗಳು.
- ಆರ್ಥಿಕ ವರ್ಷ 2023-24ಕ್ಕೆ ಅನುಸಾರವಾದ ವಾಸವಿರುವ ದೇಶದ ಕಂದಾಯ/ತೆರಿಗೆ ಅಧಿಕಾರಿಗಳು ನೀಡಿರುವ, ಷೇರುದಾರರಿಂದ ಅನುಪ್ರಮಾಣಿತ ಟ್ಯಾಕ್ಸ್ ರೆಸಿಡೆನ್ಸಿ ಪ್ರಮಾಣಪತ್ರದ ಪ್ರತಿ.
- ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸ್ ದಿನಾಂಕ ಜುಲೈ 16, 2022 ರಂದು ಹೊರಡಿಸಿದ ಅಧಿಸೂಚನೆ ಸಂಖ್ಯೆ 03/2022 ಅನ್ವಯ ನೀಡಲಾದ ವಿದ್ಯುನ್ಮಾನ ನಮೂನೆ 10ಎಫ್ [ಅಧಿಸೂಚನೆಯನ್ನು notification-no-3-2022-systems.pdf (incometaxindia.gov.in)ಯಲ್ಲಿ ನೋಡಬಹುದು. ಅನ್ನು ವಿದ್ಯುನ್ಮಾನ ರೂಪದಲ್ಲಿ ಇ–ಫೈಲಿಂಗ್ ಜಾಲತಾಣವಾದ https://www.incometax.gov.in/iec/foportal ಇಂದ ಪಡೆದುಕೊಳ್ಳಬಹುದಾಗಿರುತ್ತದೆ.
- ಅನಿವಾಸಿಯು ತನಗೆ ಅನ್ವಯವಾಗುವ ತೆರಿಗೆ ಒಪ್ಪಂದದ ಅನುಸಾರವಿರುವ ಭಾರತದಲ್ಲಿ ಶಾಶ್ವತವಾಗಿ ನೆಲೆಯೂರಿರದ ಸ್ವಘೋಷಣಾ ಹೇಳಿಕೆ.
- ಅನಿವಾಸಿ ಷೇರುದಾರನಿಂದ ಲಾಭದಾಯಕ ಮಾಲಿಕತ್ವದ ಸ್ವಘೋಷಣೆ.
- ಐಟಿ ಕಾಯಿದೆಯಲ್ಲಿ ಕಡಿಮೆ ತೆರಿಗೆ ತಡೆಹಿಡಿಯುವಂತೆ ಇರುವ ಕಾನೂನಿನಲ್ಲಿ ಹೇಳಲಾದ ಯಾವುದೇ ಇತರ ದಸ್ತಾವೇಜು, ಅನ್ವಯವಾಗುವುದಾದಲ್ಲಿ, ಸ್ವಅನುಪ್ರಮಾಣಿತ ಪ್ರತಿಯನ್ನು ಒದಗಿಸತಕ್ಕದ್ದು.

ವಿದೇಶಿ ಸಾಂಸ್ಥಿಕ ಅಥವಾ ಪೋರ್ಟ್‌ಫೋಲಿಯೋ ವಿನಿಯೋಜಕರಾಗಿದ್ದಲ್ಲಿ ತೆರಿಗೆಯು ಆದಾಯ ತೆರಿಗೆ ಕಾಯಿದೆಯ ಪರಿಚ್ಛೇದ 196ಡಿ ಅನ್ವಯ ಶೇ 20**ರಂತೆ (ಅನ್ವಯವಾಗುವ ಸೆಸ್ ಹಾಗೂ ಸರ್‌ಚಾರ್ಜುಗಳೊಂದಿಗೆ) ಅಥವಾ ಎಂಎಲ್‌ಐ ಪರಿಷ್ಕೃತವಾದ ಡಿಟಿಎಎನಲ್ಲಿ ಒದಗಿಸಲಾದಂತೆ ಯಾವುದು ಹೆಚ್ಚು ಪ್ರಯೋಜನಕಾರಿಯೊ ಅದನ್ನು ಮೇಲ್ಕಾಣಿಸಿದ ದಸ್ತಾವೇಜುಗಳನ್ನು ಸಲ್ಲಿಸಿದ್ದಲ್ಲಿ ಕಡಿತಗೊಳಿಸಲಾಗುವುದು.

** ಹಣಕಾಸು ಕಾಯಿದೆ, 2021 ರ ಪ್ರಕಾರ, ಸೆಕ್ಷನ್ 206AB ಅನ್ನು ಜುಲೈ 1, 2021 ರಿಂದ ಜಾರಿಗೆ ತರಲಾಗಿದೆ, ಇದರಲ್ಲಿ 'ನಿರ್ದಿಷ್ಟ ವ್ಯಕ್ತಿ' ಎಂದು ವರ್ಗೀಕರಿಸಲಾದ ಷೇರುದಾರರಿಗೆ ಮಾಡಿದ ಪಾವತಿಗೆ ಹೆಚ್ಚಿನ ತೆರಿಗೆ (ನಿರ್ದಿಷ್ಟಪಡಿಸಿದ ದರಕ್ಕಿಂತ ಎರಡು ಪಟ್ಟು) ಅನ್ವಯಿಸುತ್ತದೆ. ಇದನ್ನು ಮೇಲಿನ ವಿಭಾಗದ ನಿಬಂಧನೆಗಳ ಅಡಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಆದಾಗ್ಯೂ, ಅನಿವಾಸಿ ಷೇರುದಾರರು ಅಥವಾ ಅನಿವಾಸಿ ಎಫ್‌ಪಿಐ/ಎಫ್‌ಐಐ, ಅಂತಹ ಅನಿವಾಸಿಗಳು ಭಾರತದಲ್ಲಿ ಖಾಯಂ ಸ್ಥಾಪನೆ ಆಗಿರದಿದ್ದರೆ, ಸೆಕ್ಷನ್ 206 ಎಬಿಯಲ್ಲಿ ಉಲ್ಲೇಖಿಸಿರುವ ಹೆಚ್ಚಿನ ತೆರಿಗೆ ದರ ಅನ್ವಯಿಸುವುದಿಲ್ಲ.

ಮೇಲ್ಕಾಣಿಸಿದ ದಸ್ತಾವೇಜುಗಳನ್ನು ಷೇರುದಾರರ ಪೋರ್ಟಲ್ https://www.infosys.com/investors/shareholder-services/dividend-tax.html ಗೆ ಜೂನ್ 9, 2023 ದಿನಾಂಕದ ಒಳಗೆ ಸಲ್ಲಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಹೆಚ್ಚಿನ ಸೂಚನೆಗಳು ಮತ್ತು ಮಾಹಿತಿಗಾಗಿ https://www.infosys.com/investors/shareholder-services/dividend-tax.html ಈ ಜಾಲತಾಣವನ್ನು ಸಂದರ್ಶಿಸಲು ಕೋರಲಾಗಿದೆ. ದಿನಾಂಕ ಜೂನ್ 9, 2023ರ ನಂತರ ತೆರಿಗೆ ತಡೆಹಿಡಿಯುವ ವಿಷಯವಾಗಿ ಯಾವುದೇ ಸಂವಹನ/ಸಂದೇಶಗಳನ್ನು ಸ್ವೀಕರಿಸಲಾಗುವುದಿಲ್ಲ.

ಈ ವಿಷಯದ ಕುರಿತು ಯಾವುದೇ ಸ್ಪಷ್ಟೀಕರಣಕ್ಕಾಗಿ ಷೇರುದಾರರು dividend.tax@infosys.com ಗೆ ಬರೆಯಬಹುದು.

ತೆರಿಗೆ ಕಡಿತಗೊಳಿಸಲಾದ ಪ್ರಮಾಣಪತ್ರಗಳು, ಯಾವುದಾದರೂ ಇದ್ದರೆ, ಷೇರುದಾರರ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು. ಷೇರುದಾರರು ತಮ್ಮ ತೆರಿಗೆ ಕ್ರೆಡಿಟ್ ಅನ್ನು https://www.incometax.gov.in/iec/foportal ನಲ್ಲಿ ಇ–ಫೈಲಿಂಗ್ ಖಾತೆಯಿಂದ ಫಾರ್ಮ್ 26AS ನಲ್ಲಿ ಅಥವಾ https://www.tdscpc.gov ನಲ್ಲಿ "View Your Tax Credit" ಪರಿಶೀಲಿಸಬಹುದು.

8. 42ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಯನ್ನು ಷೇರುದಾರರಿಗೆ ಅವರ ನೋಂದಾಯಿತ ವಿದ್ಯುನ್ಮಾನ ಅಂಚೆಗೆ ಅನ್ವಯವಾಗುವ ಕಾನೂನುಗಳ ಅನುಸಾರವಾಗಿ ಕಳಿಸಲಾಗುವುದು.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್. ಮಣಿಕಂಠ
ಕಂಪನಿ ಕಾರ್ಯದರ್ಶಿ

ಬೆಂಗಳೂರು, ಭಾರತ
ಮೇ 30, 2023

THE FEDERAL BANK LIMITED
Regd. Office: Aluva, Kerala.

ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625 Web: www.federalbank.co.in

BGRR/Online Auction/2023-24 — **PUBLIC NOTICE GOLD AUCTION** — 30/05/2023

Notice is hereby given to the public in general and the account holders in particular that e-auction of the pledged gold ornaments in the below mentioned account/s will be conducted by Federal Bank Ltd, on 15.06.2023 through online portal, https://gold.samil.in Interested buyers may log on to the auction portal or contact the Bank at contact@federalbank.co.in for further information. In case e-auction is not materialised for any reason on the date mentioned above, with respect any or all items of the pledged ornaments, Bank shall be conducting private sale of the items on any subsequent date/s without further notice.

Br. Banashankari :- 17816100349018,17816800009029,17816800012619,17816800018319,17816100354554,17816800009219,17816800015836,17816800018947,17816100356575,17816800010977,17816800016917,17816800025991,17816100357631,17816800011637,17816800017592,17816800029126,17816800032393,17816800036162. **Br. Bng/Sadashivanagar:-** 21986100041545,21986800003696,21986100042113,21986800005154,21986800002862,21986800005782. **Br. Rajajinagar :-** 13346800027023,13346800027429,13346100671827,13346800042782,13346800023204,13346800023345,13346800028369,13346800027783,13346100672072,13346800035422,13346800046783,13346800020127,13346800024996,13346100672643,13346800042832,13346800034177,13346100672163,13346800015622,13346800024939,13346100672437,13346800047609,13346800046072. **Br. Bangalore/Jayanagar :-** 13876800001636. **Br. Bangalore/Banaswadi:-** 14716100279749,14716100289219,14716800011244,14716800017639,14716100281265,14716100289599,14716800011350,14716800020401,14716100283261,14716800009966,14716800014123,14716800022241,14716100283683,14716800009974,14716800015344,14716800022795,14716100285951,14716800011145,14716800016078,14716800023249,14716800023769,14716800029618,14716800039179,14716800025343,14716800032026,14716800041209. **Br. Bangalore/Indiranagar :-** 15356100074854,15356800001454,15356800002437,15356800003138. **Br. Bangalore/R T Nagar :-** 14726100212913,14726100215411,14726800015673,14726800018297,14726100213226,14726100215445,14726800016226,14726800019121,14726100213242,14726800009692,14726800016358,14726800019360,14726100213606,14726800009791,14726800016820,14726800019782,14726100213622,14726800009908,14726800017216,14726800019816,14726100213721,14726800010294,14726800017364,14726800020889,14726100214232,14726800014189,14726800017760,14726800024220,14726100214273,14726800014833,14726800018008,14726800027736,14726100215270,14726800015426,14726800018214,14726800027934,14726800028049,14726800028114,14726800029468. **Br. Bangalore/Gandhi Nagar :-** 11896800000422. **Br. Bangalore/Basavanagudi :-** 13186800004881,13186800005771,13186800005664,13186800005912,13186800005672. **Br. Bangalore/HSR Layout:-** 17696100261003,17696800012979,17696800018083,17696800024883,17696100262076,17696800013423,17696800018422,17696800025716,17696100262324,17696800013712,17696800019347,17696800026425,17696100263140,17696800014637,17696800019511,17696800026722,17696100264577,17696800015113,17696800019701,17696800026847,17696100264643,17696800015121,17696800022580,17696800032308,17696100265129,17696800016095,17696800024636,17696800032712,17696800034916,17696800036333,17696800037687,17696800045722. **Br. Bangalore/Jalahalli :-** 15826100583534,15826100597104,15826800009764,15826100589093,15826100598474,15826800015076,15826100596890,15826800018575,15826800015100,15826800025075,15826800016108. **Br. Bangalore/J P Nagar :-** 18276100325097,18276800021079,18276100325477,18276800022440,18276100326194,18276800023778,18276100326210,18276800024081,18276100327069,18276800024198,18276100327804,18276800024222,18276100327929,18276800024255,18276800026409,18276800038792,18276100329255,18276800024388,18276800026425,18276800039030,18276800020261,18276800024669,18276800029841,18276800039527,18276800021046,18276800024677,18276800031516,18276800039733,18276800032704,18276800039899,18276800036408,18276800041259,18276800036895,18276800047389,18276800037141,18276800049575,18276800037687,18276800052868,18276800038271,18276800056927. **Br. Bangalore/Krishnarajapuram :-** 15616100169180,15616800005064,15616800005247,15616800009769. **Br. Bangalore/Marathahalli :-** 14546100134952,14546800002376,14546800002418,14546800002673. **Br. Bangalore/Thirupalya :-** 21126800000430,21126800002089,21126800002071. **Br. Bangalore/Vignannagar :-** 16296800001980. **Br. Bangalore/Vijayanagar :-** 16436100354636,16436100356151,16436800017400,16436100354750,16436100357050,16436800017467,16436100354909,16436100357332,16436800021667,16436100355062,16436100357712,16436800022715,16436100355682,16436100357837,16436800028209,16436100355849,16436100358215,16436800030965,16436800045039,16436800033811,16436800033829,16436800034223,16436800034256,16436800034371,16436800036855. **Br. Bangalore/Wipro Park Koramangala :-** 21996100037880,21996800007043,21996800015632,21996100037948,21996800007357,21996800016366,21996100038268,21996800011300,21996800016473,21996800004735,21996800011631,21996800016630,21996800007027,21996800012233,21996800016879. **Br. Bangalore/Visweswaraya layout :-** 21676800001119. **Br. Dharwad :-** 16386800000304,16386800000312. **Br. Mysore :-** 12816800007580,12816800008893,12816800008414,12816800009024,12816800008869,12816800010543. **Br. Mysore/Jayalakshmipuram :-** 16896800005863,16896800009899,16896800006911,16896800010137,16896800008727,16896800010905,16896800009634. **Br. Gulbarga :-** 16046100062285,16046100062350,16046800001310. **Br. Vijayapura:-** 23266100000298,23266100000793,23266100000678,23266100000827,23266100000736,23266800001091,23266100000751,23266800001513,23266100000777. **Br. Hubli:-** 13386800003574,13386800003947. **Br. Hassan :-** 13546800005362,13546800006584,13546800005537,13546800007772,13546800005594,13546800007988,13546800006139,13546800008069. **Br. Mangalore Main Branch:-** 11756800003414,11756800003547,11756800003752,11756800004388. **Br. Udupi :-** 15746100010249,15746800000102,15746800000136,15746800000805,15746800000078,15746800000110,15746800000482,15746800000862,15746800000086,15746800000128,15746800000508.

Bangalore 30-05-2023 — For The Federal Bank Ltd — Senior Vice President & Zonal Head

ಐದನೇ ಬಾರಿ ಐಪಿಎಲ್ ಚಾಂಪಿಯನ್ ಆದ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಐದನೇ ಬಾರಿ ಐಪಿಎಲ್ ಕಿರೀಟ ಧರಿಸಿದ ಚೆನ್ನೈ ಸೂಪರ್ ಕಿಂಗ್ಸ್

ರವೀಂದ್ರ ಬೌಂಡರಿ, ಧೋನಿ ಧ್ಯಾನ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಸೋಮವಾರ ತಡರಾತ್ರಿ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಫೈನಲ್ ಪಂದ್ಯದ ಕೊನೆಯ ಎರಡು ಎಸೆತಗಳು ನೆನಪಾದಾಗಲೆಲ್ಲ ಮಹೇಂದ್ರಸಿಂಗ್ ಧೋನಿಯವರ ಧ್ಯಾನಸ್ಥ ಭಂಗಿ ಸ್ಮೃತಿ ಪಟಲದಲ್ಲಿ ಮೂಡುತ್ತದೆ.

ಆ ಕೊನೆ ಎರಡು ಎಸೆತಗಳಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಗೆಲುವಿಗೆ 10 ರನ್‌ಗಳ ಅಗತ್ಯವಿತ್ತು. ಗುಜರಾತ್ ಟೈಟನ್ಸ್ ತಂಡಗಳ ಅಭಿಮಾನಿಗಳು ಮತ್ತು ಆಟಗಾರರು ವಿಜಯೋತ್ಸವಕ್ಕೆ ಸಜ್ಜಾಗಿದ್ದರು. ಆದರೆ, ಹಳದಿ ಬಣ್ಣದ ಪೋಷಾಕು ತೊಟ್ಟು ಕುಳಿತಿದ್ದ ಸಾವಿರಾರು ಜನರಲ್ಲಿ ದುಗುಡುವಿತ್ತು. ಅದರಲ್ಲಿ ಕೆಲವರು ಕೈಮುಗಿದು ಪ್ರಾರ್ಥನೆಯಲ್ಲಿ ತೊಡಗಿದ್ದರೆ, ಇನ್ನಷ್ಟು ಜನರ ಕಂಗಳಲ್ಲಿ ನೀರಾಡುತ್ತಿತ್ತು. ಅವರೆಲ್ಲರೂ ಚೆನ್ನೈ ಸೂಪರ್ ಕಿಂಗ್ಸ್ ಜಯಕ್ಕಾಗಿ ಪ್ರಾರ್ಥಿಸುತ್ತಿದ್ದರು. ಅವರ ನೆಚ್ಚಿನ ಥಾಲಾ ಧೋನಿ ಕೂಡ ಡಗ್‌ಔಟ್‌ನಲ್ಲಿ ಕಣ್ಮುಚ್ಚಿ ಧ್ಯಾನಸ್ಥರಾಗಿ ಕುಳಿತುಬಿಟ್ಟಿದ್ದರು.

ಇತ್ತ ಮೋಹಿತ್ ಶರ್ಮಾ ಹಾಕಿದ ಎರಡು ಎಸೆತಗಳಲ್ಲಿ ಜಡೇಜ ಒಂದು ಸಿಕ್ಸರ್ ಮತ್ತು ಒಂದು ಬೌಂಡರಿ ಬಾರಿಸಿದರು. ಗೆದ್ದ ಸಂಭ್ರಮದಲ್ಲಿ ಡಗ್‌ಔಟ್‌ನಲ್ಲಿದ್ದ ಆಟಗಾರರೆಲ್ಲರೂ ಮೈದಾನಕ್ಕೆ ಧಾವಿಸಿದರು. ಜಡೇಜ ತಮ್ಮ ತಂಡದತ್ತ ಓಡಿದರು. ಇಷ್ಟೆಲ್ಲ ಆದರೂ ಧೋನಿ ಕಣ್ಣು ಬಿಟ್ಟಿರಲಿಲ್ಲ. ನಂತರ ಸಹ ಆಟಗಾರರು ಧೋನಿಯ ಬಳಿ ಓಡಿ ಗೆಲುವಿನ ಕೇಕೆ ಹಾಕಿದರು. ಕಣ್ಣು ಬಿಟ್ಟು ಮುಗುಳ್ನಗುತ್ತ ಮೈದಾನಕ್ಕೆ ಹೋದ ಧೋನಿ ತಮ್ಮ 'ಆಪ್ತಮಿತ್ರ' ಜಡೇಜ ಅವರನ್ನು ಆಲಂಗಿಸಿ ಎತ್ತಿಕೊಂಡು ಸಂಭ್ರಮಿಸಿದರು. ಧೋನಿ ಕಣ್ಣಂಚಿನಲ್ಲಿಯೂ ಆನಂದಭಾಷ್ಪ ಇತ್ತು.

ಚೆನ್ನೈ ಇನಿಂಗ್ಸ್‌ನ 13ನೇ ಓವರ್‌ನಲ್ಲಿ ಅಂಬಟಿ ರಾಯುಡು ಔಟಾದಾಗ ಆರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಧೋನಿ ಮೊದಲ ಎಸೆತದಲ್ಲಿಯೇ ಡೇವಿಡ್ ಮಿಲ್ಲರ್‌ಗೆ ಸುಲಭ ಕ್ಯಾಚಿತ್ತು ಮರಳಿದ್ದರು. ಆಗಿನಿಂದಲೂ ಬೇಸರದಲ್ಲಿದ್ದರು. ಆದರೆ ಜಡೇಜ ಮತ್ತು ಶಿವಂ ದುಬೆ ತಂಡವನ್ನು ಗೆಲುವಿನ ದಡ ಸೇರಿಸಿದರು. ಮಧ್ಯರಾತ್ರಿ 1.36ಕ್ಕೆ ಪಂದ್ಯ ಮುಕ್ತಾಯವಾಯಿತು. ಚೆನ್ನೈ ಅಭಿಮಾನಿಗಳು ಬೆಳಿಗ್ಗೆಯವರೆಗೂ ಸಂಭ್ರಮ ಆಚರಿಸಿದರು. ಇತ್ತ ನಾಯಕ ಧೋನಿ ತಾವು ಸ್ವೀಕರಿಸಿದ ಟ್ರೋಫಿಯನ್ನು ನಸುನಗೆಯೊಂದಿಗೆ ತಮ್ಮ ತಂಡದತ್ತ ತೆರಳಿ ಸಹ ಆಟಗಾರರ ಕೈಗಿತ್ತು ಬದಿಗೆ ಸರಿದು ನಿಂತರು.

ಭಾನುವಾರವೇ ನಡೆಯಬೇಕಿದ್ದ ಪಂದ್ಯವು ಮಳೆಯಿಂದಾಗಿ ಮೀಸಲು ದಿನವಾದ ಸೋಮವಾರಕ್ಕೆ ಮುಂದೂಡಿಕೆಯಾಗಿತ್ತು. ಟಾಸ್ ಗೆದ್ದ ಗುಜರಾತ್ ಟೈಟನ್ಸ್ ತಂಡವು ಸಾಯಿ ಸುದರ್ಶನ್ (96 ರನ್) ಅವರ ಅಬ್ಬರದ ಆಟದಿಂದಾಗಿ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 214 ರನ್ ಗಳಿಸಿತು. ಬೃಹತ್ ಗುರಿ ಬೆನ್ನಟ್ಟಿದ ಚೆನ್ನೈ ತಂಡದ ಇನಿಂಗ್ಸ್‌ನಲ್ಲಿ ಮೊದಲ ಓವರ್ ಸಂಪೂರ್ಣವಾಗುವ ಮುನ್ನವೇ ಮಳೆ ಸುರಿಯಿತು. ಇದರಿಂದಾಗಿ ಕ್ರೀಡಾಂಗಣದಲ್ಲಿ ನೀರು ಹರಿಯಿತು. ಮೈದಾನ ಒಣಗಿ ಪಂದ್ಯವನ್ನು ತಡರಾತ್ರಿ 12.10ಕ್ಕೆ ಆರಂಭಿಸಲಾಯಿತು. ಡಕ್ವರ್ಥ್ ಲೂಯಿಸ್ ನಿಯಮದನ್ವಯ ಚೆನ್ನೈ ಗೆಲುವಿಗೆ 15 ಓವರ್‌ಗಳಲ್ಲಿ 171 ರನ್‌ಗಳ ಪರಿಷ್ಕೃತ ಗುರಿಯನ್ನು ನಿಗದಿಪಡಿಸಲಾಯಿತು. ರೋಚಕ ಆಟದಲ್ಲಿ ಚೆನ್ನೈ ತಂಡವು 5 ವಿಕೆಟ್‌ಗಳಿಂದ (ಡಕ್ವರ್ಥ್ ಲೂಯಿಸ್ ನಿಯಮ) ಜಯಭೇರಿ ಬಾರಿಸಿತು. ಐದನೇ ಬಾರಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಮುಂದಿನ ಬಾರಿ ಆಡುವರೇ ಧೋನಿ?

ಅಹಮದಾಬಾದ್ (ಪಿಟಿಐ): ಮಹೇಂದ್ರಸಿಂಗ್ ಧೋನಿ ಅವರು ಈ ಬಾರಿಯ ಐಪಿಎಲ್ ನಂತರ ನಿವೃತ್ತಿ ಘೋಷಿಸುತ್ತಾರೆ ಎನ್ನಲಾಗಿತ್ತು. ಆದರೆ ತಮ್ಮ ದೈಹಿಕ ಸಾಮರ್ಥ್ಯವು ಉತ್ತಮವಾಗಿದ್ದರೆ ಮುಂದಿನ ಆವೃತ್ತಿಯ ಐಪಿಎಲ್‌ನಲ್ಲಿಯೂ ಕಣಕ್ಕಿಳಿಯುವ ವಿಶ್ವಾಸದಲ್ಲಿ ಧೋನಿ ಇದ್ದಾರೆ.

'ನಿವೃತ್ತಿ ಘೋಷಿಸಲು ಸದ್ಯ ಉತ್ತಮ ಸಮಯವಾಗಿದೆ. ಆದರೆ ಸಾವಿರಾರು ಜನರು ನನ್ನ ಮೇಲೆ ಪ್ರೀತಿಯ ಮಳೆಗರೆದಿದ್ದಾರೆ. ಆ ಪ್ರೀತಿಯೊಂದಿಗೆ ವಿದಾಯ ಹೇಳಿ ನಡೆಯುವುದು ಸುಲಭ. ಆದರೆ, ಮುಂದಿನ ಒಂಬತ್ತು ತಿಂಗಳು ಕಠಿಣ ಪರಿಶ್ರಮಪಟ್ಟು ಅಭ್ಯಾಸ ಮಾಡಿ ಮತ್ತೊಂದು ಐಪಿಎಲ್ ಆಡುವುದು ಕಠಿಣ' ಎಂದು ಪಂದ್ಯದ ನಂತರ ಮಾಧ್ಯಮದವರ ಮುಂದೆ ಧೋನಿ ಹೇಳಿದರು.

ಈ ಬಾರಿಯ ಐಪಿಎಲ್ ಧೋನಿಗೆ ಕೊನೆಯದ್ದು ಎಂದು ಬಿಂಬಿತವಾಗಿತ್ತು. ಆದ್ದರಿಂದ ಚೆನ್ನೈ ತಂಡವು ಪಂದ್ಯಗಳನ್ನು ಆಡಿದ ಎಲ್ಲ ಕ್ರೀಡಾಂಗಣಗಳಿಗೂ ಧೋನಿಯ ಅಭಿಮಾನಿಗಳ ದಂಡು ಧಾವಿಸಿತ್ತು. ಎಲ್ಲ ಊರಿನ ಕ್ರೀಡಾಂಗಣದ ಗ್ಯಾಲರಿಗಳು ಅರ್ಧಕ್ಕರ್ಧ ಹಳದಿಮಯವಾಗಿತ್ತು.

ಐಪಿಎಲ್ 2023 ಅಂಕಿ ಅಂಶ

890	ಗುಜರಾತ್ ತಂಡದ ಶುಭಮನ್ ಗಳಿಸಿದ ರನ್‌ಗಳು
28	ಗುಜರಾತ್ ಟೈಟನ್ಸ್ ತಂಡದ ಶಮಿ ಗಳಿಸಿದ ವಿಕೆಟ್‌ಗಳು
1,124	ಟೂರ್ನಿಯಲ್ಲಿ ದಾಖಲಾದ ಒಟ್ಟು ಸಿಕ್ಸರ್‌ಗಳು
2,174	ಒಟ್ಟು ಬೌಂಡರಿಗಳು
141	ಒಟ್ಟು ಅರ್ಧಶತಕಗಳು
12	ಒಟ್ಟು ಶತಕಗಳು

ವೈಶಾಖ ಉದಯ; ಭರವಸೆ ಮೂಡಿಸಿದ ಅಭಿನವ್; ಅವಕಾಶ ಗಿಟ್ಟಿಸದ ಬಾಂಢಗೆ

ಐಪಿಎಲ್: ಕರ್ನಾಟಕದವರ ಆಟ

• ಗಿರೀಶ ದೊಡ್ಡಮನಿ

ಬೆಂಗಳೂರು: ಈ ಸಲದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕದ ಹನ್ನೆರಡು ಆಟಗಾರರು ಇದ್ದರು. ಆದರೆ ಅದರಲ್ಲಿ ಕೆಲವರು ಮಾತ್ರ ಗಮನ ಸೆಳೆದರು. ಇನ್ನುಳಿದವರು ತಮಗೆ ಲಭಿಸಿದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ಸಫಲರಾಗಲಿಲ್ಲ.

ಒಟ್ಟಿನಲ್ಲಿ ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ಸೂರ್ಯಕುಮಾರ್, ಫಫ್ ಡುಪ್ಲೆಸಿ, ಮೊಹಮ್ಮದ್ ಶಮಿ ಮತ್ತು ತುಷಾರ್ ದೇಶಪಾಂಡೆ ಅವರಂತೆ ದೊಡ್ಡಮಟ್ಟದ ಸಾಧನೆಗಳೊಂದಿಗೆ ಗಮನ ಸೆಳೆಯುವಲ್ಲಿ ಕರ್ನಾಟಕದ ಆಟಗಾರರು ಯಶಸ್ವಿಯಾಗಿಲ್ಲ. ಇದ್ದುದರಲ್ಲಿ ವೈಶಾಖ ವಿಜಯಕುಮಾರ್ ಭರವಸೆ ಮೂಡಿಸಿದರು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಆಯ್ಕೆಯಾಗಿದ್ದ ವೇಗಿ ವೈಶಾಖ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ಪದಾರ್ಪಣೆ ಮಾಡಿದರು. ಈ ಹಣಾಹಣಿಯಲ್ಲಿ ಮೂರು ವಿಕೆಟ್ ಗಳಿಸುವ ಮೂಲಕ ಐಪಿಎಲ್‌ನಲ್ಲಿ ತಮ್ಮ ಪಯಣ ಆರಂಭಿಸಿದರು. ಬಲಗೈ ವೇಗಿ ವೈಶಾಖ ಏಳು ಪಂದ್ಯಗಳಲ್ಲಿ ಆಡಿ ಒಟ್ಟು ಒಂಬತ್ತು ವಿಕೆಟ್ ಗಳಿಸಿದರು.

ಮೊಹಮ್ಮದ್ ಸಿರಾಜ್, ವೇಯ್ನ್ ಪಾರ್ನೆಲ್, ಜೋಶ್ ಹ್ಯಾಜಲ್‌ವುಡ್ ಹಾಗೂ ಹರ್ಷಲ್ ಪಟೇಲ್ ಅವರೊಂದಿಗೆ ಹೊಣೆ ಹಂಚಿಕೊಂಡಿದ್ದು ವಿಶೇಷ ಅನುಭವ ನೀಡಿತು. ಇದರಿಂದಾಗಿ ತಮಗೆ ಹೊಸ ಕೌಶಲ ಕಲಿಯುವ ಅವಕಾಶ ಲಭಿಸಿತು ಎಂದು ವೈಶಾಖ ಹೇಳಿದ್ದರು. ಆದರೆ ಟೂರ್ನಿಯುದ್ದಕ್ಕೂ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯ ಅನುಭವಿಸಿದ ಆರ್‌ಸಿಬಿಯು ರಾಯಚೂರಿನ ಆಲ್‌ರೌಂಡರ್ ಮನೋಜ್ ಬಾಂಢಗೆ ಅವರಿಗೆ ಒಂದು ಅವಕಾಶ ಕೊಡುವ ಮನಸ್ಸು ಮಾಡಲಿಲ್ಲ. 24 ವರ್ಷದ ಮನೋಜ್ ದೇಶಿ ಋತುವಿನಲ್ಲಿ ಗಮನ ಸೆಳೆಯುವ ಆಟವಾಡಿದ್ದರು. ಇದರಿಂದಾಗಿ 'ಸ್ಥಳೀಯ ಪ್ರತಿಭೆಗಳಿಗೆ ಆರ್‌ಸಿಬಿಯು ಅವಕಾಶ ನೀಡುವುದಿಲ್ಲ' ಎಂದು ಕೆಲವು ಹಿರಿಯ ಕ್ರಿಕೆಟಿಗರ ಟೀಕೆಗಳಿಗೂ ಬೆಂಗಳೂರು ತಂಡ ಗುರಿಯಾಯಿತು.

ಕರ್ನಾಟಕದ ಆಟಗಾರರಾದ ಕೆ.ಎಲ್. ರಾಹುಲ್, ವೈಶಾಖ ವಿಜಯಕುಮಾರ್ ಮತ್ತು ಮಯಂಕ್ ಅಗರವಾಲ್

ಕರ್ನಾಟಕ ಆಟಗಾರರ ಸಾಧನೆ

ಆಟಗಾರ	ಪಂದ್ಯ	ರನ್	ಶ್ರೇಷ್ಠ	ವಿಕೆಟ್	ಶ್ರೇಷ್ಠ ಬೌಲಿಂಗ್	ಕ್ಯಾಚ್
ಕೆ.ಎಲ್. ರಾಹುಲ್ (ಲಖನೌ)	9	274	74	-	-	4
ಮಯಂಕ್ ಅಗರವಾಲ್(ಹೈದರಾಬಾದ್)	10	270	83	-	-	-
ದೇವದತ್ತ ಪಡಿಕ್ಕಲ್ (ರಾಜಸ್ಥಾನ)	11	261	52	-	-	4
ಮನೀಷ್ ಪಾಂಡೆ(ಡೆಲ್ಲಿ)	10	160	50	-	0	3
ಅಭಿನವ್ ಮನೋಹರ್(ಗುಜರಾತ್)	9	114	42	0	0	4
ವೈಶಾಖ ವಿಜಯಕುಮಾರ್ (ಬೆಂಗಳೂರು)	7	13	13*	9	20ಕ್ಕೆ3	1
ಕೆ.ಗೌತಮ್ (ಲಖನೌ)	7	61	23	3	10ಕ್ಕೆ1	5
ಪ್ರವೀಣ ದುಬೆ (ಡೆಲ್ಲಿ)	1	16	16	-	-	-

ಅಂಕಿ–ಅಂಶ: ಚನ್ನಗಿರಿ ಕೇಶವಮೂರ್ತಿ

ಗುಜರಾತ್ ಟೈಟನ್ಸ್ ತಂಡದಲ್ಲಿರುವ ಅಭಿನವ್ ಮನೋಹರ್ ಹಾಗೂ ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಆಡಿದ ದೇವದತ್ತ ಪಡಿಕ್ಕಲ್ ತಲಾ ಒಂದು ಪಂದ್ಯಶ್ರೇಷ್ಠ ಗೌರವ ಗಳಿಸಿದ್ದು ಕೊಂಚ ಚೇತೋಹಾರಿ. ಆದರೆ ಲಖನೌ ತಂಡದ ನಾಯಕತ್ವ ವಹಿಸಿದ್ದ ಕೆ.ಎಲ್. ರಾಹುಲ್ ಅವರು ಗಾಯಗೊಂಡು ಅರ್ಧದಲ್ಲಿಯೇ ಐಪಿಎಲ್ ಟೂರ್ನಿಯಿಂದ ಹೊರಬೀಳಬೇಕಾಯಿತು. ರಾಹುಲ್ ಒಂಬತ್ತು ಪಂದ್ಯಗಳಲ್ಲಿ ಆಡಿ 274 ರನ್ ಸೇರಿಸಿದರು. ಆದರೆ ಈ ಬಾರಿ ಅವರ ಬ್ಯಾಟಿಂಗ್‌ನಲ್ಲಿ ಮೊದಲಿನ ಆತ್ಮವಿಶ್ವಾಸ ಕಾಣಲಿಲ್ಲ. ಬದಲಿಗೆ ಟಿ20 ಮಾದರಿಗೆ ಸೂಕ್ತವಲ್ಲದ ರೀತಿಯಲ್ಲಿ ಬ್ಯಾಟ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಟೀಕೆಗಳನ್ನೂ ಎದುರಿಸಿದರು. ರಾಹುಲ್ ಬದಲಿಗೆ ತಂಡದಲ್ಲಿ ಸ್ಥಾನ ಪಡೆದ ಕರುಣ್ ನಾಯರ್ ಬೆಂಚ್‌ನಲ್ಲಿ ಕಾಲ ಕಳೆಯಬೇಕಾಯಿತು.

ಈ ಸಲ ಹೈದರಾಬಾದ್ ತಂಡದಿಂದ ₹ 8.25 ಕೋಟಿ ಮೌಲ್ಯ ಗಳಿಸಿ ಸೇರ್ಪಡೆಯಾಗಿದ್ದ ಮಯಂಕ್ ಅಗರವಾಲ್ ಆಟದಲ್ಲಿ ಸ್ಥಿರತೆ ಇರಲಿಲ್ಲ. ಕೇವಲ ಒಂದು ಅರ್ಧಶತಕ ಮಾತ್ರ ಗಳಿಸಿದರು. ಸನ್‌ರೈಸರ್ಸ್ ತಂಡಕ್ಕೆ ಉತ್ತಮ ಆರಂಭ ನೀಡುವಲ್ಲಿ ಅವರು ಎಡವಿದರು. ಐಪಿಎಲ್ ಇತಿಹಾಸದಲ್ಲಿ ಶತಕ ಗಳಿಸಿದ ಮೊಟ್ಟಮೊದಲ ಭಾರತೀಯ ಆಟಗಾರನೆಂಬ ಹೆಗ್ಗಳಿಕೆಯ ಮನೀಷ್ ಪಾಂಡೆ ಕೂಡ ಈ ಸಲ ಮಂಕಾದರು. ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿರುವ ಪ್ರವೀಣ ದುಬೆ ಏಕೈಕ ಪಂದ್ಯ ಆಡಿದರು.

ಆಫ್‌ಸ್ಪಿನ್ನರ್ ಕೃಷ್ಣಪ್ಪ ಗೌತಮ್ ಏಳು ಪಂದ್ಯಗಳಲ್ಲಿ ಆಡುವ ಅವಕಾಶ ಪಡೆದರಾದರೂ 'ಮ್ಯಾಚ್ ವಿನ್ನಿಂಗ್' ಆಟ ಮೂಡಿಬರಲಿಲ್ಲ ಎನ್ನುವುದೂ ನಿಜ. ಕಳೆದ ರಣಜಿ ಋತುವಿನಲ್ಲಿ ಮಿಂಚಿದ್ದ ವೇಗಿ ವಿದ್ವತ್ ಕಾವೇರಪ್ಪ ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡದಲ್ಲಿ ಸ್ಥಾನ ಪಡೆದಿದ್ದರು. ಆದರೆ ಅವರಿಗೆ ಪದಾರ್ಪಣೆ ಅವಕಾಶ ಸಿಗಲಿಲ್ಲ. ಹತ್ತು ಪ್ರಥಮ ದರ್ಜೆ ಪಂದ್ಯಗಳಲ್ಲಿ 34 ವಿಕೆಟ್ ಗಳಿಸಿದ್ದಾರೆ. ಸ್ವಿಂಗ್ ಮತ್ತು ವೇಗವನ್ನು ಹದವಾಗಿ ಬೆರೆಸಿ ಎಸೆತಗಳನ್ನು ಪ್ರಯೋಗಿಸುವಲ್ಲಿ ಸಮರ್ಥರಾಗಿದ್ದಾರೆ.

'ಈ ಸಲ ಕರ್ನಾಟಕದ ಆಟಗಾರರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಲಿಲ್ಲ. ವೈಶಾಖ ವಿಜಯಕುಮಾರ್ ಪದಾರ್ಪಣೆ ಟೂರ್ನಿ ಇದು. ಉತ್ತಮವಾಗಿ ಆರಂಭ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸಾಮರ್ಥ್ಯ ವೃದ್ಧಿ ಮಾಡಿಕೊಳ್ಳಬೇಕು. ಆದರೆ ಅನುಭವಿ ಆಟಗಾರರು ನಿರೀಕ್ಷೆಯ ಮಟ್ಟಕ್ಕೆ ಮುಟ್ಟಲಿಲ್ಲ. ಮಯಂಕ್, ಮನೀಷ್ ಮತ್ತು ದೇವದತ್ತ ತಲಾ ಒಂದು ಪಂದ್ಯದಲ್ಲಿ ದೊಡ್ಡ ಸ್ಕೋರ್ ಗಳಿಸಿದರು. ಆದರೆ ನಿರಂತರತೆ ಕಾಪಾಡಿಕೊಳ್ಳಲಿಲ್ಲ' ಎಂದು ಕ್ರಿಕೆಟ್ ಕೋಚ್ ಆರ್‌ಎಕ್ಸ್ ಮುರಳಿ 'ಪ್ರಜಾವಾಣಿ'ಗೆ ಹೇಳಿದರು.

ರಾಜ್ಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಅಜೇಯ ಸಾಧನೆ

ವಿಯಾನಿ ರಾಜ್ಯ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಜೇಯ ಸಾಧನೆ ಪ್ರದರ್ಶಿಸಿದ ಮಂಗಳೂರಿನ ವಿಯಾನಿ ಅಂಟಾನಿಯೊ ಡಿಕುನ್ಹ, ಮಂಗಳವಾರ ಮುಕ್ತಾಯಗೊಂಡ ಅಕ್ಷಯಕಲ್ಪ ಆರ್ಗ್ಯಾನಿಕ್ ರಾಜ್ಯ ಸೀನಿಯರ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಅಗ್ರ ಶ್ರೇಯಾಂಕದ ಈ ಆಟಗಾರ 9 ಸುತ್ತುಗಳಿಂದ ಎಂಟೂವರೆ ಅಂಕ ಗಳಿಸಿದರು.

ಇಂಟರ್‌ನ್ಯಾಷನಲ್ ಮಾಸ್ಟರ್ ವಿಯಾನಿ ಈ ಪ್ರಶಸ್ತಿ ಗೆಲ್ಲುತ್ತಿರುವುದು ಎರಡನೇ ಸಲ. 2017ರಲ್ಲೂ ರಾಜ್ಯ ಚಾಂಪಿಯನ್ ಆಗಿದ್ದ ವಿಯಾನಿ ಟ್ರೋಫಿಯ ಜೊತೆ ಒಂದು ಲಕ್ಷ ರೂಪಾಯಿ ನಗದು ಬಹುಮಾನ ಪಡೆದರು. ಮೊದಲ ಎಂಟೂ ಸುತ್ತುಗಳಲ್ಲಿ ಗೆಲುವು ದಾಖಲಿಸಿದ್ದ ಅವರು ಅಂತಿಮ ಸುತ್ತಿನಲ್ಲಿ ಮೂರನೇ ಶ್ರೇಯಾಂಕದ ಡಿ. ಯಶಸ್ ಜೊತೆ ಪಾಯಿಂಟ್ ಹಂಚಿಕೊಂಡರು. ಏಳನೇ ಸುತ್ತಿನಲ್ಲಿ ಮಂಗಳೂರಿನವರೇ ಆದ ಶರಣ್ ರಾವ್ ಅವರನ್ನು ಸೋಲಿಸಿದ್ದರು.

ಕೋಣನಕುಂಟೆಯ ಫೋರಂ ಮಾಲ್‌ನಲ್ಲಿ ನಡೆದ ಈ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಸ್ಥಾನಕ್ಕಾಗಿ ನಾಲ್ಕು ಮಂದಿ ಆಟಗಾರರು– ಬೆಂಗಳೂರಿನ ಯಶಸ್, ಮೈಸೂರಿನ ಬಾಲಕಿಶನ್ ಎ., ಎಂ.ಎಸ್.ತೇಜುಮಾರ್ ಮತ್ತು ಚಿನ್ಮಯ್ ಕೌಶಿಕ್ ತಲಾ ಎಂಟು ಅಂಕ ಸಂಗ್ರಹಿಸಿದ್ದರು. ಆದರೆ ಟೈಬ್ರೇಕ್ ಆಧಾರದ ಮೇಲೆ ಕ್ರಮವಾಗಿ ಎರಡು, ಮೂರು, ನಾಲ್ಕು ಮತ್ತು ಐದನೇ ಸ್ಥಾನ ಪಡೆದರು.

ವಿಯಾನಿ ಡಿಕುನ್ಹ

ಮೊದಲ ನಾಲ್ಕು ಸ್ಥಾನ ಪಡೆದ ಆಟಗಾರರು, ರಾಷ್ಟ್ರೀಯ ಸೀನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸುವರು.

9ನೇ ಸುತ್ತಿನ ಇತರ ಪಂದ್ಯಗಳಲ್ಲಿ ಗ್ರ್ಯಾಂಡ್‌ಮಾಸ್ಟರ್ ತೇಜಕುಮಾರ್ ಎರಡನೇ ಬೋರ್ಡ್‌ನಲ್ಲಿ ಆಗಸ್ಟಿನ್ (7) ಅವರನ್ನು, ಮೈಸೂರಿನ ಬಾಲಕಿಶನ್ ಮೂರನೇ ಬೋರ್ಡ್‌ನಲ್ಲಿ ಕಳೆದ ವರ್ಷದ ಚಾಂಪಿಯನ್ ಪ್ರಜ್ವಲ್ ಶೇಟ್ (7) ಅವರನ್ನು, ಚಿನ್ಮಯ್ ಕೌಶಿಕ್, ಸಾತ್ವಿಕ್ ಅಡಿಗ (6.5) ಅವರನ್ನು ಸೋಲಿಸಿದರು. 2,3,4 ಮತ್ತು ಐದನೇ ಬೋರ್ಡ್‌ನಲ್ಲಿ ಬಿಳಿ ಕಾಯಿಗಳಲ್ಲಿ ಆಡಿದವರೇ ಜಯಗಳಿಸಿದರು.

ಸವಾಲಿನಿಂದ ಕೂಡಿತ್ತು: 'ಈ ಬಾರಿ ಕೆಳಕ್ರಮಾಂಕದ ಆಟಗಾರರೂ ಸಾಕಷ್ಟು ಸಿದ್ಧತೆ ನಡೆಸಿಯೇ ಈ ಚಾಂಪಿಯನ್‌ಷಿಪ್‌ಗೆ ಬಂದಿದ್ದರು. ಪ್ರತಿಯೊಂದು ಸುತ್ತೂ ಸವಾಲಿನಿಂದ ಕೂಡಿತ್ತು. ಎಂಟನೇ ಸುತ್ತು ಗೆದ್ದ ನಂತರವಷ್ಟೇ ಟ್ರೋಫಿ ಗೆಲ್ಲುವ ವಿಶ್ವಾಸ ಮೂಡಿತು' ಎಂದು ವಿಯಾನಿ 'ಪ್ರಜಾವಾಣಿ'ಗೆ ತಿಳಿಸಿದರು.

ಬ್ಯಾಸ್ಕೆಟ್‌ಬಾಲ್: ಮಿಂಚಿದ ಆಸ್ಟಿನ್, ಸುನಿಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟಿನ್ ಮತ್ತು ಸುನಿಲ್ ಅವರ ಚುರುಕಿನ ಆಟದ ಬಲದಿಂದ ಬಿ.ಸಿ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡ, ರಾಜ್ಯ 'ಸಿ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್‌ನಲ್ಲಿ ಗೆಲುವು ಸಾಧಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಬಿ.ಸಿ ಕ್ಲಬ್ 68-64 ರಿಂದ ಮೈಸೂರಿನ ನ್ಯಾಷನಲ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಮಣಿಸಿತು.

ತುರುಸಿನ ಪೈಪೋಟಿ ನಡೆದ ಪಂದ್ಯದ ವಿರಾಮದ ವೇಳೆಗೆ ವಿಜಯಿ ತಂಡದವರು 33–31 ರಿಂದ ಮುನ್ನಡೆ ಸಾಧಿಸಿದ್ದರು. ಆಸ್ಟಿನ್ 30 ಹಾಗೂ ಸುನಿಲ್ 19 ಪಾಯಿಂಟ್ಸ್ ತಂದಿತ್ತರು. ನ್ಯಾಷನಲ್ಸ್ ಪರ ಸುಮನ್ 21 ಪಾಯಿಂಟ್ಸ್ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಯಲಹಂಕ ನ್ಯೂಟೌನ್ ಕ್ಲಬ್ 60–47 ರಿಂದ ಗೌರಿಬಿದನೂರಿನ ಪಿನಾಕಿನಿ ಕ್ಲಬ್ ತಂಡವನ್ನು ಮಣಿಸಿದರೆ, ಹಾಸನದ ಹೊಯ್ಸಳ ಕ್ಲಬ್ 70–64 ರಿಂದ ಕೆಜಿಎಫ್ ಬಿ.ಸಿ ವಿರುದ್ಧ ಜಯಿಸಿತು.

ಇತರ ಪಂದ್ಯಗಳಲ್ಲಿ ಸಿಜೆಸಿ 70–61 ರಿಂದ ಮೈಸೂರು ಬಿ.ಸಿ ವಿರುದ್ಧ; ಚಿಕ್ಕಮಗಳೂರಿನ ಡಾಮಿನೇಟ್ ಕ್ಲಬ್ 60–27 ರಲ್ಲಿ ಮೈಸೂರಿನ ನ್ಯಾಷನಲ್ಸ್ ಬಿ.ಸಿ ವಿರುದ್ಧ; ಬೆಂಗಳೂರು ವ್ಯಾಂಗಾರ್ಡ್ಸ್ 70–57 ರಿಂದ ಸಹಕಾರನಗರ ಬಿ.ಸಿ ವಿರುದ್ಧ; ವೈಎಫ್‌ಬಿಸಿ 44– 28 ರಿಂದ ಚಾಮರಾಜಪೇಟೆ ಬಿ.ಸಿ ವಿರುದ್ಧ; ಹೊಯ್ಸಳ ಬಿ.ಸಿ 49–34 ರಿಂದ ಕೊಳ್ಳೇಗಾಲದ ನಾಲ್ವಡಿ ಬಿ.ಸಿ ವಿರುದ್ಧ; ಮೈಸೂರು ಬಿ.ಸಿ 56–54 ರಿಂದ ಎಸ್‌ಎಐ ಧಾರವಾಡ ವಿರುದ್ಧ; ಪಿನಾಕಿನಿ 68–62 ರಲ್ಲಿ ಮೈಸೂರಿನ ಆಲ್ ಸ್ಟಾರ್ಸ್ ಅಕಾಡೆಮಿ ವಿರುದ್ಧವೂ ಗೆದ್ದವು.

ಎರಡನೇ ಸುತ್ತಿಗೆ ಕೊಕೊ ಗಾಫ್, ರೂಡ್

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಆನ್ಸ್ ಜಬೇರ್, ಎಲೆನಾ ರಿಬಾಕಿನಾ ಮುನ್ನಡೆ

ಪ್ಯಾರಿಸ್ (ಎಎಫ್‌ಪಿ/ ರಾಯಿಟರ್ಸ್): ಕಳೆದ ಬಾರಿಯ ರನ್ನರ್ ಅಪ್ ಕೊಕೊ ಗಾಫ್ ಮತ್ತು ಕ್ಯಾಸ್ಪರ್ ರೂಡ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಹಾಗೂ ಪುರುಷರ ಸಿಂಗಲ್ಸ್ ವಿಭಾಗಗಳಲ್ಲಿ ಎರಡನೇ ಸುತ್ತು ಪ್ರವೇಶಿಸಿದರು.

ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಅಮೆರಿಕದ ಗಾಫ್ 3-6, 6-1, 6-2 ರಲ್ಲಿ ಸ್ಪೇನ್‌ನ ರೆಬೆಕಾ ಮಸರೋವಾ ಅವರನ್ನು ಮಣಿಸಿದರು. ಮೊದಲ ಸೆಟ್‌ನಲ್ಲಿ ಸೋತ ಗಾಫ್, ಆ ಬಳಿಕ ಪುಟಿದೆದ್ದು ನಿಂತರು. ಮುಂದಿನ ಎರಡು ಸೆಟ್‌ಗಳಲ್ಲಿ ಎದುರಾಳಿಗೆ ಕೇವಲ ಮೂರು ಗೇಮ್‌ಗಳನ್ನು ಬಿಟ್ಟುಕೊಟ್ಟು ಪಂದ್ಯ ಗೆದ್ದರು.

ಕಳೆದ ವರ್ಷ ಫೈನಲ್‌ನಲ್ಲಿ ಇಗಾ ಶ್ವಾಂಟೆಕ್ ಎದುರು ಸೋತಿದ್ದ 19 ವರ್ಷದ ಗಾಫ್ ಅವರು 1 ಗಂಟೆ 46 ನಿಮಿಷಗಳ ಹಣಾಹಣಿಯಲ್ಲಿ ಗೆಲುವು ಒಲಿಸಿಕೊಂಡರು.

ಇಲ್ಲಿ ನಾಲ್ಕನೇ ಶ್ರೇಯಾಂಕ ಹೊಂದಿರುವ ನಾರ್ವೆಯ ರೂಡ್, ಪುರುಷರ ವಿಭಾಗದ ಮೊದಲ ಸುತ್ತಿನಲ್ಲಿ 6-4, 6-3, 6-2 ರಲ್ಲಿ ಸ್ವೀಡನ್‌ನ ಎಲಿಯಾಸ್ ಎಮೆರ್ ವಿರುದ್ಧ ಗೆದ್ದರು. 2 ಗಂಟೆ ಏಳು ನಿಮಿಷ ನಡೆದ ಪೈಪೋಟಿಯಲ್ಲಿ ರೂಡ್ ವೇಗದ ಸರ್ವ್ ಮತ್ತು ಬೇಸ್‌ಲೈನ್ ಹೊಡೆತಗಳ ಮೂಲಕ ಮಿಂಚಿದರು.

ಇನ್ನೊಂದು ಪಂದ್ಯದಲ್ಲಿ ಅಲೆಕ್ಸಾಂಡರ್ ಜ್ವೆರೆವ್ 7-6, 7-6, 6-1 ರಲ್ಲಿ ದಕ್ಷಿಣ ಆಫ್ರಿಕಾದ ಲಾಯ್ಡ್ ಹ್ಯಾರಿಸ್ ಅವರನ್ನು ಮಣಿಸಿದರು. ಮೊದಲ ಎರಡು ಸೆಟ್‌ಗಳನ್ನು ಟೈಬ್ರೇಕರ್‌ನಲ್ಲಿ ಗೆದ್ದ ಜ್ವೆರೆವ್‌ಗೆ ಮೂರನೇ ಸೆಟ್‌ನಲ್ಲಿ ಪೈಪೋಟಿ ಎದುರಾಗಲಿಲ್ಲ. ಅಮೆರಿಕದ ಟಾಮಿ ಪಾಲ್ 6-3, 6-2, 6-4 ರಲ್ಲಿ ಸ್ವಿಟ್ಜರ್ಲೆಂಡ್‌ನ ಡಾಮಿನಿಕ್ ಸ್ಟ್ರೈಕರ್ ಅವರನ್ನು ಸೋಲಿಸಿದರು.

ಅಲ್ಕರಾಜ್ ಶುಭಾರಂಭ: ವಿಶ್ವದ ಅಗ್ರ ರ್ಯಾಂಕ್‌ನ ಆಟಗಾರ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರು ಪ್ರಶಸ್ತಿಯೆಡೆಗಿನ ಹಾದಿಯಲ್ಲಿ ಭರ್ಜರಿ ಆರಂಭ ಪಡೆದರು. ಸೋಮವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಅವರು 6-0, 6-2, 7-5 ರಿಂದ ಇಟಲಿಯ ಫ್ಲಾವಿಯೊ ಕೊಬೊಲಿ ವಿರುದ್ಧ ಗೆದ್ದರು.

ಮುಂದಿನ ಸುತ್ತಿನಲ್ಲಿ ಅವರು ಜಪಾನ್‌ನ ತರೊ ಡೇನಿಯಲ್ ವಿರುದ್ಧ ಪೈಪೋಟಿ ನಡೆಸುವರು. ತರೊ 6-0, 6-2, 6-4 ರಲ್ಲಿ ಆಸ್ಟ್ರೇಲಿಯಾದ ಕ್ರಿಸ್ಟೋಫರ್ ಒ'ಕಾನೆಲ್ ಅವರನ್ನು ಮಣಿಸಿದರು.

ಜಬೇರ್‌ಗೆ ಜಯ: ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಏಳನೇ ಶ್ರೇಯಾಂಕದ ಆಟಗಾರ್ತಿ ಟ್ಯುನೀಷಿಯಾದ ಆನ್ಸ್ ಜಬೇರ್ 6-4, 6-1 ರಲ್ಲಿ ಇಟಲಿಯ ಲೂಸಿಯಾ ಬ್ರೊಂಜೆಟ್ಟಿ ವಿರುದ್ಧ ಜಯಿಸಿದರು.

ಕಳೆದ ವರ್ಷ ವಿಂಬಲ್ಡನ್ ಟೂರ್ನಿಯ ರನ್ನರ್ ಅಪ್ ಆಗಿದ್ದ ಜಬೇರ್, ಈ ಋತುವಿನ ಆರಂಭದಲ್ಲಿ ಮಂಡಿಯ ಶಸ್ತ್ರಚಿಕಿತ್ಸೆಗೆ ಒಳಗಾಗಿ ಚೇತರಿಸಿಕೊಂಡಿದ್ದರು.

ವಿಂಬಲ್ಡನ್ ಚಾಂಪಿಯನ್ ಕಜಕಸ್ತಾನದ ಎಲೆನಾ ರಿಬಾಕಿನಾ 6-4, 6-2 ರಲ್ಲಿ ಬ್ರೆಂಡಾ ಫ್ರುವಿರ್ತೋವಾ ಅವರನ್ನು ಸೋಲಿಸಿ ಮುಂದಿನ ಸುತ್ತು ಪ್ರವೇಶಿಸಿದರು.

ಇತರ ಪಂದ್ಯಗಳಲ್ಲಿ ಸ್ವೀಡನ್‌ನ ರೆಬೆಕಾ ಪೀಟರ್‌ಸನ್ 6-2, 6-0 ರಲ್ಲಿ ಫ್ರಾನ್ಸ್‌ನ ಫಿಯೋನಾ ಫೆರೊ ವಿರುದ್ಧ; ಚೀನಾದ ವಾಂಗ್ ಕ್ಸಿನ್‌ಯು 6-4, 7-6 ರಲ್ಲಿ ಜೆಕ್ ರಿಪಬ್ಲಿಕ್‌ನ ಮೇರಿ ಬೊಜ್ಕೊವಾ ವಿರುದ್ಧ; ಫ್ರಾನ್ಸ್‌ನ ಡಯಾನ್ ಪೆರಿ 6-2, 6-3 ರಲ್ಲಿ ಉಕ್ರೇನ್‌ನ ಅನೆಲಿನಾ ಕಲಿನಿನಾ ವಿರುದ್ಧ; ಮಿರಾ ಆ್ಯಂಡ್ರೀವಾ ಅವರು 6-2, 6-1 ರಲ್ಲಿ ಅಮೆರಿಕದ ಆ್ಯಲಿಸನ್ ರಿಸ್ಕೆ ವಿರುದ್ಧವೂ ಗೆಲುವು ಸಾಧಿಸಿದರು.

ಕೊಕೊ ಗಾಫ್ ಅವರ ಬ್ಯಾಕ್‌ಹ್ಯಾಂಡ್ ರಿಟರ್ನ್ ವೈಖರಿ –ಎಎಫ್‌ಪಿ ಚಿತ್ರ

ಮೆಡ್ವೆಡೇವ್‌ಗೆ ಸೋಲಿನ ಆಘಾತ

ಪ್ಯಾರಿಸ್: ವಿಶ್ವದ ಎರಡನೇ ಕ್ರಮಾಂಕದ ಆಟಗಾರ ಡೇನಿಯಲ್ ಮೆಡ್ವೆಡೇವ್ ಫ್ರೆಂಚ್ ಓಪನ್ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನಲ್ಲೇ ಆಘಾತಕಾರಿ ಸೋಲು ಅನುಭವಿಸಿದರು. ಅರ್ಹತಾ ಸುತ್ತಿನಿಂದ ಬಂದಿದ್ದ ಬ್ರೆಜಿಲ್ ಆಟಗಾರ ಥಿಯಾಗೊ ಸಿಬೋತ್ ವೈಲ್ಡ್ ಐದು ಸೆಟ್‌ಗಳ ದೀರ್ಘ ಹೋರಾಟದಲ್ಲಿ ಮೆಡ್ವೆಡೇವ್ ಅವರನ್ನು ಸೋಲಿಸಿದರು.

ಫಿಲಿಪ್ ಚಾರ್ಟಿಯರ್ ಕೋರ್ಟ್‌ನಲ್ಲಿ ಜೋರಾಗಿ ಬೀಸುತ್ತಿದ್ದ ಗಾಳಿಯ ನಡುವೆ ಸಿಬೋತ್ ವೈಲ್ಡ್ 7–6 (7–5), 6–7 (8–6), 2–6, 6–3, 6–4 ರಿಂದ ಜಯಗಳಿಸಿದರು. ಈ ಋತುವಿನಲ್ಲಿ ಅವರು ಎರಡನೇ ಟೈರ್ ಮಟ್ಟದ ಎರಡು ಚಾಲೆಂಜರ್ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದರೂ, ಮೆಡ್ವೆಡೇವ್‌ಗೆ ಸಾಟಿಯಾಗುವ ನಿರೀಕ್ಷೆ ಇರಲಿಲ್ಲ. ರೋಮ್‌ನಲ್ಲಿ ಪ್ರಶಸ್ತಿ ಗಳಿಸಿದ್ದ ರಷ್ಯಾ ಆಟಗಾರ ನಿಧಾನಗತಿಯ ಅಂಕಣದಲ್ಲಿ ಅಮೋಘ ಸಾಧನೆ ಪ್ರದರ್ಶಿಸಿ ಇಲ್ಲಿಗೆ ಬಂದಿದ್ದರು.

ಆದರೆ 4 ಗಂಟೆ 15 ನಿಮಿಷಗಳ ಪಂದ್ಯದಲ್ಲಿ ಇದಾವುದೂ ಲೆಕ್ಕಕ್ಕೆ ಬರಲಿಲ್ಲ. ಪಾಯಿಂಟ್ಸ್ ತಪ್ಪಿದಾಗ ಆಗಾಗ ಹತಾಶೆ ಪ್ರದರ್ಶಿಸಿದ ಮೆಡ್ವೆಡೇವ್ ನಾಲ್ಕನೇ ಸೆಟ್‌ನಲ್ಲಿ ಒಮ್ಮೆ ಅಂಪೈರ್ ಜೊತೆ ವಾದಕ್ಕಿಳಿದರು. ಸಿಬೋತ್ ಅವರ ವೇಗ ಮತ್ತು ಶಕ್ತಿಯುತ ಆಟಕ್ಕೆ ತಕ್ಕ ಉತ್ತರ ನೀಡಲು ಅವರಿಂದ ಆಗಲಿಲ್ಲ. ಬ್ರೆಜಿಲ್‌ನ ಆಟಗಾರ ವಿಶ್ವ ಕ್ರಮಾಂಕದಲ್ಲಿ 172ನೇ ಸ್ಥಾನದಲ್ಲಿದ್ದಾರೆ.

ನಾಳೆಯಿಂದ ಇಂಡಿಯನ್ ಓಪನ್ ಸರ್ಫಿಂಗ್

ಮಂಗಳೂರು: ಸರ್ಫಿಂಗ್ ಫೆಡರೇಷನ್ ಆಫ್ ಇಂಡಿಯಾದ ನೇತೃತ್ವದಲ್ಲಿ ಇಂಡಿಯನ್ ಓಪನ್ ಸರ್ಫಿಂಗ್‌ನ 4ನೇ ಆವೃತ್ತಿಯ ಸ್ಪರ್ಧೆಯು ಜೂನ್ 1ರಿಂದ 3ರವರೆಗೆ ಮಂಗಳೂರಿನ ಪಣಂಬೂರು ಬೀಚ್‌ನಲ್ಲಿ ನಡೆಯಲಿದೆ.

ಮಂತ್ರ ಸರ್ಫಿಂಗ್ ಕ್ಲಬ್ ಆಯೋಜಿಸಿರುವ ಈ ಮೂರು ದಿನಗಳ ಸರ್ಫಿಂಗ್ ಸಂಭ್ರಮದಲ್ಲಿ ಭಾರತದ ಅಗ್ರ ಸರ್ಫರ್‌ಗಳಾದ ಸಂಜಯಕುಮಾರ್ ಎಸ್., ನಿತೀಶ್‌ವರುಣ್ ಟಿ., ಸೂರ್ಯ ಪಿ., ರುಬಾನ್ ಡಿ., ಶ್ರೀಕಾಂತ್ ಡಿ., ಸತೀಶ್ ಸರವಣನ್ ಮತ್ತು ಮಣಿಕಂದನ್ ದೇಸಪ್ಪನ್ ಭಾಗವಹಿಸಲಿದ್ದಾರೆ ಎಂದು ಸರ್ಫಿಂಗ್ ಫೆಡರೇಷನ್ ಆಫ್ ಇಂಡಿಯಾದ ಉಪಾಧ್ಯಕ್ಷರಾಗಿರುವ ಮಂತ್ರ ಸರ್ಫ್ ಕ್ಲಬ್‌ನ ಪಾಲುದಾರ ರಾಮ್ ಮೋಹನ್ ಪರಂಜ್ಪೆ ತಿಳಿಸಿದ್ದಾರೆ.

'ಐಪಿಎಲ್ ಪ್ರಭಾವಳಿ ಕಳಚುವುದು ಸವಾಲು'

ಅಹಮದಾಬಾದ್ (ಪಿಟಿಐ): ಐಪಿಎಲ್‌ನ ಟಿ–20 ಪ್ರಭಾವಳಿಯಿಂದ ಹೊರಬಂದು ಮುಂದಿನ ವಾರ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸುವುದು ಭಾರತದ ಆಟಗಾರರ ಮುಂದಿರುವ ಬಹುದೊಡ್ಡ ಸವಾಲು ಎಂದು ದಿಗ್ಗಜ ಆಟಗಾರ ಸುನೀಲ್ ಗಾವಸ್ಕರ್ ಹೇಳಿದ್ದಾರೆ.

ರೋಹಿತ್ ಶರ್ಮಾ ಬಳಗ ಇಂಗ್ಲೆಂಡ್‌ನ ಓವಲ್‌ನಲ್ಲಿ ಜೂನ್ 7 ರಿಂದ ಡಬ್ಲ್ಯುಟಿಸಿ ಫೈನಲ್ ಆಡಲಿದೆ. ಹೆಚ್ಚಿನ ಆಟಗಾರರು ಸೋಮವಾರ ಮುಕ್ತಾಯಗೊಂಡ ಐಪಿಎಲ್‌ನಲ್ಲಿ ಆಡಿದವರು.

'ಟಿ–20 ಅಚ್ಚಿನಿಂದ ಹೊರಬರುವುದೇ ಎಲ್ಲ ಆಟಗಾರರ ಮುಂದಿರುವ ಸತ್ವಪರೀಕ್ಷೆ. ಟೆಸ್ಟ್ ಕ್ರಿಕೆಟ್ ದೀರ್ಘಾವಧಿಯ ಮಾದರಿ. ನನಗೆ ಅನಿಸಿದಂತೆ ಇದುವೇ ದೊಡ್ಡ ಸವಾಲು' ಎಂದು ಗಾವಸ್ಕರ್ ಮಂಗಳವಾರ ಸ್ಟಾರ್ ಸ್ಪೋರ್ಟ್ಸ್‌ಗೆ ತಿಳಿಸಿದ್ದಾರೆ.

'ಚೇತೇಶ್ವರ ಪೂಜಾರ ಮಾತ್ರ ಕೌಂಟಿ ಚಾಂಪಿಯನ್‌ಷಿಪ್‌ನಲ್ಲಿ ಆಡುತ್ತಿದ್ದಾರೆ. ಅವರು ಇಂಗ್ಲೆಂಡ್‌ನ ಪರಿಸ್ಥಿತಿಗೆ ಒಗ್ಗಿಕೊಂಡಿದ್ದಾರೆ. ಹೀಗಾಗಿ ಅವರಿಗೆ ದೀರ್ಘಾವಧಿ ಕ್ರಿಕೆಟ್‌ಗೆ ಹೊಂದಿಕೊಳ್ಳುವುದು ಕಷ್ಟವೇನಲ್ಲ. ಉಳಿದವರ ಮುಂದೆ ದೊಡ್ಡ ಸವಾಲು ಇದೆ' ಎಂದು ಅವರು ಹೇಳಿದರು.

ಸುನೀಲ್ ಗಾವಸ್ಕರ್

ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ

ಪ್ರಧಾನ ಸುತ್ತಿಗೆ ಸಮೀರ್ ವರ್ಮಾ, ಅಶ್ಮಿತಾ

ಬ್ಯಾಂಕಾಕ್ (ಪಿಟಿಐ): ಭಾರತದ ಸಮೀರ್ ವರ್ಮಾ, ಕಿರಣ್ ಜಾರ್ಜ್ ಮತ್ತು ಅಶ್ಮಿತಾ ಚಲಿಹಾ ಅವರು ತಮ್ಮ ಎದುರಾಳಿಗಳನ್ನು ನೇರ ಗೇಮ್‌ಗಳಿಂದ ಮಣಿಸಿ ಥಾಯ್ಲೆಂಡ್ ಓಪನ್ ಸೂಪರ್–500 ಬ್ಯಾಡ್ಮಿಂಟನ್ ಟೂರ್ನಿಯ ಪ್ರಧಾನ ಸುತ್ತು ಪ್ರವೇಶಿಸಿದರು.

ಮಂಗಳವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಅರ್ಹತಾ ಹಂತದ ಕೊನೆಯ ಪಂದ್ಯದಲ್ಲಿ ಸಮೀರ್ 21–12, 21–17 ರಲ್ಲಿ ಮಲೇಷ್ಯಾದ ಯಿಹೊ ಸೆಂಗ್ ಜೊಯೆ ಅವರನ್ನು ಮಣಿಸಿದರು. ಮೊದಲ ಎರಡು ಪಂದ್ಯಗಳಲ್ಲಿ ಅವರಿಗೆ 'ಬೈ' ಲಭಿಸಿತ್ತು. 28 ವರ್ಷದ ಸಮೀರ್ ಅವರು ದೀರ್ಘಕಾಲದ ಬಿಡುವಿನ ಬಳಿಕ ಅಂತರರಾಷ್ಟ್ರೀಯ ಟೂರ್ನಿಗೆ ಪುನರಾಗಮನ ಮಾಡಿದ್ದಾರೆ.

ಬುಧವಾರ ನಡೆಯಲಿರುವ ಮೊದಲ ಸುತ್ತಿನ ಹಣಾಹಣಿಯಲ್ಲಿ ಅವರು ಡೆನ್ಮಾರ್ಕ್‌ನ ಮ್ಯಾಗ್ನಸ್ ಜೊಹಾನ್ಸೆನ್ ವಿರುದ್ಧ ಪೈಪೋಟಿ ನಡೆಸುವರು.

ಪ್ರಧಾನ ಹಂತ ಪ್ರವೇಶಿಸಿದ ಸಮೀರ್ ವರ್ಮಾ

2022ರ ಒಡಿಶಾ ಓಪನ್ ವಿಜೇತ ಕಿರಣ್ ಅವರು ಅರ್ಹತಾ ಸುತ್ತಿನ ಮೊದಲ ಪಂದ್ಯದಲ್ಲಿ 21–14, 21–18 ರಲ್ಲಿ ಭಾರತದ ಕಾರ್ತಿಕ್ ಗುಲ್ಶನ್ ಕುಮಾರ್ ವಿರುದ್ಧ ಗೆದ್ದರೆ, ಎರಡನೇ ಸುತ್ತಿನಲ್ಲಿ 21–10, 21–14 ರಲ್ಲಿ ಕೊರಿಯಾದ ಜೆಯೊನ್ ಹ್ಯೋಕ್ ಜಿನ್ ಅವರನ್ನು ಮಣಿಸಿದರು.

ಮಹಿಳೆಯರ ಸಿಂಗಲ್ಸ್‌ನ ಅರ್ಹತಾ ಸುತ್ತಿನ ಕೊನೆಯ ಪಂದ್ಯದಲ್ಲಿ ಅಶ್ಮಿತಾ 21–19, 21–11 ರಲ್ಲಿ ಎಸ್ಟೋನಿಯದ ಕ್ರಿಸ್ಟಿನ್ ಕೂಬಾ ವಿರುದ್ಧ ಗೆದ್ದರು. ಮೊದಲ ಪಂದ್ಯದಲ್ಲಿ ಅವರು 21-16, 13-21, 21-19 ರಲ್ಲಿ ಭಾರತದ ಉನ್ನತಿ ಹೂಡಾ ಅವರನ್ನು ಪರಾಭವಗೊಳಿಸಿದ್ದರು.

ಅಶ್ಮಿತಾ ಅವರು ಮೊದಲ ಸುತ್ತಿನಲ್ಲಿ ಭಾರತದವರೇ ಆದ ಮಾಳವಿಕಾ ಬನ್ಸೋಡ್ ಅವರ ಸವಾಲು ಎದುರಿಸುವರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ನೇರವಾಗಿ ಪ್ರಧಾನ ಹಂತದಲ್ಲಿ ಸ್ಥಾನ ಪಡೆದಿರುವ ಬಿ.ಸಾಯಿ ಪ್ರಣೀತ್ ಮತ್ತು ಮಿಥುನ್ ಮಂಜುನಾಥ್ ಅವರು ಮೊದಲ ಸುತ್ತಿನಲ್ಲಿ ಕ್ರಮವಾಗಿ ಫ್ರಾನ್ಸ್‌ನ ಕ್ರಿಸ್ಟೊ ಪೊಪೊವ್ ಹಾಗೂ ಥಾಯ್ಲೆಂಡ್‌ನ ಕುನ್ಲಾವತ್ ವಿತಿದ್‌ಸರನ್ ವಿರುದ್ಧ ಸೆಣಸಾಡುವರು.

ರ್ಯಾಂಕಿಂಗ್: ಸಾತ್ವಿಕ್–ಚಿರಾಗ್‌ಗೆ 4ನೇ ಸ್ಥಾನ

ನವದೆಹಲಿ (ಪಿಟಿಐ): ಭಾರತದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ವಿಶ್ವ ಬ್ಯಾಡ್ಮಿಂಟನ್‌ನ ಪುರುಷರ ಡಬಲ್ಸ್ ವಿಭಾಗದ ರ್ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೇರಿದ್ದಾರೆ. ಇದು ಅವರ ವೃತ್ತಿಜೀವನದ ಶ್ರೇಷ್ಠ ರ್ಯಾಂಕ್ ಆಗಿದೆ.

ಕಳೆದ ವರ್ಷ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಮತ್ತು ಫ್ರೆಂಚ್ ಓಪನ್ ಸೂಪರ್ 750 ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದ ಸಾತ್ವಿಕ್– ಚಿರಾಗ್, ಈ ವರ್ಷ ಸ್ವಿಸ್ ಸೂಪರ್ ಸೀರಿಸ್ 300 ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು.

ಕಳೆದ ವಾರ ನಡೆದಿದ್ದ ಮಲೇಷ್ಯಾ ಮಾಸ್ಟರ್ಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಚಾಂಪಿಯನ್ ಎಚ್‌.ಎಸ್.ಪ್ರಣಯ್ ಅವರು ಒಂದು ಕ್ರಮಾಂಕ ಮೇಲಕ್ಕೇರಿದ್ದು, 8ನೇ ಸ್ಥಾನ ಗಳಿಸಿದ್ದಾರೆ. ಕೆ.ಶ್ರೀಕಾಂತ್ ಮೂರು ಸ್ಥಾನ ಮೇಲಕ್ಕೇರಿ 20ನೇ ರ್ಯಾಂಕ್ ಪಡೆದಿದ್ದಾರೆ.

ಆದರೆ ಲಕ್ಷ್ಯ ಸೇನ್ ಒಂದು ಕ್ರಮಾಂಕ ಕುಸಿತ ಕಂಡಿದ್ದು, 23ನೇ ಸ್ಥಾನದಲ್ಲಿದ್ದಾರೆ.

ಒಲಿಂಪಿಕ್ಸ್ ಜ್ಯೋತಿ ಹಿಡಿದು ಓಡಲಿದ್ದಾರೆ 10 ಸಾವಿರ ಮಂದಿ

ಸೇಂಟ್ ಡೆನಿಸ್ (ಫ್ರಾನ್ಸ್) (ಎಎಫ್‌ಪಿ): 2024ರ ಒಲಿಂಪಿಕ್ ಕ್ರೀಡಾ ಜ್ಯೋತಿ 60ಕ್ಕೂ ಹೆಚ್ಚು ಪ್ರಾಂತ್ಯಗಳನ್ನು ಹಾದುಹೋಗುವ ಕಾರಣ 10,000ಕ್ಕೂ ಹೆಚ್ಚು ಮಂದಿ ಒಲಿಂಪಿಕ್ ಜ್ಯೋತಿ ರಿಲೇಯಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ಯಾರಿಸ್ ಒಲಿಂಪಿಕ್ಸ್ ಸಂಘಟಕರು ಮಂಗಳವಾರ ತಿಳಿಸಿಗ್ದಾರೆ.

ಗ್ರೀಸ್‌ನ ಒಲಿಂಪಿಯಾದಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ಜ್ಯೋತಿಯನ್ನು ಬೆಳಗಿದ ನಂತರ ಅದು ಸಮುದ್ರ ಮಾರ್ಗ ಮೂಲಕ 'ಬೆಲೆಮ್' ಹಡಗಿನಲ್ಲಿ ಜೂನ್ 8ರಂದು ಮಾರ್ಸೆಯಿ ಬಂದರು ತಲುಪಲಿದೆ. ನಂತರ ದೇಶದಾದ್ಯಂತ ಜ್ಯೋತಿ ಯಾತ್ರೆ ನಡೆಯಲಿದ್ದು, ಜುಲೈ 26ರಂದು ರಾಜಧಾನಿ ಪ್ಯಾರಿಸ್‌ಗೆ ತಲುಪಲಿದೆ.

ಜ್ಯೋತಿಯನ್ನು ಐಫೆಲ್ ಟವರ್‌ನಲ್ಲಿ ಪ್ರಜ್ವಲಿಸುವ ವ್ಯವಸ್ಥೆ ಮಾಡಲಾಗುವುದು ಎಂಬ ಮಾತುಗಳು ಕೇಳಿಬಂದಿದ್ದವು. ಆದರೆ ಅಂತಿಮ ತಾಣವನ್ನು ಇನ್ನೂ ನಿರ್ಧರಿಸಿಲ್ಲ ಎಂದು ವ್ಯವಸ್ಥಾಪಕ ಸಮಿತಿಯ ಅಧ್ಯಕ್ಷ ಟೋನಿ ಎಸ್ತಾನ್‌ಕ್ವೆ ಅವರು ಸ್ಪಷ್ಟಪಡಿಸಿದ್ದಾರೆ.

ಈ ಬಾರಿ ಸಾಮೂಹಿಕ ರಿಲೇಗಳು ನಡೆಯಲಿದೆ. ಪ್ರತಿ ಗುಂಪಿನಲ್ಲಿ 24 ಮಂದಿ ಇರಲಿದ್ದು, ಒಬ್ಬರು ಜ್ಯೋತಿ ಹಿಡಿದುಕೊಂಡು ಓಡುವುದು ಈ ಬಾರಿಯ ವಿಶೇಷ. ಈ ರೀತಿಯ ಮೂರು ಸಾವಿರ ಗುಂಪುಗಳು ಭಾಗವಹಿಸಲಿವೆ. ಜೊತೆಗೆ 7,000 ಮಂದಿ ವೈಯಕ್ತಿಕವಾಗಿ ಜ್ಯೋತಿ ಹಿಡಿದು ಓಡಲಿದ್ದಾರೆ. ಜ್ಯೋತಿ ಹಿಡಿಯುವ ವ್ಯಕ್ತಿ ನಾಲ್ಕು ನಿಮಿಷ ಓಡಲಿದ್ದು 200 ಮೀ. ಕ್ರಮಿಸಲಿದ್ದಾರೆ. ಶೇ 10ರಷ್ಟು ಜ್ಯೋತಿಧಾರಿಗಳನ್ನು ವ್ಯವಸ್ಥಾಪಕ ಸಮಿತಿ ಮತ್ತು ಕ್ರೀಡಾ ಸಂಸ್ಥೆಗಳು ನಿರ್ಧರಿಸಲಿವೆ. ಮತ್ತೆ ಶೇ 10ರಷ್ಟು ಮಂದಿಯನ್ನು ಪ್ರಾಯೋಜಕರಾದ ಕೋಕಾ ಕೋಲಾ ಮತ್ತು ಫ್ರೆಂಚ್ ಬ್ಯಾಂಕ್ ಬಿಪಿಸಿಇ ನಿರ್ಧರಿಸಲಿವೆ. ಮತ್ತು ಉಳಿದ ಶೇ 10ರಷ್ಟು ಜ್ಯೋತಿಧಾರಿಗಳನ್ನು ರಿಲೇ ಓಟದ ಆತಿಥ್ಯ ವಹಿಸುವ ಸ್ಥಳೀಯ ಪ್ರಾಂತ್ಯಗಳು ನಿರ್ಧರಿಸಲಿವೆ.